ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವಲಸೆ

ಉಕ್ರೇನ್‌ನಿಂದ ಹಂಗೆರಿಯ ಬೆರೆಗ್ಸುರಾನಿಗೆ ಶನಿವಾರ ಪೋಷಕರೊಂದಿಗೆ ವಲಸೆ ಬಂದಿದ್ದ ಮಕ್ಕಳು ಬ್ಯಾಗ್ ಮೇಲೆ ಕುಳಿತು ವಿಶ್ರಮಿಸಿದರು




ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕೋಮುದ್ವೇಷದ ಜ್ವಾಲೆ ಪಸರಿಸುತ್ತಿರುವ ಈ ಹೊತ್ತಿನಲ್ಲಿ ನಾಡಿನ ಸಾಕ್ಷಿಪ್ರಜ್ಞೆಯ ಅಂತಃಕರಣದ ಧ್ವನಿ ಹೇಳುವುದೇನನ್ನು?



ಕನ್ನಾಡಿ: ಕೊಲೆ ಆರೋಪಿ ಪೊಲೀಸ್ ವಶಕ್ಕೆ 6
2015ರಲ್ಲಿ ಹತ್ಯೆಯಾಗಿದ್ದ ವಿಶ್ವನಾಥ ಶೆಟ್ಟಿ ಕುಟುಂಬದ ಸಂಕಷ್ಟದ ಕಥೆ
ಬಿಜೆಪಿಗೆ 'ಹಿಂದುತ್ವ', ಎಸ್‌ಪಿಗೆ ಜಾತಿ ಲೆಕ್ಕಾಚಾರ 9
ಚಿಂದಿ ಆಯ್ದು ಮೊಮ್ಮಗನ ಓದಿಸುತ್ತಿರುವ ಅಜ್ಜಿ 6



ಕೀವ್‌ಗೆ ರಷ್ಯಾ ಸೇನೆ ನುಗ್ಗುವುದನ್ನು ತಡೆದ ಉಕ್ರೇನ್ ಯೋಧರು

ನಿಲ್ಲದ ಕಾಳಗ: 198 ಸಾವು

ಕೀವ್ (ಎಎಫ್‌ಪಿ): ಉಕ್ರೇನ್‌ನ ರಾಜಧಾನಿ ಕೀವ್‌ನ ಮೇಲೆ ದಾಳಿ ನಡೆಸಿದ ರಷ್ಯಾದ ಸೇನೆಯನ್ನು ಉಕ್ರೇನ್‌ನ ಸೇನೆ ಹಿಮ್ಮೆಟ್ಟಿಸಿದೆ. ಆದರೆ, ವಿಧ್ವಂಸಕ ಕೃತ್ಯ ಎಸಗುವ ರಷ್ಯಾದ ತಂಡವು ರಾಜಧಾನಿಗೆ ನುಸುಳಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಷ್ಯಾ ಆಕ್ರಮಣದಿಂದಾಗಿ ಮೃತಪಟ್ಟವರ ಸಂಖ್ಯೆ 198ಕ್ಕೆ ಏರಿಕೆಯಾಗಿದೆ. ಅದರಲ್ಲಿ ಮಕ್ಕಳೂ ಸೇರಿದ್ದಾರೆ.

ರಷ್ಯಾಕ್ಕೆ ಯಾವ ಕಾರಣಕ್ಕೂ ಮಣಿಯುವುದಿಲ್ಲ ಎಂದು ಉಕ್ರೇನ್ ಅಧ್ಯಕ್ಷ, ಅಮೆರಿಕ ಮತ್ತು ಪಶ್ಚಿಮದ ದೇಶಗಳ ಪರವಾಗಿರುವ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ. ಸೇನಾ ನೆಲೆಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದ್ದಾಗಿ ರಷ್ಯಾ ಹೇಳಿಕೊಂಡಿದೆ.

ರಷ್ಯಾ ದಾಳಿಯ ಮೂರನೇ ದಿನವೂ ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ಸ್ಫೋಟದ ಸದ್ದು ಅನುರಣಿಸಿದೆ. ಝೆಲೆನ್‌ಸ್ಕಿ ಅವರು ದೇಶದ ಜನರಿಗೆ ವಿಡಿಯೊ ಸಂದೇಶ ನೀಡಿದ್ದಾರೆ.



ಪೋಲೆಂಡ್‌ಗೆ ತೆರಳಲು ಪಶ್ಚಿಮ ಉಕ್ರೇನಿನ ಎಲ್ವಿವ್ ರೈಲು ನಿಲ್ದಾಣದಲ್ಲಿ ಶನಿವಾರ ಕಾಯುತ್ತಿದ್ದ ಜನ – ಎಎಫ್‌ಪಿ ಚಿತ್ರ

1,16,000 ಜನರು ನಿರಾಶ್ರಿತರಾಗಿದ್ದು ಸಮೀಪದ ದೇಶಗಳಿಗೆ ಹೋಗಿದ್ದಾರೆ. ಯುದ್ಧದಿಂದ ಹೆಚ್ಚು ಬಾಧೆಗೆ ಒಳಗಾಗದ ಉಕ್ರೇನ್‌ನ ಪಶ್ಚಿಮದತ್ತ ಹಲವು ಮಂದಿ ಸಾಗಿದ್ದಾರೆ. ಯುದ್ಧ ಮುಂದುವರಿದರೆ ಇನ್ನೂ ಸಾವಿರಾರು ಜನರು ನಿರಾಶ್ರಿತರಾಗಲಿದ್ದಾರೆ ಎಂದು ನಿರಾಶ್ರಿತರಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಅಂಗಸಂಸ್ಥೆಯೊಂದು ಹೇಳಿದೆ.

'ಶತ್ರು ಪಡೆಯು ವಿವಿಧ ಭಾಗಗಳ ಮೂಲಕ ನಗರದೊಳಕ್ಕೆ ನುಗ್ಗಲು ಯತ್ನಿಸುತ್ತಿವೆ. ಆದರೆ, ಈ ಯತ್ನಗಳಿಗೆ ತಡೆ ಒಡ್ಡಲಾಗಿದೆ' ಎಂದು ಕೀವ್‌ನ ಮೇಯರ್ ವಿಟಲಿ ಕ್ಲಿಷ್ಕೊ ಹೇಳಿದ್ದಾರೆ.

ವಿಶೇಷ ಪುಟ 7

- ಉಕ್ರೇನ್‌ನಲ್ಲಿ 1,115 ಮಂದಿ ಗಾಯಗೊಂಡಿದ್ದಾರೆ. ಮೆಟ್ರೊ ಸುರಂಗಗಳು ಮತ್ತು ನೆಲ ಮಾಳಿಗೆಗಳಲ್ಲಿ ಜನರು ಆಶ್ರಯ ಪಡೆದಿದ್ದಾರೆ
- ಬ್ರಿಟನ್ ಸೇರಿದಂತೆ ನ್ಯಾಟೊದ ಹಲವು ರಾಷ್ಟ್ರಗಳು ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಕೆ ಮಾಡಿವೆ
- ಪೂರ್ವ ಯುರೋಪ್‌ನಲ್ಲಿ 40,000 ಯೋಧರನ್ನು ನಿಯೋಜಿಸುವುದಾಗಿ ನ್ಯಾಟೊ ಹೇಳಿದೆ. ಆದರೆ, ಉಕ್ರೇನ್‌ಗೆ ಸೇನೆ ಕಳುಹಿಸುವುದಿಲ್ಲ ಎಂದು ಪುನರುಚ್ಚರಿಸಿದೆ
- ಸಂಜೆ 5 ಗಂಟೆಯ ಬಳಿಕ ಬೀದಿಗಳಲ್ಲಿ ಇರುವವರನ್ನು 'ಶತ್ರುವಿನ ವಿಧ್ವಂಸಕ ಗುಂಪಿನ ಸದಸ್ಯರು ಮತ್ತು ಬೇಹುಗಾರರು' ಎಂದು ಪರಿಗಣಿಸಲಾಗುವುದು ಎಂದು ಉಕ್ರೇನ್ ಹೇಳಿದೆ

ಎಲ್‌ಐಸಿಯಲ್ಲಿ ಶೇ 20ರವರೆಗೆ ಎಫ್‌ಡಿಐ ಅನುಮತಿ

ನವದೆಹಲಿ (ರಾಯಿಟರ್ಸ್): ಭಾರತೀಯ ಜೀವ ವಿಮಾ ನಿಗಮದಲ್ಲಿ (ಎಲ್‌ಐಸಿ) ಶೇಕಡ 20ರವರೆಗೆ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಅವಕಾಶ ಕಲ್ಪಿಸುವ ತಿದ್ದುಪಡಿಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಸರ್ಕಾರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಂಪನಿಯ ಆರಂಭಿಕ ಸಾರ್ವಜನಿಕ ಕೊಡುಗೆಗೆ (ಐಪಿಒ) ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಬದಲಾವಣೆ ಮಾಡಲಾಗುತ್ತಿದೆ ಎಂದು ಮೂಲಗಳು ಹೇಳಿವೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ.

ದೇಶದ ಅತಿದೊಡ್ಡ ವಿಮಾ ಕಂಪನಿಯಾಗಿರುವ ಎಲ್‌ಐಸಿ ಮುಂದಿನ ತಿಂಗಳು ಐಪಿಒ ಮೂಲಕ ಶೇಕಡ 5ರಷ್ಟು ಷೇರುಗಳನ್ನು ಮಾರಾಟ ಮಾಡಲಿದ್ದು, ₹ 60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಗುರಿ ಇಟ್ಟುಕೊಂಡಿದೆ.

14ನೇ ಪುಟ ನೋಡಿ

ಮೇಕೆದಾಟು: 2ನೇ ಹಂತದ ಪಾದಯಾತ್ರೆಗೆ ಕ್ಷಣಗಣನೆ 8

ತತ್ತರಿಸಿದೆ ಹೋಟೆಲ್ ಉದ್ಯಮ

• ವಿಜಯ್ ಜೋಷಿ

ಒಳನೋಟ

ಹೋಟೆಲ್‌ಗೆ ಕೋವಿಡ್ ಹೊಡೆತ

ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: 'ಎಂದೂ ಕುಸಿಯದ ಉದ್ಯಮ' ಎಂಬ ಹೆಗ್ಗಳಿಕೆಯನ್ನು ಹೊಂದಿದ್ದ ರಾಜ್ಯದ ಹೋಟೆಲ್ ಉದ್ಯಮವು ಕೋವಿಡ್ ಸಾಂಕ್ರಾಮಿಕ ಹರಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತಂದ ಎರಡು ಲಾಕ್‌ಡೌನ್‌ಗಳ ಪರಿಣಾಮ ಅಕ್ಷರಶಃ ತತ್ತರಿಸಿಹೋಗಿದೆ.

ಈ ಉದ್ಯಮದಲ್ಲಿ ಹೊಸದಾಗಿ ಹೂಡಿಕೆ ಮಾಡಲು ಹಿಂದೇಟು ಹಾಕುವ ಪರಿಸ್ಥಿತಿ ಇದೆ. ಕಾರ್ಮಿಕರು ಕೆಲಸ ಕಳೆದುಕೊಂಡಿರುವ, ಮಾಲೀಕರು ಆತ್ಮಹತ್ಯೆಗೆ ಶರಣಾಗಿರುವ ವರದಿಗಳು ಇವೆ. ಮುಂದೆಂದೂ ಕೋವಿಡ್‌ನ ಅಲೆಗಳು ಬಾರದೆ ಇದ್ದರೆ, ಸರ್ಕಾರಗಳು ನಿರ್ಬಂಧಗಳನ್ನು ವಿಧಿಸದೇ ಇದ್ದರೆ, ಕೋವಿಡ್ ಕುರಿತು ಜನರಲ್ಲಿ ಈಗಾಗಲೇ ಇರುವ ಭಯ ದೂರವಾದರೆ ಮಾತ್ರ ಹೋಟೆಲ್ ಉದ್ಯಮ ಚೇತರಿಸಿಕೊಳ್ಳಬಹುದು. ಹಾಗೆ ಚೇತರಿಕೆ ಕಾಣಲಿಕ್ಕೆ ಕನಿಷ್ಠ ಎರಡು ವರ್ಷಗಳು ಬೇಕು ಎನ್ನುತ್ತಿದ್ದಾರೆ ಉದ್ಯಮದ ಪ್ರತಿನಿಧಿಗಳು.

ಅಂಕಿ ಅಂಶಗಳು

₹25 ಸಾವಿರ ಕೋಟಿಗೂ ಹೆಚ್ಚು
ಲಾಕ್‌ಡೌನ್ ನಂತರ ರಾಜ್ಯದ ಹೋಟೆಲ್ ಉದ್ಯಮ ಅನುಭವಿಸಿದ ನಷ್ಟ

65,000
ರಾಜ್ಯದಲ್ಲಿ ಇರುವ ನೋಂದಾಯಿತ ಹೋಟೆಲ್‌ಗಳ ಸಂಖ್ಯೆ

3 ಲಕ್ಷ
ಉದ್ಯಮದಲ್ಲಿ ತೊಡಗಿರುವವರ ಅಂದಾಜು ಸಂಖ್ಯೆ

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಚಿನಕುರಳಿ

ಪ್ರಕಾಶ್ ಶೆಟ್ಟಿ










ರೈತರಿಗೆ ಉಚಿತ ಟ್ರ್ಯಾಕ್ಟರ್ ವಿತರಣೆ ಇಂದು

ಬೆಂಗಳೂರು: ಬಿಜೆಪಿಗಾಗಿ ದುಡಿದ ರೈತ ಕಾರ್ಯಕರ್ತರಿಗೆ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಜನ್ಮದಿನದ ಅಂಗವಾಗಿ ಒಟ್ಟು 15 ಟ್ರ್ಯಾಕ್ಟರ್‌ಗಳನ್ನು ಪಕ್ಷದ ಪ್ರಮುಖರು ಉಚಿತವಾಗಿ ವಿತರಿಸಲಿದ್ದಾರೆ.

ಕರ್ನಾಟಕ ಗ್ರಾಮೀಣ ಮೂಲ ಸವಲತ್ತು ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ರುದ್ರೇಶ್ ನೇತೃತ್ವದಲ್ಲಿ ಟ್ರ್ಯಾಕ್ಟರ್ ವಿತರಣಾ ಕಾರ್ಯಕ್ರಮವನ್ನು ಇದೇ 27ರಂದು ಯಡಿಯೂರಪ್ಪ ಅವರ 'ಕಾವೇರಿ' ನಿವಾಸದಲ್ಲಿ ಆಯೋಜಿಸಲಾಗಿದೆ.

'ಯಡಿಯೂರಪ್ಪ ಅವರು ಪಕ್ಷವನ್ನು ತಳ ಹಂತದಿಂದ ಕಟ್ಟಿ ಬೆಳೆಸುವ ಜತೆಗೆ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ರೈತರ ಜತೆಗೆ ಎಲ್ಲಾ ಜಾತಿ ಮತ್ತು ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ. ಅವರ ಜನ್ಮದಿನದ ಪ್ರಯುಕ್ತ ಟ್ರ್ಯಾಕ್ಟರ್ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಸಂಪುಟದ ಸಹೋದ್ಯೋಗಿಗಳು, ಶಾಸಕರು, ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ' ಎಂದು ಎಂ. ರುದ್ರೇಶ್ ತಿಳಿಸಿದರು. 'ಉಚಿತವಾಗಿ ಟ್ರ್ಯಾಕ್ಟರ್ ವಿತರಿಸುವ ಕಾರ್ಯಕ್ರಮಕ್ಕೆ ಕೆಆರ್‌ಐಡಿಎಲ್ ಅಧ್ಯಕ್ಷ ಚಂದು ಪಾಟೀಲ, ಕೆಎಸ್‌ಎಸ್‌ಐಡಿಸಿ ಅಧ್ಯಕ್ಷ ಡಾ. ಶೈಲೇಂದ್ರ ಬಿಲ್ದಾಳೆ, ಎಸ್‌ಟಿಆರ್‌ಆರ್ ಅಧ್ಯಕ್ಷ ಮುನಿರಾಜು, ಬಿಎಂಐಸಿಸಿ ಅಧ್ಯಕ್ಷ ಜೈದೇವ್, ಎಂಎಂಎಲ್ ಅಧ್ಯಕ್ಷ ಲಿಂಗಮೂರ್ತಿ ಕೈಜೋಡಿಸಿದ್ದಾರೆ' ಎಂದು ತಿಳಿಸಿದರು.



ಚೆನ್ನಭೈರಾದೇವಿ ಕೋಟೆ ಪುನರುಜ್ಜೀವನಕ್ಕೆ ಮನವಿ

ಬೆಂಗಳೂರು: ಶರಾವತಿ ಕಣಿವೆಯಲ್ಲಿ ದೀರ್ಘಕಾಲ ಆಡಳಿತ ನಡೆಸಿದ್ದ ಜೈನ ವಂಶದ ರಾಣಿ ಚೆನ್ನಭೈರಾದೇವಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕಾರ್ಗಲ್– ಭಟ್ಕಳ ರಸ್ತೆಯ ಬಿಳಿಗಾರು ಸಮೀಪ ನಿರ್ಮಿಸಿದ್ದ ಕೋಟೆಯನ್ನು ಪುನರುಜ್ಜೀವನಗೊಳಿಸಲು ಬಜೆಟ್‌ನಲ್ಲಿ ಯೋಜನೆ ಪ್ರಕಟಿಸುವ ಕುರಿತು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ.

ಪತ್ರಕರ್ತ ಸಿ. ರುದ್ರಪ್ಪ ನೇತೃತ್ವದ ನಿಯೋಗ ಮುಖ್ಯಮಂತ್ರಿಯವರನ್ನು ಶನಿವಾರ ಭೇಟಿಮಾಡಿ ಈ ಕುರಿತು ಮನವಿ ಸಲ್ಲಿಸಿತು. ಚೆನ್ನಭೈರಾದೇವಿ ಕೋಟೆಯನ್ನು ಸ್ಮಾರಕವನ್ನಾಗಿ ಪರಿವರ್ತಿಸುವಂತೆ ಒತ್ತಾಯಿಸಿತು.

'ಕ್ರಿಸ್ತಶಕ 1552ರಿಂದ 1606ರವರೆಗೆ ಶರಾವತಿ ಕಣಿವೆಯಲ್ಲಿ ಆಡಳಿತ ನಡೆಸಿದ್ದ ಚೆನ್ನಭೈರಾದೇವಿ ಪೋರ್ಚುಗೀಸರ ವಿರುದ್ಧ ಪ್ರಬಲ ಹೋರಾಟ ನಡೆಸಿದ್ದರು. ಈ ವೀರರಾಣಿ ನಿರ್ಮಿಸಿದ್ದ ಕೋಟೆ ಪಾಳುಬಿದ್ದ ಸ್ಥಿತಿಯಲ್ಲಿದೆ. ಅದನ್ನು ಪುನರುಜ್ಜೀವನಗೊಳಿಸಬೇಕು ಎಂದು ಮನವಿ ಮಾಡಲಾಗಿದೆ. ಮನವಿಯನ್ನು ಪರಿಶೀಲಿಸಿ, ನಿರ್ಧಾರ ಕೈಗೊಳ್ಳುವ ಭರವಸೆ ನೀಡಿದ್ದಾರೆ' ಎಂದು ರುದ್ರಪ್ಪ ತಿಳಿಸಿದ್ದಾರೆ.


ಸಂಕ್ಷಿಪ್ತ ಸುದ್ದಿ

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ನಗರ ವಿವಿ ಎಂಬಿಎ ಕೋರ್ಸ್‌ನಲ್ಲಿ ಖಾಲಿ ಉಳಿದಿರುವ ಸ್ಥಾನಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2021–22ನೇ ಶೈಕ್ಷಣಿಕ ಸಾಲಿಗೆ ಎಂಬಿಎ (ಹಗಲು) 9 ಸೀಟುಗಳು ಹಾಗೂ ಎಂಬಿಎ (ಸಂಜೆ) 50 ಸೀಟುಗಳು ಲಭ್ಯವಿದ್ದು, ಯಾವುದೇ ದಂಡ ಶುಲ್ಕ ಇಲ್ಲದೆಯೇ ಮಾರ್ಚ್ 2ರ ಒಳಗೆ ಅರ್ಜಿ ಸಲ್ಲಿಸಬೇಕು. ₹100 ದಂಡ ಶುಲ್ಕದೊಂದಿಗೆ ಮಾರ್ಚ್ 5ರವರೆಗೆ ಅರ್ಜಿ ಸಲ್ಲಿಸಬಹುದು. ಮಾರ್ಚ್ 7ರಂದು ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗುವುದು. ಮಾರ್ಚ್ 10ರಂದು ಕೌನ್ಸೆಲಿಂಗ್ ಮತ್ತು ಪ್ರವೇಶ ಪ್ರಕ್ರಿಯೆ ನಡೆಯಲಿದೆ ಎಂದು ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಜ್ಞಾನ ದಿನ ನಾಳೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯವು ಇದೇ 28ರಂದು ಬೆಳಿಗ್ಗೆ 10ಕ್ಕೆ ಸೆಂಟ್ರಲ್ ಕಾಲೇಜಿನ ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ವಿಜ್ಞಾನ ದಿನಾಚರಣೆ ಆಯೋಜಿಸಿದೆ. ನಗರದ ಕ್ರೈಸ್ಟ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಪ್ರದೀಪ್ ಜಿ. ಸಿದ್ದೇಶ್ವರ್ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಬಿ.ಎಂ. ಸ್ವಾಮಿ ಅವರು ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲಿದ್ದಾರೆ. ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.



ಮಹಿಳಾ ಹಕ್ಕುಗಳ ರಕ್ಷಣೆಗಾಗಿ ನಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಿಳೆಯರ ಶಿಕ್ಷಣ ಮತ್ತು ಘನತೆ ಹಕ್ಕುಗಳಿಗೆ ರಾಜ್ಯದಲ್ಲಿ ಧಕ್ಕೆ ಆಗುತ್ತಿದೆ' ಎಂದು ಆರೋಪಿಸಿ ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆಗಳ ಪದಾಧಿಕಾರಿಗಳು ನಗರದಲ್ಲಿ ಶನಿವಾರ ನಡಿಗೆ ಜಾಥಾ ನಡೆಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಜಾಥಾ ಸಾಗಿತು. ಜಾಥಾದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು, 'ಘನತೆ', 'ಬಹುತ್ವ', 'ಸ್ವಾಯತ್ತತೆ' ಹಾಗೂ 'ಶಾಂತಿ' ಬರಹವುಳ್ಳ ಮಾಸ್ಕ್‌ಗಳನ್ನು ಧರಿಸಿ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿದರು.

'ನಮ್ಮ ಬಟ್ಟೆ ವಿಷಯ ನಿಮಗೆ ಯಾಕ್ರಿ', 'ಊಟ ನನ್ನ ಇಚ್ಛೆ, ನೋಟಾನು ನನ್ನ ಇಚ್ಛೆ' ಬರಹವುಳ್ಳ ಫಲಕಗಳನ್ನು ಪ್ರದರ್ಶಿಸಿದರು.

'ರಾಜ್ಯದಲ್ಲಿ ಮುಸ್ಲಿಂ ಮಹಿಳೆಯರ ಕುರಿತ ತಾರತಮ್ಯ, ಅವರ ಮೇಲಿನ ಕಿರುಕುಳ ಹಾಗೂ ಹಿಂಸೆ ಕಳವಳಕಾರಿ. ಸಂವಿಧಾನದ ಆಶಯದಂತೆ ಮಹಿಳೆಯರಿಗೆ ಮೂಲಭೂತ ಹಕ್ಕುಗಳು ಸಿಗಬೇಕು. ಅದಕ್ಕೆ ಧಕ್ಕೆಯಾಗದಂತೆ ಸರ್ಕಾರ ನೋಡಿಕೊಳ್ಳಬೇಕೆಂದು ಆಗ್ರಹಿಸಿ ನಡಿಗೆ ಆಯೋಜಿಸಲಾಗಿದೆ' ಎಂದು ಪ್ರತಿಭಟನಕಾರರು ಹೇಳಿದರು.




ಲೈಂಗಿಕ ಅಲ್ಪಸಂಖ್ಯಾತರ ಸಂಘಟನೆಗಳ ನೇತೃತ್ವದಲ್ಲಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ನಡಿಗೆ ಜಾಥಾದಲ್ಲಿ ಯುವತಿಯರು ಫಲಕಗಳನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

'ಕೆಲ ಕಾಲೇಜುಗಳಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿಗಳನ್ನು ಹಾಗೂ ಅಧ್ಯಾಪಕಿಯರನ್ನು ಪ್ರಾಂಗಣದ ಒಳಗೆ ಬಿಡುತ್ತಿಲ್ಲ. ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಬೇಕು. ತರಗತಿಗೆ ಹಾಜರಾಗಲು ಸಾಧ್ಯವಾಗದವರಿಗೆ ಪೂರ್ಣ ಹಾಜರಾತಿ ನೀಡಬೇಕು. ಹೆಚ್ಚುವರಿ ತರಗತಿ ನಡೆಸಲು ಕ್ರಮ ಕೈಗೊಳ್ಳಬೇಕು' ಎಂದೂ ಆಗ್ರಹಿಸಿದರು.

'ವಿದ್ಯಾರ್ಥಿಗಳ ಮೇಲಿನ ದಾಳಿಯನ್ನು ತಡೆಯಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದೂ ಒತ್ತಾಯಿಸಿದರು. ಕೆಲ ಕಾಲೇಜುಗಳ ವಿದ್ಯಾರ್ಥಿಗಳು, ಸಾಮಾಜಿಕ ಕಾರ್ಯಕರ್ತರು, ಕಲಾವಿದರು ನಡಿಗೆಯಲ್ಲಿ ಭಾಗವಹಿಸಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ನಗರದ ವಿವಿಧೆಡೆ ಫೆ.28ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.



ಬಿಎಚ್‌ಇಎಲ್, ಕೃಷ್ಣ ಗಾರ್ಡನ್, ಗಂಗಾ ಇಂಟರ್‌ನ್ಯಾಷನಲ್ ಸ್ಕೂಲ್ ರೋಡ್, ಟಿ.ಬಿ. ಹಳ್ಳಿ ರೋಡ್, ಬಾಬಾ ಟೆಂಪಲ್ ರೋಡ್, ತುಂಗಾನಗರ, ಅಂದ್ರಹಳ್ಳಿ, ವಿ.ಎಂ. ನಗರ, ಅಪೂರ್ವ ಬಡಾವಣೆ, ಕೆಂಗೇರಿ ಮುಖ್ಯ ರಸ್ತೆ, ಪೂನಂ ಹಾಲ್, ಉಲ್ಲಾಳ ನಗರ, ಮಾರುತಿ ನಗರ, ಭುವನೇಶ್ವರಿ ನಗರ, ದೊಡ್ಡಬಸ್ತಿ ಮುಖ್ಯ ರಸ್ತೆ, ಗಂಗಾನಗರ, ಯಮುನಾನಗರ ಸ್ಕೂಲ್, ಮಲ್ಲತ್ತಹಳ್ಳಿ, ಕೆಎಲ್‌ಇ ಕಾಲೇಜು ರಸ್ತೆ, ಅಂಬೇಡ್ಕರ್ ನಗರ, ಉಲ್ಲಾಳ ಬಸ್ ನಿಲ್ದಾಣ ಸುತ್ತಮುತ್ತ ಪ್ರದೇಶಗಳು.





ವಿವಿಧ ಕ್ಷೇತ್ರಗಳ ಪ್ರತಿನಿಧಿಗಳೊಂದಿಗೆ ಮುಖ್ಯಮಂತ್ರಿ ಬೊಮ್ಮಾಯಿ ಸಭೆ

ಬಜೆಟ್‌ನಲ್ಲಿ ನೆರವಿಗೆ ಹಲವರ ಮೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಬಜೆಟ್‌ನಲ್ಲಿ ಕಡಿಮೆ ಬಡ್ಡಿ ದರದ ಸಾಲ, ತೆರಿಗೆ ಇಳಿಕೆ, ಸಹಾಯಧನ ಹೆಚ್ಚಳದಂತಹ ಯೋಜನೆಗಳ ಮೂಲಕ ನೆರವಿಗೆ ಬರುವಂತೆ ಕೈಗಾರಿಕೆ, ಹೋಟೆಲ್, ಸಾರಿಗೆ ಮತ್ತು ಸಿನಿಮಾ ಕ್ಷೇತ್ರಗಳ ಸಂಘ, ಸಂಸ್ಥೆಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿವೆ.

ಬಜೆಟ್ ತಯಾರಿಯ ಪೂರ್ವಸಿದ್ಧತೆಯಲ್ಲಿರುವ ಮುಖ್ಯಮಂತ್ರಿಯವರು ಈ ಎಲ್ಲ ಕ್ಷೇತ್ರಗಳ ಸಂಘ, ಸಂಸ್ಥೆಗಳ ಪ್ರತಿನಿಧಿಗಳ ಜತೆ ಶನಿವಾರ ಸಭೆಗಳನ್ನು ನಡೆಸಿದರು. ವಿವಿಧ ಕ್ಷೇತ್ರಗಳು ಎದುರಿಸುತ್ತಿರುವ ಸಮಸ್ಯೆಗಳು, ಕೋವಿಡ್‌ನಿಂದ ಎದುರಾದ ಸಂಕಷ್ಟ ಮತ್ತಿತರ ಮಾಹಿತಿ ಪಡೆದುಕೊಂಡರು.

ಕೈಗಾರಿಕಾ ಕ್ಷೇತ್ರಕ್ಕೆ ₹ 1,000 ಕೋಟಿ ನೆರವು ನೀಡುವಂತೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ (ಎಫ್‌ಕೆಸಿಸಿಐ), ಸಣ್ಣ ಕೈಗಾರಿಕೆಗಳ ಸಂಘ, ಪೀಣ್ಯ ಕೈಗಾರಿಕಾ ಸಂಘ ಮತ್ತು ಮಹಿಳಾ ಉದ್ಯಮಿಗಳ ಸಂಘದ ಪ್ರತಿನಿಧಿಗಳು ಮನವಿ ಸಲ್ಲಿಸಿದರು.


ಬಸವರಾಜ ಬೊಮ್ಮಾಯಿ

ಕೈಗಾರಿಕೋದ್ಯಮಿಗಳಿಗೆ ಶೇಕಡ 4ರ ಬಡ್ಡಿ ದರದಲ್ಲಿ ಸಾಲ, ವಿದ್ಯುತ್ ಬಳಕೆ ಮೇಲಿನ ತೆರಿಗೆ ಕಡಿತ, ಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪನೆಗೆ ₹30 ಕೋಟಿ ಅನುದಾನ ಮತ್ತಿತರ ನೆರವು ಘೋಷಿಸುವಂತೆ ಕೈಗಾರಿಕೋದ್ಯಮಿಗಳು ಮನವಿ ಮಾಡಿದರು. ಎಫ್‌ಕೆಸಿಸಿಐ ಅಧ್ಯಕ್ಷ ಡಾ. ಐ.ಎಸ್. ಪ್ರಸಾದ್ ಸೇರಿದಂತೆ ಹಲವು ಉದ್ಯಮಿಗಳು ನಿಯೋಗದಲ್ಲಿದ್ದರು.

‘ಹೋಟೆಲ್ ಉದ್ಯಮ ಕೋವಿಡ್‌ನಿಂದ ಸಂಕಷ್ಟದಲ್ಲಿದೆ. ತೆರಿಗೆ ವಿನಾಯಿತಿ ನೀಡುವಂತೆ ಕೋರಿದ್ದೇವೆ. ಆಸ್ತಿ ತೆರಿಗೆ ಕಡಿಮೆ ಮಾಡುವಂತೆಯೂ ಮನವಿ ಮಾಡಲಾಗಿದೆ. ಉದ್ದಿಮೆ ಪರವಾನಗಿಯನ್ನು ದೀರ್ಘಾವಧಿಗೆ ನೀಡುವುದು ಮತ್ತು ಬೀದಿಬದಿ ವ್ಯಾಪಾರಿಗಳಿಗೆ ಆಹಾರ ಪಾರ್ಕ್ ನಿರ್ಮಾಣ ಮಾಡುವಂತೆ ಸಲಹೆ ನೀಡಿದ್ದೇವೆ’ ಎಂದು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ತಿಳಿಸಿದರು.

ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ₹ 500 ಕೋಟಿ ನೀಡಲು ಮನವಿ

ಬೆಂಗಳೂರು: ‘ಪೀಣ್ಯ ಕೈಗಾರಿಕಾ ವಲಯದ ಸಮಗ್ರ ಅಭಿವೃದ್ಧಿಗೆ 2022-23ನೇ ಸಾಲಿನ ಬಜೆಟ್‌ನಲ್ಲಿ ₹ 500 ಕೋಟಿ ಒದಗಿಸಬೇಕು’ ಎಂದು ಮುಖ್ಯಮಂತ್ರಿಗೆ ಪೀಣ್ಯ ಕೈಗಾರಿಕಾ ಸಂಘ ಮನವಿ ಮಾಡಿದೆ.

ಮುಖ್ಯಮಂತ್ರಿ ಅವರ ಜತೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ ಪೀಣ್ಯ ಕೈಗಾರಿಕಾ ಸಂಘದ ಅಧ್ಯಕ್ಷ ಮುರಳಿ ಕೃಷ್ಣ, ಗೌರವ ಕಾರ್ಯದರ್ಶಿ ಆರ್. ಶಿವಕುಮಾರ್ ನೇತೃತ್ವದ ತಂಡ, ಸಣ್ಣ ಕೈಗಾರಿಕಾ ವಲಯ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿವರಿಸಿತು.

ಆಗ್ನೇಯ ಏಷ್ಯಾದ 100ಕ್ಕೂ ಹೆಚ್ಚು ದೊಡ್ಡ ಕೈಗಾರಿಕೆಗಳು, 8,500ಕ್ಕೂ ಹೆಚ್ಚು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪೀಣ್ಯ ಕೈಗಾರಿಕಾ ವಲಯವು ಒಳಗೊಂಡಿದ್ದು, ವಾರ್ಷಿಕ ₹ 20 ಸಾವಿರ ಕೋಟಿಗಿಂತ ಹೆಚ್ಚಿನ ವಹಿವಾಟು ನಡೆಸುತ್ತಿದೆ. ₹ 2,600 ಕೋಟಿಗಿಂತ ಹೆಚ್ಚು ಆದಾಯವನ್ನು ಕೇಂದ್ರ ಹಾಗೂ ರಾಜ್ಯದ ಬೊಕ್ಕಸಕ್ಕೆ ನೀಡುತ್ತಿದೆ.

ಕೋವಿಡ್‌ನಿಂದ ಪೀಣ್ಯ ಕೈಗಾರಿಕಾ ವಲಯವು ತತ್ತರಿಸಿದ್ದು, ಸಾಕಷ್ಟು ಉದ್ಯೋಗಿಗಳು ನಗರ ತೊರೆದಿದ್ದಾರೆ. ಉಕ್ಕು, ಪ್ಲಾಸ್ಟಿಕ್, ರಾಸಾಯನಿಕಗಳು, ತಾಮ್ರ, ಅಲ್ಯೂಮಿನಿಯಂ, ವಿದ್ಯುನ್ಮಾನ ವಲಯದ ಕಚ್ಚಾ ವಸ್ತುಗಳ ಬೆಲೆ ಹೆಚ್ಚಳದಿಂದ ಸಣ್ಣ ಕೈಗಾರಿಕಾ ಕ್ಷೇತ್ರ ತೀವ್ರ ಸಂಕಷ್ಟದಲ್ಲಿದೆ. ಕೂಡಲೇ ಈ ವಸ್ತುಗಳಿಗೆ ಇನ್‌ಪುಟ್ ತೆರಿಗೆ ಮತ್ತು ಜಿಎಸ್‌ಟಿ ಕಡಿಮೆ ಮಾಡಬೇಕು‘ ಎಂದೂ ಸಂಘ ಒತ್ತಾಯಿಸಿದೆ.

‘ಪೀಣ್ಯದ ಮೂಲಕ ಉಲ್ಲಾಳ, ಸುಂಕದಕಟ್ಟೆ, ಹೆಬ್ಬಾಳ ಹಾಗೂ ಯಲಹಂಕಕ್ಕೆ ಮೆಟ್ರೊ ರೈಲು ಮಾರ್ಗವನ್ನು ನಿರ್ಮಿಸಬೇಕು. ಎರಡು ದಶಕಗಳ ಹಿಂದಿನ ಬೇಡಿಕೆ ಆಗಿರುವ ‘ಪೀಣ್ಯ ಕೈಗಾರಿಕಾ ಪ್ರಾಧಿಕಾರ’ವನ್ನು ತಕ್ಷಣ ಸ್ಥಾಪಿಸಬೇಕು’ ಎಂದೂ ಸಂಘ ಮನವಿ ಮಾಡಿದೆ.

‘ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು 2021-22ನೇ ಸಾಲಿನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಪ್ರಾಧಿಕಾರ ಸ್ಥಾಪನೆಗೆ ₹ 100 ಕೋಟಿ ಮಂಜೂರು ಮಾಡಿದ್ದು, ಮಾರ್ಚ್‌ನಲ್ಲಿ ಮಂಡಿಸಲಿರುವ ಬಜೆಟ್‌ನಲ್ಲಿ ಹೆಚ್ಚಿನ ನೆರವು ನೀಡಬೇಕು’ ಎಂದೂ ಸಂಘ ಕೋರಿದೆ.

ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಜೈರಾಜ್ ನೇತೃತ್ವದಲ್ಲಿ ಸಿನಿಮಾ ಕ್ಷೇತ್ರದ ಪ್ರತಿನಿಧಿಗಳು ಬೊಮ್ಮಾಯಿ ಅವರೊಂದಿಗೆ ಚರ್ಚೆ ನಡೆಸಿದರು. ಚಿತ್ರನಗರಿ ನಿರ್ಮಾಣದ ಸ್ಥಳವನ್ನು ಅಂತಿಮಗೊಳಿಸುವಂತೆ ಮತ್ತು 175 ಸಿನಿಮಾಗಳಿಗೆ ಸಹಾಯಧನ ನೀಡುವ ತೀರ್ಮಾನ ಪ್ರಕಟಿಸುವಂತೆ ಮನವಿ ಮಾಡಿದರು.

ಸಾರಿಗೆ ಕ್ಷೇತ್ರದ ವಿವಿಧ ಸಂಘ, ಸಂಸ್ಥೆಗಳ ಪ್ರತಿನಿಧಿಗಳ ಜತೆಗೂ ಮುಖ್ಯಮಂತ್ರಿ ಸಭೆ ನಡೆಸಿದರು. ಮೋಟಾರು ವಾಹನ ತೆರಿಗೆ ಇಳಿಕೆ ಸೇರಿದಂತೆ ಸಾರಿಗೆ ಕ್ಷೇತ್ರದಲ್ಲಿ ದುಡಿಯುತ್ತಿರುವವರ ನೆರವಿಗೆ ಯೋಜನೆಗಳನ್ನು ಪ್ರಕಟಿಸುವಂತೆ ಅವರು ಮನವಿ ಮಾಡಿದರು.

ಚಲಿಸುತ್ತಿದ್ದ ಕ್ಯಾಂಟರ್‌ಗೆ ಬೆಂಕಿ


ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಚಲಿಸುತ್ತಿದ್ದ ಕ್ಯಾಂಟರ್ ವಾಹನದಲ್ಲಿ ಆಕಸ್ಮಿಕವಾಗಿ ಬೆಂಕಿ ತಗುಲಿದ ಪರಿಣಾಮ ಗೃಹೋಪಯೋಗಿ ವಸ್ತುಗಳು ಸುಟ್ಟು ಕರಕಲಾಗಿರುವ ಘಟನೆ ಶನಿವಾರ ಐಟಿಐ ಗೇಟ್ ಬಳಿ ನಡೆದಿದೆ.

ಕ್ಯಾಂಟರ್ ವಾಹನ ಮೈಸೂರಿನಿಂದ ನಗರದ ಕೆ.ಆರ್. ಪುರ ಕಡೆ ಬರುತ್ತಿದ್ದಾಗ ಐಟಿಐ ಗೇಟ್ ಬಳಿ ಬೆಳಿಗ್ಗೆ 8.30ರ ವೇಳೆಗೆ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿ ಸಂಪೂರ್ಣವಾಗಿ ಆವರಿಸಿಕೊಂಡಿದೆ. ಸ್ಥಳೀಯರು ಹಾಗೂ ಐಟಿಐನಲ್ಲಿ ಪ್ರತಿಭಟನೆ ಮಾಡುತ್ತಿದ್ದ ಪ್ರತಿಭಟನಾಕಾರರು ಧಾವಿಸಿ ಬೆಂಕಿ ನಂದಿಸಲು ಮುಂದಾದರು.

ಮಾಹಿತಿ ತಿಳಿದ ನಂತರ ಮಹದೇವಪುರ ಹಾಗೂ ಬಾಣಸವಾಡಿಯ ಅಗ್ನಿ ಶಾಮಕ ದಳದ ವಾಹನಗಳು ಸ್ಥಳಕ್ಕೆ ಬಂದು ಸಿಬ್ಬಂದಿಯ ನೆರವಿನಿಂದ ಬೆಂಕಿ ನಂದಿಸುವಲ್ಲಿ ಯಶಸ್ವಿಯಾದರು.

ಶ್ರೀನಿವಾಸ್ ಎನ್ನುವವರ ಮನೆಯ ದಿನಬಳಕೆಯ ಪೀಠೋಪಕರಣ, ಬಟ್ಟೆ, ದಿನಸಿ ಹಾಗೂ ಇನ್ನಿತರ ವಸ್ತುಗಳು ಬೆಂಕಿಗೆ ಆಹುತಿಯಾಗಿವೆ.


ಅಗ್ನಿ ಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು

ಮದ್ಯ ಖರೀದಿಗೆ ಹಣ ಕೊಡದಿದ್ದಕ್ಕೆ ತಾಯಿ ಕೊಲೆ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರತ್ತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಯಮನಮ್ಮ (70) ಎಂಬುವರ ಕೊಲೆ ಆಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಮಗ ಅಂಬರೀಷ್‌ನನ್ನು (45) ಪೊಲೀಸರು ಬಂಧಿಸಿದ್ದಾರೆ.

‘ಬಿಸನಹಳ್ಳಿಯ ಶೆಡ್‌ನಲ್ಲಿ ವಾಸವಿದ್ದ ಯಮನಮ್ಮ, ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದರು. ಮದ್ಯ ಕುಡಿಯಲು ಹಣ ಕೊಡಲಿಲ್ಲವೆಂಬ ಕಾರಣಕ್ಕೆ ಅವರ ಕಪಾಳಕ್ಕೆ ಮಗ ಹೊಡೆದಿದ್ದ. ಪ್ರಜ್ಞೆ ತಪ್ಪಿ ಕುಸಿದು ಬಿದ್ದಿದ್ದ ಯಮನಮ್ಮ, ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಘಟನೆ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು. ಪ್ರತ್ಯಕ್ಷದರ್ಶಿಗಳ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಆರೋಪಿ ಅಂಬರೀಷ್‌ನನ್ನೂ ಬಂಧಿಸಲಾಯಿತು’ ಎಂದೂ ತಿಳಿಸಿದರು.

ಕೆಲಸಕ್ಕೆ ಬಂದಿದ್ದ ಕುಟುಂಬ: ‘ರಾಯಚೂರು ಜಿಲ್ಲೆಯ ಲಿಂಗಸಗೂರಿನ ಯಮನಮ್ಮ, ಪತಿ ಹಾಗೂ ಅಂಬರೀಷ್ ಸೇರಿ ಇಬ್ಬರು ಮಕ್ಕಳ ಜೊತೆ ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದರು. ಆರಂಭದಲ್ಲಿ ಕುಟುಂಬ ಚೆನ್ನಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಯಮನಮ್ಮ ಅವರ ಪತಿ, ಕೆಲ ವರ್ಷಗಳ ಹಿಂದೆ ತೀರಿಕೊಂಡರು. ಮದ್ಯ ಕುಡಿಯಲಾರಂಭಿಸಿದ್ದ ಕಿರಿ ಮಗನೂ ಅನಾರೋಗ್ಯದಿಂದ ಮೃತಪಟ್ಟ. ಹಿರಿಯ ಮಗನಾದ ಅಂಬರೀಷ್ ಸಹ ಮದ್ಯವ್ಯಸನಿ ಆಗಿದ್ದ. ಕೂಲಿ ಕೆಲಸಕ್ಕೆ ಹೋಗುತ್ತಿದ್ದ ಆತ, ದುಡಿದ ಹಣವನ್ನೆಲ್ಲ ಕುಡಿತಕ್ಕೆ ಖರ್ಚು ಮಾಡುತ್ತಿದ್ದ.’

‘ಮದ್ಯ ಖರೀದಿಗೆ ಹಣ ಸಾಲದಿದ್ದಾಗ, ತಾಯಿಯನ್ನು ಪೀಡಿಸುತ್ತಿದ್ದ. ಭಿಕ್ಷೆ ಬೇಡಿ ಸಂಗ್ರಹಿಸಿದ್ದ ಹಣವನ್ನೇ ತಾಯಿ ಯಮನಮ್ಮ, ಮಗನಿಗೆ ಕೊಡುತ್ತಿದ್ದರು. ಆದರೆ, ಶುಕ್ರವಾರ ಅವರ ಬಳಿ ಹಣವಿರಲಿಲ್ಲ. ಹಣ ಕೊಡದಿದ್ದಕ್ಕೆ ಮಗ ಹಲ್ಲೆ ಮಾಡಿದ್ದ’ ಎಂದೂ ತಿಳಿಸಿದರು.

ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ಘಟನೆ

ಪತ್ನಿಯ ಕೊಂದು ಠಾಣೆಗೆ ಶರಣಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಆಯಿಷಾ ಬಾನು (31) ಎಂಬುವರನ್ನು ಕೊಲೆ ಮಾಡಲಾಗಿದ್ದು, ತಾನೇ ಕೃತ್ಯ ಎಸಗಿರುವುದಾಗಿ ಹೇಳಿ ಪತಿ ಮುಜಾಮಿಲ್ ಪಾಷಾ (35) ಠಾಣೆಗೆ ಶರಣಾಗಿದ್ದಾನೆ.

‘ಭೈರಪ್ಪ ಬಡಾವಣೆಯ ಮನೆಯೊಂದರಲ್ಲಿ ಶುಕ್ರವಾರ ರಾತ್ರಿ ಆಯಿಷಾ ಕೊಲೆ ನಡೆದಿದೆ. ಪುರಾವೆಗಳನ್ನು ಸಂಗ್ರಹಿಸಿ ಪತಿ ಮುಜಾಮಿಲ್ ಪಾಷಾನನ್ನು ಬಂಧಿಸಲಾಗಿದೆ. ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ರಾಮನಗರದ ಮುಜಾಮಿಲ್ ಪಾಷಾ, ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದ. ಆಟೊ ಚಾಲಕನಾಗಿ ಕೆಲಸ ಮಾಡುತ್ತಿದ್ದ ಆತ, 11 ವರ್ಷಗಳ ಹಿಂದೆ ಆಯಿಷಾ ಅವರನ್ನು ಮದುವೆಯಾಗಿದ್ದ. ದಂಪತಿಗೆ ಮೂವರು ಮಕ್ಕಳಿದ್ದಾರೆ. ಇಡೀ ಕುಟುಂಬ ಭೈರಪ್ಪ ಬಡಾವಣೆಯ ಬಾಡಿಗೆ ಮನೆಯಲ್ಲಿ ವಾಸವಿತ್ತು.’

‘ದಂಪತಿ ನಿತ್ಯವೂ ಸಣ್ಣಪುಟ್ಟ ವಿಷಯಕ್ಕೂ ಗಲಾಟೆ ಮಾಡುತ್ತಿದ್ದರು. ಶುಕ್ರವಾರ ತಡರಾತ್ರಿಯೂ ಜಗಳವಾಗಿದೆ. ಸಿಟ್ಟಿಗೆದ್ದ ಮುಜಾಮಿಲ್, ಆಯಿಷಾ ತಲೆಗೆ ಕುಡಗೋಲಿನಿಂದ ನಾಲ್ಕು ಬಾರಿ ಹೊಡೆದಿದ್ದಾನೆ. ಸ್ಥಳದಲ್ಲೇ ಕುಸಿದು ಬಿದ್ದು ಆಯಿಷಾ ಮೃತಪಟ್ಟಿದ್ದಾರೆ. ನಂತರ, ಆರೋಪಿ ಠಾಣೆಗೆ ಬಂದು ತಪ್ಪೊಪ್ಪಿಕೊಂಡಿದ್ದಾನೆ’ ಎಂದೂ ಅಧಿಕಾರಿ ತಿಳಿಸಿದರು.

ಶೀಲದ ಶಂಕೆ, ಸಂಧಾನ: ‘ಪತ್ನಿಯ ಶೀಲದ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದ ಮುಜಾಮಿಲ್ ಪಾಷಾ, ಜಗಳ ಮಾಡಲಾರಂಭಿಸಿದ್ದ. ಇದು ಪತ್ನಿಗೂ ಸಿಟ್ಟು ತರಿಸಿತ್ತು. ಹೀಗಾಗಿ, ಇಬ್ಬರ ನಡುವೆ ನಿತ್ಯವೂ ಗಲಾಟೆ ಆಗುತ್ತಿತ್ತು’ ಎಂದು ಅಧಿಕಾರಿ ಹೇಳಿದರು.

‘ದಂಪತಿ ಜಗಳದ ವಿಷಯ ಕುಟುಂಬದ ಹಿರಿಯರಿಗೆ ಗೊತ್ತಾಗಿತ್ತು. ಸಂಧಾನ ಮಾಡಿದ್ದ ಹಿರಿಯರು, ಚೆನ್ನಾಗಿ ಬಾಳುವಂತೆ ದಂಪತಿಗೆ ಬುದ್ಧಿವಾದ ಹೇಳಿದ್ದರು. ಇದಾದ ನಂತರವೂ ಅವರಿಬ್ಬರ ಜಗಳ ನಿಂತಿರಲಿಲ್ಲ. ಮಕ್ಕಳ ಜೊತೆ ಮಲಗುತ್ತಿದ್ದ ಆಯಿಷಾ, ಪತಿ ಬಳಿ ಹೋಗುತ್ತಿರಲಿಲ್ಲ. ಇದು ಮುಜಾಮಿಲ್‌ಗೆ ಮತ್ತಷ್ಟು ಕೋಪ ತರಿಸಿತ್ತು’ ಎಂದೂ ತಿಳಿಸಿದರು.

‘ಪತ್ನಿಯನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ ಮುಜಾಮಿಲ್, ಶುಕ್ರವಾರ ಸಂಜೆಯೇ ಮಕ್ಕಳನ್ನು ಅಕ್ಕನ ಮನೆಗೆ ಕಳುಹಿಸಿದ್ದ. ಮನೆಯ ಪ್ರತ್ಯೇಕ ಕೊಠಡಿಯಲ್ಲಿ ಆಯಿಷಾ ಮಲಗಿದ್ದರು. ತಡರಾತ್ರಿ ಅವರ ಬಳಿ ಹೋಗಿ ಜಗಳವಾಡಿದ್ದ ಆರೋಪಿ, ಕೊಲೆ ಮಾಡಿದ್ದ’ ಎಂದೂ ಅಧಿಕಾರಿ ವಿವರಿಸಿದರು.

ಬಿಬಿಎಂಪಿ ಅಧಿಕಾರಿ ಸೋಗಿನಲ್ಲಿ ‘ಒಟಿಪಿ’ ಪಡೆದು ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಅಧಿಕಾರಿಗಳ ಸೋಗಿನಲ್ಲಿ ವ್ಯಕ್ತಿಯೊಬ್ಬರಿಗೆ ಕರೆ ಮಾಡಿ ಬ್ಯಾಂಕ್ ಖಾತೆಯ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ಪಡೆದು ವಂಚಿಸಿದ್ದ ಆರೋಪದಡಿ ಇಬ್ಬರನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

'ಬೀದರ್‌ನ ಶಿವಪ್ರಸಾದ್ (33) ಹಾಗೂ ದೆಹಲಿಯ ಪಂಕಜ್ ಚೌಧರಿ (24) ಬಂಧಿತರು. ಆನ್‌ಲೈನ್ ಮೂಲಕ ಜನರನ್ನು ವಂಚಿಸುವುದನ್ನೇ ಆರೋಪಿಗಳು ವೃತ್ತಿ ಮಾಡಿಕೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘ನಗರದ ನಿವಾಸಿಯೊಬ್ಬರು, ಬಿಬಿಎಂಪಿ ವಾರ್ಡ್ ಒಂದರಲ್ಲಿ ಬೂತ್ ಮಟ್ಟದ ಅಧಿಕಾರಿಯಾಗಿ (ಬಿಎಲ್‌ಒ) ಕೆಲ ತಿಂಗಳು ಕೆಲಸ ಮಾಡಿದ್ದರು. ಜ. 28ರಂದು ಅವರಿಗೆ ಕರೆ ಮಾಡಿದ್ದ ಆರೋಪಿಗಳು, ‘ನಾವು ಬಿಬಿಎಂಪಿ ವಾರ್ಡ್ ಅಧಿಕಾರಿಗಳು. ಬಿಎಲ್‌ಒ ಕೆಲಸದ ಭತ್ಯೆಯನ್ನು ಖಾತೆಗೆ ವರ್ಗಾಯಿಸುತ್ತೇವೆ. ಮಾಹಿತಿ ನೀಡಿ’ ಎಂದಿದ್ದರು.’

‘ಆರೋಪಿಗಳ ಮಾತು ನಂಬಿದ್ದ ನಿವಾಸಿ, ಬ್ಯಾಂಕ್ ಖಾತೆ ಮಾಹಿತಿ ಹಾಗೂ ಒಟಿಪಿ ಕೊಟ್ಟಿದ್ದರು. ಅದಾದ ಕೆಲ ಕ್ಷಣಗಳಲ್ಲೇ ನಿವಾಸಿ ಬ್ಯಾಂಕ್ ಖಾತೆಯಿಂದ ₹ 17,111 ಕಡಿತವಾಗಿತ್ತು. ಆರೋಪಿಗಳ ಮೊಬೈಲ್ ಸಹ ಸ್ವಿಚ್ ಆಫ್ ಆಗಿತ್ತು. ಈ ವಂಚನೆ ಬಗ್ಗೆ ನಿವಾಸಿ ಠಾಣೆಗೆ ದೂರು ನೀಡಿದ್ದರು’ ಎಂದೂ ಪೊಲೀಸರು ತಿಳಿಸಿದರು.

ಆನ್‌ಲೈನ್‌ನಲ್ಲಿ ಖರೀದಿ: ‘ಆರೋಪಿಗಳಿಂದ ₹ 22 ಸಾವಿರ ನಗದು, 9 ಮೊಬೈಲ್ ಜಪ್ತಿ ಮಾಡಲಾಗಿದೆ. ಆರೋಪಿಗಳು ನಕಲಿ ಖಾತೆಗಳನ್ನು ತೆರೆದಿದ್ದು, ಅವುಗಳ ಮಾಹಿತಿಯನ್ನೂ ಕಲೆಹಾಕಲಾಗಿದೆ’ ಎಂದು ಪೊಲೀಸರು ಹೇಳಿದರು.

ಪಲ್ಸ್ ಪೋಲಿಯೊ: 64.77 ಲಕ್ಷ ಮಕ್ಕಳ ಗುರಿ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಭಾನುವಾರ (ಫೆ. 27) ಪಲ್ಸ್ ಪೋಲಿಯೊ ಹನಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, 5 ವರ್ಷದೊಳಗಿನ 64.77 ಲಕ್ಷ ಮಕ್ಕಳನ್ನು ತಲುಪುವ ಗುರಿ ಹಾಕಿಕೊಂಡಿದೆ.

ಕಳೆದ ಜನವರಿ ತಿಂಗಳಲ್ಲಿ ನಡೆಯಬೇಕಾಗಿದ್ದ ಈ ಕಾರ್ಯಕ್ರಮ ಕೋವಿಡ್ ಮೂರನೇ ಅಲೆಯಿಂದಾಗಿ ಮುಂದೂಡಲ್ಪಟ್ಟಿತ್ತು.

ಪೋಲಿಯೊ ಹನಿ ವಿತರಣೆಗೆ 33,223 ಬೂತ್‌ಗಳನ್ನು ಗುರುತಿಸಲಾಗಿದೆ. 45,933 ಮನೆ ಮನೆಗೆ ಭೇಟಿ ತಂಡಗಳನ್ನು ರಚಿಸಲಾಗಿದೆ. 960 ಸಂಚಾರಿ ತಂಡಗಳು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶಗಳಲ್ಲಿ ಲಸಿಕೆ ವಿತರಿಸಲಿವೆ. ಈ ಕಾರ್ಯಕ್ರಮಕ್ಕೆ 1.08 ಕಾರ್ಯಕರ್ತರನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.


ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೋವಿಡ್: ವಾರದಲ್ಲಿ 18 ಮಂದಿ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೊರೊನಾ ಸೋಂಕಿನ ತೀವ್ರತೆ ತಗ್ಗಿರುವುದರಿಂದ ಆಸ್ಪತ್ರೆ ದಾಖಲಾತಿ ಗಣನೀಯವಾಗಿ ಇಳಿಕೆಯಾಗಿದ್ದು, ಬಹುತೇಕರು ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ. ಕಳೆದ ಒಂದು ವಾರದಲ್ಲಿ 3,096 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಅವರಲ್ಲಿ 18 ಮಂದಿ ಮಾತ್ರ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.



ಸೋಂಕು ದೃಢ ಪ್ರಮಾಣ ಕೆಲ ದಿನಗಳಿಂದ ಶೇ 2ರ ಗಡಿಯ ಒಳಗೆ ಇದೆ. ದೈನಂದಿನ ಆಸ್ಪತ್ರೆ ದಾಖಲಾತಿಯೂ 5ಕ್ಕಿಂತ ಕಡಿಮೆ ಇದೆ. ವಾರದಲ್ಲಿ ದಾಖಲಾದ 18 ಮಂದಿಯಲ್ಲಿ 6 ಮಂದಿ ತೀವ್ರ ನಿಗಾ ಘಟಕ (ಐಸಿಯು) ಹಾಗೂ 3 ಮಂದಿ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಸದ್ಯ ಕೋವಿಡ್ ಪೀಡಿತರಲ್ಲಿ 44 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಚಿಕಿತ್ಸೆಗೆ ಮೀಸಲಿಟ್ಟಿರುವ 2,142 ಹಾಸಿಗೆಗಳಲ್ಲಿ 2,096 ಹಾಸಿಗೆಗಳು ಖಾಲಿ ಉಳಿದಿವೆ. ಕೋವಿಡ್ ಮೂರನೇ ಅಲೆಯ ಸಂದರ್ಭದಲ್ಲಿ ದಿನವೊಂದಕ್ಕೆ ವರದಿಯಾಗುತ್ತಿದ್ದ ಹೊಸ ಪ್ರಕರಣಗಳ ಸಂಖ್ಯೆಯು ನಗರದಲ್ಲಿ 30 ಸಾವಿರದ ಗಡಿ ಸಮೀಪಿಸಿತ್ತು. ಈಗ ಹೊಸ ಪ್ರಕರಣಗಳ ಸರಾಸರಿ ಪ್ರಮಾಣ 500ರ ಆಸುಪಾಸಿಗೆ ಇಳಿಕೆ ಕಂಡಿದೆ. ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 5 ಸಾವಿರಕ್ಕಿಂತ ಕಡಿಮೆ ಇದೆ.

ಸಾಮಾನ್ಯ ವಾರ್ಡ್‌ನಲ್ಲಿ 11, ಐಸಿಯುವಿನಲ್ಲಿ 12, ಎಚ್.ಡಿ.ಯು ವಾರ್ಡ್‌ನಲ್ಲಿ 9 ಹಾಗೂ ವೆಂಟಿಲೇಟರ್ ಸಹಿತ ಐಸಿಯುವಿನಲ್ಲಿ 14 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

17,78,137 ▲ ಒಟ್ಟು ಸೋಂಕಿತರು (17,77,792 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
3,761 ▼	17,57,479 ▲	16,895 ▲

ದಿನದ ಏರಿಕೆ	
ಹೊಸ ಪ್ರಕರಣ	345 ▼
ಗುಣಮುಖ	544 ▼
ಸಾವು	13 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಮೈಗೌ.ಇನ್/ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	43.40 ಕೋಟಿ ▲	4.29 ಕೋಟಿ
ಸಕ್ರಿಯ ಪ್ರಕರಣ	6.40 ಕೋಟಿ ▼	1.21 ಲಕ್ಷ ▼
ಗುಣಮುಖ	36.39 ಕೋಟಿ ▲	4.22 ಕೋಟಿ
ಸಾವು	59.59 ಲಕ್ಷ ▲	5.13 ಲಕ್ಷ ▲

ದಿನದ ಮಾಹಿತಿ	ವಿಶ್ವ	ಭಾರತ
ಹೊಸ ಪ್ರಕರಣ	16.17 ಲಕ್ಷ ▼	11,499 ▼
ಗುಣಮುಖ	21.63 ಲಕ್ಷ ▼	23,598 ▼
ಸಾವು	8,511 ▼	255 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
1.93 ಲಕ್ಷ ▲ ಜರ್ಮನಿ; 71,736 ▼ ಟರ್ಕಿ; 1.23 ಲಕ್ಷ ▼ ರಷ್ಯಾ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು
2.66 ಕೋಟಿ ಅಮೆರಿಕ ▼; 36.22 ಲಕ್ಷ ಜರ್ಮನಿ ▲; 25.03 ಲಕ್ಷ ರಷ್ಯಾ ▲

ಎಲ್ಲಿ ಹೆಚ್ಚು ಸಾವು (ಒಟ್ಟು)
1.43 ಲಕ್ಷ ಮಹಾರಾಷ್ಟ್ರ; 64,980 ಕೇರಳ ▲; 38,000 ತಮಿಳುನಾಡು ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
78.63 ಮಹಾರಾಷ್ಟ್ರ ▲; 64.91 ಕೇರಳ ▲; 34.48 ತಮಿಳುನಾಡು ▲

ಭಾರತದ ಕೋವಿಡ್ ಸಂಖ್ಯೆ ವಿವರ: ಶನಿವಾರ ಬೆಳಿಗ್ಗೆ 8ರವರೆಗಿನ ಮಾಹಿತಿ
ಪ್ರಜಾವಾಣಿ ಗ್ರಾಫಿಕ್ಸ್

ನಿಧನ ವಾರ್ತೆ

ಡಾ.ಕೆ.ದೊಡ್ಡೇಗೌಡ



ಹಾಸನ: ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಅಧ್ಯಕ್ಷ, ಮಕ್ಕಳ ತಜ್ಞ ಡಾ.ಕೆ. ದೊಡ್ಡೇಗೌಡ (90) ವಯೋಸಹಜ ಅನಾರೋಗ್ಯದಿಂದ ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಕೆ.ಆರ್.ಪುರಂ ಬಡಾವಣೆಯ ಅವರ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ಶ್ರವಣಬೆಳಗೊಳ ಹೋಬಳಿಯ ಕಬ್ಬಾಳು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು.

1988ರ ಅವಧಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ನಗರದಲ್ಲಿ ಇಂದು

ಸ್ಫೂರ್ತಿ ಕ್ಷೇಮಾಭಿವೃದ್ಧಿ ಸಂಘದ ಚಟುವಟಿಕೆಗಳ ಉದ್ಘಾಟನೆ, ಸ್ವಾಮಿ ವಿವೇಕಾನಂದ ರಸ್ತೆ ನಾಮಕರಣ ಮತ್ತು ಫ್ಯಾಮಿಲಿ ಹ್ಯಾಪಿನೆಸ್ ಕಿಟ್ ವಿತರಣೆ: ಸ್ಥಳ–ಸ್ಫೂರ್ತಿ ಕ್ಷೇಮಾಭಿವೃದ್ಧಿ ಸಂಘ, ಮುನಿರಾಜು ಬಡಾವಣೆ, ಗುಬ್ಬಲಾಳ, ಕನಕಪುರ ರಸ್ತೆ, ಬೆಳಿಗ್ಗೆ 9

ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ:ಅತಿಥಿಗಳು–ರವಿ ಡಿ.ಚನ್ನಣ್ಣನವರ್, ಬೇಳೂರು ಸುದರ್ಶನ, ವಾದಿರಾಜ್, ದಿನೇಶ್ ಹೆಗ್ಡೆ, ಆಯೋಜನೆ–ಉತ್ಥಾನ, ಸ್ಥಳ–ಕೇಶವ ಶಿಲ್ಪ, ರಾಷ್ಟ್ರೋತ್ಥಾನ ಪರಿಷತ್, ಉಮಾ ಟಾಕೀಸ್ ಹತ್ತಿರ, ಕೆಂಪೇಗೌಡ ನಗರ, ಬೆಳಿಗ್ಗೆ 9

ಆರೋಗ್ಯ ತಪಾಸಣೆ ಶಿಬಿರ:ಆಯೋಜನೆ–ಆರ್.ಕೆ.ರಮೇಶಣ್ಣ ಅಭಿಮಾನಿ ಬಳಗ, ಸ್ಥಳ–ಸೆಂಟ್ರಲ್ ಜೈಲ್ ವೃತ್ತ, ನಾಗನಾಥಪುರ, ಬೆಳಿಗ್ಗೆ 9ರಿಂದ

ಕೆ.ಶ್ರೀನಾಥ್ ಅವರ ‘ಸತ್ಯಕ್ಕೊಂದು ಸಂತಾಪ’ ಪುಸ್ತಕ ಬಿಡುಗಡೆ: ಎನ್.ಸಂಧ್ಯಾರಾಣಿ, ಅತಿಥಿ–ಟಿ.ಎನ್. ಸೀತಾರಾಂ, ಮೋಹನ್ ಕೊಂಡಜ್ಜಿ, ಚಿದಂಬರ ನರೇಂದ್ರ, ಆಯೋಜನೆ–ಸಾಹಿತ್ಯಲೋಕ ಪ್ರಕಾಶನ, ಸ್ಥಳ–ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10


ಟಿ.ಎನ್.ಸೀತಾರಾಂ

ವಿದ್ಯಾರ್ಥಿವೇತನ ಹಂಚಿಕೆ ಮತ್ತು ಸನ್ಮಾನ:ಅಧ್ಯಕ್ಷತೆ–ಕಾಪ್ಸೆ ಈಶ್ವರ್ ರಾವ್, ಉದ್ಘಾಟನೆ–ಸ್ವಾಮಿ ನಾರಾಯಣ ಆನಂದ ಸರಸ್ವತಿ, ಅತಿಥಿಗಳು–ದಿನೇಶ್ ಗುಂಡೂರಾವ್, ನರೇಂದ್ರ ಏಕಬೋಟೆ, ಸತ್ಯನಾರಾಯಣ ಢಗೆ, ರೂಪ ಸವ್ವಾಸೇರೆ, ಶಿಲ್ಪಾ ಸವ್ವಾಸೇರೆ, ಆಯೋಜನೆ–ಜಿಹ್ವೇಶ್ವರ ವಿದ್ಯಾಭಿವೃದ್ಧಿ ಟ್ರಸ್ಟ್, ಸ್ಥಳ– ವಿಜಯ ಜೂನಿಯರ್ ಕಾಲೇಜು, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 10

ಕ್ಯಾನ್ಸರ್ ತಪಾಸಣೆ ಮತ್ತು ದಂತ ಪರೀಕ್ಷೆ ಶಿಬಿರ:ಆಯೋಜನೆ–ಉದಯಭಾನು ಕಲಾ ಸಂಘ, ನಾರಾಯಣ ನೇತ್ರಾಲಯ, ಸ್ಥಳ–ಉದಯಭಾನು ಸುವರ್ಣ ಭವನ, ಕೆಂಪೇಗೌಡನಗರ, ಬೆಳಿಗ್ಗೆ 10

ಸಂತ ಶಿಶುನಾಳ ಶರೀಫ ಜಯಂತಿ:ಉದ್ಘಾಟನೆ–ಎಂ.ಪ್ರಿಯದರ್ಶಿನಿ, ಅಧ್ಯಕ್ಷತೆ–ರಂಗೋತ್ರಿ ಕುಮಾರ್, ಅತಿಥಿಗಳು–ಯೋಗಶ್ರೀ ವರ್ಧಮಾನ್ ಕಳಸೂರು, ಸೇತುರಾಂ, ಗೀತಾ ಶ್ರೀನಾಥ್, ವೇಣುಗೋಪಾಲ್, ಆಯೋಜನೆ–ರಾಜ್ಯ ಸಾಹಿತಿ ಕಲಾವಿದರ, ಸಾಂಸ್ಕೃತಿಕ ಚಿಂತಕರ ಸಂಘ ಸಂಸ್ಥೆಗಳ ಒಕ್ಕೂಟ, ಸ್ಥಳ–ನಾಟ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಬೆಳಿಗ್ಗೆ 10.30

ಕಲಾಸಂಗಮ: ಉದ್ಘಾಟನೆ–ತೇಜಸ್ವಿ ಸೂರ್ಯ, ಸಾಧಕರಿಗೆ ಸನ್ಮಾನ–ಶೈಲಜಾ ವಿ.ಸೋಮಣ್ಣ, ಅಧ್ಯಕ್ಷತೆ–ಸಿ.ದಾಸೇಗೌಡ, ಆಯೋಜನೆ–ಸ್ವರಧಾರ ಕರ್ನಾಟಕ ರಾಜ್ಯ ಹಿನ್ನಲೆ ಗಾಯಕರ ಮಹಾಸಂಸ್ಥೆ, ಸ್ಥಳ–ಜ್ಞಾನಸೌಧ, ಮೂಡಲಪಾಳ್ಯ, ಬೆಳಿಗ್ಗೆ 10.30

ಬಾಗ್ಚಿ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ ಹಾಗೂ ಒಪಿಡಿ ಬ್ಲಾಕ್ ಉದ್ಘಾಟನೆ: ಅತಿಥಿ–ನಿಮ್ಹಾನ್ಸ್ ನಿರ್ದೇಶಕಿ ಡಾ.ಪ್ರತಿಮಾ ಮೂರ್ತಿ, ಆಯೋಜನೆ ಮತ್ತು ಸ್ಥಳ–ಕರುಣಾಶ್ರಯ, ವರ್ತೂರು ಮುಖ್ಯರಸ್ತೆ, ಮಾರತ್ತಹಳ್ಳಿ, ಬೆಳಿಗ್ಗೆ 10.30/7338382999

ಚೆನ್ನವೀರ ಕಣವಿ ಅವರಿಗೆ ನುಡಿನಮನ ಮತ್ತು ಗೀತಗೌರವ: ಅಧ್ಯಕ್ಷತೆ–ವೈ.ಕೆ. ಮುದ್ದುಕೃಷ್ಣ, ನುಡಿನಮನ–ಎಚ್. ಎಸ್.ವೆಂಕಟೇಶಮೂರ್ತಿ, ಕೆ.ವೈ. ನಾರಾಯಣಸ್ವಾಮಿ, ಹೇಮಾಪಟ್ಟಣ ಶೆಟ್ಟಿ, ಆಯೋಜನೆ–ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ–ಸಿ.ಅಶ್ವತ್ಥ್ ಕಲಾಭವನ, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

ಎಸ್ಸೆಸ್ಸೆಲ್ಸಿ ಕೋಚಿಂಗ್ ತರಗತಿಗಳ ಸಮಾರೋಪ:ಸನ್ಮಾನ–ಮುನಿರತ್ನ, ಅತಿಥಿ–ರಾಜಶೇಖರ್ ರಾವ್, ಆಯೋಜನೆ–ಕಬೀರ್ ಟ್ರಸ್ಟ್, ಸ್ಥಳ–ತರಳಬಾಳು ಕೇಂದ್ರ, ಆರ್.ಟಿ.ನಗರ, ಬೆಳಿಗ್ಗೆ 10.30

‘ವಾಲಿ ವಧೆ’ ನಾಟಕ ಪ್ರದರ್ಶನ: ನಿರ್ದೇಶನ–ಎಂ.ಗಣೇಶ್ ಉಡುಪಿ, ಆಯೋಜನೆ–ನಗ್ನ ಥಿಯೇಟರ್, ಸ್ಥಳ–ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರ ನಗರ, ಮಧ್ಯಾಹ್ನ 3.30 ಮತ್ತು ಸಂಜೆ 7.30



ರಾಂ.ಕೆ.ಹನುಮಂತಯ್ಯ–ಹೆಬ್ಬಗೋಡಿ ಗೋಪಾಲಪ್ಪ ದತ್ತಿ ಪುಸ್ತಕ ಬಹುಮಾನ ವಿತರಣೆ:ಎಂ.ಎಸ್.ಆಶಾದೇವಿ, ಅತಿಥಿಗಳು–ಪ್ರಮೀಳಾ ಪಾಲನೇತ್ರ, ಎಸ್. ರಾಮಲಿಂಗೇಶ್ವರ, ಆಯೋಜನೆ–ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ–ಗಾಂಧಿಭವನ, ಬೆಳಿಗ್ಗೆ 11

ಕಲಾತ್ಮಕ ಛಾಯಾಚಿತ್ರಗಳ ಪ್ರದರ್ಶನ ಉದ್ಘಾಟನೆ:ಅತಿಥಿ–ಎಂ.ಜಗದೀಶ್, ಆಯೋಜನೆ–ಯೂತ್ ಫೋಟೊಗ್ರಾಫಿಕ್ ಸೊಸೈಟಿ, ಸ್ಥಳ–ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

ಸಂತ ಸೇವಾಲಾಲ್ ಜಯಂತಿ ಹಾಗೂ ಬಂಜಾರ ಕಲಾಮೇಳ:ಸರ್ದಾರ್ ಸೇವಾಲಾಲ್ ಸ್ವಾಮೀಜಿ, ಉದ್ಘಾಟನೆ–ಆರ್.ಅಶೋಕ, ಅಧ್ಯಕ್ಷತೆ–ಉಮೇಶ್ ಜಾಧವ್, ಪುಸ್ತಕ ಬಿಡುಗಡೆ–ಎಸ್. ಟಿ.ಸೋಮಶೇಖರ್, ಕಲಾತಂಡ ಉದ್ಘಾಟನೆ–ಪಿ.ರಾಜೀವ್, ಪ್ರಾಸ್ತಾವಿಕ ನುಡಿ–ಬಿ.ಟಿ.ಲಲಿತಾನಾಯಕ್, ಅತಿಥಿಗಳು–ಪಿ.ಸಿ.ಮೋಹನ್, ಪಿ.ಟಿ. ಪರಮೇಶ್ವರ್ ನಾಯಕ್, ಎಸ್. ಭೀಮಾನಾಯ್ಕ್, ಆಯೋಜನೆ–ಕರ್ನಾಟಕ ಪ್ರದೇಶ ಬಂಜಾರ (ಲಂಬಾಣಿ) ಸೇವಾ ಸಂಘ, ಸ್ಥಳ–ಬಂಜಾರ ಭವನ, ವಸಂತನಗರ, ಬೆಳಿಗ್ಗೆ 11

ಮಾತೃಭಾಷಾ ದಿನ:ಸಂಗೀತ ಕಾರ್ಯಕ್ರಮ–ಗೋಪಿ ಮಾಧವ್, ಆಯೋಜನೆ ಮತ್ತು ಸ್ಥಳ–ರಾಗಿ ಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಕೋ.ಚೆನ್ನಬಸಪ್ಪ ಅವರ ಜನ್ಮಶತಮಾನೋತ್ಸವ:ಉದ್ಘಾಟನೆ–ಲೀಲಾದೇವಿ ಆರ್.ಪ್ರಸಾದ್, ಅತಿಥಿಗಳು–ವಸುಂಧರಾ ಭೂಪತಿ, ಅಧ್ಯಕ್ಷತೆ–ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು–ಅನುಪ್ ಸೀಲಿನ್, ಸಿಂ.ರಾ.ಹೊನ್ನಲಿಂಗಯ್ಯ, ದಯಾನಂದ ಪಾಟೀಲ, ಆಯೋಜನೆ–ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ನಾಟಕ ಬೆಂಗಳೂರು, ಸ್ಥಳ–ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

ತ್ಯಾಗರಾಜ ಮತ್ತು ಪುರಂದರದಾಸರ ಆರಾಧನಾ ಮಹೋತ್ಸವ: ಅತಿಥಿ–ಮುನಿರತ್ನ, ಅಧ್ಯಕ್ಷತೆ–ಎ. ರಾಧಾಕೃಷ್ಣ ರಾಜು, ಆಯೋಜನೆ–ಪದ್ಮಾವತಿ ಕಲಾನಿಕೇತನ, ಸ್ಥಳ–ಕೃಷ್ಣದೇವರಾಯ ಕಲಾ ಮಂದಿರ, ತೆಲುಗು ವಿಜ್ಞಾನ ಸಮಿತಿ ಆವರಣ, ವೈಯಾಲಿಕಾವಲ್, ಸಂಜೆ 6

ದಿ ಗ್ರ್ಯಾಂಡ್ ಸಿತಾರ್ ಸಿಂಫೋನಿ: ಸಂಗೀತ ನಿರ್ವಹಣೆ–ಪ್ರವೀಣ್ ಡಿ.ರಾವ್, ಸಂದೀಪ್ ವಸಿಷ್ಠ, ನೃತ್ಯ ನಿರ್ದೇಶನ–ಅಶೋಕ ಕುಮಾರ್, ವೇದಿಕೆ ವಿನ್ಯಾಸ–ಶಶಿಧರ್ ಅಡಪ, ದೃಶ್ಯ ಕಲೆ–ವಿನೋದ್ ಗೌಡ, ಆಯೋಜನೆ–ಮಾರ್ಸ್, ಸ್ಥಳ–ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6.30

ರಾಷ್ಟ್ರೀಯ ವಿಜ್ಞಾನ ದಿನ:‘ಭಾರತದಲ್ಲಿ ವಿಜ್ಞಾನ ಮತ್ತು ಸಂಶೋಧನೆಯ ಭವಿಷ್ಯ’ ವೆಬಿನಾರ್, ಭಾಗವಹಿಸುವವರು–ಜಯಂತ್ ಮೂರ್ತಿ, ರಮೇಶ್ ಲೊಂಡನ್ಕರ್, ಜ್ಯೋತ್ಸ್ನಾ ದೀಕ್ಷಿತ್, ಆನಂದ್ ರಾಜ್, ಆಯೋಜನೆ–ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿ, ಸಂಜೆ 7.30 (ಆನ್‌ಲೈನ್ ಕಾರ್ಯಕ್ರಮ)

ತಲ್ವಾರ್ ಹಿಡಿದು ಅಂಗಡಿಗೆ ನುಗ್ಗಿದ್ದ ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲ್ವಾರ್ ಹಿಡಿದು ಅಂಗಡಿಯೊಂದಕ್ಕೆ ನುಗ್ಗಿ ಸುಲಿಗೆ ಮಾಡಲು ಯತ್ನಿಸಿದ್ದ ಇಬ್ಬರು ಆರೋಪಿಗಳನ್ನು ಕೆ.ಜಿ.ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ವೆಂಕಟೇಶಪುರದ ಮಜರ್ (23) ಹಾಗೂ ಸೈಯದ್ ಮಾಜ್ (21) ಬಂಧಿತರು. ಅವರಿಂದ ₹ 1.38 ಲಕ್ಷ ಮೌಲ್ಯದ 23 ಗ್ರಾಂ ಎಂಡಿಎಂಎ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ಸುಲಿಗೆ, ಹಲ್ಲೆ, ಕಳವು ಪ್ರಕರಣದಲ್ಲಿ ಭಾಗಿಯಾಗಿದ್ದರು. ಫೆ. 18ರಂದು ರಾತ್ರಿ ವಿನೋಬಾನಗರದಲ್ಲಿರುವ ದಿನಸಿ ಅಂಗಡಿಯೊಂದಕ್ಕೆ ತಲ್ವಾರ್ ಹಿಡಿದು ನುಗ್ಗಿದ್ದ ಆರೋಪಿಗಳು, ಸುಲಿಗೆಗೆ ಯತ್ನಿಸಿದ್ದರು. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.’

‘ವಿಡಿಯೊ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿತ್ತು. ಎಚ್‌ಬಿಆರ್ ಬಡಾವಣೆಯ ಯಾಸೀನ್‌ನಗರದಲ್ಲಿ ಶುಕ್ರವಾರ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ತಿಳಿಸಿದರು.

‘ವೈಟ್‌ಫೀಲ್ಡ್ ಠಾಣೆ ವ್ಯಾಪ್ತಿಯಲ್ಲಿ ವ್ಯಕ್ತಿಯೊಬ್ಬರ ದ್ವಿಚಕ್ರ ವಾಹನ ಕದ್ದಿದ್ದ ಆರೋಪಿಗಳು, ಅದರಲ್ಲೇ ನಗರದಲ್ಲಿ ಸುತ್ತಾಡುತ್ತಿದ್ದರು. ಒಂಟಿಯಾಗಿ ನಡೆದುಕೊಂಡು ಹೋಗುವವರನ್ನು ಹಿಂಬಾಲಿಸಿ ಸುಲಿಗೆ ಮಾಡುತ್ತಿದ್ದರು. ತಲ್ವಾರ್ ಹಿಡಿದು ಅಂಗಡಿಗಳಿಗೆ ನುಗ್ಗಿ ಬೆದರಿಸಿ ಹಣ ಪಡೆಯುತ್ತಿದ್ದರು. ಅಮೃತಹಳ್ಳಿ, ವೈಟ್‌ಫೀಲ್ಡ್, ಭಾರತಿನಗರ, ಯಲಹಂಕ, ಕೊತ್ತನೂರು, ಹಾಗೂ ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಹೇಳಿದರು.

‘ಡ್ರಗ್ಸ್ ಮಾರಾಟ ಜಾಲದಲ್ಲೂ ಆರೋಪಿಗಳು ಗುರುತಿಸಿಕೊಂಡಿದ್ದರು. ಅಪರಾಧ ಹಿನ್ನೆಲೆಯುಳ್ಳವರ ತಂಡ ಕಟ್ಟಿಕೊಂಡು ಡ್ರಗ್ಸ್ ಮಾರುತ್ತಿದ್ದರೆಂಬ ಮಾಹಿತಿ ಇದೆ’ ಎಂದೂ ಅವರು ತಿಳಿಸಿದರು.

ಗೂಡ್ಸ್ ವಾಹನ ಕದ್ದಿದ್ದ ಆರೋಪಿ ಬಂಧನ

ಬೆಂಗಳೂರು: ನಾಗಮಂಗಲದಲ್ಲಿ ಗೂಡ್ಸ್ ವಾಹನ ಕಳವು ಮಾಡಿದ್ದ ಆರೋಪದಡಿ ಸೈಯದ್ ರಫೀಕ್ ಎಂಬಾತನನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಆರೋಪಿ ಸೈಯದ್, ಫೆ. 15ರಂದು ನಾಗಮಂಗಲದಲ್ಲಿ ಗೂಡ್ಸ್ ವಾಹನ ಕದ್ದಿದ್ದ. ಇತ್ತೀಚೆಗೆ ಅದೇ ವಾಹನದಲ್ಲಿ ಮಾಗಡಿ ರಸ್ತೆಯಲ್ಲಿ ಹೊರಟಿದ್ದಾಗ ಸಿಬ್ಬಂದಿ ಕೈಗೆ ಸಿಕ್ಕಿಬಿದ್ದಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ವಾಹನ ತಡೆದಿದ್ದ ಸಿಬ್ಬಂದಿ, ದಾಖಲೆ ಕೇಳಿದ್ದರು. ಆರೋಪಿ ಕೊಟ್ಟಿರಲಿಲ್ಲ. ಠಾಣೆಗೆ ಕರೆತಂದು ವಿಚಾರಿಸಿದಾಗ ತಪ್ಪೊಪ್ಪಿಕೊಂಡ. ಆತನಿಂದ ₹ 7 ಲಕ್ಷ ಮೌಲ್ಯದ ಗೂಡ್ಸ್ ವಾಹನ ಜಪ್ತಿ ಮಾಡಲಾಗಿದೆ. ಈ ಬಗ್ಗೆ ನಾಗಮಂಗಲ ಪೊಲೀಸರಿಗೆ ಮಾಹಿತಿ ನೀಡಲಾಗಿದೆ’ ಎಂದೂ ಅವರು ತಿಳಿಸಿದರು.

‘ಸಾಯುವ ತನಕ ಬದುಕಬೇಕಲ್ಲ...’

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ‘ಲಾಕ್‌ಡೌನ್ ಬಳಿಕ ಮಾಲೀಕರು ಅನಿವಾರ್ಯವಾಗಿ ಹೋಟೆಲ್ ಮುಚ್ಚಿದರು. ಊರಿಗೆ ಮರಳಿ ಚಿಕ್ಕ ಅಂಗಡಿ ಆರಂಭಿಸಿದೆ. ಆದರೆ ಅದು ಕೈಹಿಡಿಯಲಿಲ್ಲ. ಬದುಕು ಮೂರಾಬಟ್ಟೆಯಾಗಿದೆ...’

ಹೋಟೆಲ್ ಕಾರ್ಮಿಕರಾಗಿದ್ದ ಕುಂದಾಪುರದ ಗಣೇಶ ಅವರ ನೋವಿನ ನುಡಿಗಳಿವು. 15 ವರ್ಷಗಳಿಂದ ಬೆಂಗಳೂರಿನ ಹೋಟೆಲ್‌ವೊಂದರಲ್ಲಿ ಅಡುಗೆ ಕೆಲಸ ಮಾಡುತ್ತಿದ್ದ ಗಣೇಶ್ ಅವರ ಬದುಕು ಸುಗಮವಾಗಿ ನಡೆಯುತ್ತಿತ್ತು. ಆದರೆ, ದಿಢೀರ್ ಎದುರಾದ ಕೋವಿಡ್ ಪಿಡುಗು ಜೀವನಕ್ಕೆ ಕುತ್ತು ತಂದಿತು.

‘ಹೋಟೆಲ್‌ನಲ್ಲಿ ವ್ಯಾಪಾರ ಚೆನ್ನಾಗಿತ್ತು, ಸಂಬಳವೂ ಚೆನ್ನಾಗಿತ್ತು. ಮೊದಲ ಲಾಕ್‌ಡೌನ್ ವೇಳೆ ಹೋಟೆಲ್ ಮುಚ್ಚಬೇಕಾಯಿತು. ಮಾಲೀಕರು ಅನಿವಾರ್ಯವಾಗಿ ನನ್ನನ್ನು ಕೆಲಸದಿಂದ ತೆಗೆದರು. ಬೇರೆ ದಾರಿ ಕಾಣದೆ ಊರಿಗೆ ತೆರಳಿ, ಕೂಡಿಟ್ಟ ಹಣದಲ್ಲಿ ಅಂಗಡಿ ಮಾಡಿದೆ. ಅದೂ ಕೈಹಿಡಿಯಲಿಲ್ಲ. ನನಗೆ ವ್ಯಾಪಾರ ಮಾಡುವ ಕೌಶಲ ಇರಲಿಲ್ಲ. ಈಗ ಕೆಲಸವಿಲ್ಲ, ಮಕ್ಕಳನ್ನು ಓದಿಸುವುದು ಕಷ್ಟವಾಗಿದೆ. ಬೆಂಗಳೂರಿಗೆ ಪುನಃ ಬರಲು ಧೈರ್ಯ ಸಾಲುತ್ತಿಲ್ಲ’ ಎಂದು ಪರಿತಾಪದಿಂದ ಗಣೇಶ್ ವಿವರಿಸುತ್ತಾರೆ.

ಕೋವಿಡ್ ನಂತರ ಹೋಟೆಲ್ ಕಾರ್ಮಿಕರ ಬದುಕು ತತ್ತರಿಸಿತು. ಹತ್ತಾರು ಸಮಸ್ಯೆಗಳೊಂದಿಗೆ ಕಾರ್ಮಿಕರನ್ನು ಬೀದಿಗೆ ತಂದು ನಿಲ್ಲಿಸಿತು. ಪರ್ಯಾಯ ಬದುಕು ಕಟ್ಟಿಕೊಳ್ಳಲಾಗದೆಯೇ ಪರದಾಡಿದರು.

ಬೆಂಗಳೂರಿನಲ್ಲಿ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದ ಹಾಸನದ ಮಂಜುನಾಥ್ ಈಗ ಒಲ್ಲದ ಮನಸ್ಸಿನಿಂದ ತೆಂಗಿನಕಾಯಿ ವ್ಯಾಪಾರ ಆರಂಭಿಸಿದ್ದಾರೆ. ‘ಬದುಕುವುದು ಅನಿವಾರ್ಯ. ನಾವು ಬದುಕುವವರೆಗೆ ಜೀವದ ಬಂಡಿ ನೂಕಬೇಕು. ಹೋಟೆಲ್‌ಗಳನ್ನು ಸಾಧ್ಯವಾದಷ್ಟು ಕಡಿಮೆ ಕೆಲಸಗಾರರಿಂದ ನಡೆಸುತ್ತಿದ್ದಾರೆ. ಮಾಲೀಕರು ನನ್ನನ್ನು ವಾಪಸ್ ಕರೆಯಲಿಲ್ಲ. ನನಗೂ ಈಗ ಹೋಗಲು ಮನಸ್ಸಿಲ್ಲ’ ಎನ್ನುತ್ತಾರೆ ಮಂಜುನಾಥ್.

ಕಾರ್ಕಳದ ಸುರೇಶ್ ಅವರ ಕಥೆಯೂ ಭಿನ್ನವಾಗಿಲ್ಲ. ‘ಹೈದರಾಬಾದ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಲಾಕ್‌ಡೌನ್ ಆದಾಗ ಊರಿಗೆ ಬಂದೆ. ಆದರೆ, ವಾಪಸ್ ಹೋದಾಗ ಕೆಲಸಕ್ಕೆ ಬರಬೇಡ ಎಂದರು. ಬೇರೆ ಹೋಟೆಲ್‌ಗಳಲ್ಲಿಯೂ ಕೆಲಸ ಸಿಗಲಿಲ್ಲ. ಮತ್ತೆ ಊರಿಗೆ ಬಂದೆ. ಆದರೆ, ಸ್ಥಳೀಯ ಹೋಟೆಲ್‌ಗಳಲ್ಲಿ ಕೆಲಸಕ್ಕೆ ಸೇರಿಸಿಕೊಂಡರೂ ಹೆಚ್ಚಿನ ಸಂಬಳ ನೀಡುವುದಿಲ್ಲ. ಈಗ ಹೈದರಾಬಾದ್‌ಗೆ ಮರಳಲು ಮನಸ್ಸಿಲ್ಲ’ ಎಂದು ಸಂದಿಗ್ಧ ಪರಿಸ್ಥಿತಿಯನ್ನು ಅನಾವರಣಗೊಳಿಸಿದರು.

ಕೋವಿಡ್ ಸಂಕಷ್ಟ ಕಾಲದಲ್ಲಿ ಕೈಹಿಡಿದ ಆನ್‌ಲೈನ್ ಮೂಲಕ ಆಹಾರ ಪೂರೈಸುವ ಕೆಲಸ

ದುಡಿಮೆಗೊಂದು ಹಾದಿ, ದಿನದ ಖರ್ಚಿಗಿಲ್ಲ ಚಿಂತೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಆನ್‌ಲೈನ್ ಮೂಲಕ ಆಹಾರ ಪೂರೈಸುವ ಜೊಮ್ಯಾಟೊ, ಸ್ವಿಗ್ಗಿಯಂತಹ ಕಂಪನಿಗಳು ಪುಟಿದೆದ್ದಿದ್ದವು. ಎರಡನೇ ಹಂತದ ನಗರಗಳಲ್ಲೂ ಸಾವಿರಾರು ಜನರ ಕೈಗೆ ಕೆಲಸ ನೀಡಿ ಬದುಕಿಗೆ ಆಸರೆಯಾಗಿದ್ದವು. ಆದರೆ, ಕೋವಿಡ್ ಮೂರನೇ ಅಲೆ ಕರಗುತ್ತಿದ್ದಂತೆ ಅವಕಾಶಗಳೂ ಕಡಿಮೆಯಾಗುತ್ತಿವೆ. ಆಹಾರ ಡೆಲಿವರಿ ಬಾಯ್‌ಗಳು ಮತ್ತೆ ಬೇರೆ ಕೆಲಸಗಳತ್ತ ಮುಖ ಮಾಡುವಂತಾಗಿದೆ.

ಮೈಸೂರು, ದಾವಣಗೆರೆ, ಮಂಗಳೂರು, ಹುಬ್ಬಳ್ಳಿ, ಕಲಬುರಗಿಯಂತಹ ನಗರಗಳಲ್ಲಿ ಹಲವಾರು ಜೊಮ್ಯಾಟೊ, ಸ್ವಿಗ್ಗಿ ಕಂಪನಿಗಳ ಆಹಾರ ಡೆಲಿವರಿ ಬಾಯ್‌ಗಳಾಗಿ ದುಡಿಮೆಯ ದಾರಿ ಕಂಡುಕೊಂಡಿದ್ದಾರೆ. ದಿನದ ಖರ್ಚಿಗೇನೂ ತೊಂದರೆಯಾಗುತ್ತಿಲ್ಲ. ಮೆಡಿಕಲ್, ಎಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಆನ್‌ಲೈನ್ ಮೂಲಕ ಆರ್ಡರ್ ನೀಡುತ್ತಿದ್ದರು. ಹೋಟೆಲ್‌ಗಳಿಗೆ ಹೋಗುವವರ ಸಂಖ್ಯೆ ಕ್ರಮೇಣ ಹೆಚ್ಚುತ್ತಿರುವುದು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಡೆಲಿವರಿ ಬಾಯ್‌ಗಳು ಕೆಲಸಕ್ಕೆ ಸೇರಿಕೊಂಡಿದ್ದರಿಂದ ಮೊದಲಿನಷ್ಟು ಆರ್ಡರ್‌ಗಳು ಬರುತ್ತಿಲ್ಲ.

‘ಪದವಿ ಮುಗಿಸಿದ್ದ ನನಗೆ ಖರ್ಚಿಗೂ ಹಣವಿಲ್ಲದಂತಾಗಿತ್ತು. ಹೀಗಾಗಿ ಜೊಮ್ಯಾಟೊದಲ್ಲಿ ಕೆಲಸಕ್ಕೆ ಸೇರಿಕೊಂಡೆ. ಉಳಿದುಕೊಳ್ಳಲು ರೂಮಿಗೆ ಹಾಗೂ ಮೂರು ಹೊತ್ತಿನ ಊಟಕ್ಕೆ ತೊಂದರೆಯಿಲ್ಲ. ಕೆಲಸಕ್ಕಾಗಿ ಅಲೆಯುತ್ತಿದ್ದ ನನ್ನ ಕೈಗೆ ಈಗ ಒಂದಿಷ್ಟು ಹಣ ಸೇರುತ್ತಿದೆ’ ಎನ್ನುತ್ತಾರೆ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಿಂದ ಮೈಸೂರಿಗೆ ಬಂದು ಫುಡ್ ಡೆಲಿವರಿ ಬಾಯ್ ಆಗಿರುವ ಮನೋಜ್. ಈಗ ಅವರು ದಿನಕ್ಕೆ ಏನಿಲ್ಲವೆಂದರೂ ₹ 500ರಿಂದ ₹ 600 ದುಡಿಯುತ್ತಿದ್ದಾರೆ.

ಮೈಸೂರಿನಲ್ಲಿ ಜೊಮ್ಯಾಟೊ ಹಾಗೂ ಸ್ವಿಗ್ಗಿ ಕಂಪನಿಗಳಲ್ಲಿ ತಲಾ ಎರಡು ಸಾವಿರಕ್ಕೂ ಅಧಿಕ ಡೆಲಿವರಿ ಬಾಯ್‌ಗಳಿದ್ದಾರೆ. ಸ್ವಿಗ್ಗಿ ಕಂಪನಿಯಲ್ಲಿ ಆರ್ಡರ್‌ಗಳಿಗೆ ಸಿಗುವ ದಿನದ ಕಮಿಷನ್ ಮೊತ್ತ ₹ 425 ದಾಟಿದರೆ ₹ 175 ಬೋನಸ್ ಕೊಡುತ್ತಾರೆ. ಜೊಮ್ಯಾಟೊದಲ್ಲೂ ಇದೇ ರೀತಿಯ ವ್ಯವಸ್ಥೆ ಇದೆ. ಆದರೆ, ಹೆಚ್ಚು ಯುವಕರು ಕೆಲಸಕ್ಕೆ ಸೇರುತ್ತಿರುವುದರಿಂದ ಆರ್ಡರ್ ಬರುವುದು ತಡವಾಗುತ್ತಿದೆ. ಒಬ್ಬರಿಗೆ ದಿನಕ್ಕೆ 15 ಆರ್ಡರ್‌ಗಳು ಬಂದರೆ ಅದೃಷ್ಟ ಎಂಬಂತಾಗಿದೆ ಎಂಬುದು ಡೆಲಿವರಿ ಬಾಯ್‌ಗಳ ಅಳಲು.

‘ನಮಗೆ ಇಷ್ಟಬಂದ ಸಮಯದಲ್ಲಿ ಕೆಲಸ ಮಾಡುವ ಆಯ್ಕೆ ಇದೆ. ಸುಮ್ಮನೆ ಕಾಲ ಕಳೆಯುವ ಯುವಕರಿಗೆ ಇದರಲ್ಲಿ ದುಡಿಮೆಗೆ ಅವಕಾಶವಿದೆ. ಪಾರ್ಟ್ ಟೈಮ್ ಆಗಿಯೂ ಕೆಲಸ ಮಾಡಬಹುದು’ ಎನ್ನುವುದು ಮೈಸೂರಿನ ರಾಮಕೃಷ್ಣನಗರದ ತ್ಯಾಗರಾಜ್ ಅಭಿಪ್ರಾಯ.

ಕಲಬುರಗಿ ನಗರದಲ್ಲಿ 750ಕ್ಕೂ ಹೆಚ್ಚು ಯುವಕರು ಇದನ್ನೇ ನಂಬಿಕೊಂಡಿದ್ದಾರೆ. ಲಾಕ್‌ಡೌನ್ ಸಂದರ್ಭದಲ್ಲಿ ದಿನಕ್ಕೆ ₹ 500ರಿಂದ ₹ 800ರಷ್ಟು ಗಳಿಸುತ್ತಿದ್ದರು. ಆದರೆ, ಪೆಟ್ರೋಲ್ ದರ ಹೆಚ್ಚಾದ ಮೇಲೆ ₹ 200ರಿಂದ ₹ 400ರ ವರೆಗೆ ಮಾತ್ರ ಉಳಿಯುತ್ತಿದೆ.

‘ಈ ಮೊದಲು ವಾರಕ್ಕೆ 130 ಆರ್ಡರ್ ಡೆಲಿವರಿ ಮಾಡಿದರೆ ಕಂಪನಿಯವರು ₹ 7,000 ನೀಡುತ್ತಿದ್ದರು. ಈಗ ಕಿ.ಮೀ ಲೆಕ್ಕದಲ್ಲಿ ಹಣ ನೀಡುತ್ತಾರೆ. ಕೆಲವೊಮ್ಮೆ ದಿನಕ್ಕೆ ಎರಡೇ ಆರ್ಡರ್ ಸಿಗುತ್ತಿದ್ದು, ದಿನಕ್ಕೆ ₹ 200 ಉಳಿಯುತ್ತದೆ. ಕಾಯುತ್ತ ಕುಳಿತುಕೊಳ್ಳುವ ಬದಲು ಬೇರೆ ಕೆಲಸ ಹುಡುಕುತ್ತಿದ್ದೇನೆ’ ಎನ್ನುತ್ತಾರೆ ಕಲಬುರಗಿಯ ಮುಸ್ತಫಾ ದೊಡಮನಿ.

ಕಲಬುರಗಿಯ ಪಿಡಿಎ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳೂ ‘ಹಂಗ್ರಿವಿಲ್’ ಎಂಬ ಆನ್‌ಲೈನ್ ಫುಡ್ ಡೆಲಿವರಿ ವೇದಿಕೆಯನ್ನು ಆರಂಭಿಸಿದ್ದಾರೆ. ಅದರಲ್ಲೂ 50 ವಿದ್ಯಾರ್ಥಿಗಳು ಪಾರ್ಟ್‌ಟೈಮ್ ಕೆಲಸ ಕಂಡುಕೊಂಡಿದ್ದಾರೆ.

ಹುಬ್ಬಳ್ಳಿಯಲ್ಲಿ ಕೋವಿಡ್ ತೀವ್ರಗೊಂಡಿದ್ದಾಗ ವೈದ್ಯಕೀಯ ಸಿಬ್ಬಂದಿ ಮನೆಗೆ ತೆರಳದೇ ಆನ್‌ಲೈನ್ ಮೂಲಕವೇ ಆಹಾರ ತರಿಸಿಕೊಳ್ಳುತ್ತಿದ್ದರು. ‘ಇದರಿಂದಾಗಿ ಆನ್‌ಲೈನ್ ವಹಿವಾಟು ಹೆಚ್ಚಾಗಿತ್ತು. ಜೊಮ್ಯಾಟೊ, ಸ್ವಿಗ್ಗಿಯಲ್ಲಿದ್ದ ಡೆಲಿವರಿ ಬಾಯ್‌ಗಳ ಸಂಖ್ಯೆಯೂ ದುಪ್ಪಟ್ಟಾಯಿತು. ಆದರೆ, ಲಾಕ್‌ಡೌನ್ ತೆರವಾದ ಬಳಿಕ ಆರ್ಡರ್‌ಗಳ ಸಂಖ್ಯೆ ಇಳಿಕೆಯಾಗಿ ಸಂಪಾದನೆಯೂ ಕಡಿಮೆಯಾಯಿತು. ಮನೆಗಳಿಗೆ ಪೇಂಟ್ ಹಚ್ಚಿದರೆ ದಿನಕ್ಕೆ ₹800ರಿಂದ ₹1,000 ಸಿಗುತ್ತಿರುವುದರಿಂದ ಕೆಲವರು ಆ ಕೆಲಸದತ್ತ ಮುಖ ಮಾಡುತ್ತಿದ್ದಾರೆ.

‘ಒಂದು ವಾರದಲ್ಲಿ ಕನಿಷ್ಠ 90 ಆರ್ಡರ್‌ಗಳನ್ನು ಪಡೆಯಬೇಕು. ಇದರಿಂದ ತಿಂಗಳಿಗೆ ₹20 ಸಾವಿರ ಗಳಿಸಬಹುದು. ಪೆಟ್ರೋಲ್‌ಗೆ ₹ 5 ಸಾವಿರ ಖರ್ಚಾಗುತ್ತದೆ. ಉಳಿದ ಹಣದಲ್ಲೇ ಸಂಸಾರ ಸಾಗಿಸಬೇಕಾಗಿದೆ. ಹೀಗಾಗಿ ಡೆಲಿವರಿ ಬಾಯ್‌ಗಳು ಬೇರೆ ಉದ್ಯೋಗದತ್ತ ಮುಖ ಮಾಡುತ್ತಿದ್ದಾರೆ’ ಎನ್ನುತ್ತಾರೆ ಹುಬ್ಬಳ್ಳಿಯ ಜೊಮ್ಯಾಟೊ ಆಹಾರ ಡೆಲಿವರಿ ಪಾರ್ಟ್‌ನರ್ ಮೊಹಮ್ಮದ್ ರಫೀ.

ದಾವಣಗೆರೆ ನಗರದಲ್ಲಿ ಬೆಣ್ಣೆದೋಸೆ, ನಾನ್‌ವೆಜ್ ಆಹಾರಗಳಿಗೆ ಹೆಚ್ಚಿನ ಆರ್ಡರ್‌ಗಳು ಬರುತ್ತವೆ. ಇಲ್ಲಿ 200ರಿಂದ 300 ಮಂದಿ ಡೆಲಿವರಿ ಬಾಯ್‌ಗಳಿದ್ದು, ಗ್ರಾಮೀಣ ಪ್ರದೇಶದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

‘ಕೋವಿಡ್ ತೀವ್ರವಾಗಿದ್ದಾಗ ದಿನಕ್ಕೆ ₹1,000ರಿಂದ ₹1,200 ಸಿಗುತ್ತಿತ್ತು. ಈಗ ₹600ರಿಂದ ₹ 700 ಸಿಕ್ಕರೆ ಹೆಚ್ಚು’ ಎನ್ನುತ್ತಾರೆ ದಾವಣಗೆರೆಯ ಜೊಮ್ಯಾಟೊ ಡೆಲಿವರಿ ಬಾಯ್ ವಿರೇಶ್.

ಮಂಗಳೂರಿನಲ್ಲೂ ಆಹಾರ ಪೂರೈಕೆ ಕಂಪನಿಗಳ ವಹಿವಾಟು ವಿಸ್ತರಣೆಯಾಗಿತ್ತು. ಲಾಕ್‌ಡೌನ್‌ನಲ್ಲಿ ಕೆಲಸ ಕಳೆದುಕೊಂಡ ಹಲವರಿಗೆ ಆಸರೆಯಾಗಿದೆ.

‘ನಾನು ಕೆಲಸ ಮಾಡುತ್ತಿದ್ದ ಕಂಪನಿಯ ವಹಿವಾಟು ಸ್ಥಗಿತಗೊಂಡಿತು. ಉದ್ಯೋಗ ಇಲ್ಲದಿದ್ದಾಗ ಫುಡ್ ಡೆಲಿವರಿ ಕೆಲಸ ಕೈಹಿಡಿಯಿತು. ಕುಟುಂಬ ನಿರ್ವಹಣೆಗೆ ಸಹಕಾರಿಯಾಗಿದೆ. ಗಳಿಕೆಯಾಗುತ್ತಿದೆ’ ಎನ್ನುತ್ತಾರೆ ಮಂಗಳೂರಿನ ಹರೀಶ್.

(ವರದಿ: ವಿನಾಯಕ ಭಟ್, ಕೆ.ಓಂಕಾರಮೂರ್ತಿ, ಸಂತೋಷ ಈ. ಚಿನಗುಡಿ, ಪ್ರಮೋದ, ಡಿ.ಕೆ. ಬಸವರಾಜು, ಚಿದಂಬರ ಪ್ರಸಾದ)



ದಾವಣಗೆರೆಯ ಹೋಟೆಲೊಂದರ ಬಳಿ ಜೊಮ್ಯಾಟೊ ಡೆಲಿವರಿ ಬಾಯ್‌ಗಳು ಆರ್ಡರ್‌ಗಾಗಿ ಕಾಯುತ್ತಿರುವುದು. –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಚೇತರಿಸಿಕೊಳ್ಳದ ರೆಸಾರ್ಟ್ ಉದ್ಯಮ

ಕಾರವಾರ: ಕೋವಿಡ್ ಕಾರಣದಿಂದ ಲಾಕ್‌ಡೌನ್ ಆದ ಬಳಿಕ ಜಿಲ್ಲೆಯ ಆತಿಥ್ಯ ವಲಯಕ್ಕೆ ಬಹಳ ನಷ್ಟವಾಗಿದೆ. ಹಂತಹಂತವಾಗಿ ಪ್ರವಾಸೋದ್ಯಮ ಚಟುವಟಿಕೆಗಳು ಆರಂಭವಾದರೂ ಚೇತರಿಕೆ ಸಾಧ್ಯವಾಗಿಲ್ಲ. ಅದರಲ್ಲೂ ಪ್ರವಾಸಿಗರನ್ನೇ ನಂಬಿಕೊಂಡು ರೆಸಾರ್ಟ್, ಹೋಂ ಸ್ಟೇ ನಡೆಸುವವರ ಸ್ಥಿತಿಯಿನ್ನೂ ಸುಧಾರಿಸಿಲ್ಲ.

‘ರೆಸಾರ್ಟ್ ಹಾಗೂ ಹೋಂಸ್ಟೇ ಉದ್ಯಮಿಗಳಿಗೆ ಲಾಕ್‌ಡೌನ್ ಜೊತೆಗೇ ವಾರಾಂತ್ಯದ ಕರ್ಫ್ಯೂ ದೊಡ್ಡ ಹೊಡೆತ ನೀಡಿತ್ತು. ಪ್ರವಾಸಿಗರು ಭೇಟಿ ನೀಡುವ ಸಮಯದಲ್ಲೇ ಕಠಿಣ ನಿರ್ಬಂಧಗಳು ಜಾರಿಯಾದವು. ಇದರಿಂದ ಕೊಠಡಿಗಳನ್ನು ಮುಂಗಡ ಬುಕ್ಕಿಂಗ್ ಮಾಡಿದ್ದ ಪ್ರವಾಸಿಗರು ರದ್ದು ಮಾಡಿದರು. ಪರಿಣಾಮವಾಗಿ, ನಮ್ಮ ಸಿದ್ಧತೆಗಳೆಲ್ಲ ವ್ಯರ್ಥವಾದವು’ ಎನ್ನುತ್ತಾರೆ ದಾಂಡೇಲಿಯ ರೆಸಾರ್ಟ್ ಮಾಲೀಕರ ಸಂಘದ ಅಧ್ಯಕ್ಷ ವಿಷ್ಣುಮೂರ್ತಿ ರಾವ್.

‘ಹಲವಾರು ಮಂದಿ ಬ್ಯಾಂಕ್‌ಗಳಲ್ಲಿ ಸಾಲ ಮಾಡಿ ಉದ್ಯಮ ಆರಂಭಿಸಿದ್ದಾರೆ. ಅವರು ಕಂತುಗಳನ್ನು ಕಟ್ಟಲು ಪರದಾಡಿದರು. ಲಾಕ್‌ಡೌನ್ ಆಗಿದೆ ಎಂದು ಬ್ಯಾಂಕ್ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿಲ್ಲ. ಮರು ಪಾವತಿಯ ಅವಧಿಯನ್ನು ಹೆಚ್ಚಿಸಿದರೇ ವಿನಾ ಬಡ್ಡಿ ಪಾವತಿಸಲೇಬೇಕಾಗಿದೆ. ಈ ಎಲ್ಲ ಕಾರಣಗಳಿಂದ, ಬಂಡವಾಳ ಹೂಡಿ ರೆಸಾರ್ಟ್, ಹೋಟೆಲ್ ಆರಂಭಿಸಿದವರು ಮುಂದೇನು ಎಂದು ದಿಕ್ಕು ತೋಚದ ಪರಿಸ್ಥಿತಿಯಲ್ಲಿದ್ದಾರೆ’ ಎಂದು ಬೇಸರಿಸುತ್ತಾರೆ.

ಹೋಂ ಸ್ಟೇ ಮಾಲೀಕರ ಬದುಕು ಏರುಪೇರು

• ಆದಿತ್ಯ ಕೆ.ಎ.

ಮಡಿಕೇರಿ: ಕೊಡಗು ಜಿಲ್ಲೆಯ ಪ್ರವಾಸೋದ್ಯಮ ಅವಲಂಬಿತರ ಬದುಕು ಸಂಕಷ್ಟದಲ್ಲಿದೆ. ಪ್ರವಾಸೋದ್ಯಮ ಚಿಗುರುವ ನಿರೀಕ್ಷೆ ಹುಟ್ಟಿಸಿದ್ದರೂ ಲಾಕ್‌ಡೌನ್ ಆಘಾತದಿಂದ ಹೋಂ ಸ್ಟೇ ಮಾಲೀಕರು ಮೇಲೇಳಲು ಸಾಧ್ಯವಾಗುತ್ತಿಲ್ಲ.

ಕೊಡಗಿನಲ್ಲಿ ಅಂದಾಜು ನಾಲ್ಕು ಸಾವಿರ ಹೋಂಸ್ಟೇಗಳಿವೆ. ಬಹುತೇಕ ಹೋಂ ಸ್ಟೇಗಳು ವಾರದಲ್ಲಿ ಒಂದು ದಿನವೂ ಭರ್ತಿಯಾಗುತ್ತಿಲ್ಲ. ಹೀಗಾಗಿ ನೂರಾರು ಹೋಂಸ್ಟೇಗಳು ಬಾಡಿಗೆ ಮನೆಗಳಾಗಿ ಬದಲಾಗಿವೆ. ಬಾಡಿಗೆಗೆ ಮನೆ ಪಡೆದು ಹೋಂಸ್ಟೇ ನಡೆಸುತ್ತಿದ್ದವರೂ ಮನೆ ಬಿಟ್ಟುಕೊಟ್ಟು ‘ಹೋಂಸ್ಟೇಗಳ ಸಹವಾಸವೇ ಬೇಡ’ ಎನ್ನುತ್ತಿದ್ದಾರೆ.

ಮೂರು ವರ್ಷಗಳ ಹಿಂದೆ ಪ್ರವಾಸಿಗರು ಹೆಚ್ಚಿದ್ದರಿಂದ ಗುಡ್ಡಗಳ ಮೇಲೆ, ನದಿಗಳ ಬದಿ ಹೋಂಸ್ಟೇಗಳು ತಲೆಯೆತ್ತಿದ್ದವು. ತೋಟಗಳ ನಡುವೆ ಕಾಫಿ ಗಿಡಗಳನ್ನೇ ತೆರವುಗೊಳಿಸಿ ಹೋಂಸ್ಟೇ ನಿರ್ಮಿಸಲಾಗಿತ್ತು. ಹಸಿರಿನ ಅಂದ, ಪುಟ್ಟ ಝರಿಗಳ ಸೌಂದರ್ಯ ಸವಿಯಲು ಅವಕಾಶವಿತ್ತು. ಲಾಕ್‌ಡೌನ್ ವೇಳೆ ಪ್ರವಾಸಿಗರಿಲ್ಲದೇ ಹೋಂಸ್ಟೇಗಳು ಮೌನವಾಗಿದ್ದವು. ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದರು.

‘ಲಕ್ಷಾಂತರ ರೂಪಾಯಿ ಖರ್ಚು ಮಾಡಿ ನಿರ್ಮಿಸಿದ್ದ ಹೋಂಸ್ಟೇ ನಿರ್ವಹಣೆಗೆ ಆರ್ಥಿಕ ಸಮಸ್ಯೆ ಎದುರಾಗಿದೆ. ಅಡುಗೆ, ಸ್ವಚ್ಛತಾ ಸಿಬ್ಬಂದಿಗೆ ಸಂಬಳ ಕೊಡುವುದೂ ಕಷ್ಟವಾಗಿದೆ. ವಾರಾಂತ್ಯದಲ್ಲಿ ಮಾತ್ರ ಹೋಂಸ್ಟೇಗಳು ಭರ್ತಿಯಾದರೆ ನಿರ್ವಹಣೆ ಕಷ್ಟ’ ಎಂದು ಹೋಂಸ್ಟೇ ಮಾಲೀಕ ವಿನು ಸಂಕಟ ತೋಡಿಕೊಂಡರು.



ಕೊಡಗು ಜಿಲ್ಲೆಯ ಮರಗೋಡು ಸಮೀಪದ ಸುಂದರ ಪರಿಸರದಲ್ಲಿರುವ ಹೋಂಸ್ಟೇ

‘ಬಾಕಿ ಪಾವತಿಸಿದರೆ ಸಾಕೆನಿಸಿತ್ತು..’

• ಮನೋಹರ್ ಎಂ.

ಬೆಂಗಳೂರು: ‘ಹೋಟೆಲ್‌ಗಳನ್ನು ನಂಬಿಕೊಂಡೇ ವ್ಯಾಪಾರ ನಡೆಸುವವರು ನಾವು. ಲಾಕ್‌ಡೌನ್‌ನಿಂದ ಹೋಟೆಲ್‌ಗಳಲ್ಲಿ ಸೇವೆಗೆ ನಿರ್ಬಂಧಗಳನ್ನು ಹೇರಿದರು. ಇದು ನಮ್ಮ ವ್ಯಾಪಾರವನ್ನೇ ಮುಳುಗಿಸಿತು. ಇತ್ತೀಚೆಗೆ ಈಜಲು ಆರಂಭಿಸಿದ್ದು ದಡದ ಕಡೆ ಸಾಗುತ್ತಿದ್ದೇವೆ...’

ಹೋಟೆಲ್ ಉದ್ಯಮಕ್ಕೆ ತರಕಾರಿ ಮತ್ತು ದಿನಸಿ ಪೂರೈಕೆ ಮಾಡುತ್ತಿದ್ದ ವರ್ತಕರು ಲಾಕ್‌ಡೌನ್ ಸಮಯದಲ್ಲಿ ಅನುಭವಿಸಿದ ತಮ್ಮ ಸಂಕಷ್ಟಗಳನ್ನು ಬಿಚ್ಚಿಟ್ಟಿದ್ದು ಹೀಗೆ.

‘ಬೆಂಗಳೂರಿನ ಆರೇಳು ಪ್ರಮುಖ ಹೋಟೆಲ್‌ಗಳಿಗೆ ಹಲವು ವರ್ಷಗಳಿಂದ ತರಕಾರಿ ಪೂರೈಕೆ ಮಾಡುತ್ತಿದ್ದೆ. ಲಾಕ್‌ಡೌನ್ ಜಾರಿಯಾದರೂ ಹೋಟೆಲ್‌ಗಳಲ್ಲಿ ಸೇವೆ ಇರುತ್ತದೆ ಎಂದು ಕೇಳಿ ನಿರಾತಂಕವಾಗಿದ್ದೆ. ಆದರೆ, ತರಕಾರಿ ಖರೀದಿ ದಿಢೀರ್ ಕುಸಿಯಿತು. ತಿಂಗಳುಗಟ್ಟಲೆ ವ್ಯಾಪಾರವಿಲ್ಲದೆ, ಬೀದಿಗೆ ಬರುವ ಸ್ಥಿತಿ ತಲುಪಿದ್ದೆ’ ಎಂದು ಬೆಂಗಳೂರಿನ ಕಲಾಸಿಪಾಳ್ಯ ಮಾರುಕಟ್ಟೆಯ ತರಕಾರಿ ಸಗಟು ವರ್ತಕ ರಮೇಶ್ ಸಂಕಟ ಹೊರಹಾಕಿದರು.

ವ್ಯಾಪಾರಕ್ಕಿಂತ ಜೀವ ಮುಖ್ಯ ಎಂದು ಧೈರ್ಯ ಮಾಡಿಕೊಂಡರೂ ಜೀವನಕ್ಕಾಗಿ ವ್ಯಾಪಾರ ನಡೆಯಲೇಬೇಕಿತ್ತು. ಇದೇ ಸಮಯಕ್ಕೆ ಕೆಲ ಹೋಟೆಲ್‌ನವರು ತರಕಾರಿ ಖರೀದಿ ಯನ್ನು ದಿಢೀರ್ ನಿಲ್ಲಿಸಿಬಿಟ್ಟರು. ಹೋಟೆಲ್‌ಗಳೂ ನಷ್ಟದಲ್ಲಿದ್ದವು. ಅದನ್ನು ಕಂಡು ಹಣ ಕೇಳಲು ಬಾಯಿಬರಲಿಲ್ಲ’ ಎಂದು ನೆನೆದರು.

‘ನಮ್ಮಿಂದ ದಿನಸಿ ಖರೀದಿಸುವ ಹೋಟೆಲ್‌ನವರ ಪೈಕಿ ಶೇ 90ರಷ್ಟು ಮಂದಿ ಖರೀದಿಸುವಾಗಲೇ ಹಣ ಪಾವತಿಸುವುದಿಲ್ಲ. ಕಾಲಾವಕಾಶ ಕೇಳಿ ದಿನಸಿ ಖರೀದಿಸುವುದು ವಾಡಿಕೆ’ ಎಂದು ಬೆಂಗಳೂರು ಧಾನ್ಯ ವರ್ತಕರ ಸಂಘದ ಅಧ್ಯಕ್ಷ ಪ್ರಸನ್ನ ಬೇಸರಿಸಿದರು.

ಗ್ರಾಹಕರಿಲ್ಲದೆ ಹೋಟೆಲ್‌ಗಳಲ್ಲಿ ಕಡಿಮೆ ಆಹಾರ ಸಿದ್ಧಪಡಿಸುತ್ತಿದ್ದರು. ಹಾಗಾಗಿ, ಹಲವು ತಿಂಗಳುಗಳವರೆಗೆ ದಿನಸಿ ಖರೀದಿ ನಿಲ್ಲಿಸಿಬಿಟ್ಟರು. ಅಂಗಡಿ ನಿರ್ವಹಣೆ, ಸಿಬ್ಬಂದಿಗೆ ಸಂಬಳ ನೀಡಲು ಆಗಲಿಲ್ಲ. ಹೋಟೆಲ್ ಮಾಲೀಕರು ಬಾಕಿ ಹಣ ಪಾವತಿಸಿದರೆ ಸಾಕು ಎನಿಸಿತ್ತು’ ಎಂದು ನೋವಿನ ದಿನಗಳನ್ನು ತೆರದಿಟ್ಟರು.

ಅರ್ಧ ವೇತನ ಪಾವತಿಸಿದ್ದ ಹೋಟೆಲ್‌ಗಳು

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಹಂಪಿ ಸುತ್ತಮುತ್ತಲಿನ ತಾರಾ ಹೋಟೆಲ್‌ಗಳು ತೀವ್ರ ನಷ್ಟ ಅನುಭವಿಸಿದ್ದವು.

ನಗರ ಸೇರಿದಂತೆ ಹಂಪಿ ಸುತ್ತಮುತ್ತ ಹತ್ತು ತಾರಾ ಹೋಟೆಲ್‌ಗಳಿವೆ. ಪ್ರತಿ ಹೋಟೆಲ್‌ಗಳಲ್ಲಿ ಕನಿಷ್ಠ 40ರಿಂದ 50 ಜನ ಕೆಲಸ ನಿರ್ವಹಿಸುತ್ತಾರೆ. ಲಾಕ್‌ಡೌನ್ ವೇಳೆ ಪ್ರವಾಸಿಗರು ಸುಳಿಯದ ಕಾರಣ ಹೋಟೆಲ್‌ಗಳು ಬಾಗಿಲು ಮುಚ್ಚಿದ್ದವು. ಶೆಫ್‌ಗಳು, ಮ್ಯಾನೇಜ್‌ಮೆಂಟ್ ಸಿಬ್ಬಂದಿ ಹೊರಗಿನವರಾಗಿದ್ದರಿಂದ ಅವರು ಊರುಗಳಿಗೆ ಮರಳಿದ್ದರು. ಕೆಲವರು ಹೋಟೆಲ್‌ನಲ್ಲೇ ಉಳಿದುಕೊಳ್ಳಲು ಬಯಸಿದ್ದರಿಂದ ಅವರಿಗೆ ಅವಕಾಶ ಮಾಡಿಕೊಟ್ಟಿದ್ದರು. ಕೆಳಹಂತದ ಸಿಬ್ಬಂದಿ ಸ್ಥಳೀಯರಾಗಿದ್ದರಿಂದ ಅವರು ಮನೆಗಳಿಗೆ ಹೋಗಿದ್ದರು. ಈ ಪೈಕಿ ಕೆಲವು ಹೋಟೆಲ್‌ನವರು ಎಲ್ಲ ಸಿಬ್ಬಂದಿಗೆ ಒಟ್ಟು ವೇತನದಲ್ಲಿ ಅರ್ಧ ಸಂಬಳ ಪಾವತಿಸಿದ್ದರು. ಮತ್ತೆ ಕೆಲವರು, ತೀವ್ರ ನಷ್ಟದ ನೆಪವೊಡ್ಡಿ ಸಂಬಳ ಪಾವತಿಸಿರಲಿಲ್ಲ.

ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾದಾಗಲೆಲ್ಲ ಪ್ರವಾಸಿಗರ ಭೇಟಿಗೆ ನಿರ್ಬಂಧ ಹೇರುತ್ತಿರುವುದರಿಂದ ಹೋಟೆಲ್‌ಗಳು ಇನ್ನೂ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡಿಲ್ಲ. ಹೋಟೆಲ್‌ಗಳಲ್ಲಿ ನಿತ್ಯ ಸಂಜೆ ನಡೆಯುತ್ತಿದ್ದ ಸಂಗೀತ ಕಾರ್ಯಕ್ರಮಗಳು ಪುನಃ ಆರಂಭಗೊಂಡಿವೆ. ಇಷ್ಟುದಿನ ಕೆಲಸವಿಲ್ಲದೆ ಮನೆಯಲ್ಲಿ ಕೂತಿದ್ದ ಕಲಾವಿದರಿಗೆ ಕೆಲಸ ಸಿಕ್ಕಿದೆ.

ಚೇತರಿಕೆಗೆ ಬೇಕು ಇನ್ನೂ ಎರಡು ವರ್ಷ

ಮಂಗಳೂರು: ದಿನಬಳಕೆ ಸಾಮಗ್ರಿ, ವಿದ್ಯುತ್, ಅಡುಗೆ ಅನಿಲ ದರ ಏರಿಕೆ ಹಾಗೂ ಗ್ರಾಹಕರ ಕೊರತೆಯಿಂದ ಹೋಟೆಲ್ ಉದ್ಯಮ ದಿಕ್ಕು ತಪ್ಪಿದಂತಾಗಿತ್ತು. ಸದ್ಯ ಸ್ವಲ್ಪ ಚೇತರಿಕೆಯ ಹಾದಿಯಲ್ಲಿದ್ದರೂ, ಕೋವಿಡ್–19ಗಿಂತ ಮೊದಲಿನ ಸ್ಥಿತಿಗೆ ತಲುಪಲು ಇನ್ನೂ ಒಂದೆರಡು ವರ್ಷ ಬೇಕು ಎನ್ನುವುದು ಕರಾವಳಿಯ ಹೋಟೆಲ್ ಉದ್ಯಮಿಗಳ ಮಾತು.

ಎರಡೂ ಲಾಕ್‌ಡೌನ್ ವೇಳೆ ದಿನಬಳಕೆಯ ಸಾಮಗ್ರಿ ಹಾಳಾಗಿ ಅಪಾರ ನಷ್ಟವಾಗಿದೆ. ಹೊರ ರಾಜ್ಯ, ಹೊರ ಜಿಲ್ಲೆಯವರು ಅಧಿಕ ಸಂಖ್ಯೆಯಲ್ಲಿ ಪ್ರವಾಸಕ್ಕೆ ಬಂದರೆ ಮಾತ್ರ ನಮಗೆ ಹೆಚ್ಚು ವ್ಯಾಪಾರವಾಗುತ್ತದೆ ಎಂದು ಹೋಟೆಲ್ ಉದ್ಯಮಿಗಳು ಹೇಳುತ್ತಿದ್ದಾರೆ.

‘ನಾವು ನಮ್ಮ ಹೋಟೆಲ್‌ನಲ್ಲಿ ಕಡಿಮೆ ಬೆಲೆಗೆ ಊಟ, ಚಹಾ, ತಿಂಡಿ ತಿನಿಸುಗಳನ್ನು ನೀಡುತ್ತಿದ್ದೇವೆ. ಜನನಿಬಿಡ ಪ್ರದೇಶದಲ್ಲಿರುವ ಹೋಟೆಲ್ ಆಗಿದ್ದರೂ ನಿರೀಕ್ಷಿಸಿದಷ್ಟು ವ್ಯಾಪಾರವಿಲ್ಲ’ ಎಂದು ಹೋಟೆಲ್ ಮಾಲೀಕ ಇಮ್ತಿಯಾಜ್ ಹೇಳುತ್ತಾರೆ.

ಕೆಲ ಹೋಟೆಲ್ ಮಾಲೀಕರು, ಬ್ಯಾಂಕ್, ಫೈನಾನ್ಸ್, ಸೊಸೈಟಿಗಳಿಂದ ಸಾಲ ಪಡೆದಿದ್ದು, ಇನ್ನೂ ಕೆಲವರು ಚಿನ್ನಾಭರಣ ಅಡವಿಟ್ಟು ಸಾಲ ಪಡೆದಿದ್ದಾರೆ. ಇದೀಗ ಸಾಲದ ಕಂತು ಪಾವತಿಸಲಾಗದೇ, ಅಡವಿಟ್ಟ ಚಿನ್ನಾಭರಣ ಬಿಡಿಸಲಾಗದೇ, ಕೆಲವರು ಹೋಟೆಲ್‌ಗಳನ್ನು ಮುಚ್ಚಿದ್ದಾರೆ. ಅವಳಿ ಜಿಲ್ಲೆಗಳಲ್ಲಿ ಶೇ 25 ರಷ್ಟು ಹೋಟೆಲ್‌ಗಳು ಬಾಗಿಲು ಹಾಕಿವೆ.

‘ಕರಾವಳಿಯ ಹೋಟೆಲ್ ಉದ್ಯಮ ಪ್ರವಾಸಿಗರ ಮೇಲೆಯೇ ಅವಲಂಬಿತವಾಗಿದ್ದು, ಲಾಕ್‌ಡೌನ್ ನಿಂದಾಗಿ ಎರಡು ವರ್ಷಗಳಿಂದ ಜಿಲ್ಲೆಗೆ ನಿರೀಕ್ಷಿತ ಪ್ರಮಾಣದ ಪ್ರವಾಸಿಗರು ಬಂದಿಲ್ಲ. ಹೋಟೆಲ್ ಮಾಲೀಕರಾಗಿದ್ದವರು ಗೋಡಂಬಿ ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಕೆಲವರು ಅನ್ಯ ಉದ್ಯೋಗಗಳತ್ತ ಮುಖ ಮಾಡಿದ್ದಾರೆ’ ಎಂದರು ಉಡುಪಿ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ತಲ್ಲೂರು ಶಿವರಾಮ ಶೆಟ್ಟಿ.

ತತ್ತರಿಸಿದೆ ಹೋಟೆಲ್ ಉದ್ಯಮ

ಒಂದನೇ ಪುಟದಿಂದ

‘ಸರಕು ಮತ್ತು ಸೇವಾ ತೆರಿಗೆ ವ್ಯವಸ್ಥೆ ಜಾರಿಗೆ ತಂದಾಗ, ನೋಟು ರದ್ದತಿ ಜಾರಿಯಾದಾಗ ಕೂಡ ನಮ್ಮ ಉದ್ಯಮಕ್ಕೆ ಹೆಚ್ಚು ತೊಂದರೆ ಆಗಿರಲಿಲ್ಲ. ಆದರೆ, ಕೋವಿಡ್–ಲಾಕ್‌ಡೌನ್‌ನಿಂದಾಗಿ ನಾವು ಕುಸಿದುಹೋಗಿದ್ದೇವೆ’ ಎಂದು ಹೇಳುತ್ತಾರೆ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ. ರಾವ್.

‘ಸಾಮಾನ್ಯವಾಗಿ ನಾವು ಬಂದ್ ಕರೆಗಳಿಗೂ ಬೆಂಬಲ ನೀಡುತ್ತಿರಲಿಲ್ಲ. ಮೊದಲ ಬಾರಿಗೆ ಲಾಕ್‌ಡೌನ್ ಜಾರಿಯಾದಾಗ ಉದ್ಯಮ ಬಂದ್ ಆಯಿತು, ಕುಸಿದುಬಿತ್ತು. ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಊರು ತೊರೆದರು. ಹಲವರು ಇಂದಿಗೂ ಹಿಂತಿರುಗಿಲ್ಲ. ಈ ಉದ್ಯಮದಲ್ಲಿ ಬದುಕು ಕಂಡುಕೊಂಡಿದ್ದ ಒಂದು ಲಕ್ಷಕ್ಕಿಂತ ಹೆಚ್ಚಿನ ಜನ ಕೆಲಸ ಕಳೆದುಕೊಂಡಿದ್ದಾರೆ. ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದ 10ರಿಂದ 12 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಇದೆ’ ಎಂದು ರಾವ್ ‘ಪ್ರಜಾವಾಣಿ’ ಬಳಿ ಅಳಲು ತೋಡಿಕೊಂಡರು.

ಕೋವಿಡ್‌ನ ಮೊದಲನೆಯ ಅಲೆ ಅಪ್ಪಳಿಸುವ ಮೊದಲು ರಾಜ್ಯದ ಹೋಟೆಲ್ (ತಾರಾ ಹೋಟೆಲ್‌ಗಳು ಹಾಗೂ ಬ್ಯಾಂಕ್ವೆಟ್ ಹಾಲ್ ಒಳಗೊಂಡು) ಉದ್ಯಮದಲ್ಲಿ ಪ್ರತಿನಿತ್ಯ ಸರಾಸರಿ ₹ 200 ಕೋಟಿ ವಹಿವಾಟು ನಡೆಯುತ್ತಿತ್ತು. ಅಂದಿನ ವಹಿವಾಟಿನ ಮಟ್ಟಕ್ಕೆ ಹೋಲಿಸಿದರೆ, ಇಂದು ನಡೆಯುತ್ತಿರುವ ಪ್ರಮಾಣ ಶೇಕಡ 30ರಷ್ಟು ಕಡಿಮೆ.

ರಾಜ್ಯದಲ್ಲಿ ಹೋಟೆಲ್ ನಡೆಸುತ್ತಿದ್ದ ಸರಿಸುಮಾರು ಮೂರು ಸಾವಿರ ಮಾಲೀಕರು ನಿರುದ್ಯೋಗಿಗಳಾಗಿದ್ದಾರೆ. ಬೆಂಗಳೂರಿನಲ್ಲಿಯೇ ಒಂದು ಸಾವಿರ ಮಂದಿ ಮಾಲೀಕರು ಹೋಟೆಲ್ ಬಾಗಿಲು ಮುಚ್ಚಿ ನಿರುದ್ಯೋಗಿಗಳಾಗಿದ್ದಾರೆ. ರಾಜ್ಯದ ಹೋಟೆಲ್ ಉದ್ಯಮವು ಎರಡು ವರ್ಷಗಳಿಂದ ಬೆಳವಣಿಗೆ ದಾಖಲಿಸಿಲ್ಲ ಎಂದು ಮೂಲಗಳು ಹೇಳುತ್ತವೆ.

ಕೋವಿಡ್‌ಗೂ ಮೊದಲಿನ ಸಂದರ್ಭದಲ್ಲಿ ಹೋಟೆಲ್ ಕಾರ್ಮಿಕರ ವೇತನವನ್ನು ವಾರ್ಷಿಕವಾಗಿ ಸರಾಸರಿ ಶೇ 7ರಿಂದ ಶೇ 10ರವರೆಗೆ ಹೆಚ್ಚಿಸಲಾಗುತ್ತಿತ್ತು. ಆದರೆ, ಎರಡು ವರ್ಷಗಳಿಂದ ವೇತನ ಹೆಚ್ಚಳವಾಗಿಲ್ಲ. ಕೆಲವು ಕಡೆಗಳಲ್ಲಿ ದೊಡ್ಡ ಮೊತ್ತದ ವೇತನ ಪಡೆಯುತ್ತಿದ್ದವರು, ಆದಾಯ ಕಡಿತ ಅನುಭವಿಸಿದ್ದಾರೆ.


ರಾಜ್ಯದ ಹೋಟೆಲ್ ಉದ್ಯಮವು 2023ರ ಸುಮಾರಿಗೆ ಮೊದಲಿನ ಬೆಳವಣಿಗೆಯ ಮಟ್ಟವನ್ನು ತಲುಪಬಹುದು ಎಂಬ ಅಂದಾಜು ಇದೆ. ಹಾಗೆ ಆಗಬೇಕು ಎಂದಾದರೆ, ಮತ್ತೆ ಕಚೇರಿಗಳಿಂದಲೇ ಕೆಲಸ ಮಾಡುವುದು ಶುರುವಾಗಬೇಕು. ಪ್ರವಾಸೋದ್ಯಮ ಮೊದಲಿನ ಹಂತ ತಲುಪಬೇಕು. ಹೊಸದಾಗಿ ಕೋವಿಡ್ ಅಲೆ ಬರಬಾರದು ಎಂದು ರಾವ್ ಹೇಳಿದರು. ಬೇರೆ ಎಲ್ಲ ಉದ್ಯಮಗಳ ವ್ಯಾಪಾರ-ವ್ಯವಹಾರ ಸಹಜ ಸ್ಥಿತಿಯಲ್ಲಿದ್ದರೆ ತಮ್ಮ ಉದ್ಯಮವೂ ಚೆನ್ನಾಗಿ ನಡೆಯುತ್ತದೆ ಎಂದರು.

ಹೋಟೆಲ್ ಉದ್ಯಮವನ್ನೂ ಒಳಗೊಂಡಿರುವ ಆತಿಥ್ಯ ಉದ್ಯಮದ ಪುನಶ್ಚೇತನಕ್ಕೆ, ತುರ್ತು ಸಾಲ ಖಾತರಿ ಯೋಜನೆಯನ್ನು ವಿಸ್ತರಣೆ ಮಾಡುವುದಾಗಿ, ಅದಕ್ಕಾಗಿ ₹ 50 ಸಾವಿರ ಕೋಟಿ ಮೀಸಲಿಡುವುದಾಗಿ ಕೇಂದ್ರ ಸರ್ಕಾರವು 2022–23ನೇ ಸಾಲಿನ ಬಜೆಟ್‌ನಲ್ಲಿ ಹೇಳಿದೆ. ‘ಇದು ಈ ಉದ್ಯಮಕ್ಕೆ ಒಂದಿಷ್ಟು ನೆರವು ನೀಡಬಹುದು. ಸಕಾಲಕ್ಕೆ ಹಣ ಒದಗಿಸುವುದರಿಂದ ಈ ಉದ್ಯಮಕ್ಕೆ ಶಕ್ತಿ ತುಂಬಬಹುದು’ ಎಂದು ಬ್ರಿಕ್‌ವರ್ಕ್ಸ್ ರೇಟಿಂಗ್ಸ್‌ನ ರೇಟಿಂಗ್ಸ್ ವಿಭಾಗದ ನಿರ್ದೇಶಕ ಚಿಂತನ್ ಲಖಾನಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದರು.

ಎರಡು ವರ್ಷಗಳಲ್ಲಿ ರಾಜ್ಯದ ಹೋಟೆಲ್ ಉದ್ಯಮ ಅನುಭವಿಸಿರುವ ನಷ್ಟದ ಮೊತ್ತವು ₹ 25 ಸಾವಿರ ಕೋಟಿಗೂ ಹೆಚ್ಚು. ಇದು ಅಂದಾಜು ಮಾತ್ರ. ವಾಸ್ತವದಲ್ಲಿ ನಷ್ಟದ ಮೊತ್ತವು ಇನ್ನೂ ಹೆಚ್ಚಿರಬಹುದು ಎಂದು ಕರ್ನಾಟಕ ಪ್ರದೇಶ ಹೋಟೆಲ್ ಮತ್ತು ಉಪಾಹಾರ ಮಂದಿರಗಳ ಸಂಘದ ಅಧ್ಯಕ್ಷ ಚಂದ್ರಶೇಖರ ಹೆಬ್ಬಾರ್ ಹೇಳಿದರು. ರಾಜ್ಯದ ಸರಿಸುಮಾರು ಶೇಕಡ 50ರಷ್ಟು ಹೋಟೆಲ್‌ಗಳು ಸಾಲದ ಸುಳಿಯಲ್ಲಿವೆ. ಸಾಲ ಎಂದರೆ ಕಟ್ಟಡದ ಬಾಡಿಗೆ ಬಾಕಿಯೂ ಸೇರಿದೆ ಎಂದು ಅವರು ವಿವರಿಸಿದರು.



ಚಂದ್ರಶೇಖರ ಹೆಬ್ಬಾರ್



ಮಾಹಿತಿ ತಂತ್ರಜ್ಞಾನ ವಲಯದ ಕಂಪನಿಗಳ ಉದ್ಯೋಗಿಗಳು ಮನೆಗಳಿಂದಲೇ ಕೆಲಸ ಮಾಡುತ್ತಿರುವುದು ನಮ್ಮ ಉದ್ಯಮಕ್ಕೆ ದೊಡ್ಡ ಏಟು ನೀಡಿದೆ.

– **ಪಿ.ಸಿ. ರಾವ್,** ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ

25 ವರ್ಷಗಳ ಹಿಂದೆ — ಗುರುವಾರ, 27-2-1997

• **ಮೇಲ್ದರ್ಜೆ ರೈಲು ಪ್ರಯಾಣ ದುಬಾರಿ; ಸರಕು ಸಾಗಣೆ ದರ ಹೆಚ್ಚಳ**

ನವದೆಹಲಿ, ಫೆ. 26 (ಪಿಟಿಐ, ಯುಎನ್‌ಐ)– ಮೇಲ್ದರ್ಜೆಯ ರೈಲು ಪ್ರಯಾಣವನ್ನು ಇನ್ನಷ್ಟು ತುಟ್ಟಿಗೊಳಿಸಿ, ಸರಕುಸಾಗಣೆ ದರವನ್ನು ತೀವ್ರವಾಗಿ ಹೆಚ್ಚಿಸಿದ ರೈಲ್ವೆ ಮುಂಗಡಪತ್ರವನ್ನು ಇಂದು ಲೋಕಸಭೆಯಲ್ಲಿ ರೈಲ್ವೆ ಸಚಿವ ರಾಂ ವಿಲಾಸ್ ಪಾಸ್ವಾನ್ ಮಂಡಿಸಿದರು. ಮೊದಲ ದರ್ಜೆಯ ರೈಲು ಪ್ರಯಾಣದರದಲ್ಲಿ ಶೇ 10ರಷ್ಟು ಏರಿಕೆ, ಮೊದಲ,2ನೇ ದರ್ಜೆಯ ಸ್ಲೀಪರ್ ಪ್ರಯಾಣದಲ್ಲಿ ಶೇ 5 ಹೆಚ್ಚಳ, ಅವಶ್ಯಕ ವಸ್ತು ಹೊರತುಪಡಿಸಿ ಉಳಿದ ಸರಕು ಸಾಗಣೆ ದರದಲ್ಲಿ ಶೇ 12ರಷ್ಟು ಏರಿಕೆ– ಈ ಮುಂಗಡ ಪತ್ರದ ಮುಖ್ಯಾಂಶಗಳು.

50 ವರ್ಷಗಳ ಹಿಂದೆ — ಭಾನುವಾರ, 27-2-1972

• **ಕೆಲವು ಪ್ರಶ್ನೆಗಳ ಬಗ್ಗೆ ನಿಕ್ಸನ್ -ಚೌ ಮೂಲಭೂತ ಒಪ್ಪಂದ**

ಹಾಂಗ್‌ಜೋ, ಫೆ. 26– ಇಡೀವಾರ ಚರ್ಚಿಸಿ, ನಿರ್ಧರಿಸಿದ ಅನಿರ್ದಿಷ್ಟ ಸಂಖ್ಯೆಯ ವಿಷಯಗಳ ಬಗ್ಗೆ ಅಮೆರಿಕದ ಅಧ್ಯಕ್ಷ ನಿಕ್ಸನ್ ಹಾಗೂ ಚೀನಾ ಪ್ರಧಾನಿ ಚೌ-ಎನ್ ಲೈ ಅವರ ನಡುವೆ ಇಂದು ಮೂಲ ಒಪ್ಪಂದವಾಯಿತು.

ಈ ಒಪ್ಪಂದದ ವಿವರ ನಾಳೆ ತಿಳಿಯುವುದು ತಾವು ಹಾಗೂ ತಮ್ಮ ಚೀನೀ ಅತಿಥೇಯರ ನಡುವೆ ಕೆಲವು ವಿಷಯಗಳ ಬಗ್ಗೆ ಒಪ್ಪಂದ ಉಂಟಾಗಿದೆ ಎಂದು ಅಮೆರಿಕದ ಅಧ್ಯಕ್ಷ ನಿಕ್ಸನ್ ಅವರು ಪತ್ರಕರ್ತರಿಗೆ ತಿಳಿಸಿದರು. ಕೆಲವು ವಿಷಯಗಳ ಬಗ್ಗೆ ಎಂಬ ಮಾತನ್ನು ಅವರು ಒತ್ತಿ ಹೇಳಿದರು.

ಗುಂಡಣ್ಣ




ಪದಬಂಧ 4882 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭ್ರಾಂತಿಯನ್ನು ಹೋಗಲಾಡಿಸುವುದು (6)
4.ಒಳ್ಳೆಯದನ್ನು ಮೆಚ್ಚತಕ್ಕವನು (4)
5.ಈತ ನಿರೀಶ್ವರವಾದಿ (3)
7.ಇದು ಮೊದಲನೆಯದು! (3)
9.ಸುಲಭಸಾಧ್ಯವಲ್ಲದುದು (3)
12.ಬೆಟ್ಟದ ಗವಿ 3)
13.ಕನ್ನಡಿಗ ಧರಿಸಿದ ಚಾಳೀಸು (4)
15.ಮೂರ್ತಿ ಪೂಜೆಯಿದು (6)
14.ಕವಿತೆ ಬರೆಯುವವನು (2)

ಮೇಲಿಂದ ಕೆಳಕ್ಕೆ

1.ಚಾರನ ಕೆಟ್ಟ ನಡುವಳಿಕೆ! (4)
2.ನಡುಗುವುದನ್ನು ನೋಡಿದಾಗ ಈ ಮಂದಹಾಸವೇ? (2)
3.ಮಳೆಯಲ್ಲಿರುವ ಸ್ತ್ರಿ! (3)
6. ಈತ ಕನ್ನಡನಾಡಿನವನು (4)
7.ಇದು ಮುಖ್ಯವಾದುದು (3)
8.ಈತ ಲಗ್ನವಾಗುತ್ತಿರುವವ (4)
10.ರಾಜನ ಗೃಹವಿದು (4)
11.ಕುತ್ತು ಕೊನೆಗಿಟ್ಟು ತೋರಿದ ಸಾಮರ್ಥ್ಯ (3)



4881ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. 1.ಸ್ಥಾನಬದ್ಧತೆ 4.ವಾರ್ಧಕ್ಯ 5.ಪರಮ 6.ನಲಿವು 8.ಹರ 9.ರಾವು 11.ನೀರಜ 14.ನಖಾಗ್ರ 15.ಆಸ್ತಿಕ 16.ಜಲಜನಕ

ಮೇಲಿಂದ ಕೆಳಕ್ಕೆ:
1.ಸ್ಥಾನಭ್ರಷ್ಟ 2.ಬಡಾಯಿಗಾರ 3.ತೆಪರ 4.ವಾಮನ 7.ಲಿಲಾವು 8.ಹಜಾರ 9.ರಾಜಾಧಿರಾಜ 10.ವೈಚಾರಿಕ 12.ಜನಕ 13.ಅಗ್ರ

ಸುಡೊಕು 5268

		1		8				
			1		6			
3		5		2			8	
	8	7					1	
		4	7	6	3	8		9
5	9						7	
		2		7		1		5
1			2		5		9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5267 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಸತಿ ಸಹಗಮನ ವಿರೋಧಿಸಿದ್ದ ವೀರವನಿತೆ • ಪಟ್ಟಾಭಿಷೇಕದ 350ನೇ ವರ್ಷ

ಕನ್ನಡದ ಹೆಣ್ಣುಹುಲಿ ಕೆಳದಿ ಚೆನ್ನಮ್ಮ

• ವಚನಾನಂದ ಸ್ವಾಮೀಜಿ

ಆಕೆ ಕನ್ನಡದ ಹೆಣ್ಣುಹುಲಿ. ಕೆಳದಿಯ ರಾಣಿ ಚೆನ್ನಮ್ಮ, ಶತ್ರು ಪಾಳಯಕ್ಕೆ ಬೆಂಕಿಚೆಂಡಿನಂತಿದ್ದ, ವೀರಾಧಿವೀರರನ್ನೇ ಯುದ್ಧರಂಗದಲ್ಲಿ ಮಂಡಿ ಊರುವಂತೆ ಮಾಡಿದ, ಔರಂಗಜೇಬನಂಥ ಸುಲ್ತಾನನನ್ನೇ ಕಂಗಾಲಾಗುವಂತೆ ಮಾಡಿ ಪ್ರಾಣಭಿಕ್ಷೆ ನೀಡಿದ ವೀರವನಿತೆ.

ಕೆಳದಿಯ ರಾಣಿ ಚೆನ್ನಮ್ಮ 1672 ರಿಂದ 1697ರವರೆಗೆ 25 ವರ್ಷ ಆರು ತಿಂಗಳು ಕೆಳದಿಯನ್ನು ಆಳುತ್ತಾಳೆ. ಶತದಿಕ್ಕುಗಳಿಂದ ಶತ್ರುಗಳು ಮುಗಿಬಿದ್ದಾಗಲೂ ಅವರನ್ನು ಸೋಲಿಸಿ ಇಕ್ಕೇರಿ ಸಂಸ್ಥಾನವನ್ನು ಸಂರಕ್ಷಿಸಿದ ರಣಚತುರೆ ಆಕೆ. ಚೆನ್ನಮ್ಮ (1647–1697) ಅವರ ಬಗ್ಗೆ ತಿಳಿಯಲು ಲಿಂಗಣ್ಣ ಕವಿಯ ಕೆಳದಿ ನೃಪವಿಜಯ ಮತ್ತು ಆ ಕಾಲಘಟ್ಟದ ಇತಿಹಾಸಕಾರರು ಬರೆದ ಗ್ರಂಥಗಳನ್ನು ಓದಬೇಕು.

ತಂದೆ ಕೋಟಿಪುರ ಸಿದ್ದಪ್ಪ ಮಗಳಿಗೆ ಬಾಲ್ಯದಲ್ಲಿಯೇ ಶಸ್ತ್ರಶಾಸ್ತ್ರ ವಿದ್ಯೆ ಕೊಡಿಸಿದ್ದರು. ಮುಂದೆ, ಸಾಮಾಜಿಕ ಹರಿಕಾರನೆಂದೇ ಹೇಳಬಹುದಾದ ಶಿವಪ್ಪನಾಯಕನ ಪುತ್ರ ಸೋಮಶೇಖರ ನಾಯಕನಿಗೆ, ಮಗಳನ್ನು ಕೊಟ್ಟು ಮದುವೆ ಮಾಡಲಾಗುತ್ತದೆ. ಶಿವಪ್ಪ ನಾಯಕ ರೂಪಿಸಿದ್ದ ಕಂದಾಯ ವ್ಯವಸ್ಥೆಯು ಅತ್ಯುತ್ತಮವಾದುದಾಗಿದ್ದು, 'ಸಿಸ್ತು' ಎಂದೇ ಹೆಸರಾಗಿತ್ತು.

ಸೋಮಶೇಖರ ನಾಯಕ ಧಾರ್ಮಿಕ ವ್ಯಕ್ತಿಯಾಗಿದ್ದ. ರೂಪವತಿ, ಚತುರೆಯೂ ಆದ ಚೆನ್ನಮ್ಮಳನ್ನು ಇಷ್ಟಪಟ್ಟು ಮದುವೆಯಾಗುತ್ತಾನೆ. ಚೆನ್ನಮ್ಮ, ಪತಿಯಿಂದ ಆಡಳಿತದ ಅನುಭವ ಪಡೆದುಕೊಳ್ಳುತ್ತಾಳೆ. ಸಕಾಲದಲ್ಲಿ ಪತಿಗೆ ಸಲಹೆ ಸೂಚನೆಗಳನ್ನು ನೀಡತೊಡಗುತ್ತಾಳೆ.

ಸೋಮಶೇಖರ ನಾಯಕನು ಲೋಲುಪನಾಗಿದ್ದ. ವೇಶ್ಯೆಯೊಬ್ಬಳ ಸಹವಾಸಕ್ಕೆ ಬಿದ್ದು ರಾಜ್ಯವನ್ನು ಕಡೆಗಣಿಸಿದ. ಇದು ರಾಣಿಗೆ ಚಿಂತೆ ಮೂಡಿಸಿತ್ತು. ಆಕೆಯ ಆತಂಕ ನಿಜವಾಯಿತು. ಬಿಜಾಪುರದ ಸುಲ್ತಾನನ ಕಣ್ಣು ಬಿದನೂರಿನ ಮೇಲೆ ಬೀಳುತ್ತದೆ. ಆತ ಸರ್ವಸನ್ನದ್ಧನಾಗಿ ಬಿದನೂರಿಗೆ ಮುತ್ತಿಗೆ ಹಾಕುತ್ತಾನೆ. ಮಂತ್ರಿಗಳು, ಸೇನಾ ನಾಯಕರು ಮಗುವೊಂದನ್ನು ದತ್ತು ಪಡೆದು ರಾಜ್ಯಭಾರ ಮಾಡಲು ಸಲಹೆ ಮಾಡುತ್ತಾರೆ. ಮಕ್ಕಳಿಲ್ಲದ ಚೆನ್ನಮ್ಮಳಿಗೆ ಈ ಸಲಹೆ ರುಚಿಸಲಿಲ್ಲ. ರಾಜ್ಯವನ್ನು ಕಾಪಾಡುವಂತೆ ಪತಿಯನ್ನು ಬೇಡಿಕೊಳ್ಳುತ್ತಾಳೆ. ಸೋಮಶೇಖರ ಕೈಚೆಲ್ಲುತ್ತಾನೆ. ಕಷ್ಟಕಾಲ ಅರಿತ ಕೆಳದಿ ಚೆನ್ನಮ್ಮ ಸಂಧಾನಕ್ಕೆ ಬಂದಿದ್ದ ಸುಲ್ತಾನನಿಗೆ ಮೂರು ಲಕ್ಷ ಕೊಟ್ಟು ತಕ್ಷಣಕ್ಕೆ ಯುದ್ಧ ನಿಲ್ಲಿಸುತ್ತಾಳೆ. ಆದರೆ ಸುಲ್ತಾನನ ದೂತ ಹಿಂದಿರುಗುವಾಗ ಸೋಮಶೇಖರನನ್ನು ಕೊಲ್ಲಿಸುತ್ತಾನೆ. ಬಿದನೂರಿಗೆ ಮುತ್ತಿಗೆಯನ್ನೂ ಹಾಕುತ್ತಾನೆ. ಹೆದರದ ಚೆನ್ನಮ್ಮ, ಹಿತೈಷಿಗಳಾಗಿದ್ದ ಗುರುಬಸಪ್ಪದೇವ, ದಂಡನಾಯಕರಾದ ಕೃಷ್ಣಪ್ಪಯ್ಯ, ತಿಮ್ಮರಸಯ್ಯ ಅವರ ನೆರವಿನಿಂದ ವೈರಿಗಳನ್ನು ಸದೆಬಡಿದು ಕೆಳದಿ ಸಂಸ್ಥಾನ ಉಳಿಸಿಕೊಳ್ಳುತ್ತಾಳೆ. ಫೆಬ್ರುವರಿ 27, 1672ರಲ್ಲಿ ಕವಲೇದುರ್ಗದಲ್ಲಿ ಚೆನ್ನಮ್ಮಾಜಿಯ ಪಟ್ಟಾಭಿಷೇಕ ಮಹೋತ್ಸವ ನಡೆಯುತ್ತದೆ.



ಕೆಳದಿ ಚೆನ್ನಮ್ಮ

ಕ್ರಾಂತಿಕಾರಿ ನಿಲುವು: ಚೆನ್ನಮ್ಮ ಅವರ ಕಾಲಕ್ಕೆ ಸತಿಸಹಗಮನ ಪದ್ಧತಿ ಉತ್ತುಂಗದಲ್ಲಿತ್ತು. ಪತಿ ಸಾವಿನಿಂದ ಚಿತೆ ಏರಬೇಕಾಗಿ ಬಂದಾಗ ಅದನ್ನು ವಿರೋಧಿಸುತ್ತಾಳೆ. ಆ ಕಾಲಕ್ಕೆ ಈ ಪ್ರತಿರೋಧ ಕ್ರಾಂತಿಕಾರಕವೇ ಸರಿ. ರಾಜಾರಾಮ ಮೋಹನರಾಯ ಅವರಿಗಿಂತ ನೂರು ವರ್ಷ ಮೊದಲೇ ಸತಿಸಹಗಮನದ ವಿರುದ್ಧ ದನಿ ಎತ್ತಿದ ದಿಟ್ಟೆ ಕೆಳದಿಯ ಚೆನ್ನಮ್ಮ.

ಕೆಳದಿಯ ರಾಣಿ ರಾಜಕೀಯ ಚತುರತೆಗೆ ಇನ್ನೊಂದು ನಿದರ್ಶನವಿದೆ. ಛತ್ರಪತಿ ಶಿವಾಜಿಯ ಮೊದಲ ಮಗ ಸಂಭಾಜಿ ಕೊಲೆಯಾಗುತ್ತದೆ. ಎರಡನೇ ಮಗ ರಾಜಾರಾಮನನ್ನು ಕೊಂದು ಮರಾಠಾ ಸಾಮ್ರಾಜ್ಯ ವಶಪಡಿಸಿಕೊಳ್ಳಲು ಔರಂಗಜೇಬ ಹವಣಿಸುತ್ತಾನೆ. ಹೆದರಿದ ರಾಜಾರಾಮ, ಸನ್ಯಾಸಿ ವೇಷ ತೊಟ್ಟು ರಕ್ಷಣೆ ಕೋರಿ ಚೆನ್ನಮ್ಮ ಬಳಿಗೆ ಬರುತ್ತಾನೆ. ರಾಣಿಯು, ಅಭಯ ನೀಡುತ್ತಾಳೆ. ಔರಂಗಜೇಬನ ಸೈನ್ಯ ಕೆಳದಿಯ ಗಡಿಗೆ ಬಂದು ನಿಲ್ಲುತ್ತದೆ. ಕಂಗೆಡದ ರಾಣಿ ಔರಂಗಜೇಬನ ಸೇನೆಯನ್ನು ಸದೆಬಡಿಯುತ್ತಾಳೆ. ಔರಂಗಜೇಬ ಮತ್ತು ಆತನ ಮಗ ಮೊಹಮ್ಮದ್ ಅಜಮ್ ಶಾ ಇಬ್ಬರೂ ಸೆರೆಯಾಳಾಗುತ್ತಾರೆ. ಪ್ರಾಣಭಿಕ್ಷೆಗಾಗಿ ಅಂಗಲಾಚುತ್ತಾರೆ. ಈ ಇಬ್ಬರನ್ನೂ ಕೊಂದು, ಮೊಗಲ್ ಸಾಮ್ರಾಜ್ಯವನ್ನು ಚೆನ್ನಮ್ಮ ತನ್ನದಾಗಿಸಿಕೊಳ್ಳಬಹುದಿತ್ತು. ಆದರೆ ದೊಡ್ಡತನ ಮೆರೆದ ಚೆನ್ನಮ್ಮ ಇಬ್ಬರನ್ನೂ ಕ್ಷಮಿಸುತ್ತಾಳೆ.

ಚೆನ್ನಮ್ಮ ಧೈರ್ಯ, ಶೌರ್ಯದ ಜೊತೆಗೆ, ಧಾರ್ಮಿಕ ನಿಲುವಿಗೂ ಹೆಸರಾದವಳು. ಬಸವಾದಿ ಶರಣರ ವಚನ ಪಠಿಸುತ್ತಾ, ನಿತ್ಯ ಇಷ್ಟಲಿಂಗ ಧ್ಯಾನ ಮಾಡುತ್ತಿದ್ದಳು. ಶೃಂಗೇರಿ ಮಠಕ್ಕೆ ರಾಜಾಶ್ರಯ, ಅಗ್ರಹಾರ ಮತ್ತು ಜಂಗಮ ಮಠಗಳ ನಿರ್ಮಾಣ, ಎರಡು ಲಕ್ಷ ಜಂಗಮರಿಗೆ ದಾಸೋಹ ವ್ಯವಸ್ಥೆ, ಕೆರೆಕಟ್ಟೆಗಳ ನಿರ್ಮಾಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಳು. ಶೃಂಗೇರಿಗೆ ಚಿನ್ನದ ಗೋಪಾಲ ಕೃಷ್ಣ ಮತ್ತು ಸ್ಫಟಿಕ ಲಿಂಗ, ಕೊಲ್ಲೂರು ಮೂಕಾಂಬಿಕೆಗೆ ಪಚ್ಚೆ ಪದಕ, ಹೊರನಾಡು ಅನ್ನಪೂರ್ಣೆಗೆ ವಿಜಯ ದಶಮಿಯಂದು ವಿಶೇಷ ಪೂಜೆಗೆ ಪ್ರೋತ್ಸಾಹ ನೀಡಿದ್ದಳು. ಬಸಪ್ಪನೆಂಬ ದತ್ತು-ಪುತ್ರನನ್ನು ಪಡೆದು ಉತ್ತಮ ಶಿಕ್ಷಣ ಕೊಡಿಸಿದಳು. ಮುಂದೆ ಆತ ಬಸಪ್ಪನಾಯಕನೆಂದೂ ಖ್ಯಾತಿ ಪಡೆದ. ಆತ ಬರೆದ ಗ್ರಂಥ 'ಶಿವತತ್ವ ರತ್ನಾಕರ' ಸಂಸ್ಕೃತದ ವಿಶ್ವಕೋಶ ಎಂದೇ ಖ್ಯಾತಿ ಪಡೆದಿದೆ.

ಆಡಳಿತದ ದಿಟ್ಟ ನಿರ್ಧಾರಗಳ ಮೂಲಕ ಗಮನಸೆಳೆದಿದ್ದ ವೀರವನಿತೆಯ ಪಟ್ಟಾಭಿಷೇಕವಾಗಿ ಇದು 350ನೇ ವರ್ಷ. ಆಕೆಯ ನೆನಪುಗಳನ್ನು ಉಳಿಸುವ, ಆಕೆಯ ಶೌರ್ಯವನ್ನು ವಿವರಿಸುವ ಕಥನಗಳನ್ನು ಮುಂದಿನ ಪೀಳಿಗೆಗೆ ದಾಟಿಸುವ ಕೆಲಸ ಆದ್ಯತೆ ಮೇಲೆ ಆಗಬೇಕಿದೆ.

ಲೇಖಕರು: ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧಿಪತಿ.

ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆಗ್ರಹ

'ನೇಮಕಾತಿ ಮಸೂದೆಗೆ ಸಹಿ ಹಾಕಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2011ನೇ ಸಾಲಿನ 362 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಮಸೂದೆಗೆ ರಾಜ್ಯಪಾಲರು ಸಹಿ ಹಾಕಬಾರದು. ಈ ಹುದ್ದೆಗಳ ಭರ್ತಿಗೆ ಹೊಸದಾಗಿ ನೇಮಕಾತಿಗೆ ಅಧಿಸೂಚನೆ ಹೊರಡಿಸಬೇಕು' ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮು ಅವರು ಆಗ್ರಹಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ವ್ಯಕ್ತಿತ್ವ ಪರೀಕ್ಷೆ ಹಂತದಲ್ಲಿ ಭ್ರಷ್ಟಾಚಾರ ನಡೆದಿದ್ದರಿಂದ ಸಿಐಡಿ ತನಿಖೆ ನಡೆಯಿತು. ಈ ನೇಮಕಾತಿ ಕಾನೂನುಬಾಹಿರ ಎಂದು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ತೀರ್ಪು ನೀಡಿವೆ. ಆದರೂ ಸರ್ಕಾರ ಮಸೂದೆಯೊಂದನ್ನು ಜಾರಿಗೆ ತಂದು, ಅಭ್ಯರ್ಥಿಗಳ ನೇಮಕಕ್ಕೆ ಮುಂದಾಗಿದ್ದು ಸರಿಯಲ್ಲ' ಎಂದು ಹೇಳಿದರು.

'ಈ ಕಾರಣದಿಂದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಸೂದೆಯನ್ನು ತಿರಸ್ಕರಿಸಬೇಕು. ಈ ಹುದ್ದೆಗಳ ಭರ್ತಿಗೆ ಹೊಸತಾಗಿ ನೇಮಕಾತಿ ಅಧಿಸೂಚನೆ ಹೊರಡಿಸಿ, 2011ನೇ ಸಾಲಿನ ಅಭ್ಯರ್ಥಿಗಳಿಗೆ ಮಾತ್ರ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಬೇಕು' ಎಂದು ಅವರು ಆಗ್ರಹಿಸಿದರು.

'ಈ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾರ್ಚ್ ಮೊದಲ ವಾರದಲ್ಲಿ ರಾಜ್ಯಪಾಲರ ನಿವಾಸದ ಎದುರು ಧರಣಿ ನಡೆಸಲಾಗುವುದು' ಎಂದು ಹೇಳಿದರು.

ಚಿಂತಕ ಕೆ.ಎಸ್.ಭಗವಾನ್ ಅವರು ಮಾತನಾಡಿ, 'ಸರ್ಕಾರ ಜನರ ಹಿತ ಕಾಪಾಡುವ ಕೆಲಸ ಮಾಡಬೇಕು. ಸಂವಿಧಾನದ ಮೂಲತತ್ವಗಳನ್ನು ಎತ್ತಿ ಹಿಡಿಯುವುದು ಸರ್ಕಾರದ ಕರ್ತವ್ಯ. 2011ರ ನೇಮಕಾತಿ ರದ್ದುಪಡಿಸಿ, ಸುಪ್ರೀಂ ಕೋರ್ಟ್‌ನ ತೀರ್ಪನ್ನು ಪಾಲಿಸಬೇಕು' ಎಂದು ಆಗ್ರಹಿಸಿದರು.

ಗೂಗಲ್ ಮೀಟ್‌ನಲ್ಲಿ ಅಂಗವಿಕಲರ ಸಮಸ್ಯೆಗಳಿಗೆ ಸಲಹೆ

ಅಶಕ್ತರಿಗೆ ಕಾನೂನು ಅರಿವಿನ ಕಸುವು

• ಸಂಧ್ಯಾ ಹೆಗಡೆ

ಮುಖ್ಯಾಂಶಗಳು

- ಪ್ರತಿ ಭಾನುವಾರ ಮೂರು ತಾಸಿನ ಕಾರ್ಯಕ್ರಮ
- ಸಂಪನ್ಮೂಲ ವ್ಯಕ್ತಿಗಳು, ಅಂಗವಿಕಲರ ನಡುವೆ ಸಂವಾದ
- ಪರಿಹಾರ ಕಂಡ ಅನೇಕ ಸಮಸ್ಯೆಗಳು



ಪ್ರತಿವಾರ ಸರ್ಕಾರಿ, ಅರೆ ಸರ್ಕಾರಿ ನೌಕರರು, ಸಾಮಾನ್ಯ ಅಂಗವಿಕಲರು ಸಭೆಯಲ್ಲಿ ಭಾಗವಹಿಸಿ ತಮ್ಮ ಸಮಸ್ಯೆ ಹೇಳಿಕೊಳ್ಳುತ್ತಾರೆ.

ಶಿವಪ್ಪ ರಾಥೋಡ್, ಸರ್ಕಾರಿ ಮತ್ತು ಅರೆ ಸರ್ಕಾರಿ ವಿಕಲಚೇತನ ನೌಕರರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ



ಸಮಾಜದ ಕಟ್ಟಕಡೆಯ ಅಂಗವಿಕಲನಿಗೂ ಆತನ ಹಕ್ಕು ದೊರೆಯಬೇಕು ಎಂಬುದು ಕಾನೂನು ಅರಿವು ಕಾರ್ಯಕ್ರಮದ ಉದ್ದೇಶ.

ಚಂದ್ರಶೇಖರ ಪುಟ್ಟಪ್ಪ, ಕರ್ನಾಟಕ ರಾಜ್ಯ ವಿಕಲಚೇತನ ರಕ್ಷಣಾ ಸಮಿತಿ ಆಶ್ರಯದಲ್ಲಿ ಕಾರ್ಯಾಧ್ಯಕ್ಷ

ಮಂಗಳೂರು: ರಾಜ್ಯದ ಮೂಲೆ ಮೂಲೆಯಲ್ಲಿರುವ ಅಂಗವಿಕಲರು ಭಾನುವಾರಕ್ಕಾಗಿ ಕಾಯುತ್ತಾರೆ. ಬಹುದಿನಗಳಿಂದ ನನೆಗುದಿಗೆ ಬಿದ್ದಿರುವ ಸಮಸ್ಯೆಗಳಿಗೆ ಪರಿಹಾರ ದೊರೆಯಬಹುದೆಂಬ ಆಶಾಭಾವದಲ್ಲಿ ತಮ್ಮ ಮೊಬೈಲ್ ಎದುರು ಕುಳಿತು, ತಜ್ಞರ ದನಿಗೆ ಕಿವಿಯಾಗುತ್ತಾರೆ.

ವಿಕಲಚೇತನರ ವಿಕಾಸ ವಾಟ್ಸ್‌ಆ್ಯಪ್ ಗ್ರೂಪ್ ಹಾಗೂ ಕರ್ನಾಟಕ ರಾಜ್ಯ ವಿಕಲಚೇತನ ರಕ್ಷಣಾ ಸಮಿತಿ ಸೇರಿ ಅಂಗವಿಕಲರಿಗೆ ಅವರ ಹಕ್ಕುಗಳ ಅರಿವು ಮೂಡಿಸುವ ಕಾರ್ಯಕ್ರಮವನ್ನು ಎಂಟು ತಿಂಗಳುಗಳಿಂದ ಆಯೋಜಿಸುತ್ತಿದೆ. ಪ್ರತಿ ಭಾನುವಾರ ಸಂಜೆ 4ರಿಂದ ನಡೆಯುವ ಗೂಗಲ್ ಮೀಟ್ ಕಾರ್ಯಕ್ರಮದಲ್ಲಿ 50ಕ್ಕೂ ಅಧಿಕ ಅಂಗವಿಕಲರ ಸಮಸ್ಯೆಗಳು ಬಗೆಹರಿದಿವೆ.

'ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016ರ ಆರನೇ ಅಧ್ಯಾಯದಲ್ಲಿ, ಅಂಗವಿಕಲರ ಹಕ್ಕುಗಳ ಬಗ್ಗೆ ಜಾಗೃತಿ ಶಿಬಿರ ನಡೆಸಬೇಕು ಎಂಬ ಉಲ್ಲೇಖವಿದೆ. ಈ ನಿಯಮಗಳ ಬಗ್ಗೆ ಮುಖ್ಯವಾಗಿ ನ್ಯಾಯಾಧೀಶರು, ವಕೀಲರು ಹಾಗೂ ಅನುಷ್ಠಾನಗೊಳಿಸುವ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಜ್ಞಾನವಿರಬೇಕು. ಕೇಂದ್ರ ಸರ್ಕಾರ 2016ರಲ್ಲಿ ಹಾಗೂ ರಾಜ್ಯ ಸರ್ಕಾರ 2019ರಲ್ಲಿ ಈ ಕಾಯ್ದೆ ಅನುಷ್ಠಾನಗೊಳಿಸಿದ್ದರೂ, ಈ ಬಗ್ಗೆ ಜಾಗೃತಿ ಕಾರ್ಯ ಆಗುತ್ತಿಲ್ಲ. ಹೀಗಾಗಿ, ಬಹಳಷ್ಟು ಅಂಗವಿಕಲರಿಗೆ ತಮ್ಮ ಹಕ್ಕುಗಳ ಬಗ್ಗೆ ಅರಿವು ಇಲ್ಲದೆ, ಸೌಲಭ್ಯ ಪಡೆಯಲು ಸಂಕಟಪಡುತ್ತಿದ್ದಾರೆ' ಎನ್ನುತ್ತಾರೆ ಕರ್ನಾಟಕ ರಾಜ್ಯ ವಿಕಲಚೇತನ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ.

'ಈ ಹಿಂದೆ 'ಅರಿವಿನ ಸಿಂಚನ' ಕಾರ್ಯಕ್ರಮದ ಮೂಲಕ ಜಾಗೃತಿ ಕಾರ್ಯ ನಡೆಯುತ್ತಿತ್ತು. ಇದು ಸ್ಥಗಿತಗೊಂಡು ವರ್ಷ ಕಳೆದಿದೆ. ಅರಿವು ಇದ್ದಾಗ ಮಾತ್ರ ಅಶಕ್ತರು ಸೌಲಭ್ಯ ಪಡೆಯಲು ಸಾಧ್ಯ. ಹೀಗಾಗಿ, ನಾವು ವಾರದ ಸಭೆಯ ಮೊದಲ ಅರ್ಧ ಭಾಗದಲ್ಲಿ ಕಾನೂನಿನ ಬಗ್ಗೆ ತಿಳಿವಳಿಕೆ ನೀಡುತ್ತೇವೆ' ಎಂದು ಅವರು ಪ್ರತಿಕ್ರಿಯಿಸಿದರು.

'ನಾನು ಅನುಭವಿಸಿದ ಕಷ್ಟವನ್ನು ಅಂಗವಿಕಲರು, ಅವರ ಪೋಷಕರು ಅನುಭವಿಸಬಾರದು ಎಂಬ ಕಳಕಳಿ ನನ್ನಲ್ಲಿತ್ತು. ಜತೆಗೆ, ಕೋವಿಡ್ ಸಂದರ್ಭದಲ್ಲಿ ಅನೇಕ ಅಂಗವಿಕಲರಿಗೆ ಮನೆಯಿಂದ ಹೊರಗೆ ಹೋಗಲಾಗದ ಅಸಹಾಯಕ ಪರಿಸ್ಥಿತಿ ಎದುರಾಯಿತು. ಆಗ ಹೊಳೆದ ವರ್ಚುವಲ್ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮ 30ಕ್ಕೂ ಅಧಿಕ ಕಂತುಗಳನ್ನು ಪೂರೈಸಿದೆ' ಎಂದು ಸರ್ಕಾರಿ ಮತ್ತು ಅರೆ ಸರ್ಕಾರಿ ವಿಕಲಚೇತನ ನೌಕರರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಶಿವಪ್ಪ ರಾಥೋಡ್ 'ಪ್ರಜಾವಾಣಿ'ಗೆ ತಿಳಿಸಿದರು.

'ತೆರಿಗೆ, ಸೇವಾ ಕ್ಷೇತ್ರ, ಸಂಚಾರಿ ಭತ್ಯೆ, ಬ್ಯಾಂಕ್ ಸಾಲ, ಸ್ವಯಂ ಉದ್ಯೋಗದ ಮಾಹಿತಿ ಸೇರಿದಂತೆ ಅನೇಕ ವಿಚಾರಗಳನ್ನು ಮೂರು ತಾಸಿನ ಗೂಗಲ್ ಮೀಟ್‌ನಲ್ಲಿ ಚರ್ಚಿಸಲಾಗುತ್ತದೆ. 100 ಜನರ ಮಿತಿಯಲ್ಲಿ ಕಾರ್ಯಕ್ರಮ ನಡೆಯುತ್ತದೆ. ಇತ್ತೀಚಿನ ದಿನಗಳಲ್ಲಿ ಅಧಿಕಾರಿಗಳು, ನ್ಯಾಯಾಧೀಶರನ್ನು ಆಮಂತ್ರಿಸಿ, ಅವರು ಸಹ ಭಾಗವಹಿಸುವಂತೆ ಮಾಡುತ್ತಿದ್ದೇವೆ. ಅಧಿಕಾರಿಗಳಲ್ಲಿ ಕಾನೂನಿನ ಅರಿವು ಮೂಡಿದರೆ, ಕಚೇರಿಗೆ ಬರುವ ಅಂಗವಿಕಲರಿಗೆ ಕೆಲಸ ಸುಲಭವಾಗುತ್ತದೆ' ಎಂದು ಅವರು ವಿವರಿಸಿದರು.

'ಅಂಗವಿಕಲರ ಮೀಸಲಾತಿ ಅಡಿಯಲ್ಲಿ ಮನೆ ಕೊಡಿಸುವುದಾಗಿ 2016ರಲ್ಲಿ ಹಣ ಪಡೆದಿದ್ದ ವ್ಯಕ್ತಿಯೊಬ್ಬ ಅದನ್ನು ಹಿಂದಿರುಗಿಸದೆ, ಸತಾಯಿಸುತ್ತಿದ್ದ. ಭಾನುವಾರದ ಕಾರ್ಯಕ್ರಮದಲ್ಲಿ ನಾನು ಈ ವಿಚಾರ ಹಂಚಿಕೊಂಡಾಗ, ಇಲ್ಲಿನ ಸಂಪನ್ಮೂಲ ವ್ಯಕ್ತಿಗಳು ಬಹುವರ್ಷಗಳಿಂದ ಬಾಕಿ ಇದ್ದ ಈ ಸಮಸ್ಯೆಯನ್ನು ಕಾನೂನು ಮೂಲಕ ವಾರದೊಳಗೆ ಪರಿಹರಿಸಲು ನೆರವಾದರು' ಎಂದು ಅಂಗವಿಕಲೆ ವಿಜಯಪುರದ ಗಂಗೂಬಾಯಿ ತಿಳಿಸಿದರು.

₹ 1.25 ಕೋಟಿ ಬದಲಿಗೆ, ₹ 1.41 ಕೋಟಿ ನೆರವು

ಅಪಘಾತ ಪರಿಹಾರ ಹೆಚ್ಚಿಸಿ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ 8 ವರ್ಷಗಳ ಹಿಂದೆ ಸಂಭವಿಸಿದ್ದ ರಸ್ತೆ ಅಪಘಾತದಲ್ಲಿ ಗಾಯಗೊಂಡು ಕೋಮಾದಲ್ಲಿರುವ ಬ್ಯಾಂಕ್ ಒಂದರ ಉದ್ಯೋಗಿಗೆ ₹ 1.41 ಕೋಟಿ ಪರಿಹಾರ ನೀಡುವಂತೆ ಸುಪ್ರೀಂ ಕೋರ್ಟ್ ವಿಮಾ ಕಂಪೆನಿಗೆ ಆದೇಶಿಸಿದೆ.

ಪರಿಹಾರ ಮೊತ್ತವನ್ನು ₹ 94.37 ಲಕ್ಷದಿಂದ ₹ 1.25 ಕೋಟಿಗೆ ಹೆಚ್ಚಿಸಿದ್ದ ಕರ್ನಾಟಕ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಗಾಯಾಳು ಬೆನ್ಸನ್ ಜಾರ್ಜ್ ಎಂಬುವವರು ತಮ್ಮ ತಾಯಿಯ ಮೂಲಕ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿರುವ ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಬಿ.ವಿ. ನಾಗರತ್ನಾ ಅವರಿದ್ದ ಪೀಠ ಈ ಆದೇಶ ಹೊರಡಿಸಿದೆ.

2013ರಲ್ಲಿ ಸಂಭವಿಸಿದ್ದ ಅಪಘಾತದ ವೇಳೆ 29 ವರ್ಷ ವಯಸ್ಸಿನವರಾಗಿದ್ದ ಅರ್ಜಿದಾರರು, ಮಿದುಳಿಗೆ ಆಗಿರುವ ಗಾಯದಿಂದ ಬಳಲುತ್ತಿದ್ದು, ಈಗಲೂ ಕೋಮಾದಲ್ಲಿದ್ದಾರೆ. ಸುದೀರ್ಘ ಅವಧಿಯಿಂದ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವುದನ್ನು ಗಮನಿಸಿದ ನ್ಯಾಯಪೀಠ, ತಲೆಗೆ ಪೆಟ್ಟಾಗಿ ಆಘಾತಕ್ಕೆ ಒಳಗಾಗಿರುವುದಕ್ಕೆ ವಿಮಾ ಕಂಪೆನಿ ಪ್ರತ್ಯೇಕವಾಗಿ ಘೋಷಿಸಿದ್ದ ₹ 1 ಲಕ್ಷ ಮೊತ್ತದ ಪರಿಹಾರವನ್ನು ಹೈಕೋರ್ಟ್ ಕೇವಲ ₹ 2 ಲಕ್ಷಕ್ಕೆ ಹೆಚ್ಚಿಸಿ ಪ್ರಮಾದ ಎಸಗಿದೆ. ಈ ಮೊತ್ತವನ್ನು ಕನಿಷ್ಠ ₹ 10 ಲಕ್ಷಕ್ಕೆ ಹೆಚ್ಚಿಸಬೇಕು ಎಂದು ಹೇಳಿದೆ.

ಅರ್ಜಿದಾರರು ಜೀವನವಿಡೀ ಹಾಸಿಗೆ ಹಿಡಿಯಬೇಕಾಗಿದೆ. ಹಾಗಾಗಿ ತಲೆಗೆ ಪೆಟ್ಟು ಬಿದ್ದ ಪ್ರಕರಣದಲ್ಲಿ ಕೇವಲ ₹ 1 ಲಕ್ಷ ಪರಿಹಾರ ಘೋಷಿಸಿರುವುದು ಅತ್ಯಲ್ಪ ಪ್ರಮಾಣದ್ದಲ್ಲದೆ, ಅಸಮಂಜಸವೂ ಆಗಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ ಅವಧಿಯಿಂದ ವಾರ್ಷಿಕ ಶೇ 6ರಷ್ಟು ಬಡ್ಡಿಯೊಂದಿಗೆ ₹ 1.42 ಕೋಟಿ ಪಾವತಿಸುವಂತೆ, ಪರಿಹಾರ ನೀಡಬೇಕಿರುವ ವಿಮಾ ಕಂಪೆನಿಯಾದ ರಿಲಯನ್ಸ್ ಜನರಲ್ ಇನ್ಶುರೆನ್ಸ್ ಲಿಮಿಟೆಡ್‌ಗೆ ಆದೇಶಲಾಗಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **'ಪಿವಿ ಬ್ರ್ಯಾಂಡ್ ಸ್ಪಾಟ್'**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮಹಿಳಾ ಪೈಲಟ್ ಸಾವು

ಹೈದರಾಬಾದ್: ಖಾಸಗಿ ವಿಮಾನಯಾನ ಅಕಾಡೆಮಿಗೆ ಸೇರಿದ ವಿಮಾನವೊಂದು ತೆಲಂಗಾಣದ ನಲ್ಗೊಂಡ ಜಿಲ್ಲೆಯಲ್ಲಿ ಪತಗೊಂಡಿದ್ದು, ಅದರಲ್ಲಿದ್ದ ತರಬೇತಿನಿರತ ಮಹಿಳಾ ಪೈಲಟ್ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.


ಯಕ್ಷಗಾನ ಸಮ್ಮೇಳನ ನಡೆಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಮೈಸೂರು: ರಾಜ್ಯ ಸರ್ಕಾರ ಯಕ್ಷಗಾನ ಸಮ್ಮೇಳನ ನಡೆಸಬೇಕು ಎಂದು ಕರ್ನಾಟಕ ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಜಿ.ಎಲ್.ಹೆಗಡೆ ಒತ್ತಾಯಿಸಿದರು.

ಅಕಾಡೆಮಿಯು ಕನ್ನಡ ಸಾಹಿತ್ಯ ಕಲಾಕೂಟದ ಸಹಯೋಗದಲ್ಲಿ ಶನಿವಾರ ಇಲ್ಲಿ ಏರ್ಪಡಿಸಿದ್ದ 'ಯಕ್ಷಸಂಭ್ರಮ'ದಲ್ಲಿ ಅವರು ಮಾತನಾಡಿದರು.

'ಯಕ್ಷಗಾನ ಸಮ್ಮೇಳನದ ಮೂಲಕ ಕರ್ನಾಟಕದ ಸಮಗ್ರ ಕಲೆಗಳನ್ನು ಒಂದೇ ವೇದಿಕೆಗೆ ತರಬೇಕು. ಅಂತಹದ್ದೊಂದು ದೊಡ್ಡ ಕನ್ನಡ ಕಾಯಕ ಮಾಡಲು ಸರ್ಕಾರ ಮುಂದಾಗಬೇಕು' ಎಂದರು.



ಡಾ.ಜಿ.ಎಲ್. ಹೆಗಡೆ

ಅಕಾಡೆಮಿಯು ಯಕ್ಷಗಾನ ಕುರಿತು ವಿಶ್ವಕೋಶ ರೂಪಿಸುತ್ತಿದೆ ಎಂದು ಮಾಹಿತಿ ನೀಡಿದರು.

ಕಬ್ಬಿನಾಲೆ ವಸಂತ ಭಾರದ್ವಾಜ್ ಅವರ 'ಯಕ್ಷಗಾನ ಕವಿಗಳ ಚಿತ್ರಕಥೆ' ಹಾಗೂ ಚಿಕ್ಕಹೆಜ್ಜಾಜಿ ನಾಯಕ ಅವರ ಸಂಪಾದಿತ ಮೂಡಲಪಾಯ ಯಕ್ಷಗಾನ ಪ್ರಸಂಗ ಕೃತಿಗಳನ್ನು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಬಿಡುಗಡೆ ಮಾಡಿದರು.

ಕನ್ಯಾಡಿ: ಕೊಲೆ ಆರೋಪಿ ಪೊಲೀಸ್ ವಶಕ್ಕೆ

ಉಜಿರೆ: ಧರ್ಮಸ್ಥಳ ಗ್ರಾಮದ ಕನ್ಯಾಡಿ ನಿವಾಸಿ ಹಾಗೂ ಪರಿಶಿಷ್ಟ ಸಮುದಾಯದ ದಿನೇಶ್ ಎಂಬುವವರ ಸಾವಿಗೆ ಕಾರಣನಾದ ಬಿಜೆಪಿ ಬೆಂಬಲಿಗ, ಕನ್ಯಾಡಿ ಶಿಟ್ಟ ಯಾನೆ ಕೃಷ್ಣನನ್ನು ಧರ್ಮಸ್ಥಳ ಪೊಲೀಸರು ಶನಿವಾರ ವಶಕ್ಕೆ ಪಡೆದಿದ್ದಾರೆ.

ಜಮೀನು ದಾಖಲಾತಿ ಬಗ್ಗೆ ಫೆ. 23 ರಂದು ಕನ್ಯಾಡಿಯಲ್ಲಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು. ಈ ಸಂದರ್ಭದಲ್ಲಿ ಆರೋಪಿ ಕೃಷ್ಣ, ದಿನೇಶ್ ಮೇಲೆ ಹಲ್ಲೆ ನಡೆಸಿದ್ದ. ತೀವ್ರವಾಗಿ ಗಾಯಗೊಂಡಿದ್ದ ದಿನೇಶ್ ಅವರನ್ನು ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೆ ಶುಕ್ರವಾರ ಮೃತಪಟ್ಟಿದ್ದರು.



ಕೃಷ್ಣ

ಮೃತನ ತಾಯಿ ಪದ್ಮಾವತಿ ನೀಡಿದ ದೂರಿನಂತೆ ಧರ್ಮಸ್ಥಳ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದಿನೇಶ್ ಕುಟುಂಬಕ್ಕೆ ರಾಜ್ಯ ಸರ್ಕಾರ ತಕ್ಷಣ ₹25 ಲಕ್ಷ ಪರಿಹಾರ ಘೋಷಣೆ ಮಾಡಬೇಕು ಎಂದು ಬೆಳ್ತಂಗಡಿಯ ಮಾಜಿ ಶಾಸಕ ವಸಂತ ಬಂಗೇರ ಆಗ್ರಹಿಸಿದ್ದಾರೆ.

2015ರಲ್ಲಿ ಹತ್ಯೆಯಾಗಿದ್ದ ಬಜರಂಗದಳದ ಕಾರ್ಯಕರ್ತ ವಿಶ್ವನಾಥ ಶೆಟ್ಟಿ ಕುಟುಂಬದ ಸಂಕಷ್ಟದ ಕಥೆ

ಚಿಂದಿ ಆಯ್ದು ಮೊಮ್ಮಗನ ಓದಿಸುತ್ತಿರುವ ಅಜ್ಜಿ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ನಗರದಲ್ಲಿ ಈಚೆಗೆ ಹತ್ಯೆಯಾದ ಬಜರಂಗದಳದ ಕಾರ್ಯಕರ್ತ ಹರ್ಷ ಅವರ ಕುಟುಂಬಕ್ಕೆ ರಾಜ್ಯದ ವಿವಿಧೆಡೆಯಿಂದ ನೆರವಿನ ಮಹಾಪೂರವೇ ಹರಿದು ಬರುತ್ತಿದೆ. ಇದ್ದೊಂದೆ ಏಳು ವರ್ಷಗಳ ಹಿಂದೆ ಕೋಮು ದ್ವೇಷಕ್ಕೆ ಹತ್ಯೆಯಾಗಿದ್ದ ಬಜರಂಗದಳದ ಕಾರ್ಯಕರ್ತ ಆಲ್ಕೊಳದ ವಿಶ್ವನಾಥ ಶೆಟ್ಟಿ ಅವರ ತಾಯಿ ಮೀನಾಕ್ಷಿ ಅವರು ಚಿಂದಿ ಆಯ್ದು ಬಂದ ಹಣದಲ್ಲಿ ಮೊಮ್ಮಗನನ್ನು ಓದಿಸಲು ಹೆಣಗಾಡುತ್ತಿದ್ದಾರೆ.



ವಿಶ್ವನಾಥ ಶೆಟ್ಟಿ

ಶಿವಮೊಗ್ಗ ನಗರದಲ್ಲಿ 2015ರಲ್ಲಿ ನಡೆದ ಪಿಎಫ್ಐ ಸಂಘಟನೆ ವಿರುದ್ಧದ ರಣಕೇಳಿ ಭಾಗವಹಿಸಿ ಹಿಂದಿರುಗುತ್ತಿದ್ದ ಕೆಲವರು ರಾಜಬೀದಿ ಬಳಿ ವಿಶ್ವನಾಥ ಶೆಟ್ಟಿ ಅವರನ್ನು ಹತ್ಯೆ ಮಾಡಿದ್ದರು. ಆಗ ರಾಜ್ಯ ಸರ್ಕಾರ ₹ 5 ಲಕ್ಷ ಪರಿಹಾರ ನೀಡಿತ್ತು. ಆ ಹಣವೂ ಕಾಯಿಲೆಯಿಂದ ನರಳುತ್ತಿದ್ದ ಅವರ ಪತ್ನಿಯ ಚಿಕಿತ್ಸೆಗೆ ಖರ್ಚಾಗಿತ್ತು. ಕೊನೆಗೆ ಅವರೂ ಮೃತಪಟ್ಟರು.



ಶಿವಮೊಗ್ಗದಲ್ಲಿ 2015ರಲ್ಲಿ ಕೋಮುದ್ವೇಷಕ್ಕೆ ಬಲಿಯಾಗಿದ್ದ ವಿಶ್ವನಾಥ್ ಶೆಟ್ಟಿ ಮನೆಗೆ ಶನಿವಾರ ಭೇಟಿ ನೀಡಿದ ಜೆಡಿಎಸ್ ಮುಖಂಡ ಎಂ.ಶ್ರೀಕಾಂತ್ ಅವರು ಮೀನಾಕ್ಷಿ ಅವರ ಯೋಗಕ್ಷೇಮ ವಿಚಾರಿಸಿದರು

ಅವರ ತಾಯಿ ಮೀನಾಕ್ಷಿ ಇಂದಿಗೂ ಚಿಂದಿ ಆಯ್ದು ಬಂದ ಹಣದಲ್ಲಿ ಬದುಕಿನ ಬಂಡಿ ಸಾಗಿಸಲು ನಿತ್ಯ ಹೋರಾಡುತ್ತಿದ್ದಾರೆ.

ಹರ್ಷ ಹತ್ಯೆಯಾದ ಬಳಿಕ ರಾಜ್ಯದ ವಿವಿಧೆಡೆಯಿಂದ ಅವರ ಮನೆಗೆ ಬರುತ್ತಿರುವ ನಾಯಕರು ಹಣಕಾಸಿನ ನೆರವು ನೀಡುತ್ತಿದ್ದಾರೆ. ನೆರವಿನ ಪ್ರಮಾಣ ₹ 1 ಕೋಟಿ ದಾಟಿದೆ. ಆದರೆ, ವಿಶ್ವನಾಥ್ ಅವರ ತಾಯಿ ಮಾತ್ರ ಪುಟ್ಟ ಮನೆಯಲ್ಲಿ 'ಕತ್ತಲೆಯಲ್ಲೇ' ಬದುಕು ಸಾಗಿಸುತ್ತಿದ್ದಾರೆ.

ವಿಶ್ವನಾಥ್ ಅವರ ತಾಯಿ ಇದ್ದ ಒಬ್ಬ ಮೊಮ್ಮಗನನ್ನು ಕೂಡ್ಲಿ ವಸತಿ ಶಾಲೆಯಲ್ಲಿ ಬಿಟ್ಟು ಓದಿಸುತ್ತಿದ್ದಾರೆ. ನಗರದಲ್ಲಿ ನಿತ್ಯವೂ ಚಿಂದಿ ಆಯ್ದು ಬಂದ ಹಣವನ್ನು ಮೊಮ್ಮಗನಿಗೆ ಕಳುಹಿಸುತ್ತಿದ್ದಾರೆ.

ದುಡಿದು ಕುಟುಂಬ ಮುನ್ನಡೆಸಬೇಕಾಗಿದ್ದ ಮಗನನ್ನು ಕಳೆದುಕೊಂಡ ಬಳಿಕ ತಾಯಿ ಮೀನಾಕ್ಷಿ ಅವರ ಹೆಗಲಿಗೇ ಸಂಸಾರ ಸರಿದೂಗಿಸಿಕೊಂಡು ಹೋಗುವ ಭಾರ ಬಿದ್ದಿತ್ತು. ಮಗನನ್ನು ಕಳೆದುಕೊಂಡ ಬಳಿಕ ಹೇಳಿಕೊಳ್ಳುವಂತಹ ನೆರವಿನ ಹಸ್ತವನ್ನು ಯಾರೂ ಚಾಚದೇ ಇರುವುದರಿಂದ ಚಿಂದಿ ಆಯ್ದು ಬದುಕು ಸಾಗಿಸುವುದು ಅವರಿಗೆ ಅನಿವಾರ್ಯವಾಗಿತ್ತು.

ವಿದ್ಯುತ್ ಸಂಪರ್ಕ ಕಡಿತ: ವಿದ್ಯುತ್ ಬಿಲ್ ಕಟ್ಟದ ಕಾರಣ ಮೂರು ವರ್ಷಗಳಿಂದ ಮನೆಯ ವಿದ್ಯುತ್ ಸಂಪರ್ಕವೂ ಕಡಿತಗೊಂಡಿತ್ತು. ನಲ್ಲಿ ನೀರು ಕೂಡ ಬಂದ್ ಆಗಿತ್ತು. ಮನೆ ಸುಣ್ಣ- ಬಣ್ಣ ಕಾಣದೇ ಬೀಳುವ ಸ್ಥಿತಿಗೆ ಬಂದಿತ್ತು. ಈ ವಿಷಯ ತಿಳಿದ ಜೆಡಿಎಸ್ ಮುಖಂಡ ಎಂ. ಶ್ರೀಕಾಂತ್ ಅವರು ಶನಿವಾರ ಇವರ ಮನೆಗೆ ಭೇಟಿ ನೀಡಿ ನೆರವಿನ ಹಸ್ತ ಚಾಚಿದರು. ವಿದ್ಯುತ್ ಶುಲ್ಕ, ನಲ್ಲಿ ಕಂದಾಯವನ್ನು ಭರಿಸಿದರು. ಮನೆಗೆ ಸುಣ್ಣ- ಬಣ್ಣ ಬಳಿಸಲು ಹಣಕಾಸಿನ ನೆರವು ನೀಡಿದರು.

ಸಂಜೆ 4ರವರೆಗೆ ಕರ್ಫ್ಯೂ ಸಡಿಲಿಕೆ

ನಗರದಲ್ಲಿ ಶನಿವಾರದಂತೆ ಭಾನುವಾರವೂ ಬೆಳಿಗ್ಗೆ 6ರಿಂದ ಸಂಜೆ 4ರವರೆಗೆ ಕರ್ಫ್ಯೂ ಸಡಿಲಿಸಲಾಗಿದೆ. ವ್ಯಾಪಾರ ವಹಿವಾಟು, ಸಂಚಾರಕ್ಕೆ ಅವಕಾಶ ನೀಡಲಾಗಿದೆ. ಫೆ.28ರಿಂದ ಶಾಲೆ, ಕಾಲೇಜು ಆರಂಭಿಸುವ ಕುರಿತು ಶೀಘ್ರ ನಿರ್ಧರಿಸಲಾಗುವುದು ಎಂದು ಜಿಲ್ಲಾಧಿಕಾರಿ ಸೆಲ್ವಮಣಿ ಮಾಹಿತಿ ನೀಡಿದರು.

ಕೀಟಲೆ ಮಾಡಲುಹೋಗಿ ಸಂಕಷ್ಟ ತಂದುಕೊಂಡ ಯುವತಿ!

ಸಹಪಾಠಿ ಬಳಿ ಬಜರಂಗದಳದ ಕಾರ್ಯಕರ್ತ ಹರ್ಷನ ಮೊಬೈಲ್ ನಂಬರ್ ಪಡೆದು ಫೆ.20ರ ರಾತ್ರಿ ಹಾಸ್ಟೆಲ್ ಕೊಠಡಿಯಲ್ಲಿ ಗೆಳತಿಯರ ಜತೆ ಕುಳಿತು ಕೀಟಲೆ ಮಾಡಲು ಹೋಗಿದ್ದ ನಗರದ ಪ್ರತಿಷ್ಠಿತ ಕಾಲೇಜೊಂದರಲ್ಲಿ ಅರೆ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಯುವತಿ ಸಂಕಷ್ಟವನ್ನು ತಂದುಕೊಂಡಿದ್ದಾಳೆ.

ಹರ್ಷನ ಮನೆಯ ಬಳಿ ಇರುವ ಕಾಲೇಜಿನ ಸಹಪಾಠಿ ಮೂಲಕ ಆತನ ಹಿಂದುತ್ವದ ಹೋರಾಟ, ಸಂಘಟನಾ ಚತುರತೆ ಬಗ್ಗೆ ತಿಳಿದಿದ್ದ ಜಿಲ್ಲೆಯವರೇ ಆದ ಹಿಂದುತ್ವವನ್ನು ಪ್ರತಿಪಾದಿಸುತ್ತಿದ್ದ ಯುವತಿಯು ಅಂದು ವಿಡಿಯೊ ಕಾಲ್ ಮಾಡಿ ಮಾತನಾಡಿದ್ದಾರೆ. ಪರಿಚಯವಿಲ್ಲದ ಈ ಯುವತಿಯರನ್ನು ನೋಡುತ್ತಿದ್ದಂತೆ ಎಂದು ಹರ್ಷ ಸ್ವೀಕರಿಸದೆ ತೋರಿಸಿ ಕೇಳಿದ್ದಾರೆ. ಮಾತನಾಡುತ್ತಾ ನಡೆದುಕೊಂಡು ಹೋದಾಗಲೇ ಹರ್ಷನ ಹತ್ಯೆಯಾಗಿದೆ ಎಂದು ಮೂಲಗಳು ತಿಳಿಸಿವೆ. ತಾನು ಕರೆ ಮಾಡಿದ ಸಮಯದಲ್ಲೇ ಹತ್ಯೆ ನಡೆದ ವಿಷಯ ತಿಳಿದು ಯುವತಿ ಆಘಾತಕ್ಕೆ ಒಳಗಾಗಿದ್ದಾಳೆ. ತಾನೇ ಪೊಲೀಸರನ್ನು ಸಂಪರ್ಕಿಸಿ ವಿಷಯ ಮನವರಿಕೆ ಮಾಡಿಕೊಟ್ಟಿದ್ದಾಳೆ. ವಿಚಾರಣೆಗೆ ಕರೆದಾಗ ಠಾಣೆಗೆ ಬರಬೇಕು ಎಂಬ ಷರತ್ತಿನ ಮೇಲೆ ಯುವತಿಯನ್ನು ಪೊಲೀಸರು ಕಳುಹಿಸಿಕೊಟ್ಟಿದ್ದಾರೆ.

'ಕಾಂಗ್ರೆಸ್ ಬೆಂಬಲಿಸಿದರೆ ತಾಲಿಬಾನ್ ಅಧಿಕಾರಕ್ಕೆ'

ಶಿವಮೊಗ್ಗ: 'ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿದರೆ ತಾಲಿಬಾನ್ ಸರ್ಕಾರ ಅಧಿಕಾರ ಪಡೆದಂತೆ. ಈ ಕುರಿತು ಜನರು ಜಾಗೃತರಾಗಬೇಕು' ಎಂದು ಮೈಸೂರು ಸಂಸದ ಪ್ರತಾಪ್ ಸಿಂಹ ಎಚ್ಚರಿಸಿದರು.

ಮೃತ ಹರ್ಷ ಮನೆಗೆ ಭೇಟಿ ನೀಡಿ, ₹ 5 ಲಕ್ಷ ಆರ್ಥಿಕ ನೆರವು ನೀಡಿದ ನಂತರ ಸುದ್ದಿಗಾರರ ಜತೆ ಮಾತನಾಡಿದರು.

ಮುಸ್ಲಿಂ ಪಕ್ಷವೆಂದು ಕಾಂಗ್ರೆಸ್ ಘೋಷಿಸಲಿ: ಶೆಟ್ಟರ್ ಸವಾಲು

ಹುಬ್ಬಳ್ಳಿ: 'ಮತ ಬ್ಯಾಂಕ್‌ಗಾಗಿ ಮುಸ್ಲಿಮರನ್ನು ಓಲೈಸುತ್ತಿರುವ ಕಾಂಗ್ರೆಸ್ ಮುಸ್ಲಿಮರ ಪಕ್ಷವೆಂದು ಬಹಿರಂಗವಾಗಿ ಘೋಷಣೆ ಮಾಡಲಿ' ಎಂದು ಶಾಸಕ ಜಗದೀಶ ಶೆಟ್ಟರ್ ಸವಾಲು ಹಾಕಿದರು.

ಕಾಂಗ್ರೆಸ್ ಜನವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಶನಿವಾರ ನಗರದಲ್ಲಿ ಬಿಜೆಪಿ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು 'ಶಿವಮೊಗ್ಗದಲ್ಲಿ ಬಜರಂಗ ದಳ ಕಾರ್ಯಕರ್ತ ಹರ್ಷ ಹತ್ಯೆಯಾದಾಗ ಯಾವೊಬ್ಬ ಕಾಂಗ್ರೆಸ್ ನಾಯಕರು ಮಾನವೀಯ ದೃಷ್ಟಿಯಿಂದಲೂ ಅವರ ಮನೆಗೆ ತೆರಳಿ ಸಾಂತ್ವನ ಹೇಳಲಿಲ್ಲ. ಎಸ್‌ಡಿಪಿಐ ಮತ್ತು ಪಿಎಫ್ಐ ಸಂಘಟನೆಗಳಿಗೆ ಕುಮ್ಮಕ್ಕು ನೀಡುತ್ತಿದೆ. ಕಾಂಗ್ರೆಸ್, ಮುಸ್ಲಿಮರ ಪಕ್ಷವೆಂದು ಘೋಷಿಸಿಕೊಂಡರೆ ಎಲ್ಲಾ ಹಿಂದೂಗಳಾದರೂ ಒಂದಾಗುತ್ತಾರೆ' ಎಂದರು.

'ಪ್ರತಿಭಟನೆ ನೆಪದಲ್ಲಿ ವಿಧಾನಸಭೆ ಅಧಿವೇಶನವನ್ನು ಕಾಂಗ್ರೆಸ್ ಹಾಳು ಮಾಡಿ, ಈಗ ಮತ್ತೆ ಮೇಕೆದಾಟು ಪಾದಯಾತ್ರೆ ಮಾಡಲು ಹೊರಟಿದೆ. ರಾಜ್ಯದ ಜ್ವಲಂತ ಸಮಸ್ಯೆಗಳ ಅಧಿವೇಶನದಲ್ಲಿ ಚರ್ಚೆ ಮಾಡಬಹುದಿತ್ತು. ಹಿಜಾಬ್ ಬಗ್ಗೆ ಕಾಂಗ್ರೆಸ್ ತನ್ನ ನಿಲುವು ಸ್ಪಷ್ಟಪಡಿಸಬೇಕಿತ್ತು' ಎಂದರು.

'ರಾಷ್ಟ್ರ ಈಶ್ವರಪ್ಪ ಹೇಳಿಕೆಗೆ ಹೆಮ್ಮೆ ಇದೆ'

ಉಡುಪಿ: 'ಭವಿಷ್ಯದಲ್ಲಿ ಭಗವಾಧ್ವಜ ರಾಷ್ಟ್ರಧ್ವಜವಾಗಬಹುದು ಎಂಬ ಸಚಿವ ಈಶ್ವರಪ್ಪ ಹೇಳಿಕೆ ತಪ್ಪಲ್ಲ. ಮುಂದೊಂದು ದಿನ ಭಗವಾಧ್ವಜ ರಾಷ್ಟ್ರಧ್ವಜವಾದರೂ ಆಗಬಹುದು' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್ ಸಮರ್ಥಿಸಿಕೊಂಡರು.



ಕುಯಿಲಾಡಿ ಸುರೇಶ್ ನಾಯಕ್

ಹರ್ಷ ಕೊಲೆ ಖಂಡಿಸಿ ಶನಿವಾರ ಮಣಿಪಾಲದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿ, 'ಈಶ್ವರಪ್ಪನವರು ನಾಳೆ ಅಥವಾ ನಾಡಿದ್ದೇ ಭಗವಾಧ್ವಜ ರಾಷ್ಟ್ರಧ್ವಜವಾಗಲಿದೆ ಎಂದು ಹೇಳಿಲ್ಲ. ಮುಂದೆ ಆಗಬಹುದು ಎಂದಿದ್ದಾರಷ್ಟೆ. ಅವರ ಹೇಳಿಕೆಯ ಬಗ್ಗೆ ಪಕ್ಷಕ್ಕೆ ಹೆಮ್ಮೆ ಇದೆ. ಕಾಂಗ್ರೆಸ್ ನಾಯಕರು ಅವರ ಹೇಳಿಕೆ ಮುಂದಿಟ್ಟುಕೊಂಡು ವಿಧಾನಸಭೆ ಅಧಿವೇಶನಕ್ಕೆ ಅಡ್ಡಿಪಡಿಸಿದ್ದು ಖಂಡನೀಯ' ಎಂದರು.

100 ವರ್ಷಗಳ ಹಿಂದೆ ರಾಷ್ಟ್ರಧ್ವಜದ ಕಲ್ಪನೆ ಇರಲಿಲ್ಲ. ಸ್ವಾತಂತ್ರ್ಯಾನಂತರ ಅಬ್ದುಲ್ ಗಫೂರ್‌ಖಾನ್ ನೇತೃತ್ವದ ಸಮಿತಿ ಭಗವಾಧ್ವಜವನ್ನೇ ರಾಷ್ಟ್ರಧ್ವಜವನ್ನಾಗಿ ಮಾಡುವಂತೆ ವರದಿ ನೀಡಿತ್ತು. ಆದರೆ, ವರದಿಯನ್ನು ನೆಹರೂ ತಿರಸ್ಕರಿಸಿದರು ಎಂದು ಕುಯಿಲಾಡಿ ಹೇಳಿದರು.

ದಸಂಸ ಒಕ್ಕೂಟ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಹೇಳಿಕೆ

'ಅನ್ಯ ಉದ್ದೇಶಕ್ಕೆ ಪರಿಶಿಷ್ಟರ ಹಣ ಬಳಕೆಗೆ ತಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದರೆ ಪರಿಶಿಷ್ಟರಿಗೆ ಮೀಸಲಿಟ್ಟ ಅನುದಾನ ಅನ್ಯ ಉದ್ದೇಶಕ್ಕೆ ಬಳಕೆ ಆಗದಂತೆ ತಡೆಯಲಾಗುವುದು' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ ನೀಡಿದರು.

ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಒಕ್ಕೂಟ (ದಸಂಸ ಒಕ್ಕೂಟ) ಶನಿವಾರ ಹಮ್ಮಿಕೊಂಡಿದ್ದ 'ಎಸ್‌ಸಿಪಿ, ಟಿಎಸ್‌ಪಿ ಕಾಯ್ದೆಯ ಕಡ್ಡಾಯ ಅನುಷ್ಠಾನ- ಒಂದು ಚರ್ಚೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಅನುಸೂಚಿತ ಜಾತಿಗಳ ಉಪ ಯೋಜನೆ (ಎಸ್‌ಸಿಪಿ) ಮತ್ತು ಬುಡಕಟ್ಟು ಉಪಯೋಜನೆ (ಟಿಎಸ್‌ಪಿ) ಕಾಯ್ದೆ-2013ರಲ್ಲಿ ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಲು ಅವಕಾಶ ಕಲ್ಪಸುವ 7 (ಡಿ) ನಿಯಮ ತೆಗೆದುಹಾಕುತ್ತೇವೆ' ಎಂದರು.

'ಈ ನಿಯಮದಲ್ಲಿ ವಿಭಜಿಸಲಾಗದ ಮೂಲಸೌಕರ್ಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ನಿರ್ಧರಿಸ ಬಹುದಾದ ಯೋಜನಾ ವೆಚ್ಚದ ಒಂದು ಭಾಗವನ್ನು ಎಸ್‌ಸಿಪಿ ಮತ್ತು ಟಿಎಸ್‌ಪಿಗೆ ಒದಗಿಸಲಾಗಿದೆ ಎಂದು ಭಾವಿಸತಕ್ಕದ್ದು ಎಂದಿದೆ. ಈ ನಿಯಮವನ್ನು ಬಳಸಿ ಕಾಯ್ದೆಯಡಿ ಮೀಸಲಿಟ್ಟ ಅನುದಾನವನ್ನು ರಸ್ತೆ, ನೀರಾವರಿ ಯೋಜನೆಗಳಿಗೆ ಬಳಸುವ ಜೊತೆಗೆ ದುರುಪಯೋಗಕ್ಕೂ ಅವಕಾಶವಾಗುತ್ತಿದೆ. ಇದರಿಂದ ಪರಿಶಿಷ್ಟ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ' ಎಂದರು.

'ಪರಿಶಿಷ್ಟರಿಗೆ ಮತ ಹಾಕುವ ಸ್ವಾತಂತ್ರ್ಯ ಸಿಕ್ಕರೆ ಸಾಲದು. ಸಾಮಾಜಿಕ ಸ್ವಾತಂತ್ರ್ಯ ಸಿಗಬೇಕು. ಆಗ ಮಾತ್ರ ಜಾತ್ಯತೀತ ಸಮಾಜದ ನಿರ್ಮಾಣ ಸಾಧ್ಯ. ಸಮಾಜದಲ್ಲಿ ಅಸಮಾನತೆ ಹೋಗಲಾಡಿಸಬೇಕು. ದೇಶದ ಸಂಪತ್ತು, ಶಿಕ್ಷಣ ಹಂಚಿಕೆಯಾಗಬೇಕು' ಎಂದರು.



ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ಚಾಲನೆ ನೀಡಿದರು. ಪ್ರೊ. ಕೃಷ್ಣರಾಜು, ಮಾವಳ್ಳಿ ಶಂಕರ್, ಗುರುಪ್ರಸಾದ್ ಕೆರೆಗೋಡು, ವಿ.ನಾಗರಾಜ್, ಡಿ.ಚಂದ್ರಶೇಖರಯ್ಯ ಇದ್ದರು —ಪ್ರಜಾವಾಣಿ ಚಿತ್ರ

ಎಸಿಪಿ, ಟಿಎಸ್‌ಪಿ ಕಾಯ್ದೆ ಕುರಿತು ರಾಜ್ಯಸಭೆ, ಲೋಕಸಭೆಯಲ್ಲಿ ಪ್ರಸ್ತಾಪ ಆಗಬೇಕು. ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ಗಾತ್ರ ಅನುದಾನ ಹಂಚಿಕೆ ಕುರಿತು ದೇಶದೆಲ್ಲೆಡೆ ಚರ್ಚೆ ಆಗಬೇಕು

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

ವಿಚಾರ ಮಂಡಿಸಿದ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ. ಚಂದ್ರಶೇಖರಯ್ಯ, 'ಕಾಯ್ದೆಯಡಿ ಮೀಸಲಿಡುವ ಅನುದಾನವನ್ನು ಮುಕ್ತ ಅನುದಾನವಾಗಿ ತೆಗೆದಿಡಬೇಕು. ಬಳಿಕ ಪರಿಶಿಷ್ಟ ಸಮುದಾಯ ಅಭಿವೃದ್ಧಿ ಕುರಿತ ದತ್ತಾಂಶಗಳನ್ನು ಸಂಗ್ರಹಿಸಿ, 10ರಿಂದ 15 ಕಾರ್ಯಕ್ರಮಗಳಿಗೆ ಮಾತ್ರ ಕ್ರಿಯಾಯೋಜನೆ ತಯಾರಿಸಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಆರ್ಥಿಕ ಇಲಾಖೆಗೆ ಸಲ್ಲಿಸಿ ಅನುದಾನ ಬಳಕೆ ಆಗುವಂತೆ ಮಾಡಬೇಕು' ಎಂದು ಸಲಹೆ ನೀಡಿದರು.

ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ದಸಂಸ (ಅಂಬೇಡ್ಕರ್‌ವಾದ) ಮಾವಳ್ಳಿ ಶಂಕರ್, ರಾಜ್ಯ ಸಂಯೋಜಕ ವಿ. ನಾಗರಾಜು, ಭಾರತೀಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆಯ ಪ್ರೊ. ಕೃಷ್ಣರಾಜು ಇದ್ದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಪರೀಕ್ಷೆ: ವಸ್ತ್ರಸಂಹಿತೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ವಸ್ತ್ರಸಂಹಿತೆ ನಿಗದಿಪಡಿಸಲಾಗಿದೆ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ತಿಳಿಸಿದ್ದಾರೆ. ಮಾರ್ಚ್ 12ರಿಂದ 16ರವರೆಗೆ ಪರೀಕ್ಷೆ ನಡೆಯಲಿದೆ.

ಪರೀಕ್ಷೆಗೆ ಹಾಜರಾಗುವ ಪುರುಷ, ಮಹಿಳಾ ಅಭ್ಯರ್ಥಿಗಳು ತುಂಬು ತೋಳಿನ ಉಡುಪು, ಶೂ, ಆಭರಣ (ಪದಕ, ಮೂಗುಬೊಟ್ಟು, ಕಿವಿಯೋಲೆ, ನೆಕ್ಲೇಸ್, ಬ್ರೇಸ್ಲೆಟ್) ಮತ್ತು ಆಲಂಕಾರಿಕ ಉಡುಪು ಧರಿಸುವುದನ್ನು ನಿಷೇಧಿಸಲಾಗಿದೆ.

ಕೋವಿಡ್ ಮಾರ್ಗದರ್ಶಿ ಪಾಲಿಸಬೇಕಾಗಿರುವುದರಿಂದ ಅರೆಪಾರದರ್ಶಕ ಸರ್ಜಿಕಲ್ ಮಾಸ್ಕ್ (ಎನ್-95 ಮತ್ತು ಇತರ ಬಗೆಯ ಮಾಸ್ಕ್ ನಿಷಿದ್ಧ) ಅರೆದೋಳಿನ ಅಂಗಿ ಮತ್ತು ಸಾದಾ ಪ್ಯಾಂಟ್ ಹಾಗೂ ಚಪ್ಪಲಿ, ಮಹಿಳಾ ಅಭ್ಯರ್ಥಿಗಳಿಗೆ ಸರ್ಜಿಕಲ್ ಮಾಸ್ಕ್, ಅರೆದೋಳಿನ ಉಡುಪು ಸೂಚಿಸಲಾಗಿದೆ.

ಪರೀಕ್ಷಾ ಕೊಠಡಿಗೆ ಅಭ್ಯರ್ಥಿಗಳು ಎಲೆಕ್ಟ್ರಾನಿಕ್ ವಸ್ತುಗಳು (ಮೊಬೈಲ್, ಪೆನ್ ಡ್ರೈವ್, ಇಯರ್ ಫೋನ್, ಮೈಕ್ರೋಫೋನ್, ಬ್ಲೂಟೂತ್, ಕೈ ಗಡಿಯಾರ), ಆಹಾರ ಪದಾರ್ಥಗಳು, ಸ್ಟೇಷನರಿ ವಸ್ತುಗಳು (ಪೆನ್ಸಿಲ್, ಕಾಗದ, ಎರೇಸರ್, ಇಂಚುಪಟ್ಟಿ, ಜಾಮಿತ್ರಿ ಪೆಟ್ಟಿಗೆ, ಕ್ಯಾಲ್ಕುಲೇಟರ್, ಲಾಗ್ ಟೇಬಲ್) ಮತ್ತು ವೈಯಕ್ತಿಕ ವಸ್ತುಗಳನ್ನು (ವ್ಯಾಲೆಟ್, ಅಲಂಕಾರಿಕ ಕನ್ನಡಕ, ಬೆಲ್ಟ್, ಟೋಪಿ, ಕ್ಯಾಮರಾ, ಆಭರಣಗಳು) ತರುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಯಾವುದೇ ಬ್ರ್ಯಾಂಡ್ ಹೆಸರಿಲ್ಲದ ಸಾದಾ ಬಾಟಲಿಯಲ್ಲಿ ಕುಡಿಯುವ ನೀರನ್ನು ಪರೀಕ್ಷಾ ಕೊಠಡಿಗೆ ತೆಗೆದುಕೊಂಡು ಬರಲು ಅವಕಾಶ ಕೊಡಲಾಗಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.


ಅಭ್ಯರ್ಥಿಗಳು ಇತ್ತೀಚಿನ ಎರಡು ಭಾವಚಿತ್ರ, ಪ್ರವೇಶಪತ್ರ, ಗುರುತಿನ ಚೀಟಿ ಕಡ್ಡಾಯವಾಗಿ ತರಬೇಕು. ಪ್ರವೇಶಪತ್ರವನ್ನು ಇದೇ 28ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದೂ ಹೇಳಿದ್ದಾರೆ.

ಕರ್ನಾಟಕದ ಅನಗತ್ಯ ವಿವಾದಕ್ಕೆ ಬೆಂಬಲ ಬೇಡ: ವೆಂಕಯ್ಯ ನಾಯ್ಡು

ಬೆಂಗಳೂರು: 'ಕರ್ನಾಟಕದಲ್ಲಿ ಈಗ ನಡೆಯುತ್ತಿರುವಂತಹ ಅನಗತ್ಯ ವಿವಾದಗಳನ್ನು ಯಾರೂ ಬೆಂಬಲಿಸ ಬಾರದು. ವಿದ್ಯಾರ್ಥಿಗಳು ಶಿಸ್ತು, ಸಂಯಮ, ಬದ್ಧತೆ ಮೈಗೂಡಿಸಿಕೊಂಡು ಜೀವನದಲ್ಲಿ ಯಶಸ್ಸು ಸಾಧಿಸಬೇಕು' ಎಂದು ಉಪ ರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಹೇಳಿದರು.

ಗ್ರೀನ್‌ವುಡ್ ಹೈ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಶನಿವಾರ ನಡೆದ ಅತ್ಯಾಧುನಿಕ ಕ್ರೀಡಾ ಮತ್ತು ರಂಗ ಚಟುವಟಿಕೆ ಕೇಂದ್ರ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹಿಜಾಬ್ ಮತ್ತು ಕೇಸರಿ ಶಾಲು ಧರಿಸಲು ಅವಕಾಶ ಕೋರಿ ನಡೆಸುತ್ತಿರುವ 'ವಸ್ತ್ರ ರಾಜಕೀಯ'ವನ್ನು ಉಲ್ಲೇಖಿಸದೇ ಪರೋಕ್ಷವಾಗಿ ಈ ಮಾತು ಹೇಳಿದರು.

'ನಮ್ಮ ಸಂಸ್ಕೃತಿ, ಪರಂಪರೆ, ಧರ್ಮವನ್ನು ನಾವೆಲ್ಲರೂ ಜೀವನದಲ್ಲಿ ಪಾಲನೆ ಮಾಡಬೇಕು. ಮೌಲ್ಯಗಳ ಅಧಃಪತನವು ಜಗತ್ತಿನಲ್ಲಿ ಮಾನವೀಯತೆಗೆ ಕಂಟಕವಾಗಿದೆ. ನಾವು ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಪರಂಪರೆಯನ್ನು ಮರುಸ್ಥಾಪಿಸಬೇಕು. ಸಂಸ್ಕೃತಿಯನ್ನು ಎಲ್ಲರಿಗೂ ಪರಿಚಯಿಸಬೇಕು. ನಾವು ಭಾರತೀಯರಾಗಿರುವುದಕ್ಕೆ ಹೆಮ್ಮೆ ಪಡಬೇಕು' ಎಂದರು.




ವೆಂಕಯ್ಯ ನಾಯ್ಡು

'ಶಾಲೆಯಲ್ಲಿ ಎಲ್ಲ ಮಕ್ಕಳೂ ಸಮವಸ್ತ್ರವನ್ನೇ ಧರಿಸಬೇಕು. ಶಾಲಾ ಆಡಳಿತ ಮಂಡಳಿ ಯಾವುದೇ ಸಮವಸ್ತ್ರ ನಿಗದಿಪಡಿಸಿದ್ದರೂ ಅದನ್ನು ಪಾಲಿಸಬೇಕು' ಎಂದು ಹೇಳಿದರು.

'ಹಲವು ಭಾಷೆಗಳಿವೆ. ಅವುಗಳನ್ನು ಉತ್ತೇಜಿಸಬೇಕು. ವಿವಿಧತೆಯಲ್ಲಿ ಏಕತೆ ಭಾರತದ ವಿಶೇಷ. ಜಾತಿ, ಮತ, ಧರ್ಮ, ಲಿಂಗ ಎಲ್ಲದರ ಹೊರತಾಗಿ ನಾವು ಭಾರತೀಯರು ಎಂಬುದನ್ನು ಮರೆಯಬಾರದು. ಈ ವಿಚಾರದಲ್ಲಿ ತಾರತಮ್ಯ ಇರಕೂಡದು' ಎಂದರು.

'ಪರಿಸರ ಮತ್ತು ಸಂಸ್ಕೃತಿಯನ್ನು ರಕ್ಷಿಸಬೇಕು. ಆಗ ಮಾತ್ರ ಭವಿಷ್ಯ ಉಜ್ವಲವಾಗಿರುತ್ತದೆ. ಮಕ್ಕಳು ಮಾತೃಭಾಷೆಯನ್ನು ಮರೆಯಬಾರದು. ಎಷ್ಟಾದರೂ ಭಾಷೆಗಳನ್ನು ಕಲಿಯಿರಿ. ಆದರೆ, ಮಾತೃಭಾಷೆಯಿಂದ ದೂರವಾಗ ಬಾರದು' ಎಂದು ಸಲಹೆ ನೀಡಿದರು.



ಉಕ್ರೇನ್‌ನ ಕೀವ್ ನಗರದಲ್ಲಿ ಕಟ್ಟಡದ ಮೇಲೆ ಶೆಲ್ ದಾಳಿಯಿಂದಾಗಿ ಬೆಂಕಿ ಹೊತ್ತಿಕೊಂಡಿದ್ದು, ಅಗ್ನಿಶಾಮಕ ಸೇವೆಯ ಸಿಬ್ಬಂದಿ ಬೆಂಕಿ ನಂದಿಸಿದರು – ರಾಯಿಟರ್ಸ್ ಚಿತ್ರ



ಡಾನ್ಯೂಬ್ ನದಿಯ ಮೂಲಕ ದೋಣಿಯಲ್ಲಿ ರೊಮೇನಿಯಾಗೆ ಬಂದಿಳಿದ ಉಕ್ರೇನ್‌ನ ವಲಸಿಗರ ಸಮೂಹ. ಹಿನ್ನೆಲೆಯಲ್ಲಿ ಉಕ್ರೇನ್ ಗಡಿಯಾಗಿರುವ ಒರ್ ಲಿವ್ಕಾ ಕಾಣಬಹುದು –ಎಎಫ್‌ಪಿ ಚಿತ್ರ

ಉಕ್ರೇನ್ ಬಿಕ್ಕಟ್ಟು: ದಿನದ ಬೆಳವಣಿಗೆಗಳು

- ‘ನಮ್ಮ ಕರೆಗೆ ಉಕ್ರೇನ್ ಓಗೊಟ್ಟು, ಶಸ್ತ್ರಾಸ್ತ್ರ ಕೆಳಗಿಟ್ಟರೆ ಯಾವುದೇ ಕ್ಷಣದಲ್ಲಿ ಮಾತುಕತೆಗೆ ಸಿದ್ಧ’ ಎಂದು ರಷ್ಯಾ ಪುನರುಚ್ಚಾರ
- ಉಕ್ರೇನ್ ಅಧ್ಯಕ್ಷ ವೊಲೊಡಿಮೀರ್ ಝೆಲೆನ್ಸ್ಕಿ ಅವರಿಂದ ಶರಣಾಗತಿ ನಿರಾಕರಣೆ
- ಕುಟುಂಬ ಸಮೇತ ದೇಶದಿಂದ ಸ್ಥಳಾಂತರವಾಗಲು ಅಮೆರಿಕ ನೀಡಿದ ಸಲಹೆಯನ್ನು ತಳ್ಳಿ ಹಾಕಿದ ಝೆಲೆನ್ಸ್ಕಿ
- ರಷ್ಯಾ ಹಿಮ್ಮೆಟ್ಟಿಸಲು ಶಸ್ತ್ರಾಸ್ತ್ರ ಪೂರೈಸುವಂತೆ ಅಮೆರಿಕ ಮತ್ತು ಮಿತ್ರ ರಾಷ್ಟ್ರಗಳಿಗೆ ಉಕ್ರೇನ್ ಮೊರೆ
- ರಷ್ಯಾ ದಾಳಿ ಮುಂದುವರಿದಿರುವ ಹಿನ್ನೆಲೆಯಲ್ಲಿ ಉಕ್ರೇನ್‌ನಲ್ಲಿ ಇಂಟರ್‌ನೆಟ್ ಸೇವೆಗಳಿಗೆ ಅಡೆತಡೆ
- ಭೂಗತ ಹ್ಯಾಕರ್‌ಗಳಿಂದ ರಷ್ಯಾ ಸರ್ಕಾರದ ವೆಬ್‌ಸೈಟ್‌ಗಳ ಮೇಲೆ ಸೈಬರ್ ದಾಳಿ ಘೋಷಣೆ
- ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ಹಣ ಸಂಪಾದಿಸುವ ರಷ್ಯಾದ ಮಾಧ್ಯಮಗಳಿಗೆ ಫೇಸ್‌ಬುಕ್ ನಿರ್ಬಂಧ
- ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ನಾಗರಿಕರನ್ನು ಸ್ಥಳಾಂತರಿಸಲು ಎರಡು ಏರ್ ಇಂಡಿಯಾ ವಿಮಾನಗಳು ಕಾರ್ಯಾಚರಿಸಿದವು
- ಉಕ್ರೇನ್ ಬಿಕ್ಕಟ್ಟನ್ನು ಶಾಂತಿ ಮಾರ್ಗದಲ್ಲಿ ಬಗೆಹರಿಸಲು ಅಫ್ಗಾನಿಸ್ತಾನದ ತಾಲಿಬಾನ್ ಆಡಳಿತ ಸಲಹೆ
- ಉಕ್ರೇನ್ ಬಿಕ್ಕಟ್ಟು ಪರಿಣಾಮ ಮುಂದಿನ ತಿಂಗಳು ಬ್ರಿಟನ್‌ನಲ್ಲಿ ನಡೆಯಲಿರುವ ಹಲವು ರಾಷ್ಟ್ರಗಳ ವೈಮಾನಿಕ ತಾಲೀಮು ‘ಕೋಬ್ರಾ ವಾರಿಯರ್’ನಿಂದ ಹೊರಗುಳಿದ ಭಾರತೀಯ ವಾಯುಪಡೆ
- ಉಕ್ರೇನ್‌ನಲ್ಲಿ ಸಿಲುಕಿದ್ದ 219 ಭಾರತೀಯರು ತಾಯ್ನಾಡಿಗೆ ಏರ್ ಇಂಡಿಯಾ ವಿಮಾನದಲ್ಲಿ ವಾಪಸ್
- ಉಕ್ರೇನ್ ಇಟಲಿ ಬೆಂಬಲ ಘೋಷಣೆ, ಜೆಕ್ ಗಣರಾಜ್ಯವು ಉಕ್ರೇನ್‌ಗೆ 7.6 ಮಿಲಿಯನ್ ಯುರೋ ($ 8.6 ಮಿಲಿಯನ್) ಮೌಲ್ಯದ ರಕ್ಷಣಾ ಸಲಕರಣೆಗಳನ್ನು ಕಳುಹಿಸಲು ನಿರ್ಧಾರ
- ಫ್ರಾನ್ಸ್ ಕೂಡ ರಕ್ಷಣಾ ಉಪಕರಣಗಳನ್ನು ಉಕ್ರೇನ್‌ಗೆ ಕಳುಹಿಸುವುದಾಗಿ ಘೋಷಿಸಿದೆ
- ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ಗೆ ಹೋಗುತ್ತಿದ್ದ ಕಾರುಗಳಿಂದ ತುಂಬಿದ್ದ ಹಡಗನ್ನು ತಡೆ ಹಿಡಿದ ಫ್ರಾನ್ಸ್ ನೌಕಾ ಪಡೆ
- 2022ರ ವಿಶ್ವಕಪ್ ಫುಟ್‌ಬಾಲ್‌ನಲ್ಲಿ ರಷ್ಯಾ ವಿರುದ್ಧ ಆಡದಿರಲು ಪೋಲೆಂಡ್, ಸ್ವೀಡನ್ ನಿರ್ಧಾರ
- ಉಕ್ರೇನ್ ಮೇಲೆ ‘ಆಕ್ರಮಣ’ ಮತ್ತು ‘ದಾಳಿ’ ಎನ್ನುವ ಪದಗಳ ಬಳಕೆಗೆ ರಷ್ಯಾದಲ್ಲಿ ಮಾಧ್ಯಮಗಳಿಗೆ ನಿರ್ಬಂಧ
- ತನ್ನ ವಿರುದ್ಧ ನಿರ್ಬಂಧಗಳನ್ನು ವಿಧಿಸಿರುವ ರಾಷ್ಟ್ರಗಳೊಂದಿಗೆ ಬಾಹ್ಯಾಕಾಶ ಯೋಜನೆಗಳನ್ನು ಕೈಬಿಟ್ಟ ರಷ್ಯಾ
- ರಷ್ಯಾದ ಆಕ್ರಮಣ ವಿರೋಧಿಸಿ ವಿಶ್ವದ ಹಲವು ರಾಷ್ಟ್ರಗಳಲ್ಲಿ ನಾಗರಿಕರ ಪ್ರತಿಭಟನೆ

ಉಕ್ರೇನ್‌ನಿಂದ 50 ಸಾವಿರ ಜನರ ವಲಸೆ • ಪುರುಷರಿಗೆ ದೇಶ ತೊರೆಯದಂತೆ ನಿರ್ಬಂಧ

ಮುಂದಿನ ಹೆಜ್ಜೆ ಅಸ್ಪಷ್ಟ, ರೈಲುನಿಲ್ದಾಣವೇ ಮನೆ

ಜೆಮ್‌ಸಿಲ್, ಪೋಲೆಂಡ್ (ಎ.ಪಿ): ಉಕ್ರೇನ್‌ನ ಮೇಲೆ ವಾಯುದಾಳಿ ಮುಂದುವರಿದಿದ್ದು, ಯುದ್ಧದ ಕಾರ್ಮೋಡ ಇನ್ನಷ್ಟು ದಟ್ಟವಾಗುತ್ತಿದೆ. ವಾಯು ಭೀತಿಯಿಂದ ಸಾವಿರಾರು ನಿವಾಸಿಗಳು ಸುರಕ್ಷತೆ ಬಯಸಿ ನೆರೆ ದೇಶಗಳತ್ತ ವಲಸೆ ಹೋಗುತ್ತಿದ್ದಾರೆ.

ಕೆಲವರು ಬರಿಕಾಲಲ್ಲಿ, ಕೆಲವರು ಕಾರು, ಇನ್ನೂ ಕೆಲವರು ರೈಲು ಹೀಗೆ ಜನರು ಪೋಲೆಂಡ್ ಗಡಿಗೆ ಬಂದಿದ್ದಾರೆ. ಕೆಲವರು ತಮ್ಮ ಸಾಕಿಕೊಂಡಿದ್ದ ನಾಯಿಯನ್ನು ಕರೆತಂದಿದ್ದಾರೆ. ಗಡಿ ಭಾಗದಲ್ಲಿ ಸ್ವಯಂ ಸೇವಕರು ಅವರಿಗೆ ಆಹಾರ, ನೀರು ನೀಡಿ ಉಪಚರಿಸಿದ್ದಾರೆ.

ಈ ಪೈಕಿ ಕೆಲವರು ಈಗಾಗಲೇ ನೆರೆಯ ಪೋಲೆಂಡ್‌ನಲ್ಲಿ ನೆಲೆಯೂರಿರುವ ಸಂಬಂಧಿಕರನ್ನು ಸೇರಿಕೊಂಡರು. ಹೆಚ್ಚಿನವರಿಗೆ ಗಡಿಭಾಗದ ರೈಲು ನಿಲ್ದಾಣವೇ ಮನೆಯಾಗಿತ್ತು. ಮುಂದಿನ ಹೆಜ್ಜೆ ಅಸ್ಪಷ್ಟವಾಗಿರುವಂತೆಯೇ, ರೈಲು ನಿಲ್ದಾಣದಲ್ಲಿಯೇ ಅವರು ಮಲಗಿದರು.

ಇತ್ತ, ಪುರುಷರಿಗೆ ಮುಖ್ಯವಾಗಿ ಯುವಕರಿಗೆ ದೇಶ ತೊರೆಯದಂತೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ನಿರ್ಬಂಧ ಹೇರಿದ್ದಾರೆ. ಹೀಗಾಗಿ, ಬಹುತೇಕ ಮಹಿಳೆಯರು, ಮಕ್ಕಳು ಮತ್ತು ವಯಸ್ಕರು ಸುರಕ್ಷತೆ ಬಯಸಿ ಗಡಿ ದಾಟಲು ಧಾವಿಸುತ್ತಿದ್ದಾರೆ.

ಗಡಿ ದಾಟಿ ಜೆಮ್‌ಸಿಲ್‌ಗೆ ಕೀವ್ ನಗರದಿಂದ ಬಂದಿಳಿದ ಮಹಿಳೆಯರೊಬ್ಬರು ‘ದೇಶ ತೊರೆಯದಂತೆ ಯುವಕರನ್ನು ರೈಲಿನಿಂದ ಹೊರಗೆಳೆಯಲಾಗುತ್ತಿದೆ’ ಎಂದು ಹೇಳುತ್ತಾ ಕಣ್ಣೀರಿಟ್ಟರು. ‘ಸ್ವಂತ ಮಗುವಿನ ಜೊತೆಗೆ ಗಡಿದಾಟಲು ಪುರುಷರಿಗೆ ಬಿಡುತ್ತಿಲ್ಲ’ ಎಂದು ಡಾರಿಯಾ ಎಂಬವರು ದನಿಗೂಡಿಸಿದರು.

ಉಕ್ರೇನ್‌ನ ಆಡಳಿತವು ಕೆಟ್ಟದಾಗಿ ವರ್ತಿಸಲಿಲ್ಲ. ಪುರುಷರಿಗೆ ದೇಶವನ್ನು ಸಮರ್ಥಿಸಿಕೊಳ್ಳಬೇಕಾದ ಹೊಣೆಗಾರಿಕೆ ಇದೆ ಎಂದು ಹೇಳಿದರು. ಮಹಿಳೆಯರಿಗಷ್ಟೇ ರೈಲು ಏರಲು ಅವಕಾಶ ನೀಡಿದರು ಎಂದು ತಿಳಿಸಿದರು.

ಕಳೆದ 48 ಗಂಟೆಗಳಲ್ಲಿ ಸುಮಾರು 50 ಸಾವಿರ ಜನರು ದೇಶ ತೊರೆದಿದ್ದಾರೆ ಎಂದು ವಲಸಿಗರ ಕುರಿತ ವಿಶ್ವಸಂಸ್ಥೆಯ ಹೈಕಮಿಷನರ್ ಫಿಲಿಪ್ಪೊ ಗ್ರಾಂಡಿ ಶುಕ್ರವಾರ ಹೇಳಿದರು. ಹೆಚ್ಚಿನವರು ಬಹುತೇಕ ಪೋಲೆಂಡ್ ಮತ್ತು ಮೊಲ್ಡೊವಾ ಕಡೆಗೆ ತೆರಳುತ್ತಿದ್ದಾರೆ ಎಂದರು.

68 ವರ್ಷದ ಮಹಿಳೆ ವಿಲ್ಮಾ ಸುಗರ್ ಎಂಬವರು, ‘47 ವರ್ಷದ ತನ್ನ ಮಗನನ್ನು ದೇಶ ತೊರೆಯದಂತೆ ತಡೆಯಲಾಯಿತು’ ಎಂದು ಕಣ್ಣೀರಿಟ್ಟರೆ, ‘ಪುರುಷರಿಗೆ ರೈಲ್ವೆ ನಿಲ್ದಾಣ ಪ್ರವೇಶಿಸಲು ಅವಕಾಶ ನೀಡುತ್ತಿಲ್ಲ’ ಎಂದು ಕೊವಾಕ್ಸ್ ಎಂಬವರು ಹೇಳಿದರು.

ಜರ್ಮನಿಯ ವಿದೇಶಾಂಗ ಸಚಿವೆ ಅನ್ನಲೆನಾ ಬಾಯೆರ್‌ಬಾಕ್ ಅವರು, ಯೂರೋಪಿಯನ್ ಯೂನಿಯನ್ ವಲಸೆ ಬಂದಿರುವ ಎಲ್ಲರ ಕಾಳಜಿ ವಹಿಸಲಿದೆ ಎಂದು ತಿಳಿಸಿದರು. ‘ಇಂತಹ ದಿನ ಬರಬಾರದು ಎಂದೇ ನಾವು ಶ್ರಮಿಸಿದೆವು. ಆದರೆ, ರಷ್ಯಾ ಅಧ್ಯಕ್ಷರು ಮನುಷ್ಯರ ವಿರುದ್ಧದ ಯುದ್ಧವನ್ನೇ ಆಯ್ಕೆ ಮಾಡಿಕೊಂಡರು’ ಎಂದು ಅವರು ಪ್ರತಿಕ್ರಿಯಿಸಿದರು.

‘ಈವರೆಗೆ 1.20 ಲಕ್ಷ ಜನರ ವಲಸೆ’

ವಾರ್ಸಾ (ಎ.ಪಿ): ಯುದ್ಧಪೀಡಿತ ಉಕ್ರೇನ್‌ನಿಂದ ಇದುವರೆಗೂ ಸುಮಾರು 1.20 ಲಕ್ಷ ಜನರು ನೆರೆ ದೇಶಗಳತ್ತ ವಲಸೆ ಹೋಗಿದ್ದಾರೆ. ಈ ಸಂಖ್ಯೆಯು ವೇಗವಾಗಿ ಹೆಚ್ಚುತ್ತಿದೆ ಎಂದು ವಿಶ್ವಸಂಸ್ಥೆಯ ವಲಸಿಗರ ಕೇಂದ್ರವು ತಿಳಿಸಿದೆ.

ರಾಜಧಾನಿ ಕೀವ್ ಅತಿಕ್ರಮಿಸಲು ರಷ್ಯಾದ ಸೇನೆ ದಾಂಗುಡಿ ಇಟ್ಟಿರುವಂತೆಯೇ, ಉಕ್ರೇನಿಯರನ್ನು ಕೈಗೆ ಸಿಕ್ಕ ವಸ್ತುಗಳೊಂದಿಗೆ ದೇಶ ತೊರೆದು ಹೋಗುತ್ತಿದ್ದಾರೆ. ಸುಮಾರು 1.16 ಲಕ್ಷ ಮಂದಿ ಗಡಿ ದಾಟಿದ್ದಾರೆ. ಪ್ರತಿ ನಿಮಿಷಕ್ಕೂ ಈ ಸಂಖ್ಯೆ ಬದಲಾಗುತ್ತಿದೆ ಎಂದು ಕೇಂದ್ರದ ವಕ್ತಾರರು ಪ್ರತಿಕ್ರಿಯಿಸಿದ್ದಾರೆ. ಪರಿಸ್ಥಿತಿ ಹೀಗೇ ಮುಂದುವರಿದರೆ ವಲಸಿಗರ ಸಂಖ್ಯೆ 40 ಲಕ್ಷ ದಾಟಬಹುದು ಎಂದಿದ್ದಾರೆ.



ಉಕ್ರೇನ್‌ನಿಂದ ಹಂಗರಿಗೆ ವಲಸೆ ಹೋಗಿರುವ ಮಹಿಳೆಯರೊಬ್ಬರು ಗಡಿಯಲ್ಲಿ ದುಃಖತಪ್ತರಾಗಿದ್ದು, ಇತರರು ಸಮಾಧಾನಪಡಿಸಿದರು –ರಾಯಿಟರ್ಸ್ ಚಿತ್ರ

ಯುದ್ಧ ನಡುವೆ ಶಾಂತಿಮಂತ್ರ!

ಕೀವ್: ಉಕ್ರೇನ್‌ನ ಮಹಿಳೆಯೊಬ್ಬರು ಎದುರಾದ ರಷ್ಯಾದ ಸೈನಿಕರಿಗೆ ಹೆದರದೆ, ಅವರನ್ನು ಪ್ರಶ್ನಿಸುತ್ತಿರುವ ವಿಡಿಯೊವೊಂದು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದ್ದು, ಉಕ್ರೇನ್ ದೇಶಪ್ರೇಮಿಗಳ ಹೃದಯ ಗೆದ್ದಿದೆ.

ಸೈನಿಕರ ಕೈಗೆ ಸೂರ್ಯಕಾಂತಿಯ ಬೀಜವನ್ನು ಕೊಟ್ಟು ‘ಇದನ್ನು ಜೇಬಿನಲ್ಲಿ ಇಟ್ಟುಕೊಳ್ಳಿ. ನೀವು ಉಕ್ರೇನ್ ನೆಲದಲ್ಲಿ ಸತ್ತ ಬಳಿಕ ಅವು ಸಸಿಯಾಗಿ ಬೆಳೆಯುತ್ತವೆ’ ಎಂದು ಶಸ್ತ್ರಸಜ್ಜಿತ ರಷ್ಯಾ ಯೋಧರಿಗೆ ಆ ಮಹಿಳೆ ಖಡಕ್ ತಿರುಗೇಟು ಕೊಟ್ಟಿದ್ದಾರೆ.

ಅದಕ್ಕುತ್ತರಿಸಿದ ಯೋಧ, ‘ಈ ನಮ್ಮ ಚರ್ಚೆಯಿಂದ ಯಾವುದೇ ಲಾಭವಿಲ್ಲ ಹೋಗಿ’ ಎನ್ನುತ್ತಾನೆ. ಇದರಿಂದ ಕೋಪಗೊಂಡ ಮಹಿಳೆ, ‘ನೀವು ನಮ್ಮ ದೇಶ ವಶಪಡಿಸಿಕೊಳ್ಳಲು ಬಂದಿರುವವರು, ನೀವು ಫ್ಯಾಸಿಸ್ಟ್‌ಗಳು!’ ಎಂದು ತಿರುಗೇಟು ನೀಡಿದ್ದಾರೆ.

ಸೈನಿಕರು ಯಾವುದಕ್ಕೂ ಜಗ್ಗದೆ ನಿಂತಿದ್ದನ್ನು ಗಮನಿಸಿದ ಮಹಿಳೆ ಅವರನ್ನು ಛೇಡಿಸುತ್ತಾ, ‘ನಾನು ನಿಮಗೆ ಹೇಳುತ್ತಿದ್ದೇನೆ.. ಈ ಕ್ಷಣದಿಂದ ನೀವು ಶಾಪಗ್ರಸ್ತರು’ ಎಂದು ಕಿಡಿಕಾರಿದರು.

ಮಾತುಕತೆಗೆ ಉಕ್ರೇನ್ ನಿರಾಸಕ್ತಿ: ರಷ್ಯಾ

ಮಾಸ್ಕೊ (ಎಎಫ್‌ಪಿ): ಬಿಕ್ಕಟ್ಟು ಬಗೆಹರಿಸುವ ಕ್ರಮವಾಗಿ ಮಾತುಕತೆಗೆ ಮುಂದಾಗಲು ವಿಳಂಬ ನೀತಿ ಅನುಸರಿಸುವ ಮೂಲಕ ಬಿಕ್ಕಟ್ಟನ್ನು ಉಕ್ರೇನ್ ಇನ್ನಷ್ಟು ಹಿಗ್ಗಿಸುತ್ತಿದೆ ಎಂದು ರಷ್ಯಾ ಶನಿವಾರ ಆರೋಪಿಸಿದೆ.

ಮಾತುಕತೆಗೆ ಬರುವುದನ್ನು ನಿರೀಕ್ಷಿಸಿ ರಷ್ಯಾದ ಅಧ್ಯಕ್ಷ ಪುಟಿನ್ ಅವರು ಸೇನೆಗೆ ಕಾರ್ಯಾಚರಣೆ ಮುಂದುವರಿಸದಂತೆ ಆದೇಶಿಸಿದ್ದರು ಎಂದು ರಷ್ಯಾದ ಆಡಳಿತ ಕೇಂದ್ರ ಕ್ರೆಮ್ಲಿನ್‌ನ ವಕ್ತಾರ ಡಿಮಿಟ್ರಿ ಪೆಸ್ಕೊವ್ ಪ್ರತಿಕ್ರಿಯಿಸಿದರು.

ಆದರೆ, ಮಾತುಕತೆಗೆ ಉಕ್ರೇನ್ ಆಸಕ್ತಿಯನ್ನು ತೋರದಿರುವ ಕಾರಣದಿಂದಾಗಿ ಕಾರ್ಯಾಚರಣೆಯನ್ನು ಮುಂದುವರಿಸಲು ಸೇನೆಗೆ ಆದೇಶಿಸಲಾಗಿದೆ ಎಂದು ಅವರು ತಿಳಿಸಿದರು.

‘ರಷ್ಯಾ ವಿಮಾನಗಳಿಗೆ ವಾಯುಮಾರ್ಗ ಬಂದ್’

ವರ್ಸಾ: ರಷ್ಯಾ ದಾಳಿ ಖಂಡಿಸಿ ಜೆಕ್ ಗಣರಾಜ್ಯ, ಪೋಲೆಂಡ್ ಮತ್ತು ಬಲ್ಗೇರಿಯಾ ರಾಷ್ಟ್ರಗಳು ರಷ್ಯಾದ ವಿಮಾನಗಳಿಗೆ ತಮ್ಮ ವಾಯುಪ್ರದೇಶವನ್ನು ಬಂದ್ ಮಾಡಿರುವುದಾಗಿ ಹೇಳಿವೆ.

‘ಶುಕ್ರವಾರ ಮಧ್ಯರಾತ್ರಿಯಿಂದಲೇ ಹೊತ್ತಿಗೆ, ನಾವು ಜೆಕ್ ವಾಯುಪ್ರದೇಶದಲ್ಲಿ ರಷ್ಯಾದ ಎಲ್ಲ ವಾಯುಯಾನ ಸಂಸ್ಥೆಗಳ ವಿಮಾನಗಳಿಗೆ ಸಂಚಾರ ನಿರ್ಬಂಧಿಸಲಾಗಿದೆ’ ಜೆಕ್ ಸಾರಿಗೆ ಸಚಿವ ಮಾರ್ಟಿನ್ ಕುಪ್ಕಾ ಟ್ವೀಟ್ ಮಾಡಿದ್ದಾರೆ.

ಪೋಲೆಂಡ್ ಕೂಡಾ ಇಂತಹದೇ ತೀರ್ಮಾನ ಕೈಗೊಳ್ಳಲಿದೆ ಎಂದು ಪ್ರಧಾನಿ ಮಾಟೆಸ್ ಮೊರಾವಿಕಿ ಫೇಸ್‌ಬುಕ್‌ನಲ್ಲಿ ತಿಳಿಸಿದ್ದಾರೆ. ರಷ್ಯಾದ ವಿಮಾನಗಳು ‘ದೇಶದ ವಾಯುಮಾರ್ಗದ ಮೂಲಕ ಸಂಚರಿಸಬಾರದು’ ಎಂದು ಬಲ್ಗೇರಿಯಾ ಸರ್ಕಾರದ ಹೇಳಿಕೆ ತಿಳಿಸಿದೆ.

ಬ್ರಿಟನ್, ಬೆಲಾರಸ್ ಮತ್ತು ಮೊಲ್ಡೊವಾ ಕೂಡಾ ಇಂತಹದೇ ತೀರ್ಮಾನ ಕೈಗೊಂಡಿದೆ.

ಬಿಕ್ಕಟ್ಟು ಬಗೆಹರಿಸಲು ಶಾಂತಿ ಪ್ರಯತ್ನಗಳಿಗೆ ಭಾರತ ಬದ್ಧ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಉಕ್ರೇನ್ ಅಧ್ಯಕ್ಷ ವೊಲೊಡಿಮೀರ್ ಝೆಲೆನ್ಸ್ಕಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ, ‘ತಕ್ಷಣ ಯುದ್ಧ ಬಿಟ್ಟು ಮಾತುಕತೆಗೆ ಮರಳಿ. ಬಿಕ್ಕಟ್ಟು ಬಗೆಹರಿಸಲು ಶಾಂತಿ ಪ್ರಯತ್ನಗಳಿಗೆ ಎಲ್ಲ ರೀತಿಯಲ್ಲೂ ಕೊಡುಗೆ ನೀಡಲು ಭಾರತ ಬದ್ಧವಾಗಿದೆ’ ಎಂದು ಭರವಸೆ ನೀಡಿದರು.

ಉಕ್ರೇನ್‌ನಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಜೀವ ಮತ್ತು ಆಸ್ತಿ ನಷ್ಟದ ಬಗ್ಗೆ ಮೋದಿ ತೀವ್ರ ದುಃಖ ವ್ಯಕ್ತಪಡಿಸಿದರು ಎಂದು ಪ್ರಧಾನಿ ಕಚೇರಿ ತಿಳಿಸಿದೆ.

‘ಝೆಲೆನ್ಸ್ಕಿ ಅವರು ಉಕ್ರೇನ್‌ನಲ್ಲಿ ನಡೆಯುತ್ತಿರುವ ಸಂಘರ್ಷದ ಪರಿಸ್ಥಿತಿಯ ಬಗ್ಗೆ ಮೋದಿ ಜತೆಗೆ ಸುದೀರ್ಘವಾಗಿ ಮಾತನಾಡಿದರು. ಸಂಘರ್ಷದಿಂದಾಗಿ ಆಗುತ್ತಿರುವ ಪ್ರಾಣಹಾನಿ ಮತ್ತು ಆಸ್ತಿಪಾಸ್ತಿ ನಷ್ಟದ ಬಗ್ಗೆ ಮೋದಿ ತೀವ್ರ ವೇದನೆ ವ್ಯಕ್ತಪಡಿಸಿದರು’ ಎಂದು ಹೇಳಿಕೆ ತಿಳಿಸಿದೆ.

ಉಕ್ರೇನ್‌ನಲ್ಲಿರುವ ವಿದ್ಯಾರ್ಥಿಗಳು ಸೇರಿ ಭಾರತೀಯ ನಾಗರಿಕರ ಸುರಕ್ಷತೆ ಬಗ್ಗೆ ಕಾಳಜಿ ವ್ಯಕ್ತಪಡಿಸಿದ ಮೋದಿ, ಅವರನ್ನು ತ್ವರಿತ ಮತ್ತು ಸುರಕ್ಷಿತವಾಗಿ ಸ್ಥಳಾಂತರಿಸಲು ತಮ್ಮ ಅಧಿಕಾರಿಗಳು ನೆರವು ನೀಡುವಂತೆ ಸೂಚಿಸಲು ಝೆಲೆನ್ಸ್ಕಿ ಅವರಿಗೆ ಮನವಿ ಮಾಡಿದರು.

ಆಕ್ರಮಣದಿಂದ ರಷ್ಯಾ ಹಿಂದೆ ಸರಿಯುವಂತೆ ಮಾಡುವ ಮಾರ್ಗವನ್ನು ಮೋದಿಯವರಿಗೆ ತಿಳಿಸಿರುವುದಾಗಿ ಝೆಲೆನ್ಸ್ಕಿ ಹೇಳಿದರು.



ವೊಲೊಡಿಮೀರ್ ಝೆಲೆನ್ಸ್ಕಿ



ನರೇಂದ್ರ ಮೋದಿ

ರಷ್ಯಾ ಮತ್ತು ಉಕ್ರೇನ್ ಸಂಘರ್ಷ ಕೊನೆಯಾಗದು. ಈ ಬಿಕ್ಕಟ್ಟು ಇನ್ನಷ್ಟು ಮುಂದುವರಿಯಲಿದೆ. ಸುದೀರ್ಘ ಯುದ್ಧ ಎದುರಿಸಲು ಜಗತ್ತು ತಯಾರಿ ಮಾಡಿಕೊಳ್ಳಬೇಕು
ಎಮ್ಯಾನುಯೆಲ್ ಮ್ಯಾಕ್ರನ್
ಫ್ರಾನ್ಸ್ ಅಧ್ಯಕ್ಷ

ಉಕ್ರೇನ್‌ಗೆ ಯುರೋಪ್ ಒಕ್ಕೂಟದ ಸದಸ್ಯತ್ವ ನೀಡುವ ನಿರ್ಧಾರ ತಯೆಗೆದುಕೊಳ್ಳಲು ಇದು ನಿರ್ಣಾಯಕ ಕ್ಷಣ
ವೊಲೊಡಿಮಿರ್ ಝೆಲೆನ್ಸ್ಕಿ
ಉಕ್ರೇನಿಯನ್ ಅಧ್ಯಕ್ಷ

‘ಒಂದು ಲಕ್ಷಕ್ಕೂ ಹೆಚ್ಚು ಆಕ್ರಮಣಕಾರರು ನಮ್ಮ ನೆಲಕ್ಕೆ ನುಗ್ಗಿದ್ದಾರೆ. ಅವರು ವಸತಿ ಕಟ್ಟಡಗಳ ಮೇಲೆ ಗುಂಡು ಹಾರಿಸಿದ್ದಾರೆ. ಆಕ್ರಮಣಕಾರರನ್ನು ತಡೆಯಿರಿ. ಭದ್ರತಾ ಮಂಡಳಿಯಲ್ಲಿ ನಮಗೆ ರಾಜಕೀಯ ಬೆಂಬಲವನ್ನು ನೀಡುವಂತೆ ಭಾರತವನ್ನು ಒತ್ತಾಯಿಸಿದ್ದೇನೆ’ ಎಂದು ಝೆಲೆನ್ಸ್ಕಿ ಟ್ವೀಟ್ ಮಾಡಿದ್ದಾರೆ.

ತಾಯ್ನಾಡಿಗೆ ಮರಳಿದ 219 ಭಾರತೀಯರು

ಮುಂಬೈ (ಪಿಟಿಐ): ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರಲ್ಲಿ 219 ಜನರನ್ನು ಹೊತ್ತ ಏರ್ ಇಂಡಿಯಾ ವಿಶೇಷ ವಿಮಾನ ಶನಿವಾರ ರಾತ್ರಿ 7.50ಕ್ಕೆ ಮುಂಬೈ ವಿಮಾನನಿಲ್ದಾಣ ತಲುಪಿತು. ತಾಯ್ನಾಡಿಗೆ ಮರಳುತ್ತಿದ್ದಂತೆ ಭಾರತೀಯರು ಸಂತಸ ವ್ಯಕ್ತಪಡಿಸಿದರು.

ರೊಮೇನಿಯಾದ ಬುಕಾರೆಸ್ಟ್ ವಿಮಾನನಿಲ್ದಾಣದಿಂದ ಬೋಯಿಂಗ್ 787 ಡ್ರೀಮ್‌ಲೈನರ್ ವಿಮಾನವು ಶನಿವಾರ ಬೆಳಿಗ್ಗೆ 3.38 ಗಂಟೆಗೆ ಹೊರಟಿತ್ತು. ಕೇಂದ್ರ ಸಚಿವ ಪೀಯೂಶ್ ಗೋಯಲ್ ಅವರು ವಿಮಾನನಿಲ್ದಾಣದಲ್ಲಿ ಹಾಜರಿದ್ದು, ಬರಮಾಡಿಕೊಂಡರು.

ನವದೆಹಲಿ ವರದಿ: ಇದಕ್ಕೂ ಮುನ್ನ ಉಕ್ರೇನ್‌ನಿಂದ ರೊಮೇನಿಯಾಕ್ಕೆ ಸ್ಥಳಾಂತರಗೊಂಡಿದ್ದ 219 ಭಾರತೀಯರನ್ನು ಮುಂಬೈಗೆ ವಿಮಾನದಲ್ಲಿ ಕರೆತರಲಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಪ್ರಕಟಿಸಿದ್ದರು.

ಬುಕಾರೆಸ್ಟ್ ವಿಮಾನ ನಿಲ್ದಾಣದಿಂದ ಹೊರಟಿದ್ದುದ ಚಿತ್ರಗಳನ್ನು ಸಚಿವರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದು, ‘ಭಾರತೀಯರ ಕರೆತರಲು ನಮ್ಮ ತಂಡ ಹಗಲಿರುಳೂ ಕೆಲಸ ಮಾಡುತ್ತಿವೆ. ನಾನು ಮೇಲ್ವಿಚಾರಣೆ ಮಾಡುತ್ತಿದ್ದೇನೆ’ ಎಂದಿದ್ದರು.

ಮತ್ತೊಂದು ವಿಮಾನದಲ್ಲಿ ಬರಲಿದ್ದಾರೆ 250 ಮಂದಿ: ಏರ್ ಇಂಡಿಯಾದ ಎರಡನೇ ವಿಮಾನವು ನಿರ್ಗಮಿಸಿದೆ. ಈ ವಿಮಾನದಲ್ಲಿ 250 ಮಂದಿಯನ್ನು ಕರೆತರಲಿದೆ ಎಂದು ತಿಳಿಸಿದ್ದಾರೆ.

ಫೆಬ್ರುವರಿ 24ರ ಬೆಳಿಗ್ಗೆಯಿಂದ ನಾಗರಿಕ ವಿಮಾನ ಕಾರ್ಯಾಚರಣೆಗೆ ಉಕ್ರೇನ್ ವಾಯುಮಾರ್ಗವನ್ನು ಮುಚ್ಚಲಾಗಿದೆ. ಜನರನ್ನು ಸ್ಥಳಾಂತರಿಸುವ ವಿಮಾನಗಳು ಬುಕಾರೆಸ್ಟ್ ಮತ್ತು ಬುಡಾಪೆಸ್ಟ್‌ನಿಂದ ಕಾರ್ಯನಿರ್ವಹಿಸುತ್ತಿವೆ.

‘ತಿಳಿಸದೆ ಗಡಿಗಳಿಗೆ ತೆರಳಬೇಡಿ’: ‘ಉಕ್ರೇನ್‌ನಲ್ಲಿರುವ ಭಾರತೀಯರು ಕಚೇರಿಯ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸದೆ ಯಾವುದೇ ಗಡಿ ತಪಾಸಣಾ ಕೇಂದ್ರಗಳಿಗೆ ತೆರಳಬೇಡಿ’ ಎಂದು ಉಕ್ರೇನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಲಹೆ ನೀಡಿದೆ.

ಉಕ್ರೇನ್‌ನ ಹಲವು ನಗರಗಳ ಮೇಲೆ ಹೆಚ್ಚುತ್ತಿರುವ ಹೋರಾಟದ ವರದಿಗಳ ಹಿನ್ನೆಲೆಯಲ್ಲಿ ರಾಯಭಾರ ಕಚೇರಿ ಈ ಸೂಚನೆ ನೀಡಿದೆ.

ಉಕ್ರೇನ್‌ನ ಪೂರ್ವ ಭಾಗದಲ್ಲಿರುವವರು ತಮ್ಮ ನಿವಾಸಗಳಲ್ಲೇ ಉಳಿಯಲು ಸಲಹೆ ನೀಡಿದೆ. ಪೂರ್ವ ಸೂಚನೆಯಿಲ್ಲದೆ ಗಡಿಗೆ ತಲುಪಿರುವ ಭಾರತೀಯರನ್ನು ಸಂಪರ್ಕಿಸಿ, ನೆರವು ಒದಗಿಸುವುದು ಕಷ್ಟಕರವಾಗುತ್ತಿದೆ’ ಎಂದು ಹೇಳಿಕೆಯಲ್ಲಿ ತಿಳಿಸಿದೆ.

‘ಕೀವ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿಯು ತುರ್ತುನೆರವಿಗೆ ಗಡಿಗಳಲ್ಲಿ ಸಹಾಯವಾಣಿ ಸ್ಥಾಪಿಸಿದೆ’ ಎಂದು ಅದು ತಿಳಿಸಿದೆ.



ಉಕ್ರೇನ್‌ನಿಂದ ಬುಕಾರೆಸ್ಟ್ ವಿಮಾನನಿಲ್ದಾಣದ ಮೂಲಕ ವಿಶೇಷ ವಿಮಾನದಲ್ಲಿ ಶನಿವಾರ ಮುಂಬೈಗೆ ಬಂದಿಳಿದ ಭಾರತೀಯರು ಪ್ರತಿಕ್ರಿಯಿಸಿದ್ದು ಹೀಗೆ –ಪಿಟಿಐ ಚಿತ್ರ

ಕ್ಯಾನ್ಸರ್ ಪೀಡಿತ ಮಗು ಜೊತೆ ಗಡಿ ದಾಟಿದ ಮಹಿಳೆ

ಕೀವ್: ಉಕ್ರೇನ್ ಜನರು ನೆರೆಯ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಕ್ಯಾನ್ಸರ್‌ನಿಂದ ಅಸ್ವಸ್ಥಗೊಂಡಿದ್ದ 3 ವರ್ಷದ ಮಗನನ್ನು ತೊಟ್ಟಿಲಲ್ಲಿ ಇಟ್ಟುಕೊಂಡು ಗಡಿ ದಾಟಿದ 25 ವರ್ಷದ ಉಕ್ರೇನ್ ಮಹಿಳೆ ಪೋಲೆಂಡ್ ಗಡಿಗೆ ತಲುಪಿದ್ದರು.

ಬಾಂಬ್ ಮತ್ತು ರಾಕೆಟ್‌ಗಳ ದಾಳಿಯಿಂದ ಈವರೆಗೆ ತೊಂದರೆಯಾಗಿಲ್ಲ. ಆದರೆ, ದೇಶ ತೊರೆದಿದ್ದೇನೆ. ಪತಿಯಿಂದ ಬೇರ್ಪಟ್ಟಿದ್ದಕ್ಕೆ ಹತಾಶೆಗೊಂಡಿದ್ದೇನೆ ಎಂದು ಮಹಿಳೆ ಅಸಹಾಯಕತೆ ವ್ಯಕ್ತಪಡಿಸಿದರು.

‘ದೇಶಕ್ಕಾಗಿ ಹೋರಾಡಲು ಪುರುಷರು ಬೇಕು ಎಂದು ಅರ್ಥಮಾಡಿಕೊಂಡಿದ್ದೇನೆ, ಆದರೆ, ನನಗೆ ನನ್ನ ಪತಿಯ ಅಗತ್ಯತೆ ಅದಕ್ಕಿಂತ ಹೆಚ್ಚಿದೆ’ ಎಂದು ಅವರು ಅನಾರೋಗ್ಯ ಪೀಡಿತ ಮಗುವಿನ ತಲೆ ನೇವರಿಸಿದರು.

ಉಕ್ರೇನ್‌ನಲ್ಲಿ ರಾಜ್ಯದ 387 ಮಂದಿ

ಬೆಂಗಳೂರು: ರಷ್ಯಾದ ದಾಳಿ ಎದುರಿಸುತ್ತಿರುವ ಉಕ್ರೇನ್ ದೇಶದಲ್ಲಿ ರಾಜ್ಯದ 387 ಮಂದಿ ಸಿಲುಕಿರುವ ಮಾಹಿತಿ ಲಭಿಸಿದೆ. ಶನಿವಾರ ಸಂಜೆ ಹೊರಟಿರುವ ವಿಮಾನದಲ್ಲಿ ಐವರು ವಿದ್ಯಾರ್ಥಿಗಳು ಹಿಂದಿರುಗುತ್ತಿದ್ದಾರೆ.

‘ದೂರವಾಣಿ ಕರೆಗಳ ಆಧಾರದಲ್ಲಿ ಉಕ್ರೇನ್‌ನಲ್ಲಿರುವ ಕನ್ನಡಿಗರಿಗೆ ನೆರವು ಒದಗಿಸಲಾಗುತ್ತಿದೆ. 387 ಮಂದಿ ತೊಂದರೆಗೆ ಸಿಲುಕಿರುವ ಮಾಹಿತಿ ದೊರಕಿದೆ’ ಎಂದು ಉಕ್ರೇನ್‌ನಲ್ಲಿರುವ ಕನ್ನಡಿಗರಿಗೆ ನೆರವಾಗಲು ನೋಡಲ್ ಅಧಿಕಾರಿಯಾಗಿರುವ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಆರ್. ಮನೋಜ್ ತಿಳಿಸಿದ್ದಾರೆ.

ಉಕ್ರೇನ್‌ನಲ್ಲಿ ಸಿಲುಕಿರುವ ಕನ್ನಡಿಗರಲ್ಲಿ 207 ವಿದ್ಯಾರ್ಥಿಗಳು, 180 ವಿದ್ಯಾರ್ಥಿನಿಯರಿದ್ದಾರೆ. ಅವರಲ್ಲಿ 87 ಜನರು ಗ್ರಾಮೀಣ ಪ್ರದೇಶದವರು. ಬುಡಾಪೆಸ್ಟ್‌ನಿಂದ ಶನಿವಾರ ಹೊರಟಿರುವ ವಿಮಾನ ಭಾನುವಾರ ಬೆಳಿಗ್ಗೆ ದೆಹಲಿ ತಲುಪಲಿದೆ. ಅದರಲ್ಲಿ ಕರ್ನಾಟಕದ ಐವರು ವಿದ್ಯಾರ್ಥಿಗಳಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

ರಷ್ಯಾ ಜಾಹೀರಾತುಗಳಿಗೆ ಫೇಸ್‌ಬುಕ್ ನಿಷೇಧ

ಸ್ಯಾನ್‌ಫ್ರಾನ್ಸಿಸ್ಕೊ: ರಷ್ಯಾದ ಮಾಧ್ಯಮಗಳು ವಿಶ್ವದ ಯಾವುದೇ ಭಾಗದಲ್ಲಿ ಫೇಸ್‌ಬುಕ್‌ನ ಸಾಮಾಜಿಕ ಮಾಧ್ಯಮಗಳಲ್ಲಿ ಜಾಹೀರಾತು ಪ್ರಕಟಿಸುವುದನ್ನು ಫೇಸ್‌ಬುಕ್ ನಿಷೇಧಿಸಿದೆ.

‘ನಮ್ಮ ಮಾಧ್ಯಮದಲ್ಲಿ ಜಾಹೀರಾತುಗಳನ್ನು ಪ್ರಕಟಣೆ, ಹಣ ಗಳಿಸುವುದನ್ನು ನಿಷೇಧಿಸುತ್ತಿದ್ದೇವೆ’ ಎಂದು ಫೇಸ್‌ಬುಕ್‌ನ ಭದ್ರತಾ ನೀತಿ ವಿಭಾಗ ಮುಖ್ಯಸ್ಥ ನಥಾನಿಯಲ್ ಗ್ಲೀಚರ್ ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

ರಷ್ಯಾದ ನಾಗರಿಕರ ಹಕ್ಕುಗಳನ್ನು ಉಲ್ಲಂಘಿಸುತ್ತಿದ್ದು, ಫೇಸ್‌ಬುಕ್ ಬಳಕೆ ಸೀಮಿತಗೊಳಿಸಲಾಗುತ್ತಿದೆ ಎಂದು ರಷ್ಯಾದ ಮಾಧ್ಯಮ ನಿಯಂತ್ರಕ ಹೇಳಿದ ಬೆನ್ನಲ್ಲೇ ಫೇಸ್‌ಬುಕ್ ಈ ನಿರ್ಧಾರ ಪ್ರಕಟಿಸಿದೆ.

ಉಕ್ರೇನ್‌ಗೆ ₹4,503 ಕೋಟಿ ನೆರವು: ಅಮೆರಿಕ ಘೋಷಣೆ

ವಾಷಿಂಗ್ಟನ್: ಸಂಕಷ್ಟಕ್ಕೆ ಸಿಲುಕಿರುವ ಉಕ್ರೇನ್‌ಗೆ ರಕ್ಷಣಾ ಉಪಕರಣಗಳ ಖರೀದಿ, ಮಿಲಿಟರಿ ತರಬೇತಿ ಮತ್ತು ಶಿಕ್ಷಣ ಸೌಲಭ್ಯಕ್ಕಾಗಿ ತಕ್ಷಣಕ್ಕೆ 350 ದಶಲಕ್ಷ ಡಾಲರ್ (ಅಂದಾಜು ₹2,626 ಕೋಟಿ) ನೆರವನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಘೋಷಿಸಿದ್ದಾರೆ.

ಭದ್ರತಾ ಹಿತಾಸಕ್ತಿಗಳಿಗೆ 250 ದಶಲಕ್ಷ ಡಾಲರ್ (₹1,876 ಕೋಟಿ) ನೆರವು ಘೋಷಿಸುವುದಕ್ಕೆ ರಾಜ್ಯ ಕಾರ್ಯದರ್ಶಿಗೆ ಅಧಿಕಾರ ನೀಡಲಾಗಿದೆ ಎಂದು ಶ್ವೇತಭವನದ ಪ್ರಕಟಣೆ ತಿಳಿಸಿದೆ. ಅಮೆರಿಕ ಇತ್ತೀಚಿನ ಕೆಲವು ತಿಂಗಳಲ್ಲಿ ಉಕ್ರೇನ್‌ಗೆ ಒಟ್ಟಾರೆಯಾಗಿ 600 ಮಿಲಿಯನ್ ಡಾಲರ್‌ನಷ್ಟು (₹4,503 ಕೋಟಿ) ನೆರವು ಘೋಷಿಸಿದೆ ಎಂದು ಹೇಳಲಾಗಿದೆ.



ವಲಸಿಗರಿಗೆ ನೆರವು

ಯುದ್ಧಪೀಡಿತ ಉಕ್ರೇನ್‌ನಿಂದ ವಲಸೆ ಬಂದವರಿಗೆ ಪೋಲೆಂಡ್‌ನ ಗಡಿಭಾಗ ಮೆಡಿಕಾದಲ್ಲಿ ಸ್ವಯಂಸೇವಕರು ನೀರು, ಆಹಾರ ಕೊಟ್ಟು ಉಪಚರಿಸಿದರು –ರಾಯಿಟರ್ಸ್ ಚಿತ್ರ

ವಿದ್ಯಾರ್ಥಿಗಳ ನೆರವಿಗಾಗಿ ಸಹಾಯವಾಣಿ ಆರಂಭ: ಬೊಮ್ಮಾಯಿ

‘ಉಕ್ರೇನ್‌ನಿಂದ ಬರುವವರ ಪ್ರಯಾಣಕ್ಕೆ ವ್ಯವಸ್ಥೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುದ್ಧಪೀಡಿತ ಉಕ್ರೇನ್‌ನಿಂದ ದೆಹಲಿ ಮತ್ತು ಮುಂಬೈಗೆ ಬಂದಿಳಿಯುವ ಕನ್ನಡಿಗರನ್ನು ರಾಜ್ಯಕ್ಕೆ ಕರೆತಂದು, ಅವರ ಊರುಗಳಿಗೆ ಕಳುಹಿಸಲು ಸರ್ಕಾರವೇ ಪ್ರಯಾಣದ ವ್ಯವಸ್ಥೆ ಮಾಡಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.


ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ‘ಉಕ್ರೇನ್‌ನಿಂದ ಹೊರಟಿರುವ ಮೊದಲ ತಂಡದಲ್ಲಿರುವ ರಾಜ್ಯದ ವಿದ್ಯಾರ್ಥಿಗಳ ಪ್ರಯಾಣಕ್ಕೆ ಅಗತ್ಯ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ. ಮುಂದೆಯೂ ಅಲ್ಲಿಂದ ಬರುವವರನ್ನು ರಾಜ್ಯಕ್ಕೆ ಕರೆತಂದು, ಸ್ವಂತ ಊರುಗಳಿಗೆ ಕಳುಹಿಸುವ ಕೆಲಸವನ್ನು ಸರ್ಕಾರವೇ ಮಾಡಲಿದೆ. ಪ್ರಯಾಣ ಮತ್ತು ವಾಸ್ತವ್ಯಕ್ಕೆ ವ್ಯವಸ್ಥೆ ಮಾಡುವ ಜವಾಬ್ದಾರಿಯನ್ನು ದೆಹಲಿಯ ನಿವಾಸಿ ಆಯುಕ್ತರಿಗೆ ವಹಿಸಲಾಗಿದೆ’ ಎಂದರು.

ಉಕ್ರೇನ್‌ನಲ್ಲಿ ಸಿಲುಕಿರುವವರ ನೆರವಿಗಾಗಿ ಸಹಾಯವಾಣಿ ಆರಂಭಿಸಲಾಗಿದೆ. ನೆರವು ಕೋರುವವರ ಮಾಹಿತಿಯನ್ನು ವಿದೇಶಾಂಗ ಸಚಿವಾಲಯದ ಜತೆ ನಿರಂತರವಾಗಿ ಹಂಚಿಕೊಳ್ಳಲಾಗುತ್ತಿದೆ. ರಷ್ಯನ್ ಭಾಷೆ ಮಾತನಾಡಲು ತಿಳಿದಿರುವ ರಾಜತಾಂತ್ರಿಕ ಸಿಬ್ಬಂದಿಯನ್ನು ಕೇಂದ್ರ ಸರ್ಕಾರ ಉಕ್ರೇನ್‌ಗೆ ನಿಯೋಜಿಸಿದೆ. ಅವರು ಭಾರತೀಯರಿಗೆ ಅಗತ್ಯ ನೆರವು ನೀಡಲಿದ್ದಾರೆ ಎಂದು ತಿಳಿಸಿದರು.

ಉಕ್ರೇನ್‌ನ ಪಶ್ಚಿಮ ಭಾಗದಲ್ಲಿರುವವರನ್ನು ರೊಮೇನಿಯಾ ಸೇರಿದಂತೆ ನೆರೆಯ ರಾಷ್ಟ್ರಗಳ ಮೂಲಕ ಸ್ಥಳಾಂತರ ಮಾಡಲಾಗುವುದು. ಈ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ. ಹೆಚ್ಚಿನ ವಿದ್ಯಾರ್ಥಿಗಳು ಪೂರ್ವ ಭಾಗದಲ್ಲಿದ್ದಾರೆ. ಅವರನ್ನು ರಸ್ತೆ ಮಾರ್ಗದ ಮೂಲಕ ಕರೆತರಲು ಸಾಧ್ಯವಿಲ್ಲ. ವಿಮಾನದ ಮೂಲಕ ಸ್ಥಳಾಂತರಿಸುವ ಕುರಿತು ಕೇಂದ್ರ ಸರ್ಕಾರ ಮಾತುಕತೆ ಆರಂಭಿಸಿದೆ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ರಷ್ಯಾ ಅಧ್ಯಕ್ಷರ ಜತೆ ಮಾತುಕತೆ ನಡೆಸಿದ್ದು, ಭಾರತೀಯರ ಸ್ಥಳಾಂತರಕ್ಕೆ ಸಹಕಾರ ಕೋರಿದ್ದಾರೆ. ಸುರಕ್ಷಿತವಾದ ವಿಮಾನ ಸಂಚಾರ ಮಾರ್ಗಗಳನ್ನು ಒದಗಿಸಲು ರಷ್ಯಾ ಅಧ್ಯಕ್ಷರೂ ಒಪ್ಪಿಗೆ ಸೂಚಿಸಿದ್ದಾರೆ. ಮೋದಿ ಮತ್ತು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರ ರಾಜತಾಂತ್ರಿಕ ಪ್ರಯತ್ನ ಯಶಸ್ವಿಯಾಗಿದೆ ಎಂದರು.

‘ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿರುವೆ’



‘ಉಕ್ರೇನ್‌ನಲ್ಲಿ ಸಿಲುಕಿರುವ ಕರ್ನಾಟಕದ ವಿದ್ಯಾರ್ಥಿಗಳ ಜತೆ ದೂರವಾಣಿ ಮೂಲಕ ಮಾತನಾಡಿದ್ದೇನೆ. ಅವರಿಗೆ ಧೈರ್ಯ ತುಂಬುವ ಪ್ರಯತ್ನ ಮಾಡಿದ್ದೇನೆ. ರಷ್ಯಾ ಸೇನೆ ಪ್ರವೇಶಿಸಿರುವ ಭಾಗಗಳಲ್ಲಿ ಹೆಚ್ಚು ಸಮಸ್ಯೆ ಇದೆ. ಸುರಕ್ಷಿತ ಸ್ಥಳದಲ್ಲೇ ಇರಬೇಕು. ಅನಗತ್ಯವಾಗಿ ರಸ್ತೆಗೆ ಬರಬಾರದು ಎಂಬುದಾಗಿ ಮನವಿ ಮಾಡಿಕೊಂಡಿದ್ದೇನೆ’ ಎಂದೂ ಬೊಮ್ಮಾಯಿ ತಿಳಿಸಿದರು.

ರೇಷ್ಮೆನಗರಿಯಲ್ಲಿ ಕಾಂಗ್ರೆಸ್ ಶಕ್ತಿ ಪ್ರದರ್ಶನ: 50 ಸಾವಿರ ಮಂದಿ ಭಾಗಿ ನಿರೀಕ್ಷೆ

ಎರಡನೇ ಹಂತದ ಪಾದಯಾತ್ರೆಗೆ ಕ್ಷಣಗಣನೆ

● ಆರ್. ಜಿತೇಂದ್ರ



ರಾಮನಗರದ ಟಿ.ಆರ್. ಮಿಲ್ ಮೈದಾನದಲ್ಲಿ ಶನಿವಾರ ವೇದಿಕೆ ಹಾಗೂ ಆಸನಗಳನ್ನು ಸಜ್ಜುಗೊಳಿಸುವ ಕಾರ್ಯ ನಡೆದಿತ್ತು

ರಾಮನಗರ: ಮೇಕೆದಾಟು ಪಾದಯಾತ್ರೆಗೆ ಅಲ್ಪ ವಿರಾಮ ಹಾಕಿದ್ದ ಕಾಂಗ್ರೆಸ್ ಅದೇ ಉತ್ಸಾಹದಲ್ಲಿ ಮತ್ತೆ ಹೆಜ್ಜೆ ಇಡಲು ಸಿದ್ಧವಾಗಿದ್ದು, ಇಲ್ಲಿನ ಟಿ.ಆರ್. ಮಿಲ್ ಮೈದಾನದಲ್ಲಿ ಭಾನುವಾರ ಎರಡನೇ ಹಂತದ 'ನೀರಿಗಾಗಿ ನಡಿಗೆ' ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ.

ಕಳೆದ ಜನವರಿ 9ರಂದು ಕನಕಪುರ ತಾಲ್ಲೂಕಿನ ಸಂಗಮದ ಕಾವೇರಿ ನದಿ ತಟದಿಂದ ಆರಂಭಗೊಂಡ ಮೇಕೆದಾಟು ಪಾದಯಾತ್ರೆಯು ನಾಲ್ಕು ದಿನ ಪೂರೈಸುವಷ್ಟರಲ್ಲೇ ಕೋವಿಡ್ ವಿಘ್ನ ಎದುರಾದ ಕಾರಣ ಅರ್ಧಕ್ಕೆ ಮೊಟಕುಗೊಂಡಿತ್ತು. ಇದೀಗ ರಾಜ್ಯದಲ್ಲಿ ಕೋವಿಡ್ ಅಲೆ ಕ್ಷೀಣವಾಗಿದ್ದು, ರಾಮನಗರದ ಅದಿದೇವತೆ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುವ ಮೂಲಕ ಐದು ದಿನಗಳ ಈ ನಡಿಗೆ ನಿರ್ವಿಘ್ನವಾಗಲಿ ಎಂದು ಕಾಂಗ್ರೆಸ್ ನಾಯಕರು ಪ್ರಾರ್ಥನೆ ಸಲ್ಲಿಸಲಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತವರು ಜಿಲ್ಲೆಯಲ್ಲಿ ನಡೆದಿರುವ ಪಾದಯಾತ್ರೆಯು ಅವರಿಗೆ ಪ್ರತಿಷ್ಠೆಯ ಪ್ರಶ್ನೆಯೂ ಆಗಿದ್ದು, ಜೆಡಿಎಸ್ ಭದ್ರಕೋಟೆಯಲ್ಲಿ ಶಕ್ತಿ ಪ್ರದರ್ಶನ-ಕ್ಕೆ ಮುಂದಾಗಿದ್ದಾರೆ. ಹಿಂದಿಗಿಂತ ಅಪರಿಮಿತ ಉತ್ಸಾಹ ಹಾಗೂ ಜನಬೆಂಬಲದೊಂದಿಗೆ ಕಾರ್ಯಕ್ರಮ ಸಂಘಟಿಸಲು ಸಿದ್ಧತೆ ಮಾಡಿಕೊಳ್ಳ-ಲಾಗಿದೆ. ಪಾದಯಾತ್ರೆ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಉರಿದುಬಿದ್ದಿದ್ದು, ಟೀಕಾಪ್ರಹಾರ ಮುಂದುವರಿದಿದೆ.

> **ಸಿದ್ದರಾಮಯ್ಯ ಅವರಿಗೆ ತಮ್ಮ ಶಕ್ತಿ ಏನೆಂದು ತೋರಿಸಲು ಡಿ.ಕೆ.ಶಿವಕುಮಾರ್ ಅವರು ಮೇಕೆದಾಟು ಪಾದಯಾತ್ರೆ ನಡೆಸುತ್ತಿದ್ದಾರೆ. ಇದು ಕಾಂಗ್ರೆಸ್ ನಡೆಸುತ್ತಿರುವ 'ಡ್ರಾಮಾ ಪಾರ್ಟ್-2'**
> **-ಬಿ.ಸಿ. ಪಾಟೀಲ,** ಕೃಷಿ ಸಚಿವ

ಈ ಬಾರಿ ರಾಜ್ಯ ಕಾಂಗ್ರೆಸ್ ನಾಯಕರೊಟ್ಟಿಗೆ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ ಸಿಂಗ್ ಸುರ್ಜೇವಾಲ ಪಾಲ್ಗೊಳ್ಳಲಿದ್ದು, ಅವರೇ ಪಾದಯಾತ್ರೆ ಮುಂದುವರಿಕೆಗೆ ಹಸಿರು ನಿಶಾನೆ ತೋರಲಿದ್ದಾರೆ. ಅವರೊಟ್ಟಿಗೆ ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಆದಿಯಾಗಿ ಇಡೀ ಕೈ ಪಾಳಯವೇ ರಾಮನಗರಕ್ಕೆ ಬಂದು ಸೇರಿದೆ.

ಭಾನುವಾರ ಆರಂಭವಾಗಲಿ-ರುವ ನಡಿಗೆಯು ರಾಜ್ಯ ಬಜೆಟ್‌ನ ಮುನ್ನಾ ದಿನವಾದ ಮಾರ್ಚ್ 3ರಂದು ಬೆಂಗಳೂರಿನಲ್ಲಿ ಮುಕ್ತಾಯ ಆಗಲಿದೆ. ಬಜೆಟ್ ಕಾರಣಕ್ಕೇ ಈ ಬಾರಿ ನಡಿಗೆ ಅವಧಿಯನ್ನು ಎರಡು ದಿನ ಕಡಿತ ಮಾಡಲಾಗಿದೆ. ಮೊದಲ ದಿನದಂದು ನೆರೆಯ ಮಂಡ್ಯ ಜಿಲ್ಲೆಯ ಕಾರ್ಯಕರ್ತರ ಜೊತೆಗೆ ರಾಜ್ಯದಾದ್ಯಂತ 50 ಸಾವಿರಕ್ಕೂ ಹೆಚ್ಚು ಮಂದಿ ಭಾಗಿಯಾಗುವ ನಿರೀಕ್ಷೆ ಇದೆ. ಅವರಿಗೆ ಬೇಕಾದ ಊಟೋಪಚಾರ, ವಸತಿ ವ್ಯವಸ್ಥೆ ಮಾಡಲಾಗಿದೆ.

ಹಬ್ಬದ ಸಿಂಗಾರ: ಪಾದಯಾತ್ರೆಗೆಂದು ರಾಮನಗರವನ್ನು ವಿಶೇಷವಾಗಿ ಸಿಂಗರಿಸಲಾಗಿದ್ದು, ಊರ ತುಂಬೆಲ್ಲ ಕಾಂಗ್ರೆಸ್ ಧ್ವಜ, ಕೈ ನಾಯಕರ ಫ್ಲೆಕ್ಸ್ ರಾರಾಜಿಸುತ್ತಿವೆ. ಬೆಂಗಳೂರು-ಮೈಸೂರು ಹೆದ್ದಾರಿಗೆ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿದೆ.

ಅನುಮತಿ ಇಲ್ಲ: ಪಾದಯಾತ್ರೆಗೆ ಅನುಮತಿ ಕೋರಿ ರಾಮನಗರ ಕಾಂಗ್ರೆಸ್ ಜಿಲ್ಲಾ ಘಟಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದೆ. ಆದರೆ ಇದೇ 28ರವರೆಗೆ ರಾಜ್ಯದಲ್ಲಿ ಕೋವಿಡ್ ಮಾರ್ಗಸೂಚಿ ಜಾರಿಯಲ್ಲಿರುವ ಕಾರಣ ಅನುಮತಿ ಸಾಧ್ಯವಿಲ್ಲ ಎಂದು ರಾಮನಗರ ಜಿಲ್ಲಾಧಿಕಾರಿ ರಾಕೇಶ್‌ಕುಮಾರ್ ತಿಳಿಸಿದ್ದಾರೆ.

ವಾಹನ ಸಂಚಾರದ ಮಾರ್ಗ ಬದಲು

ಪಾದಯಾತ್ರೆಯು ಮೊದಲ ಮೂರು ದಿನಗಳು ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಸಾಗಲಿದೆ. ಹೀಗಾಗಿ ಈ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ಮಾರ್ಗ ಬದಲಾವಣೆ ಮಾಡಲಾಗಿದೆ. ಮಂಡ್ಯ ಕಡೆಯಿಂದ ಬರುವವರು ಮದ್ದೂರಿನಿಂದ ಕುಣಿಗಲ್ ಮಾರ್ಗವಾಗಿ ಬೆಂಗಳೂರು ತಲುಪಬಹುದು. ಮೈಸೂರು, ಮಡಿಕೇರಿ ಭಾಗದಿಂದ ಬರುವವರು ಹಾಸನ ಹೆದ್ದಾರಿ ಇಲ್ಲವೇ ಮದ್ದೂರಿನಿಂದ ಕನಕಪುರ ಮಾರ್ಗವಾಗಿ ಬೆಂಗಳೂರು ಮಾರ್ಗದಲ್ಲಿ ಸಂಚರಿಸಬಹುದು.

ಬಿಗಿ ಪೊಲೀಸ್ ಭದ್ರತೆ: ಪಾದಯಾತ್ರೆಗೆ ಬಿಗಿ ಪೊಲೀಸ್ ಭದ್ರತೆ ಕಲ್ಪಿಸಲಾಗಿದ್ದು, ಐಜಿಪಿ ಜೊತೆಗೆ ರಾಮನಗರ ಎಸ್.ಪಿ ಹಾಗೂ ಬೆಂಗಳೂರು ಗ್ರಾಮಾಂತರ ಮತ್ತು ಕೋಲಾರ ಜಿಲ್ಲೆಗಳ ಎಎಸ್‌ಪಿಗಳು ಭದ್ರತೆ ನೇತೃತ್ವ ವಹಿಸಿದ್ದಾರೆ. 14 ಕೆಎಸ್‌ಆರ್‌ಪಿ ಹಾಗೂ 1200 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಕ್ರಮಿಸುವ ದೂರ ಕಡಿತ

ಈ ಮೊದಲು 11 ದಿನ 169 ಕಿ.ಮೀ ನಡಿಗೆಗೆ ಉದ್ದೇಶಿಸಲಾಗಿತ್ತು. ಇದರಲ್ಲಿ ಸಂಗಮದಿಂದ ರಾಮನಗರದವರೆಗೆ 60.6 ಕಿ.ಮೀ ನಡಿಗೆ ಪೂರ್ಣಗೊಂಡಿದ್ದು, ಇನ್ನೂ 109 ಕಿ.ಮೀ ಬಾಕಿ ಇತ್ತು. ಆದರೆ ಪರಿಷ್ಕೃತ ಮಾರ್ಗದಂತೆ ಈಗ 5 ದಿನದಲ್ಲಿ 80 ಕಿ.ಮೀ ಪಾದಯಾತ್ರೆ ಸಂಚರಿಸಲಿದೆ.

ಎರಡನೇ ಹಂತದ ಪಾದಯಾತ್ರೆ ಮಾರ್ಗ

ಫೆ. 27 (ಮೊದಲ ದಿನ)	ರಾಮನಗರದಿಂದ ಬಿಡದಿ (15 ಕಿ.ಮೀ)
ಫೆ. 28 (ಎರಡನೇ ದಿನ)	ಬಿಡದಿಯಿಂದ ಕೆಂಗೇರಿ (20.5 ಕಿ.ಮೀ)
ಮಾರ್ಚ್ 1	ಕೆಂಗೇರಿಯಿಂದ ಅದ್ವೈತ ಪೆಟ್ರೋಲ್ ಬಂಕ್ (ಹೊರವರ್ತುಲ ರಸ್ತೆ) (15.8 ಕಿ.ಮೀ)
ಮಾರ್ಚ್ 2	ಅದ್ವೈತ್ ಪೆಟ್ರೋಲ್ ಬಂಕ್‌ನಿಂದ ಮೇಕ್ರಿ ವೃತ್ತ (16.7 ಕಿ.ಮೀ)
ಮಾರ್ಚ್ 3	ಮೇಕ್ರಿ ವೃತ್ತದಿಂದ ನ್ಯಾಷನಲ್ ಕಾಲೇಜು ಮೈದಾನ (11.8 ಕಿ.ಮೀ)

ಸುದ್ದಿ 2 ನಿಮಿಷ

ರಾಜಕೀಯಕ್ಕಾಗಿ ಕಾಂಗ್ರೆಸ್‌ನಿಂದ ಪಾದಯಾತ್ರೆ: ಬೊಮ್ಮಾಯಿ

ಬೆಂಗಳೂರು: ಮೇಕೆದಾಟು ವಿಚಾರದಲ್ಲಿ ಕಾಂಗ್ರೆಸ್ ಪಕ್ಷವು ರಾಜಕೀಯಕ್ಕಾಗಿ ಪಾದಯಾತ್ರೆ ನಡೆಸುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಆರೋಪಿಸಿದರು.

ಕಾಂಗ್ರೆಸ್ ಪಕ್ಷದ ಪಾದಯಾತ್ರೆ ಕುರಿತು ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್‌ನವರು ಯಾವ ಉದ್ದೇಶಕ್ಕೆ ಪಾದಯಾತ್ರೆ ಮಾಡುತ್ತಿದ್ದಾರೆ ಎಂಬುದು ಜನರಿಗೆ ಗೊತ್ತಿದೆ. ಮೊದಲು ಪಾದಯಾತ್ರೆ-1 ಮಾಡಿದರು. ಈಗ ಪಾದಯಾತ್ರೆ-2 ಹಮ್ಮಿಕೊಂಡಿದ್ದಾರೆ' ಎಂದರು.

ಕಾಂಗ್ರೆಸ್ ಮುಖಂಡರಿಗೆ ರಾಜಕೀಯವೇ ಮುಖ್ಯ. ವಿಧಾನಮಂಡಲ ಅಧಿವೇಶನವನ್ನೂ ರಾಜಕೀಯಕ್ಕೆ ಬಳಸಿಕೊಂಡು, ಕಲಾಪ ಹಾಳು ಮಾಡಿದರು. ಈಗ ಸದನದ ಹೊರಗೂ ಅದನ್ನೇ ಮಾಡುತ್ತಿದ್ದಾರೆ ಎಂದು ದೂರಿದರು.

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕನಿಷ್ಠ ಮಾರ್ಗಸೂಚಿಗಳು ಜಾರಿಯಲ್ಲಿವೆ. ಎಲ್ಲರೂ ಮಾರ್ಗಸೂಚಿಗಳನ್ನು ಪಾಲಿಸಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಬ್ಯಾರಿ ಭವನ ನಿರ್ಮಾಣಕ್ಕೆ ವಿರೋಧ

ಉಳ್ಳಾಲ: ತೊಕ್ಕೊಟ್ಟು ಜಂಕ್ಷನ್ ಬಳಿ ನಿರ್ಮಿಸಲು ಉದ್ದೇಶಿಸಿರುವ ಬ್ಯಾರಿ ಸಾಹಿತ್ಯ ಅಕಾಡೆಮಿಯ ನೂತನ ಕಚೇರಿ ಕಟ್ಟಡ ನಿರ್ಮಾಣಕ್ಕೆ ವಿರೋಧ ವ್ಯಕ್ತವಾಗಿದೆ. ಬಿಜೆಪಿ ಬೆಂಬಲಿಗರು ಹಾಗೂ ಉಳ್ಳಾಲ ನಗರಸಭೆ ಸದಸ್ಯ ದಿನಕರ ಉಳ್ಳಾಲ ನೇತೃತ್ವದ ಅಬ್ಬಕ್ಕ ಉತ್ಸವ ಸಮಿತಿಯವರು ಪ್ರತಿಭಟನೆ ನಡೆಸಿದರು.

ಶನಿವಾರ ಬೆಳಿಗ್ಗೆ ಕಚೇರಿ ನಿರ್ಮಾಣಕ್ಕೆ ಶಂಕುಸ್ಥಾಪನೆ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಈ ಮಧ್ಯೆ ಅಬ್ಬಕ್ಕ ಭವನ ವಿಳಂಬವಾಗಿದ್ದ-ರಿಂದ ವೀರರಾಣಿ ಅಬ್ಬಕ್ಕ ಉತ್ಸವ ಸಮಿತಿ ಹಾಗೂ ಅಭಿಮಾನಿಗಳು ಪ್ರತಿಭಟನೆ ನಡೆಸಿದರು. ಇದರಿಂದ ಕೆಲಕಾಲ ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು.

ಕಾರ್ಯಕ್ರಮಕ್ಕೆ ಬಂದಿದ್ದ ಶಾಸಕ, ವಿಧಾನಸಭೆ ಪ್ರತಿಪಕ್ಷದ ಉಪನಾಯಕ ಯು.ಟಿ.ಖಾದರ್ ಅವರಿಗೆ ಕಾರ್ಯಕ್ರಮಕ್ಕೆ ತೆರಳದಂತೆ ಪ್ರತಿಭಟನಕಾರರು ಮನವಿ ಮಾಡಿದರು. 'ಇದೊಂದು ಸರ್ಕಾರಿ ಕಾರ್ಯಕ್ರಮವಾದ ಕಾರಣ ಹಾಜರಾಗುವುದು ಅನಿವಾರ್ಯ' ಎಂದು ಹೇಳಿದ ಖಾದರ್, ಬಳಿಕ ನಡೆದ ಶಿಲಾನ್ಯಾಸ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಶಾಸಕರು ಹಾಗೂ ಪ್ರತಿಭಟನಕಾರರ ನಡುವೆ ತೀವ್ರ ವಾಗ್ವಾದ ನಡೆಯಿತು.

'ಬಿಜೆಪಿ ಸರ್ಕಾರವೇ ಇರುವಾಗ, ಬಿಜೆಪಿ ಕಾರ್ಯಕರ್ತರೇ ಸೇರಿಕೊಂಡು ಪ್ರತಿಭಟಿಸುತ್ತಿರುವುದು ಹಾಸ್ಯಾಸ್ಪದ. ಪ್ರತಿಭಟಿಸುವ ಬದಲು, ನಿಮ್ಮ ಸರ್ಕಾರದ ಮೂಲಕ ಯೋಜನೆಯನ್ನು ನಿಲ್ಲಿಸಬಹುದಲ್ಲ' ಶಾಸಕ ಯು.ಟಿ.ಖಾದರ್ ಪ್ರಶ್ನಿಸಿದರು. ಉಸ್ತುವಾರಿ ಸಚಿವರೇ ಶಿಲಾನ್ಯಾಸ ನೆರವೇ-ರಿಸಬೇಕಿದ್ದರೂ, ಅವರು ಗೈರು ಹಾಜರಾಗಿದ್ದರು.

12 ವರ್ಷಗಳಲ್ಲಿ 8,207 ರೈತರ ಆತ್ಮಹತ್ಯೆ

ಬೆಳಗಾವಿ: ರಾಜ್ಯದಲ್ಲಿ 12 ವರ್ಷಗಳಲ್ಲಿ 8,207 ರೈತರ ಆತ್ಮಹತ್ಯೆ ಪ್ರಕರಣಗಳು ವರದಿಯಾಗಿವೆ. ವರ್ಷಕ್ಕೆ ಸರಾಸರಿ 683 ಕೃಷಿಕರು ಪ್ರಾಣ ಕಳೆದುಕೊಂಡಿದ್ದಾರೆ.

ಮಾಹಿತಿ ಹಕ್ಕು ಕಾಯ್ದೆಯಡಿ ಜಿಲ್ಲೆಯ ಅಥಣಿಯ ವಕೀಲ ಭೀಮನಗೌಡ ಪರಗೊಂಡ ಅವರು ಮಾಹಿತಿ ಪಡೆದುಕೊಂಡಿದ್ದು, 2015-16ರಲ್ಲಿ ಅತಿ ಹೆಚ್ಚು 1,525 ಪ್ರಕರಣಗಳು ವರದಿಯಾಗಿವೆ. 2017-18ರಲ್ಲಿ 1,323 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

6,160 ಪ್ರಕರಣಗಳು ಪರಿಹಾರಕ್ಕೆ ಅರ್ಹ ಎಂದು ಪರಿಗಣಿಸಲಾಗಿದೆ. ವಿವಿಧ ಕಾರಣ ನೀಡಿ 1,809 ಪ್ರಕ-ರಣಗಳನ್ನು ತಿರಸ್ಕರಿಸಲಾಗಿದೆ. 215 ಪ್ರಕರಣಗಳಲ್ಲಿ ಪರಿಹಾರ ನೀಡುವುದು ಬಾಕಿ ಇವೆ.

'ಅತಿವೃಷ್ಟಿ, ಪ್ರವಾಹ, ಬರ ಮತ್ತಿತರ ಕಾರಣಗಳಿಂದಾಗಿ ಬೆಳೆ ಕೈಗೆ ಬಾರದಿರುವುದು, ಉತ್ಪನ್ನಗಳಿ-ಗೆ ಸರಿಯದ ಬೆಲೆ ಸಿಗದಿರುವುದು, ಕೌಟುಂಬಿಕ ಕಾರಣಗಳು, ಸಾಲದ ಬಾಧೆ, ಸರ್ಕಾರದ ಅವೈಜ್ಞಾನಿಕ ನೀತಿ ಮೊದಲಾದ ಕಾರಣಗಳಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿ-ದ್ದಾರೆ. ಇದರಿಂದ ಆ ಕುಟುಂಬಗಳು ಅತಂತ್ರವಾಗಿವೆ. ದಾಖಲಾತಿಗಳ ನೆಪವೊಡ್ಡಿ ಪರಿಹಾರ ನೀಡದೆ ಆ ಕುಟುಂಬಗಳನ್ನು ವಂಚಿಸಲಾಗಿದೆ. ಆ ಕುಟುಂಬಗಳನ್ನೂ ಪರಿಹಾರಕ್ಕೆ ಪರಿಗಣಿಸಿದರೆ ಅನುಕೂಲವಾಗುತ್ತ-ದೆ' ಎಂದು ಭೀಮನಗೌಡ ಅವರು ತಿಳಿಸಿದರು.

ರೈತರ ಆತ್ಮಹತ್ಯೆ ಪ್ರಕರಣಗಳ ವಿವರ

ವರ್ಷ	ವರದಿ	ತಿರಸ್ಕೃತ	ಅರ್ಹ	ಪರಿಹಾರ ನೀಡಲಾದವು
2010-11	231	105	126	126
2011-12	162	63	99	99
2012-13	146	59	87	87
2013-14	89	25	64	64
2014-15	116	23	93	93
2015-16	1,525	463	1,062	1,062
2016-17	1,203	271	932	-
2017-18	1,323	271	1,052	1,051
2018-19	1,087	216	867	867
2019-20	1,083	191	884	822
2020-21	822	111	637	471
2021-22 (ಫೆ.22ರವರೆಗೆ)	420	31	260	82

(ಮಾಹಿತಿ:ಕೃಷಿ ಇಲಾಖೆ)

ಹಿಜಾಬ್, ಬುರ್ಖಾ ಧರಿಸಿ ಬಂದವರಿಗೂ ಮುಕ್ತ ಅವಕಾಶ

ಧಾರ್ಮಿಕ ಸಾಮರಸ್ಯದ ಚಾಮುಂಡಿ ಬೆಟ್ಟ

● ಕೆ.ಎಸ್.ಗಿರೀಶ

ಮುಖ್ಯಾಂಶಗಳು
- ಹಿಜಾಬ್ ಧರಿಸಿದವರಿಗೂ ದೇಗುಲಕ್ಕೆ ಪ್ರವೇಶ
- ಅರ್ಚಕರು, ಸಾರ್ವಜನಿಕರಲ್ಲಿ ಸಾಮರಸ್ಯ ಭಾವ
- ದರ್ಗಾಗಳಿಗೆ ಭೇಟಿ ನೀಡುವ ಹಿಂದೂಗಳು

ಪ್ರಜಾವಾಣಿ ವಿಶೇಷ

ಮೈಸೂರು: 'ಹಿಜಾಬ್ ಧರಿಸಿ ಬಂದರೆ ಶಾಲೆ, ಕಾಲೇಜುಗಳಿಗೆ ಪ್ರವೇಶವಿಲ್ಲ' ಎನ್ನುತ್ತದೆ ಸರ್ಕಾರ. 'ಹಿಜಾಬ್ ಧರಿಸಿ ಬನ್ನಿ, ಅಡ್ಡಿ ಇಲ್ಲ' ಎನ್ನುತ್ತದೆ ಚಾಮುಂಡಿ ಬೆಟ್ಟ. ದೇವಿ ದರ್ಶನಕ್ಕೂ ಮುಕ್ತ ಅವಕಾಶ. ಬೆಟ್ಟದ ಪ್ರತಿ ಮೆಟ್ಟಿಲೂ ಹೀಗೆ ಧಾರ್ಮಿಕ ಸಾಮರಸ್ಯವನ್ನೇ ಸಾರುತ್ತಿದೆ.

ಇಲ್ಲಿಗೆ ನಿತ್ಯವೂ ಹಿಜಾಬ್, ಬುರ್ಖಾ ಧರಿಸಿ ಬರುವ ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರು ಪ್ರಕೃತಿಯ ಸೊಬಗನ್ನು ಸವಿಯುತ್ತಾರೆ. ಪ್ರತಿ ಭಾನುವಾರ, ರಜೆ ದಿನಗಳಲ್ಲಿ ಮುಸ್ಲಿಮ್ ತರುಣಿಯರು ಹೆಚ್ಚಿನ ಸಂಖ್ಯೆಯಲ್ಲಿ ಮುಂಜಾನೆಯೇ ತಪ್ಪಲಿಗೆ ಬಂದು ಮೆಟ್ಟಿಲು ಹತ್ತಿ ಎಲ್ಲರೊಂದಿಗೆ ಬೆರೆಯುತ್ತಾರೆ. ಬೆಟ್ಟದ ಮಾರ್ಗದಲ್ಲಿ ಸಿಗುವ ನಂದಿ ವಿಗ್ರಹವನ್ನು ಕಣ್ತುಂಬಿಕೊಳ್ಳುತ್ತಾರೆ. ಹಲವು ಮುಸ್ಲಿಂ ಕುಟುಂಬಗಳು ಒಟ್ಟಿಗೇ ಬರುವುದೂ ಉಂಟು. ಅವರೊಂದಿಗೆ ಚಾಮುಂಡಿಯ ಭಕ್ತರು ಸಾಮರಸ್ಯದಿಂದ ಹೆಜ್ಜೆ ಹಾಕುತ್ತಾರೆ.

ಇತ್ತೀಚೆಗೆ ಬೆಟ್ಟ ಹತ್ತುತ್ತಿದ್ದ ಎಂಜಿನಿಯರ್ ಅನೀಸಾ ಹುಸ್ನ 'ಪ್ರ-ಜಾವಾಣಿ'ಯೊಂದಿಗೆ ಮಾತನಾಡಿ, 'ಹಿಜಾಬ್ ಧರಿಸಿಯೇ ಪ್ರತಿ ಭಾನುವಾರ ಬೆಟ್ಟ ಹತ್ತುತ್ತೇನೆ. ಮೆಟ್ಟಿಲುಗಳಿಗೆ ಕುಂಕುಮ ಹಚ್ಚಿ ಹರಕೆ ತೀರಿಸುವ ಭಕ್ತರು ತಮ್ಮವರಂತೆಯೇ ಮಾತನಾಡಿಸಿದ್ದಾರೆ' ಎಂದು ಸಂತಸ ವ್ಯಕ್ತಪಡಿಸಿದರು.

ಅವರೊಂದಿಗಿದ್ದ ಆಹಾರ ತಜ್ಞೆ ಮೈಸರ ನುಜತ್, ಸಾಫ್ಟ್‌ವೇರ್ ಡೆವಲಪರ್ ಸಾದಿಯಾ ಮಿಜ್ಬಾ, ಸಾಫ್ಟ್‌ವೇರ್ ಎಂಜಿನಿಯರ್ ಫೈಜಾ ಸಹ ದನಿಗೂಡಿಸಿದರು. ಅವರಲ್ಲಿ ಬಹುತೇಕರು ದೂರದ ರಾಜೀವ್ ನಗರದವರು. ದೂರ ಎಂಬುದು ಅವರಿಗೆ ಸಮಸ್ಯೆಯೇ ಅಲ್ಲ.

ನಗರದ ಅರಮನೆ ಆವರಣದ ಕೋಟೆ ಆಂಜನೇಯಸ್ವಾಮಿ ಹಾಗೂ ಮಾರಮ್ಮ ದೇವಸ್ಥಾನಗ-ಳಿಗೂ ಮುಸ್ಲಿಮರು ಭೇಟಿ ನೀಡಿ ತಾಯಿತಗಳನ್ನು ಕಟ್ಟಿಸಿಕೊಳ್ಳುವ ಪರಿಪಾಠ ಇಂದಿಗೂ ಇದೆ. ಮುಸ್ಲಿಮರು ತಮ್ಮ ಮಕ್ಕಳು ಹಠ ಹಿಡಿದರೆ, ಅನಾರೋಗ್ಯಕ್ಕೆ ಒಳಗಾದರೆ, ಸಮೀಪದ ದೇವಾಲಯಗಳಿಗೆ ಭೇಟಿ ನೀಡಿ ತಾಯಿತಗಳನ್ನು ಕಟ್ಟಿಸಿಕೊಳ್ಳುತ್ತಾರೆ.

ಹಿಂದೂಗಳೂ ದರ್ಗಾಗಳಿಗೆ ಮುಸ್ಲಿಮರೊಟ್ಟಿಗೆ ಭೇಟಿ ನೀಡಿ ತಾಯಿತಗಳನ್ನು ಕಟ್ಟಿಸಿಕೊಳ್ಳುವು-ದು, ವಾಹನಗಳಿಗೆ ಧೂಪ ಹಾಕಿಸುವ ಸಂಪ್ರದಾಯವೂ ಇದೆ.



ಪ್ರತಿ ವಾರವೂ ಮೈಸೂರಿನ ಚಾಮುಂಡಿಬೆಟ್ಟ ಹತ್ತುವ ಮುಸ್ಲಿಂ ತರುಣಿಯರು.
ಪ್ರಜಾವಾಣಿ ಚಿತ್ರ: ಬಿ.ಆರ್.ಸವಿತಾ

'ನಾಡದೇವಿ ಎಂಬ ಅಭಿಮಾನ...'

ಚಾಮುಂಡಿಬೆಟ್ಟದ ಪ್ರಧಾನ ಅರ್ಚಕ ಶಶಿಶೇಖರ ದೀಕ್ಷಿತ್ ಪ್ರತಿಕ್ರಿಯಿಸಿ, 'ರಾಯಚೂರು, ಕಲಬುರಗಿ, ದಾವಣಗೆರೆ ಭಾಗಗಳಿಂದ ಕೋವಿಡ್‌ಗೂ ಮುಂಚಿತವಾಗಿ ಮುಸ್ಲಿಂ ಮಹಿಳೆಯರು ಹಿಜಾಬ್ ಧರಿಸಿ ಬಂದು ದರ್ಶನ ಪಡೆ-ಯುತ್ತಿದ್ದರು. ಚಾಮುಂಡಿ ನಮ್ಮ ನಾಡದೇವತೆ ಎಂದು ಅಭಿಮಾನದಿಂದಲೇ ಹೇಳುತ್ತಿದ್ದರು. ಅಂಥ ಕೆಲವು ಗುಂಪುಗಳನ್ನು ವರ್ಷಕ್ಕೆ ನಾಲ್ಕಾರು ಬಾರಿಯಾದರೂ ನೋಡುತ್ತಿದ್ದೆ. ಆದರೆ, ಕೋವಿಡ್ ಬಂದ ನಂತರ ಅಂಥ ಭಕ್ತರು ಬಂದಿರುವುದು ಬಹಳ ಕಡಿಮೆ' ಎಂದರು.

ಬಹು ಮಾಧ್ಯಮ ಪ್ರಜಾವಾಣಿ LIVE

www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 **ಸಂಪಾದಕೀಯ.** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್.**
ಪ್ರಜಾಮತ: ರಾತ್ರಿ 9 **ಚುನಾವಣೆ ವಾರ್ತೆ**

ನಾಳೆ

ರಷ್ಯಾ-ಉಕ್ರೇನ್ ಯುದ್ಧ: ಭಾರತದ ಮೇಲೆ ಪರಿಣಾಮಗಳೇನು?
ಭಾಗವಹಿಸುವವರು
ಎನ್. ಪಾರ್ಥಸಾರಥಿ, ಮಾಜಿ ರಾಜತಾಂತ್ರಿಕ ಅಧಿಕಾರಿ
ಪವನ್ ಶ್ರೀನಾಥ್, ಸಂಶೋಧಕ ಹಾಗೂ ಪಾಡ್‌ಕಾಸ್ಟರ್

ಸಂವಾದ ಸಂಜೆ 4 ಗಂಟೆಯಿಂದ

ಅಲೆಮಾರಿ ಕೋಶಕ್ಕೆ ನಿಗಮದ ಸ್ವರೂಪ: ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಲೆಮಾರಿ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ 2022-23ನೇ ಸಾಲಿಗೆ ₹500 ಕೋಟಿ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು ಮತ್ತು ಅಲೆಮಾರಿ ಅಭಿವೃದ್ಧಿ ಕೋಶವನ್ನು ನಿಗಮವನ್ನಾಗಿ ಮೇಲ್ದರ್ಜೆಗೇರಿಸಬೇಕು' ಎಂದು ಎಸ್‌ಸಿಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾ ಒತ್ತಾಯಿಸಿದೆ.



ಎಸ್‌ಸಿಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾದ ಪದಾಧಿಕಾರಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು. ವಿಧಾನ ಪರಿಷತ್ತಿನ ಸದಸ್ಯ ರವಿಕುಮಾರ್ ಇದ್ದರು

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ಮಹಾಸಭಾದ ಪದಾಧಿಕಾರಿಗಳು, ಮನವಿ ಸಲ್ಲಿಸಿದರು. 'ಎಸ್‌ಸಿಎಸ್‌ಟಿ ಪಟ್ಟಿಯಲ್ಲಿ ಹಂದಿಜೋಗಿ, ಬುಡ್ಗಜಂಗಮ, ಸುಡುಗಾಡುಸಿದ್ದ, ಚೆನ್ನದಾಸರ, ದೊಂಬರ, ಸಿಳ್ಳೇಕ್ಯಾತ, ಕೊರಮ, ಕೊರಚ ಸೇರಿ 74 ಅಲೆಮಾರಿ ಸಮುದಾಯಗಳಿವೆ. ಅಲೆಮಾರಿ ಕೋಶ ಇದ್ದರೂ ಈ ಸಮುದಾಯಗಳ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಈ ಕೋಶವನ್ನೇ ನಿಗಮವಾಗಿ ಪರಿವರ್ತಿಸ-ಬೇಕು' ಎಂದು ಮನವಿ ಮಾಡಿದರು.

'ಅಲೆಮಾರಿ ಸಮುದಾಯಗಳು ಇಂದಿಗೂ ಬೆಟ್ಟ, ಕೌದಿ ಟೆಂಟು, ಜೋಪಡಿ, ಗುಡಾರ, ಗುಡಿಸಲುಗಳಲ್ಲಿ ವಾಸ ಮಾಡುತ್ತಿವೆ. ಅಲೆಮಾರಿಗಳಿಗೆ ಶಾಶ್ವತ ನೆಲೆ ಕಲ್ಪಿಸಲು ಅಂಬೇಡ್ಕರ್ ವಸತಿ ಯೋಜನೆಯಡಿ ಪ್ರತಿ ಜಿಲ್ಲೆಗೆ ತಲಾ ₹10 ಕೋಟಿ ಅನುದಾನ ಘೋಷಿಸಬೇಕು. ಅಲೆಮಾರಿ ವಸತಿ ಬಡಾವಣೆಗಳನ್ನು ಸ್ಥಾಪಿಸಬೇಕು' ಎಂದು ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್ ಕೊತ್ತಗೆರೆ ಒತ್ತಾಯಿಸಿದರು.

'ಹಂದಿ ಸಾಕುವ ಸಮುದಾಯಗಳಿಗೆ ಹಂದಿ ಸಾಕಾಣಿಕೆ ಫಾರಂ ಮತ್ತು ಸುಧಾರಿತ ಮಳಿಗೆ ಸ್ಥಾಪಿಸಲು ₹25 ಕೋಟಿ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಬೆಂಗಳೂರಿನ ಭಿಕ್ಷುಕರ ಕಾಲೊನಿಯಲ್ಲಿ ಅಲೆಮಾರಿ ಸಾಂಸ್ಕೃತಿಕ ಭವನ ನಿರ್ಮಿಸಲು 5 ಎಕರೆ ಜಾಗ ಮೀಸಲಿಡಬೇಕು. ಅದಕ್ಕಾಗಿ ₹25 ಕೋಟಿ ವಿಶೇಷ ಅನುದಾನ ನೀಡಬೇಕು' ಎಂದು ಮನವಿ ಮಾಡಿದರು.

ಅಲೆಮಾರಿ ವಿಶೇಷ ಮಾದರಿ ವಸತಿ ಶಾಲೆಗಳನ್ನು ಆರಂಭಿಸಬೇಕು. ಅದಕ್ಕಾಗಿ ₹10 ಕೋಟಿ ಅನುದಾನ ಮೀಸಲಿಡಬೇಕು ಎಂದೂ ಆಗ್ರಹಿಸಿದರು.

ಹಾಸ್ಯ ಭಾಷಣಕ್ಕೆ ತರಬೇತಿ ಶಾಲೆ ಬರಲಿ: ಪ್ರಾಣೇಶ್

ಪ್ರಜಾವಾಣಿ ಸೆಲೆಬ್ರಿಟಿ LIVE



ಬೆಂಗಳೂರು: 'ಹಾಸ್ಯ ಭಾಷಣ ತರಬೇತಿ ಶಾಲೆಗಳನ್ನು ಸರ್ಕಾರ ಆರಂಭಿಸಬೇಕು' ಎಂದು ಖ್ಯಾತ ನಗೆ ಭಾಷಣಕಾರ ಗಂಗಾವತಿ ಪ್ರಾಣೇಶ್ ಕೋರಿದರು.

ಪ್ರಜಾವಾಣಿ ಸೆಲೆಬ್ರಿಟಿ ಲೈವ್ ನೇರ ಪ್ರಸಾರ ಕಾರ್ಯಕ್ರಮದ-ಲ್ಲಿ ಮಾತನಾಡಿದ ಅವರು, 'ಹಾಸ್ಯ ಮಾತುಗಾರಿಕೆ ವೃತ್ತಿಯಾಗಿ ಬೆಳೆದಿದೆ. ನಾವೂ ವೃತ್ತಿಯಾಗಿಸಿಕೊಂಡು ಬಾಳಿದ್ದೇವೆ. ಸಾಕಷ್ಟು ಯುವಕರಿಗೆ ಪ್ರತಿಭೆ ಹಾಗೂ ಆಸಕ್ತಿ ಇದೆ. ಮುಂದಿನ ಪೀಳಿಗೆ ಈ ಕಲೆಗಾರಿಕೆಯನ್ನು ಮುಂದುವರಿಸಬೇಕು. ಅದಕ್ಕಾಗಿ ಆಸಕ್ತರಿಗೆ ತರಬೇತಿ ನೀಡಬೇಕು. ನಾನು ಸಿದ್ಧನಿದ್ದೇನೆ. ನನ್ನ ಮೂಲಕ 14 ಮಂದಿ ತರಬೇತಿ ಪಡೆದು ಬೇರೆ ಬೇರೆ ಕಡೆ ಕಾರ್ಯಕ್ರಮ ಕೊಡುತ್ತಿದ್ದಾರೆ. ಅನೇಕ ಸಂಪನ್ಮೂಲ ವ್ಯಕ್ತಿಗಳೂ ಸಿದ್ಧರಿದ್ದಾರೆ. ಸರ್ಕಾರವೇ ಇದಕ್ಕೊಂದು ಅಕಾಡೆಮಿಕ್ ರೂಪ ಕೊಟ್ಟರೆ ಹೆಚ್ಚು ಜನರಿಗೆ ತರಬೇತಿ ಎನ್ನುವವರಿಗೆ ಆತ್ಮವಿಶ್ವಾಸ ಮುಖ್ಯ. ತರಬೇತಿ ಪಡೆದ ಮೇಲೆ ಒಬ್ಬರೇ ಹೋಗಿ ಕಾರ್ಯಕ್ರಮ ನೀಡುವಂತಾಗಬೇಕು. ಹಾಗಾದಾಗ ವ್ಯಕ್ತಿಗತವಾಗಿ ಬೆಳೆಯಲು ಸಾಧ್ಯ' ಎಂದರು.

ದ. ಕೊರಿಯಾ: ಓಮೈಕ್ರಾನ್ ಹರಡುವಿಕೆ ಉಲ್ಬಣ– ಒಂದೇ ದಿನ 112 ಸಾವು

ಸೋಲ್ (ಎಪಿ): ದಕ್ಷಿಣ ಕೊರಿಯಾದಲ್ಲಿ ಕೋವಿಡ್‌ನ ಓಮೈಕ್ರಾನ್ ರೂಪಾಂತರ ವೈರಸ್ ವೇಗವಾಗಿ ಹರಡುತ್ತಿದ್ದು, 24 ಗಂಟೆಗಳ ಅವಧಿಯಲ್ಲಿ ಶನಿವಾರ 112 ಮಂದಿ ಮೃತಪಟ್ಟಿದ್ದಾರೆ. 1,66,209 ಹೊಸ ಪ್ರಕರಣಗಳು ವರದಿಯಾಗಿವೆ.

ಬುಧವಾರ ಒಂದೇ ದಿನ ದಾಖಲೆ ಮಟ್ಟದ 1,71,451 ಪ್ರಕರಣಗಳು ಪತ್ತೆಯಾಗಿದ್ದವು. ಎರಡೇ ದಿನದಲ್ಲಿ ಇದೇ ಸಂಖ್ಯೆಯ ಸಮೀಪಕ್ಕೆ ಮತ್ತೆ ಹೊಸ ಪ್ರಕರಣಗಳು ಪತ್ತೆಯಾಗಿವೆ.

'ಡಿಸೆಂಬರ್, ಜನವರಿಆರಂಭದಲ್ಲಿ ದಕ್ಷಿಣ ಕೊರಿಯಾದಲ್ಲಿ ಕಾಣಿಸಿಕೊಂಡ ಡೆಲ್ಟಾ ರೂಪಾಂತರಕ್ಕಿಂತ ಓಮೈಕ್ರಾನ್ ಸಾವು ಮತ್ತು ಗಂಭೀರ ಸಮಸ್ಯೆ ಉಂಟುಮಾಡುವ ಸಾಧ್ಯತೆ ಕಡಿಮೆ ಎಂದು ಕಂಡುಬರುತ್ತಿದೆ. ಆದರೆ, ಆಸ್ಪತ್ರೆಗಳಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ. 640ಕ್ಕೂ ಹೆಚ್ಚು ರೋಗಿಗಳು ಗಂಭೀರ ಸ್ಥಿತಿಯಲ್ಲಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಭಾನುವಾರ ಫೆಬ್ರುವರಿ 27, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಶಿಶಿರ ಋತು ಕುಂಭ ಮಾಸದ 15ನೇ ದಿನ
ತಿಥಿ: (ಮಾಘ ಕೃಷ್ಣ) ಏಕಾದಶಿ ಗಂ. 08-13 ಉಪರಿ ದ್ವಾದಶಿ ಗಂ 29-43 ನಕ್ಷತ್ರ: ಪೂರ್ವಾಷಾಢಾ ಗಂ. 08-49 ಯೋಗ: ವ್ಯತೀಪಾತ ಗಂ. 17-38 ಕರಣ: ಬಾಲವ ಗಂ. 08-13. ರಾಹುಕಾಲ: ಸಾಯಂಕಾಲ 04:30–06:00, ಸೂರ್ಯೋದಯ: 06-51 ಸೂರ್ಯಾಸ್ತ: 06-35
ಮುಸ್ಲಿಂ ದಿನಾಂಕ : 25 ರಜಬ್, ದಿನ ವಿಶೇಷ : ತ್ರಿಸ್ಪೃಷ ಮಹಾದ್ವಾದಶಿ, ಕ್ವಿಂಕ್ವಗೇಶಿಮಾ (ಶ್ರೋವ್) ಭಾನುವಾರ, ಅದೃಷ್ಟ ಸಂಖ್ಯೆ: 5, 13

ಮೇಷ: ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಒತ್ತಡ ತೋರಿಬಂದರೂ ಅಭಿವೃದ್ಧಿಯ-ಬೆಳವಣಿಗೆ ಹರ್ಷ ತರವುದು. ನಿಮ್ಮ ಮುಖಂಡತ್ವದ ಸಾಮಾಜಿಕ ಕಾರ್ಯಕ್ಕೆ ಗ್ರಾಮಸ್ಥರಿಂದ ನಿರೀಕ್ಷೆಗೂ ಮೀರಿ ಸಹಾಯ ಸೌಹಾರ್ದಗಳು ದೊರೆಯುವುದು.

ವೃಷಭ: ಮನರಂಜನೆಗಾಗಿ ಅಥವಾ ಕ್ಷಣಿಕ ಸುಖದ ಅನುಭವಕ್ಕಾಗಿ ದುಂದುವೆಚ್ಚ ಮಾಡದಿರಿ. ಮಗನ ಉದ್ಯೋಗ ನಿಮಿತ್ತದ ವಿದೇಶ ಪ್ರಯಾಣ ಸಂತೋಷ ತರಲಿದೆ. ಸಹಚರರಲ್ಲಿ ಸಾಲ ತೆಗೆದುಕೊಳ್ಳುವುದು ಸರಿಯಲ್ಲ.

ಮಿಥುನ: ನಿಮ್ಮ ವ್ಯವಹಾರದ ಮೂಲವಿಚಾರವನ್ನು ನಿಮ್ಮ ಉತ್ತರಾಧಿಕಾರಿಗಳಿಗೆ ತಿಳಿಸುವ ಮನಸ್ಸಾಗಲಿದೆ. ಕೌಟುಂಬಿಕವಾಗಿ ನಡೆದುಕೊಂಡು ಬಂದಂತಹ ದೈವ ಕಾರ್ಯವನ್ನು ಹಮ್ಮಿಕೊಳ್ಳುವ ತೀರ್ಮಾನ ಆಗುವುದು.

ಕರ್ಕಾಟಕ: ಉದ್ಯೋಗದಲ್ಲಿ ನಿಮ್ಮ ಗುಂಪಿಗೆ ಎದುರಾಗಿರುವ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನ ಮಾಡಿ. ತಾಯಿಯ ಆಶೀರ್ವಾದದಿಂದ ನಿಮಗೆ ಆ ಕೆಲಸ ಸಾಧ್ಯವಾಗುವುದು. ಹೊಸ ಬಂಡವಾಳ ಹೂಡಿಕೆಗೆ ಉತ್ತಮ ಸಮಯ.

ಸಿಂಹ: ಮಕ್ಕಳ ಹೆಸರಿನಲ್ಲಿ ನಿವೇಶನ ಖರೀದಿಸುವ ಯೋಚನೆಗಳು ಬರಲಿದೆ. ಅಧಿಕಾರಿಯ ಸಹಾಯದಿಂದ ಮುಂಬಡ್ತಿ ಅಥವಾ ವರ್ಗಾವಣೆಯಥಅವಕಾಶ ಪಡೆಯುವಿರಿ. ಅಬಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ.

ಕನ್ಯಾ: ವಿಶ್ರಾಂತಿ ಇಲ್ಲದ ಕೆಲಸದಿಂದ ದೇಹಾಯಾಸವಾಗಲಿದೆ. ಷೇರು ವ್ಯವಹಾರಗಳಿಂದ ಹೆಚ್ಚಿನ ಲಾಭಾಂಶ ಪಡೆಯುವಿರಿ. ಪ್ರವಾಸ ಹೋಗುವ ವಿಷಯದಲ್ಲಿ ಕುಟುಂಬದ ಸದಸ್ಯರು ನಿಮ್ಮ ನಿರ್ಧಾರಗಳನ್ನು ಒಪ್ಪಿಕೊಳ್ಳುವರು.

ತುಲಾ: ಮಕ್ಕಳ ವಿದ್ಯಾಭ್ಯಾಸ ಹಾಗೂ ಅವರ ದಿನಚರಿಯ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಾಗುವುದು. ರಾಜಕೀಯವಾಗಿ ನಿಮಗೆ ಒದಗಿಬರಲಿ-ರುವ ಅಧಿಕಾರದ ಅವಕಾಶಗಳನ್ನು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ.

ವೃಶ್ಚಿಕ: ನಿಮ್ಮ ಸಹವರ್ತಿಗಳು ಕೆಲವು ಸನ್ನಿವೇಶದಲ್ಲಿ ನಿಮ್ಮ ಪರವಾಗಿರುವಂತೆ ತೋರಿದರೂ ನಂಬುವುದು ಈ ದಿನ ಸರಿಯಲ್ಲ. ಕ್ರೀಡಾ ಪಟುಗಳು ಉತ್ತಮ ಸಾಧನೆಯಿಂದ ಬಹುಮಾನದ ಜೊತೆಯಲ್ಲಿ ಗೌರವವನ್ನು ಗಳಿಸುವರು.

ಧನು: ವಿವಾಹ, ಗೃಹ ನಿರ್ಮಾಣ ಮತ್ತು ಸ್ವತ್ತು ಸಂಪಾದನೆಯಂತಹ ಕಾರ್ಯಗಳ ಸಂಭವವಿದೆ ಅಥವಾ ಈ ವಿಷಯದಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬೇಕಾದ ಕಾಲ ಒದಗಿದೆ ಎಂಬುದು ಗಮನದಲ್ಲಿಟುಕೊಳ್ಳಿರಿ.

ಮಕರ: ನಿಮ್ಮ ದಾಂಪತ್ಯ ಜೀವನ ಸುಖಮಯವಾಗಿರುವುದು. ಒಂದು ಪ್ರಮುಖ ಕೆಲಸದ ಮುಂದಾಳತ್ವ ವಹಿಸಿ ಯಶಸ್ವಿಯಾಗಿ ಪೂರ್ಣಗೊಳಿಸುವಲ್ಲಿ ಜಯಶಾಲಿಯಾಗುವಿರಿ. ದೂರ ಸಂಚಾರದಲ್ಲಿ ಕಾರ್ಯಾನುಕೂಲ.

ಕುಂಭ: ವಿದ್ಯಾರ್ಥಿಗಳಿಗೆ ತಮ್ಮ ಅಭ್ಯಾಸದಲ್ಲಿ ಉದಾಸೀನತೆ ತೋರಿಬಂದರೂ ಶ್ರದ್ಧೆ ಮತ್ತು ಬುದ್ಧಿ ಬಲದಿಂದ ಅವರ ಫಲಿತಾಂಶಕ್ಕೆ ಚ್ಯುತಿ ಬರುವುದಿಲ್ಲ. ಮೇಲಧಿಕಾರಿಯ ಅಪರೂಪದ ಮೃದು ವರ್ತನೆಯಿಂದ ಕೆಲಸದಲ್ಲಿ ತೃಪ್ತಿ.

ಮೀನ: ಬಹುದಿನಗಳ ನಿರಂತರ ಔಷಧಿ ಸೇವನೆಯ ನಂತರ ಇಂದು ರೋಗ ನಿವಾರಣೆಯಾಗಿ ನಿಮ್ಮ ಆರೋಗ್ಯ ಉತ್ತಮ ಸ್ಥಿತಿಗೆ ಬರುವುದು. ನಿಮ್ಮ ನೂತನ ಯೋಜನೆಗೆ ತಂದೆ-ತಾಯಿಯ ಮೂಲಕ ಆರ್ಥಿಕ ಸಹಾಯ ಸಿಗುವುದು.

ಶೇ 20ರಷ್ಟು ಕೃಷಿ ಭೂಮಿ ನಿರುಪಯುಕ್ತ: ಕಾರಜೋಳ

ಪ್ರಜಾವಾಣಿ ವಾರ್ತೆ



ಗೋವಿಂದ ಕಾರಜೋಳ

ಬಾಗಲಕೋಟೆ: ರಾಜ್ಯದ ಕೃಷಿ ಭೂಮಿಯಲ್ಲಿ ಸವಳು-ಜವಳು ಸಮಸ್ಯೆ ನಿವಾರಣೆಗೆ ಯೋಜನಾ ವರದಿ ಸಿದ್ಧಪಡಿಸಲು (ಡಿಪಿಆರ್) ಧಾರವಾಡದ ಜಲ ಮತ್ತು ನೆಲ ನಿರ್ವಹಣಾ ಸಂಸ್ಥೆಗೆ (ವಾಲ್ಮಿ) ₹25 ಲಕ್ಷ ಕೊಡಲಾಗುತ್ತಿದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹೇಳಿದರು.

ಮುಧೋಳದಲ್ಲಿ ಸವಳು-ಜವಳು ಸಮಸ್ಯೆ ಕುರಿತು ಶನಿವಾರ ಆಯೋಜಿಸಿದ್ದ ರೈತರಿಗೆ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಅವೈಜ್ಞಾನಿಕ ನೀರಿನ ನಿರ್ವಹಣೆ ಪರಿಣಾಮ ರಾಜ್ಯದ ನೀರಾವರಿ ಅಚ್ಚುಕಟ್ಟು ಪ್ರದೇಶ-ಗಳಲ್ಲಿ ಶೇ20ರಷ್ಟು ಕೃಷಿ ಭೂಮಿ ಸವಳು-ಜವಳು ಸಮಸ್ಯೆಗೆ ತುತ್ತಾಗಿದೆ. ಬಳಕೆಗೆ ನಿರುಪಯುಕ್ತವಾಗಿರುವ ಅಲ್ಲಿ ಪರ್ಯಾಯ ಆರ್ಥಿಕ ಚಟುವಟಿಕೆ ಆಗಿ ಮೀನು ಪಾಲನೆ ಕೈಗೊಳ್ಳಬಹುದು ಎಂದರು.

ಅಲ್ಲಿ ಹುಲ್ಲು ಕಡ್ಡಿ ಕೂಡ ಬೆಳೆಯುವುದಿಲ್ಲ ಎಂದು ರೈತರು ಭೂಮಿ ಮಾರಾಟ ಮಾಡಿ ಕೆಲಸ ಅರಸಿ ಗುಳೇ ಹೋಗುತ್ತಿದ್ದಾರೆ. ಅದನ್ನು ತಪ್ಪಿಸಲು ಪರ್ಯಾಯಗಳ ಬಗ್ಗೆ ಅವರಿಗೆ ತಿಳಿಸಿಕೊಡಲು ಹಾಗೂ ಸವಳು-ಜವಳು ಭೂಮಿಗೆ ಮರು ಜೀವ ನೀಡಲು ವಾಲ್ಮಿ ನೇತೃತ್ವದಲ್ಲಿ ಪ್ರಾಯೋಗಿಕ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ಅದಕ್ಕೆ ಆರಂಭದಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ ಹಾಗೂ ಜಮಖಂಡಿ ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿದೆ ಎಂದರು.

ವಾಲ್ಮಿ ಜೊತೆಗೆ ನೀರಾವರಿ, ಕೃಷಿ, ಮೀನುಗಾರಿಕೆ ಇಲಾಖೆ ಅಧಿಕಾರಿಗಳು, ತೋಟಗಾರಿಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳು ಕೈಜೋಡಿಸಲಿದ್ದಾ-ರೆ. ಅದಕ್ಕೆ ಅಗತ್ಯವಿರುವ ಆರ್ಥಿಕ ಸಂಪನ್ಮೂಲ ಜಲಸಂಪನ್ಮೂಲ ಇಲಾಖೆ ಒದಗಿಸಲಿದೆ ಎಂದು ಹೇಳಿದರು.

ಮಾ.4ಕ್ಕೆ ಅನುದಾನಿತ ಶಾಲಾ–ಕಾಲೇಜುಗಳು ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನುದಾನಿತ ಶಾಲಾ ಕಾಲೇಜುಗಳ ನೌಕರರಿಗೆ ಪಿಂಚಣಿ ಸೌಲಭ್ಯ ಒದಗಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಾರ್ಚ್ 4ರಂದು ರಾಜ್ಯದಾದ್ಯಂತ ಅನುದಾನಿತ ಶಾಲಾ ಕಾಲೇಜುಗಳನ್ನು ಬಂದ್ ಮಾಡಲಿದ್ದೇವೆ. ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಿಂದ ವಿಧಾನಸೌಧ ಚಲೋ ನಡೆಸಲಾಗುವುದು' ಎಂದು ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ನೌಕರರ ಸಂಘ ತಿಳಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಡಿ.ಸಿ. ಗೋಪಿನಾಥ್, '2006ಕ್ಕೂ ಮೊದಲು ನೇಮಕವಾಗಿ ನಂತರ ಅನುದಾನ-ಕ್ಕೊಳಪಟ್ಟ ಶಾಲಾ- ಕಾಲೇಜುಗಳಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ನಿವೃತ್ತ ನೌಕಕರ ಸೇವಾ ಅವಧಿ ಪರಿಗಣಿಸಿ, ಹಳೆಯ ನಿಶ್ಚಿತ ಪಿಂಚಣಿ ಸೌಲಭ್ಯ ನೀಡಬೇಕು' ಎಂದು ಆಗ್ರಹಿಸಿದರು.

'2006ರ ನಂತರ ನೇಮಕವಾದ ನೌಕರರಿಗೂ ಸರ್ಕಾರಿ ನೌಕರರಂತೆ ನೂತನ ಪಿಂಚಣಿ ಯೋಜನೆಯನ್ನು ಯಥಾವತ್ತಾಗಿ ನೀಡಬೇಕು. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿಧಿಸಿರುವ ನಿಯಮಗಳನ್ನು ಸಡಿಲ-ಗೊಳಿಸಬೇಕು. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಓದುತ್ತಿರುವ ವಿದ್ಯಾ-ರ್ಥಿಗಳಿಗೆ ಸರ್ಕಾರದ ಸೌಲಭ್ಯಗಳ-ನ್ನು ನೀಡಬೇಕು ಹಾಗೂ ಮಾನ್ಯತೆ ನವೀಕರಣ ಪ್ರಕ್ರಿಯೆಯನ್ನು ಸರಳಗೊಳಿ-ಸಬೇಕು' ಎಂದೂ ಒತ್ತಾಯಿಸಿದರು.

ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ: ಐದನೇ ಹಂತದ ಮತದಾನ ಇಂದು

ಬಿಜೆಪಿಗೆ 'ಹಿಂದುತ್ವ', ಎಸ್‌ಪಿಗೆ ಜಾತಿ ಲೆಕ್ಕಾಚಾರ

• ಸಂಜಯ ಪಾಂಡೆ

ಲಖನೌ: ಉತ್ತರ ಪ್ರದೇಶ ವಿಧಾನಸಭೆಗೆ ಐದನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಬಿಜೆಪಿಯು 'ಹಿಂದುತ್ವ'ವನ್ನು ನೆಚ್ಚಿಕೊಂಡಿದೆ. ಸಮಾಜವಾದಿ ಪಕ್ಷವು (ಎಸ್‌ಪಿ) ಜಾತಿ ಲೆಕ್ಕಾಚಾರ ಮತ್ತು ಮುಸ್ಲಿಮರ ಬೆಂಬಲವನ್ನು ಅವಲಂಬಿಸಿದೆ. ಐದನೇ ಹಂತದಲ್ಲಿ ಮತದಾನ ನಡೆಯಲಿರುವ ಪ್ರದೇಶಗಳಲ್ಲಿ ಅಯೋಧ್ಯೆಯೂ ಸೇರಿದೆ.

ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಮತ್ತು ಇತರ ಮೂವರು ಸಚಿವರ ಭವಿಷ್ಯವು ಈ ಹಂತದಲ್ಲಿ ನಿರ್ಧಾರ ಆಗಲಿದೆ. ಕಾಂಗ್ರೆಸ್ ಪಕ್ಷದ ಹಳೆಯ 'ಭದ್ರಕೋಟೆ' ಅಮೇಠಿಯಲ್ಲಿಯೂ ಮತದಾನ ಆಗಲಿದೆ.

ಕಾಂಗ್ರೆಸ್ ಮತ್ತು ಬಿಎಸ್‌ಪಿ ಅಭ್ಯರ್ಥಿಗಳ ಸ್ಪರ್ಧೆಯಿಂದಾಗಿ ಕೆಲವು ಕ್ಷೇತ್ರಗಳಲ್ಲಿ ತ್ರಿಕೋನ ಸ್ಪರ್ಧೆ ಇದೆ. ಆದರೆ, ಹೆಚ್ಚಿನ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಎಸ್‌ಪಿ ನಡುವೆ ನೇರ ಸ್ಪರ್ಧೆಯೇ ಇದೆ.

ಅಯೋಧ್ಯೆಯಲ್ಲಿ ನಿರ್ಮಾಣ ಆಗುತ್ತಿರುವ ರಾಮ ಮಂದಿರದ ಶ್ರೇಯವು ಬಿಜೆಪಿಗೆ ಸಲ್ಲಬೇಕು ಎಂದು ಆ ಪಕ್ಷದ ಮುಖಂಡರು ಮತದಾರರಿಗೆ ಹೇಳಿದ್ದಾರೆ. ಚಿತ್ರಕೂಟ, ಪ್ರಯಾಗ-ರಾಜ್‌ನಂತಹ ಹಿಂದೂ ಧಾರ್ಮಿಕ ಕೇಂದ್ರಗಳ ಅಭಿವೃದ್ಧಿಯು ಈ ಹಂತದಲ್ಲಿ ಬಿಜೆಪಿಗೆ ನೆರವಾಗಬಹುದು ಎಂಬ ಲೆಕ್ಕಾಚಾರ ಇದೆ.

'ಹಿಂದೂ ಧಾರ್ಮಿಕ ಕೇಂದ್ರಗಳನ್ನು ನವೀಕರಿಸುವ ಹಲವು ಕ್ರಮಗಳನ್ನು ನಮ್ಮ ಸರ್ಕಾರ ಕೈಗೊಂಡಿದೆ. ಚಿತ್ರಕೂಟ ಅಥವಾ ಪ್ರಯಾಗರಾಜ್‌ಗೆ ಭೇಟಿ ಕೊಡುವ ಪ್ರವಾಸಿಗರಿಗೆ ಬದಲಾವಣೆ ಕಾಣಿಸುತ್ತದೆ' ಎಂದು ಬಿಜೆಪಿಯ ಮುಖಂಡರೊಬ್ಬರು ಹೇಳಿದ್ದಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಯೋಧ್ಯೆಯಲ್ಲಿ ಗುರುವಾರ ರೋಡ್‌ಶೋ ನಡೆಸಿದ್ದಾರೆ. ಧಾರ್ಮಿಕ ಸ್ಥಳಗಳ ಅಭಿವೃದ್ಧಿಗೆ ಕೈಗೊಂಡ ಕ್ರಮಗಳನ್ನು ಈ ಸಂದರ್ಭದಲ್ಲಿ ಅವರು ವಿವರಿಸಿದ್ದಾರೆ.

ಕೇಶವ ಪ್ರಸಾದ್ ಮೌರ್ಯ ಅವರಿಗೆ ಎಸ್‌ಪಿಯ ಪಲ್ಲವಿ ಪಟೇಲ್ ಅವರಿಂದ ಕಠಿಣ ಸ್ಪರ್ಧೆ ಎದುರಾಗಿದೆ. ಪಲ್ಲವಿ ಅವರು ಕ್ಷೇತ್ರದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಕುರ್ಮಿ ಜನಾಂಗಕ್ಕೆ ಸೇರಿದವರು. 2017ರ ಚುನಾವಣೆಯಲ್ಲಿ ಈ ಪ್ರದೇಶದ 38 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. 15 ಕ್ಷೇತ್ರಗಳು ಎಸ್‌ಪಿ ಪಾಲಾಗಿದ್ದವು.

ಎಸ್‌ಪಿ ಈ ಬಾರಿ ಸಣ್ಣ ಪಕ್ಷಗಳು ಮತ್ತು ಜಾತಿ ಆಧಾರಿತ ಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಂಡಿದೆ. ಈ ಜಾತಿ ಸಮೀಕರಣವು ತನಗೆ ಅನುಕೂಲಕ-ರವಾಗಿ ಪರಿಣಮಿಸಬಹುದು ಎಂದು ಎಸ್‌ಪಿ ನಂಬಿದೆ. ರೈತರ ಅಸಮಾಧಾನ, ಬೀಡಾಡಿ ಜಾನುವಾರು ಸಮಸ್ಯೆ ಬಿಜೆಪಿಗೆ ಪ್ರತಿಕೂಲ ಆಗಬಹುದು ಎಂಬ ಲೆಕ್ಕಾಚಾರ ಎಸ್‌ಪಿಯದ್ದಾಗಿದೆ.

ಐದನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳ ಪೈಕಿ 10ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಮುಸ್ಲಿಮರು ನಿರ್ಣಾಯಕ. ಹಾಗಾಗಿ, ಮುಸ್ಲಿಂ ಬೆಂಬಲವು ತಮ್ಮ ಗೆಲುವಿಗೆ ಪೂರಕ-ವಾಗಬಹುದು ಎಂದು ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಭಾವಿಸಿದ್ದಾರೆ. ಅಖಿಲೇಶ್ ಅವರಲ್ಲದೆ, ಎಸ್‌ಪಿಯ ಮಿತ್ರ ಪಕ್ಷಗಳಾದ ಅಪ್ನಾದಳದ ಕೃಷ್ಣಾ ಪಟೇಲ್, ಎಸ್‌ಬಿಎಸ್‌ಪಿಯ ಓಂ ಪ್ರಕಾಶ್ ರಾಜ್‌ಭರ್ ಅವರು ಇಲ್ಲಿ ಹಲವು ಸಮಾವೇಶಗಳನ್ನು ನಡೆಸಿದ್ದಾರೆ.



ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಬಲರಾಂಪುರದಲ್ಲಿ ಶನಿವಾರ ನಡೆಸಿದ ರ್‍ಯಾಲಿಯಲ್ಲಿ ಪಕ್ಷದ ಕಾರ್ಯಕರ್ತನೊಬ್ಬ ಬಾವುಟ ಬೀಸಿದರು ಪಿಟಿಐ ಚಿತ್ರ

ಕಾಂಗ್ರೆಸ್, ಬಿಎಸ್‌ಪಿ ನಗಣ್ಯ

ಐದನೇ ಹಂತದಲ್ಲಿ ಮತದಾನ ನಡೆಯಲಿರುವ ಪ್ರದೇಶದಲ್ಲಿ ಕಾಂಗ್ರೆಸ್ ಪ್ರಭಾವವು ಕಡಿಮೆ. ಹಾಗಿದ್ದರೂ ಕಳೆದ ಬಾರಿ ಗೆದ್ದ ಎರಡು ಕ್ಷೇತ್ರಗಳನ್ನು ಉಳಿಸಿಕೊಳ್ಳಬೇಕು ಮತ್ತು ಒಟ್ಟು ಗೆಲುವು ಇನ್ನೂ ಹೆಚ್ಚಬೇಕು ಎಂಬ ಆಕಾಂಕ್ಷೆ ಪಕ್ಷಕ್ಕೆ ಇದೆ. ಅಮೇಠಿ, ಪ್ರಯಾಗರಾಜ್ ಮತ್ತು ಪ್ರತಾಪಗಡ ಜಿಲ್ಲೆಗಳ ಕನಿಷ್ಠ 12 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಸ್ಪರ್ಧೆ ಒಡ್ಡಬಹುದು ಎಂದು ಹೇಳಲಾಗುತ್ತಿದೆ.

ಬಿಎಸ್‌ಪಿಯದ್ದು ಕಳೆದ ಬಾರಿ ಈ ಪ್ರದೇಶದಲ್ಲಿ ಹೀನಾಯ ಪ್ರದರ್ಶನ. ದಲಿತರು ಅದರಲ್ಲೂ ವಿಶೇಷವಾಗಿ ಜಾಟವ ಸಮುದಾಯ, ಮುಸ್ಲಿಮರು ಮತ್ತು ಬ್ರಾಹ್ಮಣ ಸಮುದಾಯದ ಮತಗಳು ತನಗೆ ಸಿಗಬಹುದು ಎಂಬುದು ಬಿಎಸ್‌ಪಿಯ ನಿರೀಕ್ಷೆ. ಮುಸ್ಲಿಂ ಸಮುದಾಯ ಪ್ರಬಲವಾಗಿರುವ ಹಲವು ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳಿಗೇ ಬಿಎಸ್‌ಪಿ ಟಿಕೆಟ್ ಕೊಟ್ಟಿದೆ. ರಘುರಾಜ್ ಪ್ರತಾಪ್ ಸಿಂಗ್ ಅಲಿಯಾಸ್ ರಾಜಾ ಭಯ್ಯಾ ಅವರು ಪ್ರತಾಪಗಡದ ಕುಂಡಾ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. 1993ರಿಂದಲೂ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ.

ಐದನೇ ಹಂತ: 692 ಅಭ್ಯರ್ಥಿಗಳು ಕಣದಲ್ಲಿ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಐದನೇ ಹಂತದ ಮತದಾನ ಭಾನುವಾರ ನಡೆಯಲಿದೆ. ವಿವಿಧ ಪಕ್ಷಗಳ 692 ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ.

ಐದನೇ ಹಂತದ ಮತದಾನದ ಪ್ರಚಾರ ಶುಕ್ರವಾರ ಸಂಜೆಗೆ ಮುಕ್ತಾಯವಾಗಿದೆ. ಎಲ್ಲಾ ಅಗತ್ಯ ತಯಾರಿಗಳೂ ಸಂಪೂರ್ಣವಾಗಿವೆ ಎಂದು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಅಜಯ್ ಕುಮಾರ್ ಶುಕ್ಲಾ ಅವರು ಶನಿವಾರ ಹೇಳಿದರು.

ಬೆಳಗ್ಗೆ ಏಳು ಗಂಟೆಗೆ ಮತದಾನ ಆರಂಭವಾಗಲಿದೆ ಮತ್ತು ಸಂಜೆ 6 ಗಂಟೆಗೆ ಮುಕ್ತಾಯವಾಗಲಿದೆ ಎಂದು ಅವರು ತಿಳಿಸಿದರು.

ಸುಲ್ತಾನ್‌ಪುರ, ಚಿತ್ರಕೂಟ, ಪ್ರತಾಪ್‌ಗಡ, ಕೌಶಂಬಿ, ಪ್ರಯಾಗರಾಜ್, ಬಹರೈಚ್,ಬಾರಾಬಂಕಿ, ಶ್ರಾವಸ್ತಿ, ಗೊಂಡ, ಅಮೇಠಿ, ರಾಯಬರೇಲಿ ಮತ್ತು ಅಯೋಧ್ಯೆ ಜಿಲ್ಲೆಗಳ ಸುಮಾರು 2.24 ಕೋಟಿ ಮತದಾರರು ಐದನೇ ಹಂತದಲ್ಲಿ ಮತ ಚಲಾಯಿಸ-ಲಿದ್ದಾರೆ.

ಉತ್ತರ ಪ್ರದೇಶ ಉಪ ಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ, ಸಚಿವರಾದ ಸಿದ್ಧಾರ್ಥ್ ನಾಥ್ ಸಿಂಗ್, ರಾಜೇಂದ್ರ ಸಿಂಗ್, ನಂದ ಗೋಪಾಲ್ ಗುಪ್ತಾ, ಅಪ್ನಾ ದಳ (ಕೆ) ಅಧ್ಯಕ್ಷೆ ಕೃಷ್ಣಾ ಪಟೇಲ್, ಕಾಂಗ್ರೆಸ್ ನಾಯಕಿ ಆರಾಧನಾ ಮಿಶ್ರಾ ಮೋನ ಕಣದಲ್ಲಿರುವ ಕೆಲವು ಪ್ರಮುಖ ನಾಯಕರು.

ಐದನೇ ಹಂತದ ಚುನಾವಣೆ ಮುಗಿದರೆ, ಉತ್ತರ ಪ್ರದೇಶದ ಒಟ್ಟು 403 ವಿಧಾನಸಭೆ ಕ್ಷೇತ್ರಗಳಲ್ಲಿ 292 ಕ್ಷೇತ್ರಗಳಿಗೆ ಮತದಾನ ನಡೆದಂತಾಗು-ತ್ತದೆ. ಮಾ.3 ಮತ್ತು 7ರಂದು ಆರು ಮತ್ತು ಏಳನೇ ಹಂತದ ಮತದಾನ ನಡೆಯಲಿದೆ.

ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿ ಬಿಜೆಪಿಯ ಹಲವು ಪ್ರಮುಖ ನಾಯಕರು ಬಿಜೆಪಿ ಪರವಾಗಿ ಬಿರುಸಿನ ಪ್ರಚಾರ ಮಾಡಿದ್ದಾರೆ.

ಬಿಜೆಪಿ ಎದುರಾಳಿ ಪಕ್ಷಗಳಾದ ಸಮಾಜವಾದಿ ಪಕ್ಷ, ಬಹುಜನ ಸಮಾಜ ಪಕ್ಷ ಮತ್ತು ಕಾಂಗ್ರೆಸ್‌ನ ಪ್ರಮುಖರು ಕೂಡಾ ಕ್ಷೇತ್ರಗಳಲ್ಲಿ ಬಿರುಸಿನ ಪ್ರಚಾರ ನಡೆಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ತಮ್ಮ ಲೋಕಸಭೆ ಕ್ಷೇತ್ರ ರಾಯಬರೇಲಿಯಲ್ಲಿ ವರ್ಚುವಲ್ ರ್‍ಯಾಲಿ ನಡೆಸಿದ್ದಾರೆ. ಒಂದು ಕಾಲದಲ್ಲಿ ಕಾಂಗ್ರೆಸ್ ಭದ್ರಕೋಟೆ ಎನಿಸಿಕೊಂಡಿದ್ದ ರಾಯಬರೇಲಿ, ಅಮೇಠಿ ಮತ್ತು ರಾಮ ಜನ್ಮಭೂಮಿ ವಿವಾದದ ಕೇಂದ್ರಬಿಂದು ಅಯೋಧ್ಯಾದಲ್ಲಿನ ಸ್ಪರ್ಧೆ ಭಾರಿ ಕುತೂಹಲಕ್ಕೆ ಕಾರಣವಾಗಿದೆ.

ಸಿ.ಎಂಗೆ ಸವಾಲೆಸೆದ ಪೊಲೀಸ್ ಅಧಿಕಾರಿ ಈಗ ಜೆಡಿಯು ಅಭ್ಯರ್ಥಿ

• ಸುಮೀರ್ ಕರ್ಮಾಕರ್

ಗುವಾಹಟಿ: ಮಣಿಪುರದ ಯಸಿಕುಲ್ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಬೃಂದಾ ತೌನವೊಜಮ್ (41) ವಿರುದ್ಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಮನೆ ಮನೆ ಪ್ರಚಾರ ನಡೆಸಿದ್ದಾರೆ. ಬೃಂದಾ ಪೊಲೀಸ್ ಅಧಿಕಾರಿ ಆಗಿದ್ದವರು. ಹೆಚ್ಚುವರಿ ಎಸ್‌ಪಿ ಆಗಿದ್ದ ಅವರು ಹುದ್ದೆಗೆ ರಾಜೀನಾಮೆ ನೀಡಿ ರಾಜಕಾರಣಕ್ಕೆ ಬಂದಿದ್ದಾರೆ.

2018ರಲ್ಲಿ ನಡೆದ ಡ್ರಗ್ಸ್ ಕಳ್ಳ ಸಾಗಣೆ ಪ್ರಕರಣದ ಆರೋಪಿಯೊಬ್ಬನನ್ನು ಬಿಡುಗಡೆ ಮಾಡುವಂತೆ ಮತ್ತು ಆರೋಪಪಟ್ಟಿಯನ್ನು ವಾಪಸ್ ಪಡೆಯುವಂತೆ ಮುಖ್ಯಮಂತ್ರಿ ಬೀರೇನ್ ಸಿಂಗ್ ತಮ್ಮ ಮೇಲೆ ಒತ್ತಡ ಹೇರಿದ್ದರು ಎಂದು ಮಣಿಪುರ ಹೈಕೋರ್ಟ್‌ಗೆ ಸಲ್ಲಿಸಿದ್ದ ಪ್ರಮಾಣಪತ್ರದಲ್ಲಿ ಬೃಂದಾ ಹೇಳಿದ್ದಾರೆ. ಬೃಂದಾ ಅವರು ಕಟ್ಟುನಿಟ್ಟಿನ ಅಧಿಕಾರಿ ಎಂದೇ ಹೆಸರು ಗಳಿಸಿದ್ದರು. ಬೃಂದಾ ಅವರು ನ್ಯಾಯಾ-ಲಯವನ್ನು ಟೀಕಿಸಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿದ್ದರು. ಡ್ರಗ್ಸ್ ಪ್ರಕರಣದ ಆರೋಪಿ ಲುಖೋಸೈ ಝೌಗೆ ಮೂರು ವಾರಗಳ ಜಾಮೀನು ನೀಡಿದ್ದನ್ನು ಬೃಂದಾ ಪ್ರಶ್ನಿಸಿದ್ದರು. ಹಾಗಾಗಿ ಅವರ ವಿರುದ್ಧ ನ್ಯಾಯಾಲಯವು ಸ್ವಯಂಪ್ರೇ-ರಣೆಯಿಂದ ಪ್ರಕರಣ ದಾಖಲಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿ ಬೃಂದಾ ಅವರು ಪ್ರಮಾಣಪತ್ರ ಸಲ್ಲಿಸಿದ್ದರು.

ಚಂಡೆಲ್‌ನ ಸ್ವಾಯತ್ತ ಜಿಲ್ಲಾ ಮಂಡಳಿಯ ಸದಸ್ಯ ಝೌ ಮತ್ತು ಇತರ ಏಳು ಮಂದಿಯನ್ನು ಬೃಂದಾ ನೇತೃತ್ವದ ಮಾದಕ ಪದಾರ್ಥ ಮತ್ತು ಗಡಿ ವ್ಯವಹಾರಗಳ ತಂಡವು 2018ರ ಜೂನ್ 19ರಂದು ಬಂಧಿಸಿತ್ತು. ಅವರಿಂದ 4.5 ಕಿಲೋ ಹೆರಾಯಿನ್ ಪುಡಿ ಮತ್ತು ಇತರ ಡ್ರಗ್ಸ್ ಮಾತ್ರೆಗಳನ್ನು ವಶಕ್ಕೆ ಪಡೆಯಲಾಗಿತ್ತು.

ಬಂಧನದ ಬಳಿಕ, ಸ್ಥಳೀಯ ಬಿಜೆಪಿ ಮುಖಂಡರೊಬ್ಬರು ಬೃಂದಾ ಅವರಿಗೆ ಕರೆ ಮಾಡಿ, ಬೀರೇನ್ ಸಿಂಗ್ ಅವರ ಹತ್ತಿರ ಮಾತನಾಡಿಸಿದ್ದರು. ಝೌ ಅವರನ್ನು ಬಿಡುಗಡೆ ಮಾಡಿ ಅವರ ಹೆಂಡತಿ ಅಥವಾ ಮಗನ ಹೆಸರಿನಲ್ಲಿ ಬೇಕಿದ್ದರೆ ಪ್ರಕರಣ ದಾಖಲಿಸಿ ಎಂದು ಬೀರೇನ್ ಸಿಂಗ್ ಹೇಳಿದ್ದರು ಎಂದು ಪ್ರ-ಮಾಣಪತ್ರದಲ್ಲಿ ವಿವರಿಸಲಾಗಿದೆ.

ಬೀರೇನ್ ಅವರ ಹೆಂಡತಿಯ ನಿಕಟವರ್ತಿ ಎಂಬ ಕಾರಣಕ್ಕೆ ಝೌ ಬಿಡುಗಡೆ ಆಗಬೇಕು ಎಂದು ಮುಖ್ಯಮಂತ್ರಿ ಬಯಸಿದ್ದಾರೆ ಎಂದು ಸ್ಥಳೀಯ ಮುಖಂಡ ತಮ್ಮ ಮೇಲೆ ಒತ್ತಡ ಹೇರಿದ್ದರು ಎಂದೂ ಬೃಂದಾ ಆರೋಪಿಸಿದ್ದರು. ಬೃಂದಾ ಅವರು ಝೌನನ್ನು ಬಿಡುಗಡೆ ಮಾಡಲಿಲ್ಲ. ನಂತರ, ಆರೋಪಪಟ್ಟಿಯನ್ನೂ ದಾಖಲಿಸಿದ್ದಾರೆ. ಮುಖ್ಯಮಂತ್ರಿಯ ಜತೆ ಜಟಾಪಟಿಯ ಬಳಿಕ ಬೃಂದಾ ಅವರು ಹುದ್ದೆಗೆ ರಾಜೀನಾಮೆ ನೀಡಿದ್ದರು. ಕಾನೂನು ಸಚಿವ ಸತ್ಯವ್ರತ ಸಿಂಗ್ ವಿರುದ್ಧ ಬೃಂದಾ ಅವರು ಜೆಡಿಯು ಟಿಕೆಟ್‌ನಲ್ಲಿ ಸ್ಪರ್ಧಿಸಿದ್ದಾರೆ.

ಮುಖ್ಯಮಂತ್ರಿಯನ್ನು ಈ ಬಗ್ಗೆ ಮಾಧ್ಯಮ ಪ್ರತಿನಿಧಿಗಳು ಹಲವು ಬಾರಿ ಪ್ರಶ್ನಿಸಿದ್ದರು. ಅವರು ಆರೋಪ ನಿರಾ-ಕರಿಸಿದ್ದಾರೆ. ಆದರೆ, ಪ್ರಕರಣ ನ್ಯಾಯಾ-ಲಯದಲ್ಲಿ ಇರುವುದರಿಂದ ಏನನ್ನೂ ಹೇಳಲಾಗದು ಎಂದಿದ್ದರು.

ಭಾರಿ ಜನಪ್ರಿಯತೆ

2018ರಲ್ಲಿ ಬೃಂದಾ ಅವರು ಒಟ್ಟು ₹27 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿ-ಕೊಂಡಿದ್ದರು. ಅವರಿಗೆ ಭಾರಿ ದೊಡ್ಡ ಅಭಿಮಾನಿ ಬಳಗ ಇದೆ. ಯುವ ಜನರು ಅವರ ಬೆಂಬಲಿಗರಾಗಿದ್ದಾರೆ.

2018ರಲ್ಲಿ ಅವರಿಗೆ ವಿಶಿಷ್ಟ ಸೇವೆಗಾಗಿ ಮೆಡಲ್ ಅನ್ನು ರಾಜ್ಯ ಸರ್ಕಾರ ನೀಡಿತ್ತು. 2020ರಲ್ಲಿ ಅದನ್ನು ಅವರು ಹಿಂದಿರುಗಿಸಿದ್ದಾರೆ.

ಬೃಂದಾ ಅವರಿಗೆ ಎಷ್ಟು ಜನಪ್ರಿಯತೆ ಇದೆ ಎಂದರೆ ಬಿಜೆಪಿ ಅಭ್ಯರ್ಥಿ ಕಾನೂನು ಸಚಿವರ ಪರವಾಗಿ ಕೇಂದ್ರ ಗೃಹ ಸಚಿವರೇ ಪ್ರಚಾರ ನಡೆಸಬೇಕಾಯಿತು ಎಂದು ಜನರು ಹೇಳುತ್ತಿದ್ದಾರೆ.

ಬಿಜೆಪಿಯ 'ಹಿಂದೂ ವಿರೋಧಿ' ಆರೋಪಕ್ಕೆ ಪ್ರತ್ಯುತ್ತರ

ಅಯೋಧ್ಯೆಗೆ ಅಖಿಲೇಶ್ ಭೇಟಿ

ಪ್ರಜಾವಾಣಿ ವಾರ್ತೆ

ಲಖನೌ: 'ನನಗೆ ರಾಮನ ಅನುಗ್ರಹವಿದೆ. ಜನರು ಈ ಬಾರಿ ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊ-ಗೆಯುತ್ತಾರೆ ಎಂಬ ಖಚಿತತೆ ಇದೆ' ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಅಯೋಧ್ಯೆಯಲ್ಲಿ ಶುಕ್ರವಾರ ಹೇಳಿದ್ದಾರೆ.

ಮುಸ್ಲಿಂ ಸಮುದಾಯದವನ್ನು ಎದುರು ಹಾಕಿಕೊಳ್ಳುವ ಭೀತಿಯಿಂದ ಅಖಿಲೇಶ್ ಅವರು ಅಯೋಧ್ಯೆಯ ರಾಮ ಮಂದಿರಕ್ಕೆ ಭೇಟಿ ನೀಡುವುದಿಲ್ಲ ಎಂದು ಬಿಜೆಪಿ ಆರೋಪಿಸುತ್ತಲೇ ಇತ್ತು. ರಾಮ ಮಂದಿರಕ್ಕೆ ಭೇಟಿ ನೀಡುವ ಮೂಲಕ ಅಖಿಲೇಶ್ ಆ ಆರೋಪಗಳಿಗೆ ಪ್ರತ್ಯುತ್ತರ ನೀಡಿದ್ದಾರೆ.

ಐದನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳಲ್ಲಿ ಪ್ರಚಾರದ ಕೊನೆ ದಿನವಾದ ಶುಕ್ರವಾರ ಅವರು ಅಯೋಧ್ಯೆಯಲ್ಲಿ ರೋಡ್ ಶೋ ನಡೆಸಿದರು. ಹಲವಾರು ಸಂತರು ಈ ವೇಳೆ ಭಾಗವಹಿಸಿದ್ದರು. ತೆಹ್ರಿ ಬಜಾರ್, ರಾನೊಪಾಲಿ, ಬೆನಿಗಂಜ್ ಮತ್ತು ಅಮಾನಿಗಂಜ್ ಪ್ರದೇಶಗಳ ಮೂಲಕ 'ಸಮಾಜವಾದಿ ರಥ' ಹಾದುಹೋಯಿತು.

ಬಳಿಕ, ನಯಾ ಘಾಟ್‌ನಲ್ಲಿ ಚುನಾವಣಾ ಸಭೆ ನಡೆಸಿದ ಅವರು, 'ಜನರು ಬಿಜೆಪಿಯನ್ನು ತಿರಸ್ಕರಿಸಿ, ದೇಶ ಮತ್ತು ರಾಜ್ಯದ ಸಂಯುಕ್ತ ಸಂಸ್ಕೃತಿಯನ್ನು ಕಾಪಾಡುತ್ತಾರೆ ಎಂಬ ಭರವಸೆ ಇದೆ. ಈ ಚುನಾವಣೆ ಬಳಿಕ ಎಸ್‌ಪಿ ಸರ್ಕಾರ ರಚಿಸಿದರೆ ಮುಂದಿನ ಐದು ವರ್ಷಗಳಲ್ಲಿ ಅಯೋಧ್ಯೆಯನ್ನು ಪ್ರಮುಖ ಧಾರ್ಮಿಕ ಸ್ಥಳವನ್ನಾಗಿ ಮಾರ್ಪಾಡು ಮಾಡಲಾಗುವುದು' ಎಂದು ಭರವಸೆ ನೀಡಿದರು. ಜೊತೆಗೆ, 2015ರಲ್ಲಿ ಅಯೋಧ್ಯೆಯಲ್ಲಿ 'ಭಜನಾ ಸ್ಥಳ'ವನ್ನು ತಮ್ಮ ಸರ್ಕಾರವೇ ನಿರ್ಮಿಸಿದ್ದು ಎಂದು ಜನರಿಗೆ ನೆನಪಿಸಿದರು.

ಬೀಡಾಡಿ ಜಾನುವಾರುಗಳ ಹಾವಳಿ, ನಿರುದ್ಯೋಗ ಮತ್ತು ಬೆಲೆ ಏರಿಕೆ ಕುರಿತು ಕುರಿತು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಯುವಜನರಿಗೆ ಉದ್ಯೋಗ ನೀಡುವ ಸಲುವಾಗಿ ಜನರು ಬಿಜೆಪಿಯನ್ನು ಅಧಿಕಾರಕ್ಕೆ ತಂದರು. ಬಾಬಾ (ಯೋಗಿ ಆದಿತ್ಯನಾಥ) ಅವರ ನೆಚ್ಚಿನ ಪ್ರಾಣಿ (ಬೀಡಾಡಿ ಜಾನುವಾರುಗಳು) ದೊಡ್ಡ ಪ್ರಮಾಣದಲ್ಲಿ ಬೆಳೆ ಹಾನಿ ಮಾಡುತ್ತಿವೆ. ಮತದಾನದ ವೇಳೆ ರೈತರು ಈ ಸಮಸ್ಯೆ ಕುರಿತು ಬಿಜೆಪಿಗೆ ಸರಿಯಾದ ಉತ್ತರ ನೀಡುತ್ತಾರೆ' ಎಂದರು.

ಮೂರು ಹಂತಗಳ ಮತದಾನ ಬಾಕಿ ಇರುವ ಕಾರಣದಿಂದಾಗಿ ಅಖಿಲೇಶ್ ಅವರ ಅಯೋಧ್ಯೆ ಭೇಟಿ ಮಹತ್ವ ಪಡೆದಿದೆ. ಬಿಜೆಪಿ ನೀಡಿರುವ 'ಹಿಂದೂ ವಿರೋಧಿ' ಹಣೆಪಟ್ಟಿಯನ್ನು ಕಳಚಿಕೊಳ್ಳಲು ಅಖಿಲೇಶ್ ಅವರು ಮಾಡಿರುವ ಪ್ರಯತ್ನವಿದು ಎಂದು ಕೂಡಾ ಹೇಳಲಾಗಿದೆ.

ಕಾಂಗ್ರೆಸ್ ಅಭ್ಯರ್ಥಿಗೆ ಪ್ರಚಾರ ನಿಷೇಧ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಪಿಂಡಾರಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಜಯ್ ರಾಯ್ ಅವರ ಮೇಲೆ 24 ತಾಸು ಪ್ರಚಾರ ನಿಷೇಧ ಹೇರಲಾಗಿದೆ. ಪ್ರಧಾನಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿಯ ವಿರುದ್ಧ ನೀಡಿದ್ದಾರೆ ಎನ್ನಲಾದ ಆಕ್ಷೇಪಾರ್ಹ ಹೇಳಿಕೆಗಾಗಿ ಈ ನಿಷೇಧ ಹೇರಲಾಗಿದೆ. ಶನಿವಾರ ಬೆಳಿಗ್ಗೆ 8 ಗಂಟೆಯಿಂದ ಇದು ಅನ್ವಯ ಆಗಲಿದೆ ಎಂದು ಚುನಾವಣಾ ಆಯೋಗ ಹೇಳಿದೆ.

ಜನವರಿಯಲ್ಲಿ ನಡೆದ ಫೇಸ್‌ಬುಕ್ ನೇರ ಪ್ರಸಾರದಲ್ಲಿ ರಾಯ್ ಅವರು ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ. ಆಯೋಗವು ಅವರಿಗೆ ನೋಟಿಸ್ ನೀಡಿತ್ತು. ಈ ನೋಟಿಸ್‌ಗೆ ರಾಯ್ ಅವರು ಬುಧವಾರ ಉತ್ತರ ನೀಡಿದ್ದರು. ರಾಯ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿತರಿಸಿದ ಉಪ್ಪಿನ ಪೊಟ್ಟಣಗಳನ್ನು ಉಲ್ಲೇಖಿಸಿದ್ದ ತಮ್ಮ ಹೇಳಿಕೆಯು ಉಪಮಾತ್ಮಕವಾಗಿ-ತ್ತು ಎಂದು ಹೇಳಿದ್ದರು.

ನುಡಿ-ಕಿಡಿ


ಯೋಗಿ ಆದಿತ್ಯನಾಥ ಅವರು ನನ್ನನ್ನು ಗಲಭೆಕೋರ ಎನ್ನುತ್ತಾರೆ. ಆದರೆ ತಮ್ಮ ಮುಖವನ್ನು ಅವರು ಕನ್ನಡಿಯಲ್ಲಿ ನೋಡಿಕೊಳ್ಳುವುದಿಲ್ಲ. ಐದು ಮತ್ತು ಆರನೇ ಹಂತದ ಮತದಾನದ ಬಳಿಕ ಬಾಬಾ ಅವರು ಮನೆಗೆ ಹೋಗುತ್ತಾರೆ

ಅಖಿಲೇಶ್ ಯಾದವ್, ಎಸ್‌ಪಿ ಮುಖ್ಯಸ್ಥ


ಎಲ್ಲರ ಬೆಂಬಲದಿಂದ ಸೈಫೈ ಕುಟುಂಬದ (ಅಖಿಲೇಶ್ ಅವರ ಹುಟ್ಟೂರು) ಅಭಿವೃದ್ಧಿ ಎಂಬುದು ಸಮಾಜವಾದಿಗಳ ಈಗಿನ ಘೋಷಣೆಯಾಗಿದೆ. ಅವರ ಈಗಿನ ಅನುಯಾಯಿಗಳು ರಾಮಭಕ್ತರ ಮೇಲೆ ಗುಂಡು ಹಾರಿಸಲಿದ್ದಾರೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ


ಉತ್ತರ ಪ್ರದೇಶ ಅಭಿವೃದ್ಧಿ ಆಗುತ್ತಿತ್ತು. ಆದರೆ, ಬಿಜೆಪಿ ಜಾಹೀರಾತಿಗಾಗಿಯೇ ಕೋಟ್ಯಂತರ ರೂಪಾಯಿ ವೆಚ್ಚ ಮಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಪಾಕಿಸ್ತಾನ, ಭಯೋತ್ಪಾದನೆ, ಜಾತಿ, ಧರ್ಮದ ಬಗ್ಗೆ ಮಾತ್ರ ಮಾತನಾಡುತ್ತಾರೆ. ನಿಮ್ಮ (ಜನರು) ಬಗ್ಗೆ ಮಾತೇ ಆಡುವುದಿಲ್ಲ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ


ಯೋಗಿ ಅವರನ್ನು ಅವರ ಮಠ ಮತ್ತು ಕುಟುಂಬಕ್ಕೆ ಕಳುಹಿಸಿ. ದೊಡ್ಡ ದೊಡ್ಡ ಭರವಸೆಗಳನ್ನು ಅವರು ಕೊಟ್ಟಿದ್ದರು. ಆದರೆ ಅನುಷ್ಠಾನ ನಗಣ್ಯ. ಅವರ ಜಾತಿವಾದಿ– ಸಂಕುಚಿತ ಮನೋಭಾವದಿಂದಾಗಿ ಪರಿಶಿಷ್ಟ ಜಾತಿ, ಪಂಗಡಗಳು ಮತ್ತು ಅತಿ ಹಿಂದುಳಿದ ವರ್ಗಗಳ ಅಭಿವೃದ್ಧಿಯನ್ನು ನಿರ್ಲಕ್ಷಿಸಲಾಗಿದೆ

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ


ರಷ್ಯಾದ ಸೇನೆಯ ದಾಳಿಯಿಂದಾಗಿ ತೀವ್ರವಾಗಿ ನಜ್ಜುಗುಜ್ಜಾಗಿದ್ದು, ವಾಹನಕ್ಕೆ ಹೊತ್ತಿಕೊಂಡಿದ್ದ ಬೆಂಕಿಯನ್ನು ಉಕ್ರೇನ್‌ನ ಅಗ್ನಿಶಾಮಕ ಸೇವೆಯ ಸಿಬ್ಬಂದಿ ನಂದಿಸುತ್ತಿರುವುದು –ರಾಯಿಟರ್ಸ್ ಚಿತ್ರ

ಸಿಆರ್‌ಪಿಎಫ್ ಯೋಧ ಆತಂಕ; ಮರಳಿ ಕರೆತರಲು ಸರ್ಕಾರಕ್ಕೆ ಮನವಿ

ಉಕ್ರೇನ್‌ನಲ್ಲಿರುವ ಪುತ್ರಿ ಸಂಪರ್ಕಕ್ಕೆ ಸಿಗುತ್ತಿಲ್ಲ

ಹುಬ್ಬಳ್ಳಿ: ಉಕ್ರೇನ್‌ನಲ್ಲಿ ಸಿಲುಕಿರುವ ತಮ್ಮ ಪುತ್ರಿ ರಜಿಯಾ ಬಾಗಿಯನ್ನು ಸುರಕ್ಷಿತವಾಗಿ ಕರೆತರುವಂತೆ ಸಿಆರ್‌ಪಿಎಫ್ ಯೋಧರಾಗಿರುವ ರಜಿಯಾ ತಂದೆ ಯಾಸಿನ್ ಬಾಗಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ.

ಅಲ್ಲಿ ಎಂಬಿಬಿಎಸ್ ಓದುತ್ತಿರುವ ಪುತ್ರಿ ಎರಡು ದಿನಗಳಿಂದ ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ದೆಹಲಿಯಲ್ಲಿ ಕರ್ತ-ವ್ಯದಲ್ಲಿರುವ, ಗೋಕಾಕ್‌ಫಾಲ್ಸ್‌ನ ಯಾಸಿನ್ ಆತಂಕ ವ್ಯಕ್ತಪಡಿಸಿದ್ದಾರೆ.

ವಿಡಿಯೊ ಮೂಲಕ ಮನವಿ ಮಾಡಿರುವ ಅವರು, 'ಬಂಕರ್‌ನಲ್ಲಿ ಸುರಕ್ಷಿತವಾಗಿದ್ದೇವೆ ಎಂದು ಎರಡು ದಿನಗಳ ಹಿಂದೆ ಹೇಳಿದ್ದಳು. ತಾನಿರುವ ಪ್ರದೇಶದ ಸಮೀಪದಲ್ಲಿ ಬಾಂಬ್ ದಾಳಿ ಆಗುತ್ತಿದೆ. ಫೈರಿಂಗ್ ಕೂಡ ನಡೆಯುತ್ತಿದೆ ಎಂದು ತಿಳಿಸಿದ್ದಳು. ಎರಡು ದಿನಗಳಿಂದ ಸಂಪರ್ಕಕ್ಕೆ ಸಿಗುತ್ತಿಲ್ಲ' ಎಂದು ತಿಳಿಸಿದ್ದಾರೆ.

ಬೆಳಗಾವಿಯ ಶ್ರೇಯಾ ಹೇರಕಲ್, 'ಇಲ್ಲಿ ತುಂಬಾ ಭಯವಾಗುತ್ತಿದೆ. ಬೇಗ ಏರ್‌ಲಿಫ್ಟ್ ಮಾಡಿ ನಮ್ಮನ್ನು ಕರೆಸಿಕೊಳ್ಳಿ' ಎಂದು ಪೋಷಕರು ಹಾಗೂ ಸರ್ಕಾರಕ್ಕೆ ಮೊರೆ ಇಟ್ಟಿದ್ದಾರೆ.

ಪೋಷಕರಿಗೆ ವಾಟ್ಸ್‌ಆ್ಯಪ್ ವಿಡಿಯೊ ಕರೆ ಮಾಡಿ 'ಮೆಟ್ರೊ ರೈಲು ನಿಲ್ದಾಣದ ಬಂಕರ್‌ನಲ್ಲಿದ್ದೇವೆ. ನನ್ನೊಂದಿಗೆ ಸ್ನೇಹಿತೆ ವಾರುಣಿ ಉಪಾಧ್ಯ ಇದ್ದಾರೆ. ಬಹಳ ಚಳಿ ಇದೆ. ಆದಷ್ಟು ಬೇಗ ಭಾರತಕ್ಕೆ ಕರೆಸಿಕೊಳ್ಳಿ' ಎಂದು ಮನವಿ ಕೋರಿದಳು ಎಂದು ಶ್ರೇಯಾ ತಾಯಿ ಜ್ಯೋತಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಹಂಚಿಕೊಂಡರು.

'ಭಾರತೀಯ ವಿದ್ಯಾರ್ಥಿಗಳು ಹಾಗೂ ನಾಗರಿಕರ ಜೊತೆಗೆ ಉಕ್ರೇನ್ ತೊರೆಯುತ್ತಿದ್ದಾರೆ. ಹೀಗಾಗಿ ಉಕ್ರೇನ್ ದೇಶದ ಗಡಿಭಾಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳು ವಾಹನಗಳಿಂದ ತುಂಬಿ ಹೋಗಿವೆ. ಅಧಿಕಾರಿಗಳು ವಾಹನ ಸಂಚಾರ ನಿಯಂತ್ರಿಸಲು ಪರದಾಡುತ್ತಿದ್ದಾರೆ' ಎಂದು ಗದಗ ಜಿಲ್ಲೆ ಮುಂಡರಗಿ ವಿದ್ಯಾರ್ಥಿ ಮಹಾಗಣಪತಿ ಬಿಳಿಮಗ್ಗದ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

'ಶತ್ರುಗಳಿಗೆ ನಾವಿರುವ ಸ್ಥಳ ಗೊತ್ತಾದರೆ ದಾಳಿ ಮಾಡುತ್ತಾರೆ. ಆದ್ದರಿಂದ ವಾಟ್ಸ್‌ಆ್ಯಪ್‌ನಲ್ಲಿ ಲೊಕೇಶನ್ ಶೇರ್ ಮಾಡದಂತೆ ಸೂಚಿಸಿದ್ದಾರೆ. ಇನ್ನೊಂದು ವಾರ ಇಲ್ಲಿ ವಿಮಾನ ಸಂಚಾರ ಆರಂಭವಾಗು-ವುದಿಲ್ಲ. ಅಲ್ಲಿಯವರೆಗೆ ಸುರಕ್ಷಿತವಾಗಿ ಇಲ್ಲಿಯೇ ಇರುವಂತೆ ತಿಳಿಸಿದ್ದಾರೆ ಎಂದು ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲ್ಲೂಕಿನ ಮದಬಾವಿಯ ಪ್ರಜ್ವಲ್‌ಕುಮಾರ ತಿಮ್ಮಾಪುರ ಶನಿವಾರ ಪೋಷಕರಿಗೆ ಧ್ವನಿ ಸಂದೇಶ ಕಳುಹಿಸಿದ್ದಾರೆ.


ಉಕ್ರೇನ್ ದೇಶದ ಗಡಿಯಲ್ಲಿರುವ ರೊಮೇನಿಯಾ ಗಡಿಭಾಗದಲ್ಲಿ ಭಾರತಕ್ಕೆ ಮರಳುವ ಆತುರದಲ್ಲಿರುವ ಭಾರತೀಯ ವಿದ್ಯಾರ್ಥಿಗಳು

ಬಂಕರ್‌ನಲ್ಲಿ ಆಶ್ರಯ ಪಡೆದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಮೈಸೂರು/ಹಾಸನ/ಚಾಮರಾಜನಗರ: ಉಕ್ರೇನ್‌ನ ಜೆಪ್ರೋಜ್ಜಿಯಾ ನಗರದಲ್ಲಿ-ರುವ ಮೈಸೂರಿನ ವಿದ್ಯಾರ್ಥಿ ಶ್ರೀಗಣೇಶ್ ಶನಿವಾರ ಬಂಕರ್‌ನಲ್ಲಿ ಆಶ್ರಯ ಪಡೆದಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರ-ತಿಕ್ರಿಯಿಸಿದ ಅವರ ಸೋದರಿ, ಇಲ್ಲಿನ ಜನತಾನಗರದ ನಿವಾಸಿ ಮಾಲತಿ, 'ಜೆಪ್ರೋಜ್ಜಿಯಾ ನಗರದಲ್ಲೂ ಗುಂಡಿನ ಸದ್ದು ಕೇಳಿ ಬರುತ್ತಿದ್ದು, ವಿದ್ಯಾರ್ಥಿ-ಗಳನ್ನು ಬಂಕರ್‌ನಲ್ಲಿ ಇರಿಸಲಾಗಿದೆ ಎಂದು ತಿಳಿಸುವಷ್ಟರ ಹೊತ್ತಿಗೆ ಕರೆ ಕಡಿತಗೊಂಡಿತು. ಈಗ ಇಂಟರ್‌ನೆಟ್ ಸಂಪರ್ಕವೂ ಸಿಗುತ್ತಿಲ್ಲ. ಆತಂಕ ಹೆಚ್ಚುತ್ತಿದೆ' ಎಂದರು.

ಜಿಲ್ಲಾ ವಿಪತ್ತು ನಿರ್ವಹಣಾಧಿಕಾರಿ ಸುಧೀರ್, 'ಒಬ್ಬ ವಿದ್ಯಾರ್ಥಿ ಯಷ್ಟೇ ರೊಮೇನಿಯಾ ಮೂಲಕ ವಾಪಸ್ ಬರುತ್ತಿರುವ ಮಾಹಿತಿ ಬಂದಿದೆ. ಇನ್ನೂ ಖಚಿತಗೊಂಡಿಲ್ಲ. ಉಕ್ರೇನ್‌ನಲ್ಲಿರುವ ಜಿಲ್ಲೆಯ ಎಲ್ಲ ವಿದ್ಯಾರ್ಥಿಗಳೂ ಸುರಕ್ಷಿತ-ವಾಗಿದ್ದಾರೆ' ಎಂದು ಹೇಳಿದರು.


ಕಾವ್ಯಾ

ಹುಣಸೂರಿನ ತಾಲ್ಲೂಕಿನ ಹೆಗ್ಗಂದೂರು ಗ್ರಾಮದ ಕಪನಯ್ಯ ಹಾಗೂ ಪ್ರೇಮಾ ದಂಪತಿ ಪುತ್ರ ಎಚ್.ಕೆ.ಪ್ರಜ್ವಲ್ ಜೆಪ್ರೋಜ್ಜಿಯಾ ನಗರದ-ಲ್ಲಿದ್ದು, ಅವರ ಮೊಬೈಲ್ ಸಂಪರ್ಕ ಶುಕ್ರವಾರ ರಾತ್ರಿ 12 ಗಂಟೆಯಿಂದ ಕಡಿತಗೊಂಡಿದೆ. ಇದರಿಂದ ಪೋಷಕರು ಆತಂಕಗೊಂಡಿದ್ದಾರೆ.

ಪುತ್ರನನ್ನು ಬೇಗ ಕರೆಸಿ: 'ಉಕ್ರೇನ್‌ನಲ್ಲಿ ಸಿಲುಕಿರುವ ಪುತ್ರ ಗಗನ್ ಗೌಡನನ್ನು ಬೇಗ ತಾಯ್ನಾಡಿಗೆ ಕಳುಹಿಸಿಕೊಡಿ' ಎಂದು ತಾಯಿ, ಹಾಸನ ಜಿಲ್ಲೆಯ ಸುಜಾತಾ ಕಣ್ಣೀರಿಟ್ಟರು.

'ಕೀವ್ ಮೆಡಿಕಲ್ ಕಾಲೇಜಿನಲ್ಲಿ ಗಗನ್ ಪ್ರಥಮ ವರ್ಷದ ಮೆಡಿಕಲ್ ಅಧ್ಯಯನ ಮಾಡುತ್ತಿದ್ದಾನೆ. ಮಗನ ಸ್ಥಿತಿ ಕಂಡು ತಂದೆ ಆಘಾತಕ್ಕೆ ಒಳಗಾಗಿದ್ದಾರೆ. ಅಲ್ಲಿನ ಪರಿಸ್ಥಿತಿ ಸರಿಯಿಲ್ಲ ಎಂದು ಆತ ಹೇಳಿದ್ದಾನೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಮುತುವರ್ಜಿ ವಹಿಸಿ ಎಲ್ಲಾ ಮಕ್ಕಳನ್ನು ಸುರಕ್ಷಿತವಾಗಿ ಕರೆತರಬೇಕು' ಎಂದು ಮನವಿ ಮಾಡಿದರು.

ಸಂಕಷ್ಟದಲ್ಲಿ ವಿದ್ಯಾರ್ಥಿಗಳು: ಉಕ್ರೇನ್ ರಾಜಧಾನಿ ಕೀವ್‌ನಲ್ಲಿರುವ ಚಾಮರಾಜನಗರ ಜಿಲ್ಲೆಯ ವೈದ್ಯಕೀಯ ವಿದ್ಯಾರ್ಥಿಗಳನ್ನು ಅಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಂಪರ್ಕಿಸಿದೆ. ಆದರೆ, ಖಾರ್ಕಿವ್‌ನಲ್ಲಿರುವ ವಿದ್ಯಾರ್ಥಿ-ನಿಯನ್ನು ಸಂಪರ್ಕಿಸಿಲ್ಲ.

ಗುಂಡ್ಲುಪೇಟೆ ತಾಲ್ಲೂಕಿನ ಕಮರಹಳ್ಳಿಯ ಕಾವ್ಯಾ ಎಂಬ ವಿದ್ಯಾರ್ಥಿನಿ ಸದ್ಯಕ್ಕೆ ಬಂಕರ್‌ನಲ್ಲಿ ಸುರ-ಕ್ಷಿತವಾಗಿದ್ದಾರೆ. ಆದರೆ, ಪರಿಸ್ಥಿತಿ ಹದಗೆ-ಡುತ್ತಿದ್ದು, ಆಹಾರ, ನೀರಿಗೆ ಕೊರತೆ ಉಂಟಾಗುವ ಆತಂಕ ಸೃಷ್ಟಿಯಾಗಿದೆ.

'ಆಹಾರ ವಸ್ತುಗಳು ದುಬಾರಿ-ಯಾಗುತ್ತಿದೆ. ರಷ್ಯಾ ಸೇನೆ ನಗರವನ್ನು ಸುತ್ತುವರಿದಿದ್ದು, ಹೊರಗಡೆ ಹೋಗಲು ಸಾಧ್ಯವಾಗದ ಪರಿಸ್ಥಿತಿ ಇದೆ. ರಾಯಭಾರ ಕಚೇರಿಯು ಇದುವರೆಗೆ ನಮ್ಮನ್ನು ಸಂಪರ್ಕಿಸಿಲ್ಲ. ಭಾರತ ಸರ್ಕಾರವು ನಮ್ಮನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲು ವ್ಯವಸ್ಥೆ ಮಾಡಬೇಕು' ಎಂದು ಕಾವ್ಯಾ ಕೋರಿದ್ದಾರೆ.

ತಟಸ್ಥ ನಿಲುವು ತಳೆದ ಭಾರತ


ನವದೆಹಲಿ (ಪಿಟಿಐ): ಉಕ್ರೇನ್ ದಾಳಿಗೆ ಸಂಬಂಧಿಸಿ ರಷ್ಯಾ ವಿರುದ್ಧದ ಕರಡು ನಿರ್ಣಯ ಕುರಿತು ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ನಡೆದ ಮತದಾನದ ವೇಳೆ ಭಾರತ ತಟಸ್ಥ ನಿಲುವು ತಳೆದಿದೆ. ಈ ಮೂಲಕ ಬಿಕ್ಕಟ್ಟು ಶಮನಗೊಳಿಸಲು ಸಂಬಂಧಿಸಿದ ಎಲ್ಲರೊಂದಿಗೂ ಚರ್ಚಿಸಿ, ಪರಿಹಾರ ಹುಡುಕುವ ಅವಕಾಶ ಮುಕ್ತವಾಗಿ ಇರಿಸಿಕೊಂಡಿದೆ.

ನಿರ್ಣಯವನ್ನು ಮತಕ್ಕೆ ಹಾಕುವ ಸಂಬಂಧ ವಿಶ್ವಸಂಸ್ಥೆ ಭದ್ರತಾ ಮಂಡಳಿ ನಿರ್ಣಾಯಕ ಸಭೆ ಶುಕ್ರವಾರ ನಡೆಯಿತು.

ಬ್ರಿಟನ್ ವೈಮಾನಿಕ ತಾಲೀಮಿನಿಂದ ಹೊರಗುಳಿದ ಭಾರತೀಯ ವಾಯು ಸೇನೆ

ನವದೆಹಲಿ (ಪಿಟಿಐ): ಉಕ್ರೇನ್ ಬಿಕ್ಕಟ್ಟಿನಿಂದ ಉಂಟಾಗಿರುವ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಮುಂದಿನ ತಿಂಗಳು ಬ್ರಿಟನ್‌ನಲ್ಲಿ ನಡೆಯಲಿರುವ ಹಲವು ರಾಷ್ಟ್ರಗಳ ವೈಮಾನಿಕ ಸಮರ ತಾಲೀಮಿನಲ್ಲಿ ಭಾಗವಹಿಸದಿರಲು ಭಾರತೀಯ ವಾಯುಪಡೆ (ಐಎಎಫ್) ಶನಿವಾರ ನಿರ್ಧರಿಸಿದೆ.

ವಾಡಿಂಗ್ಟನ್‌ನಲ್ಲಿ ಮಾರ್ಚ್ 6ರಿಂದ 27ರವರೆಗೆ ನಡೆಯಲಿರುವ 'ಕೋಬ್ರಾ ವಾರಿಯರ್' ತಾಲೀಮಿನಲ್ಲಿ ಭಾಗವಹಿಸಲು 5 ತೇಜಸ್ ಲಘು ಯುದ್ಧ ವಿಮಾನಗಳನ್ನು ಕಳುಹಿಸಲಾಗುವುದು ಎಂದು ಐಎಎಫ್ ಮೂರು ದಿನಗಳ ಹಿಂದೆ ಹೇಳಿತ್ತು. ಆದರೆ, ಉಕ್ರೇನ್ ಬಿಕ್ಕ-ಟ್ಟಿನಿಂದಾಗಿ ಇದರದಲ್ಲಿ ಪಾಲ್ಗೊಳ್ಳದಿರ-ಲು ನಿರ್ಧರಿಸಲಾಗಿದೆ ಎಂದು ಐಎಎಫ್ ಟ್ವೀಟ್ ಮಾಡಿದೆ. ಆದರೆ, ನಂತರ ಆ ಟ್ವೀಟ್ ಅನ್ನು ಅಳಿಸಿದೆ.


ತೇಜಸ್ ವಿಮಾನ


ಟ್ವೀಟ್ ಅಳಿಸಿರುವುದಕ್ಕೆ ಕಾರಣ ನೀಡಿಲ್ಲವಾದರೂ, ಐಎಎಫ್ 'ಕೋಬ್ರಾ ವಾರಿಯರ್' ತಾಲೀಮಿನಲ್ಲಿ ಭಾಗವಹಿ-ಸುತ್ತಿಲ್ಲ ಎಂದು ಹಿರಿಯ ಅಧಿಕಾರಿಯೊ-ಬ್ಬರು ತಿಳಿಸಿದ್ದಾರೆ.

ಉಕ್ರೇನ್ ವಿರುದ್ಧದ ರಷ್ಯಾದ ಮಿಲಿಟರಿ ಆಕ್ರಮಣದ ಬಗ್ಗೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ತೆಗೆದುಕೊಂಡ ನಿರ್ಣಯದ ಮೇಲೆ ಭಾರತವು ಮತದಾನದಿಂದ ದೂರ ಉಳಿದ ಕೆಲವು ಗಂಟೆಗಳ ನಂತರ ಈ ನಿರ್ಧಾರವು ಹೊರಬಿದ್ದಿದೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 27 ಫೆಬ್ರುವರಿ 2022


ನ್ಯಾಯ ನಿಷ್ಠುರಿ ಮಾನವತೆಯ ರಾಯಭಾರಿ 11


ದೂರದಿಂದ ಬಂದ ಸುಂದರಾಂಗನೆ 12


'ಗುಣಮಟ್ಟವೇ ನಾಟಕದ ಯಶಸ್ಸಿನ ಒಳಗುಟ್ಟು' 13

ದ್ವೇಷದ ಕಿಡಿ ಹೊತ್ತಿ; ಮಮತೆಯ ನದಿ ಬತ್ತಿ...

ಇಡೀ ನಾಡು ತ್ರಸ್ತಗೊಂಡಿದೆ; ಅಸ್ತವ್ಯಸ್ತಗೊಂಡಿದೆ. ಒಂದೆಡೆ ಕ್ರೌರ್ಯದ ಹೇಷಾರವ ಹೆಚ್ಚಾಗಿದ್ದರೆ, ಮತ್ತೊಂದೆಡೆ ಸಂವೇದನಾಶೀಲ ಮನಸುಗಳು ದಿಗ್ಮೂಢವಾಗಿ ಕುಳಿತಿವೆ. ಕೋಮುದ್ವೇಷದ ವಿಷ ದಿನದಿಂದ ದಿನಕ್ಕೆ 'ವಿಷಮ'ಶೀತ ಜ್ವರದ ಹಾಗೆ ಏರುತ್ತಲೇ ಇದೆ. ವಿಪರ್ಯಾಸವೆಂದರೆ ಕಣ್ಣು–ಹೃದಯಗಳಿಲ್ಲದ ಈ ಹರಿತ ಕತ್ತಿಯ ಬೀಸಿನ ಅಳವಿನಲ್ಲಿರುವವರೆಲ್ಲ ಎಳೆಯ ಕುಡಿಗಳು, ಮುಗ್ಧ ಮನಸ್ಸುಗಳು. ಕಾಲೇಜಿನ ಅಂಗಳದಲ್ಲಿ ಸೃಷ್ಟಿಯಾದ 'ಹಿಜಾಬ್ ವಿವಾದ' ಈಗ ಕೋರ್ಟಿನ ಅಂಗಳದಲ್ಲಿದೆ. ಶಿವಮೊಗ್ಗದ ಬಜರಂಗದಳದ ಕಾರ್ಯಕರ್ತನ ಕೊಲೆ, ಅದರ ನಂತರ ನಡೆದ ದೊಂಬಿಗಳು ಕೋಮುದ್ವೇಷದ ಅಟ್ಟಹಾಸದ ಕ್ರೂರ ಕೋರೆ–ದಾಡೆಗಳನ್ನು ಕಾಣಿಸಿವೆ. ದೇಶಭಕ್ತಿ, ಧರ್ಮ, ಜಾತಿ ಎಲ್ಲವೂ ಪುರಾವೆಗಳನ್ನು ಬೇಡುತ್ತಿರುವ ಈ ಕಾಲದಲ್ಲಿ, ಮನುಷ್ಯನೆನಿಸಿಕೊಳ್ಳಲು ಅತ್ಯಗತ್ಯವಾದ ಆತ್ಮಸಾಕ್ಷಿಯೇ ಕಾಣೆಯಾಗುತ್ತಿದೆಯೇ? ಮುಗ್ಧ ಯುವಜನರದ ಬಿಸಿರಕ್ತದ ಕಾವಿನಲ್ಲಿ ಚಳಿ ಕಾಯಿಸಿಕೊಳ್ಳುತ್ತಿರುವರಿಗೆ ಈ ನೆಲದ, ಸಾಕ್ಷಿಪ್ರಜ್ಞೆಯ ಅಂತಃಕರಣದ ಧ್ವನಿ ಕೇಳಿಸುವ ಪ್ರಯತ್ನವೊಂದು ಇಲ್ಲಿದೆ...

ಎಚ್ಚರ, ನಿಂತ ಭೂಮಿಯೇ ಕರಕಲಾದೀತು!

ವೈದೇಹಿ



ಅನ್ನಕ್ಕೇ ಕುತ್ತು ಬಂದು ಜನ ಬಾಯಿ ಬಾಯಿ ಬಡಿದುಕೊಳ್ಳುವ ಹೊತ್ತಿಗೆ ಇದು ಯಾವ ಬೆಂಕಿ ಹತ್ತಿದೆ! ಯಾರದು, ಮೈ ಮೇಲೆ ಎಚ್ಚರಿಲ್ಲದವರು. ಧರ್ಮವನ್ನು ಧರ್ಮಾರ್ಥ ಬೀದಿಗೆ ತಂದು ಆಟ ನೋಡುವವರು! ಹಸಿವು, ಬಳಲಿಕೆ, ಬಡತನ ಕಣ್ಣಿಗೇ ಕಾಣದವರು. ಬೇಕೇ ಈಗ ಇದು, 'ಎಲ್ಲ ಬಿಟ್ಟ ಭಂಗಿ ನೆಟ್ಟ' ಗಾದೆ ನೆನಪಾಗುತ್ತಿದೆ.

ಇದು ತೀರಾ ಹುಡುಗಾಟಿಕೆಯಾಯ್ತು. ಕೊರೊನಾದಿಂದ ಈಗಾಗಲೇ ಅಯೋಮಯವಾಗಿರುವ ಜನಜೀವನವನ್ನು ಕೈಯಾರೆ ಮತ್ತಷ್ಟು ಸಂಕಷ್ಟಕ್ಕೆ ದೂಡಿಕೊಳ್ಳುವ ನಾವು ಏನು ಸಾಧಿಸಿದೆವು? ಇವತ್ತು ನಮಗೆ ನಿಜವಾಗಿಯೂ ಅನಿವಾರ್ಯವಾದದ್ದು ಏನು ಎಂಬ ಬಗ್ಗೆ ಸ್ಪಷ್ಟ ಕಲ್ಪನೆ ಇಲ್ಲದೇ ಹೋದಲ್ಲಿ ಇನ್ನೂ ಆದಿಯಿಂದ ನಡೆದು ಬಂದ ನನ್ನ ಧರ್ಮ ನಿನ್ನ ಧರ್ಮ ಎಂಬ ಚಕಮಕಿ ಪರಸ್ಪರ ಘಟ್ಟಿಸುತ್ತ ಜ್ವಾಲೆ ಉಗುಳುತ್ತಲೇ ಇರುವುದು.

ಹೌದು, ವಿವಿಧ ಮತ ಧರ್ಮಗಳು ಇರುವ ರಾಷ್ಟ್ರದಲ್ಲಿ ಇದೆಲ್ಲ ಸಾಮಾನ್ಯವೆ. ಆದರೆ ಈ ಸಾಮಾನ್ಯವು ರಕ್ಕಸರೂಪ ತಾಳುವ ಅಪಾಯ ದಿನದಿಂದ ದಿನಕ್ಕೆ ಏರುತ್ತಿದೆ ಏಕೆ? ಭಾಷೆಯನ್ನೇಕೆ ಮರೆತಿದ್ದೇವೆ ನಾವು? ಇಂದು ನಮಗೆ ಬೇಕಾಗಿರುವುದು ಕೆರಳಿಸದ ಭಾಷೆ. ಒಟ್ಟಿಗೇ ಬದುಕುವ ಆಸೆಯ, ಅವರವರ ಧರ್ಮವನ್ನು ಶ್ರದ್ಧೆ ಮತ್ತು ಪ್ರೀತಿಯಿಂದ ಪಾಲಿಸುತ್ತ ಬದುಕುವ ಧಾರ್ಮಿಕರು ಲಕ್ಷಗಟ್ಟಲೆ ಇದ್ದಾರೆ. ಇಂಥ ಗಲಾಟೆ ನಡೆದಾಗೆಲ್ಲ ದಂಗಾಗುವ ಮಂದಿ ಅವರು. ಸಾತ್ವಿಕರಾದ ಅವರ ಮಾತನ್ನು ಬಗ್ಗು ಬಡಿಯುವ, ಅಟ್ಟಹಾಸದ ನಗೆಯಲ್ಲಿ ಹೊಟ್ಟೆ ಹಾರಿಸುವ ಕೆರಳುಭಾಷೆಯೆದುರು ಅವರು ಭಯಕಂಪಿತರಾಗುತ್ತಾರೆ. ಎಂದರೆ ಸೌಹಾರ್ದದ ಮಾತೆತ್ತಿದರೆ ಸಾಕು ಗೇಲಿಗೀಡಾಗುವ ಕಾಲ ಬಂದಿದೆ.

ಎಲ್ಲ ಕುಳಿತು ಸಮಾಧಾನದಿಂದ ಮಾತಾಡುವುದನ್ನೇ ಮರೆತೆವೆ ನಾವು? ವಾಗ್ವಾದದ ಯುಗವೇ ಅಂತ್ಯವಾಯಿತೇ? ಹಟ ಬಿದ್ದು ವಾದ ವಿವಾದದಲ್ಲಿ ಕೊಚ್ಚಿಹೋದಾಗಲೆಲ್ಲ ವಾಗ್ವಾದದ ಸುಂದರ ಮಾರ್ಗ ಮುಚ್ಚುತ್ತದೆ. ಅಲ್ಲಿಗೆ ಅದು ಪ್ರಭುತ್ವದ ಸೋಲು, ಜನರ ಸೋಲು, ದೇಶದ ಆತ್ಮವೇ ಮುಕ್ಕಾಗುವ ದುರಂತ.

ಇತ್ತೀಚೆಗೆ ನಡೆದ ವಿದ್ಯಮಾನಗಳಲ್ಲಿ ಕಾಣಿಸುತ್ತಿರುವುದು ಮುಸ್ಲಿಮರೂ ಅಲ್ಲ, ಹಿಂದೂಗಳೂ ಅಲ್ಲ. ತಮ್ಮ ತಮ್ಮ ಧರ್ಮದ ನಿಜತಿರುಳು 'ತಿಳಿದಿದೆ ಎಂದುಕೊಂಡವರ' ಗುಂಪು. ಹಿಂದೂಗಳಾಗಿಯೂ ಹಾಗಲ್ಲದ, ಮುಸ್ಲಿಮರಾಗಿಯೂ ಹಾಗಲ್ಲದ, ಧರ್ಮದ ಮರ್ಮವನ್ನೇ ಮರೆತು ಬೀದಿಗಿಳಿದ ಜಗಳಗಂಟಿ ಜನರ ಗದ್ದಲ. ರಾಜಕಾರಣಿಗಳೋ ತಮ್ಮಲ್ಲಿನ ಮನುಷ್ಯರನ್ನೇ ಮರೆತುಕೊಂಡು ಕೇವಲ ತಮ್ಮತಮ್ಮ ಉದ್ದೇಶ ನೆರವೇರಿಕೆಗಾಗಿ ನಟನೆಗೆ ತಮ್ಮನ್ನು ತೆತ್ತುಕೊಳ್ಳುತ್ತಿದ್ದಾರೆ, ತಮ್ಮ ಅಂತರ್ಧ್ವನಿಯನ್ನೇ ಮರೆತಿದ್ದಾರೆ.

ಮಾಧ್ಯಮದವರು ವರದಿ ಮಾಡಬೇಕು ಸರಿಯೇ. ಆದರೆ ಸಂಯಮವನ್ನೇಕೆ ಕಳೆಯಬೇಕು? ತಮ್ಮ ಸಾಮಾಜಿಕ ಹೊಣೆಯನ್ನು ಅವರೇ ತಳ್ಳಿಕೊಂಡರೆ ಹೇಗೆ! ಅವರು ಬರುವವರೆಗೂ ಕಾಯುತ್ತಿರುವಂತೆ ನಿಲ್ಲುವ ಜನ ಅವರು ಬಂದೊಡನೆ ಬೊಬ್ಬೆ ಎಬ್ಬಿಸುವ ಹೊಸ ನಶೆಗೆ ಒಳಗಾಗುತ್ತಿದ್ದಾರೆ. ಅವರದನ್ನು ರೋಮಾಂಚಕವಾಗಿ ವರ್ಣಿಸಲು ಹೋಗುವರಲ್ಲ. ಏನೆನ್ನಲಿ!

ಉಡುಪಿಯಲ್ಲಿ ಸೌಹಾರ್ದ ಬಾಳುವೆಯ ಅಂಥಾ ದಾರ್ಶನಿಕ ಹಾಜಿ ಅಬ್ದುಲ್ಲಾ ಸಾಹೇಬ್ ಇದ್ದರು. ಕಾರ್ಪೊರೇಶನ್ ಬ್ಯಾಂಕಿನ ಸ್ಥಾಪಕರು. ಇಲ್ಲಿನ ಶ್ರೀ ಕೃಷ್ಣ ದೇವಸ್ಥಾನದಲ್ಲಿ ಒಂದು ವರ್ಷ ಲಕ್ಷ ದೀಪೋತ್ಸವದ ಹೊತ್ತಿನಲ್ಲಿ ಜಡಿ ಮಳೆ ಬಂದು ದೀಪಗಳೆಲ್ಲ ನಂದಿ ಹೋದಾಗ ಡಬ್ಬಿಗಟ್ಟಲೆ ಎಣ್ಣೆ ತರಿಸಿ ದೀಪಗಳನ್ನು ಮತ್ತೆ ಹೊತ್ತಿಸಿದವರು. ಮಹಾದಾನಿ, ಸಾರ್ವಜನಿಕ ಜೀವನ ಹೇಗಿರಬೇಕೆಂದು ಬದುಕಿ ತೋರಿದ ಮಹಾನುಭಾವ.

ಡಾ.ಟಿ.ಎಂ.ಎ. ಪೈ ಅಂಥ ಶಿಕ್ಷಣ ದ್ರಷ್ಟಾರ ಮಣಿಪಾಲ ಗುಡ್ಡೆಯನ್ನು ಶಿಕ್ಷಣ ದೇಗುಲವನ್ನಾಗಿಸಿದವರು. ಈ ದೇಶದ ಶಿಕ್ಷಣ ಕ್ಷೇತ್ರದಲ್ಲಿಯೇ ವಿಶಿಷ್ಟ ಕ್ರಾಂತಿ ಮಾಡಿದವರು. ಆದರೆ ಅದೇ ಮಣಿಪಾಲದ ಪಕ್ಕದ ಉಡುಪಿಯ ಶಿಕ್ಷಣ ಕ್ಯಾಂಪಸ್ಸಿನಲ್ಲಿಯೇ ನಡೆದ ಕೋಲಾಹಲ ನೋಡಿ ಇಲ್ಲೆಲ್ಲರಿಗೂ ದಿಗ್ಭ್ರಮೆ. ಇದೇನಿದು, ಮಕ್ಕಳು ಇಷ್ಟು ಅಗ್ಗವಾದರೆ? ದೊಡ್ಡವರು ಇಷ್ಟು ದುರ್ಬಲರಾದರೆ? ಮತಭೇದವಿಲ್ಲದೆ ಬಡಜನರ ನೆತ್ತಿ–ಸೂರು ತಂಪಾಗಿಸಲು ತಮ್ಮ ಜೀವಮಾನವನ್ನೇ ಸವೆಸಿದ, ಅಪ್ರತಿಮ ಸಮಾಜ ಸೇವೆಗಾಗಿ ಕರ್ನಾಟಕ ಮತ್ತು ಕೇರಳ ಸರ್ಕಾರ ಎರಡರಿಂದಲೂ ಸನ್ಮಾನಿತರಾಗಿ ಇತ್ತೀಚೆಗಷ್ಟೇ ನಿಧನರಾದ ಮುತ್ಸದ್ಧಿ ಕಿಳಿಂಗಾರು ಗೋಪಾಲಕೃಷ್ಣ ಭಟ್ ಅವರ ಮತ್ತು ನಮ್ಮ ಪ್ರೀತಿಯ ಕಿತ್ತಳೆ ಹಣ್ಣಿನ ವ್ಯಾಪಾರಿ ಪದ್ಮಶ್ರೀ ಹಾಜಬ್ಬ ಅವರ ಉದಾಹರಣೆಗಳಂತೂ ನಮ್ಮ ದೊಡ್ಡ ಹೆಮ್ಮೆ ಮತ್ತು ಮಾದರಿಗಳಾಗಿ ಕಣ್ಣಮುಂದೆಯೇ ಇವೆ. ಇವು ಯಾವುವೂ ನಮ್ಮ ಒಳ ವ್ಯಕ್ತಿತ್ವವನ್ನು ಹೊಕ್ಕೇ ಇಲ್ಲವೆ ಹಾಗಾದರೆ? ದಯಮಾಡಿ ಮಕ್ಕಳನ್ನು ಬೆಂಕಿಗೆ ಕೇಡಿಗೆ ದೂಡಬೇಡಿ. ಅಂತಿಮವಾಗಿ ಇದು ನಾವು ನಿಂತ ಭೂಮಿಯನ್ನೇ ಕರಕಾಗಿಸುತ್ತದೆ.

ವಿದ್ಯಾರ್ಥಿಗಳಾದರೂ ಕ್ಷಣಿಕ ಆವೇಶಕ್ಕೆ ಒಳಗಾಗದೆ ತಮ್ಮತಮ್ಮ ಭವಿಷ್ಯಕ್ಕೆ ಇದು ಯಾವುದೂ ಒದಗದು, ತಾವು ಸೋತು ನಿಂತಾಗ ಇವರಾರೂ ತಮಗೆ ಒದಗರು ಎಂಬ ಸತ್ಯವನ್ನು ಕಂಡುಕೊಳ್ಳಬೇಕು. ಮುಂದೆ ತಮ್ಮಲ್ಲಿಯೇ ಅರಿವು ಮೂಡಿದಾಗ ಅಮೂಲ್ಯ ವಿದ್ಯಾರ್ಥಿ ಜೀವನವನ್ನು ದಂಡ ಮಾಡಿಕೊಂಡ ಪಶ್ಚಾತ್ತಾಪದಲ್ಲಿ ಬೇಯುವಂತಾಗಬಾರದು. ಹೇಳಿ ನೀವು, ಉತ್ತಮ ಶಿಕ್ಷಣವೇ ದೇವರಲ್ಲವೇನು?


ಒಟ್ಟು ಹೇಳಬೇಕೆಂದರೆ, ಅಂದು ಇಂಡಿಯಾ ಎಂಬ ಇಡಿಯು ಪಕ್ಷವಾತಕ್ಕೆ ಈಡಾಗಿ ಸಿಕ್ಕಿದ ಸ್ವಾತಂತ್ರ್ಯ ಈಗಲೂ ಅದೇ ಪಕ್ಷವಾತದಲ್ಲಿ ನರಳುತ್ತಿದೆ. ಪಕ್ಷವಾತಕ್ಕೆ ಮದ್ದುಂಟೆ? ಅಂದು ಹೊತ್ತಿದ ಬೆಂಕಿ ಇಂದಿಗೂ ಆರಿಸುವವರಿಲ್ಲದೆ ಅಲ್ಲಲ್ಲಿ ಮತ್ತೆ ಮತ್ತೆ ಏಳುತ್ತಲೇ ಇದೆ. ನಮ್ಮ ವಿವೇಕವೇ ಇದನ್ನು ತಡೆಯಬೇಕು. ನಿತ್ಯಜಾಗೃತಿ ಇಲ್ಲದೆ ಹೋದಲ್ಲಿ ನಮಗೇ ತಿಳಿಯದಂತೆ ವಿವೇಕ ನಮ್ಮಿಂದ ದೂರವಾಗುವುದು. ಅದರ ಜಾಗದಲ್ಲಿ ಅಹಂಕಾರದ ಜೊತೆ ಅವಿವೇಕವೂ ಮಿಣ್ಣಗೆ ಸೇರಿ ಕತ್ತಿ ಮಸೆಯುವುದು. ಸಬಕೋ ಸನ್ಮತಿ ದೇ ಭಗವಾನ್ ಎಂಬ ಸಾಲು ಆರ್ತತೆಯಿಂದ ಹೊಮ್ಮುವುದು ಆಗಲೇ.

ಯಾವುದಕ್ಕೂ ನ್ಯಾಯಾಲಯವಿದೆ, ತೀರ್ಪು ನೀಡುತ್ತದೆ. ಅದನ್ನೂ ಧಿಕ್ಕರಿಸುವ ಕಾಲ ಬರಲಿಕ್ಕಿಲ್ಲ ಎಂದುಕೊಳ್ಳುತ್ತೇನೆ... ಕಷ್ಟಪಟ್ಟು ನೀರು ನಿಡಿ ನೋಡದೆ, ಜೀವ ಜೀವನದ ಹಂಗು ತೊರೆದು, ಆಸ್ತಿಪಾಸ್ತಿ ತೆತ್ತು ಸ್ವಾತಂತ್ರ್ಯ ತಂದುಕೊಟ್ಟ ಮಹಾಮಹಿಮರ ಮಾನ ಉಳಿಸೋಣ, ಆ ಮೂಲಕ ದೇಶದ ಮಾನ ಉಳಿಸೋಣ. ಇದು ನಮ್ಮ ಧರ್ಮ. ನಮ್ಮೆಲ್ಲರ ಮಾನವೂ ಧರ್ಮವೂ ಇರುವುದು ಇದರಲ್ಲಿಯೇ. ಭಾರತ ದೇಶ ಮಹಾನ್ ಆಗುವುದೂ ಆಗಲೇ. ❖


ಕಲೆ: ಕೆ.ಪಿ. ಶಾಸ್ತ್ರಿ

ಕೋಮುದ್ವೇಷ: ಮಕ್ಕಳೇ ಪದಾತಿದಳ ಆಗಿರುವುದು ದುರಂತ

ಪರಕಳ ಪ್ರಭಾಕರ




ಹಿಜಾಬ್ ವಿವಾದದ ಕಿಡಿ ಹೊತ್ತಿಕೊಂಡ ಬಳಿಕ ಕರ್ನಾಟಕದ ಕಾಲೇಜು ಅಂಗಳಗಳು ಹಲವು ಅಹಿತಕರ ಘಟನೆಗಳಿಗೆ ಸಾಕ್ಷಿಯಾದವು. ಒಂದಾಗಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ನಡುವೆಯೇ ಅದೆಂತಹ ಒಡಕು ಮೂಡಿಬಿಟ್ಟಿತು. ಸರ್ಕಾರದ ಆದೇಶದಂತೆ ಕೆಲವು ದಿನಗಳವರೆಗೆ ಕಾಲೇಜುಗಳನ್ನೇ ಬಂದ್ ಮಾಡಲಾಯಿತು. ಕಾಲೇಜುಗಳನ್ನು ಪುನರಾರಂಭಿಸಿದಾಗ 'ಧಾರ್ಮಿಕ ಸಂಕೇತದ ಯಾವುದೇ ವಸ್ತ್ರವನ್ನು ಧರಿಸದ ವಿದ್ಯಾರ್ಥಿಗಳಿಗೆ ಮಾತ್ರ ತರಗತಿಗಳಿಗೆ ಪ್ರವೇಶ' ಎಂಬ ಷರತ್ತು ಹಾಕಲಾಯಿತು. ಕರ್ನಾಟಕ ಹೈಕೋರ್ಟ್‌ನ ಮಧ್ಯಂತರ ಆದೇಶ ಕೂಡ ಹಾಗೇ ಇತ್ತು. 'ವಿವಾದಕ್ಕೆ ಸಂಬಂಧಿಸಿದ ರಿಟ್ ಅರ್ಜಿಗಳ ವಿಚಾರಣೆ ಇತ್ಯರ್ಥವಾಗುವವರೆಗೆ ವಿದ್ಯಾರ್ಥಿಗಳು ಹಿಜಾಬ್ ಇಲ್ಲವೆ ಕೇಸರಿ ಶಾಲು ಧರಿಸಿ ತರಗತಿಗಳಿಗೆ ಪ್ರವೇಶಿಸುವಂತಿಲ್ಲ. ಧಾರ್ಮಿಕ ಸಂಕೇತಗಳನ್ನು ಪ್ರದರ್ಶಿಸುವಂತಿಲ್ಲ' ಎಂದು ಮಧ್ಯಂತರ ಆದೇಶ ಹೊರಡಿಸಿರುವ ಹೈಕೋರ್ಟ್‌ನ ತ್ರಿಸದಸ್ಯ ಪೀಠ, ಅಂತಿಮ ತೀರ್ಪನ್ನು ಇನ್ನೂ ನೀಡಬೇಕಿದೆ.

ಬುರ್ಖಾ ಹಾಗೂ ಹಿಜಾಬ್ ಧರಿಸುವುದು ಇಸ್ಲಾಂ ಆಚರಣೆಯಲ್ಲಿ ಅನಿವಾರ್ಯವಾಗಿರುವ ಕಟ್ಟುಪಾಡೇ? ಹಿಜಾಬ್ ಶಿರವಸ್ತ್ರವು ಮುಸ್ಲಿಂ ಮಹಿಳೆಯರ ಉಡುಗೆಯಲ್ಲಿ ಕಡ್ಡಾಯವಾಗಿ ಇರಲೇಬೇಕಾದ ಭಾಗವೇ ಅಥವಾ ಅದೊಂದು ಪುರುಷಪ್ರಧಾನ ವ್ಯವಸ್ಥೆಯ ದಬ್ಬಾಳಿಕೆ ಸಂಕೇತವೇ? ಸಮಾಜದ ಮುಖ್ಯವಾಹಿನಿಯಿಂದ ಮಹಿಳೆಯರನ್ನು ಹೊರಗಿಡಲು ಈ ವಸ್ತ್ರಸಂಹಿತೆಯನ್ನು ವಿಧಿಸಲಾಗಿದೆಯೇ ಮತ್ತು ಮಹಿಳೆಯರನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿ ನೋಡುವ ಪ್ರಯತ್ನ ಇದಾಗಿದೆಯೇ – ಇಂತಹ ಮೂಲಭೂತವಾದ ಹಾಗೂ ವಿಸ್ತೃತ ಪ್ರಶ್ನೆಗಳನ್ನು ನಾನಿಲ್ಲಿ ಚರ್ಚೆ ಮಾಡಲು ಹೋಗುವುದಿಲ್ಲ. ಏಕೆಂದರೆ, ಸದ್ಯದ ವಿವಾದಕ್ಕೂ ಈ ಪ್ರಶ್ನೆಗಳಿಗೂ ಯಾವುದೇ ಸಂಬಂಧವಿಲ್ಲ. ಇಲ್ಲಿ ಪ್ರಶ್ನೆ ಇರುವುದು ಹಿಜಾಬ್ ಧರಿಸುವುದರಿಂದ ಸಮವಸ್ತ್ರ ನಿಯಮದ ಉಲ್ಲಂಘನೆ ಆಗುತ್ತದೆಯೇ ಎನ್ನುವುದಷ್ಟೆ. ಉಡುಪಿ ಕಾಲೇಜಿನಲ್ಲಿ ವಿವಾದದ ಕಿಡಿ ಹೊತ್ತಿಕೊಂಡಿದ್ದೇ ಈ ಪ್ರಶ್ನೆಯಿಂದ. ಹೀಗಾಗಿ ಹಿಜಾಬ್ ಧಾರಣೆಯ ಪ್ರಶ್ನೆಯು ಇಲ್ಲಿ ಶಿಕ್ಷಣದ ವಿಷಯವನ್ನಷ್ಟೇ ಒಳಗೊಂಡಿದೆ.

ಕರ್ನಾಟಕದ ಕೆಲವು ಕಾಲೇಜುಗಳ ಅಂಗಳದಲ್ಲಿ ನಡೆದ ಅಹಿತಕರ ಬೆಳವಣಿಗೆಗಳು ಮತ್ತು ಅದರ ಪರಿಣಾಮಗಳು ಈಗ ಅಲ್ಲಿಗಷ್ಟೆ ಸೀಮಿತವಾಗಿ ಉಳಿದಿಲ್ಲ. ಕಾಲೇಜು ಅಂಗಳದಿಂದ ಸೀಮೋಲ್ಲಂಘನ ಮಾಡಿ, ರಾಜ್ಯವ್ಯಾಪಿ, ದೇಶವ್ಯಾಪಿ ಈ ವಿವಾದದ ಗಾಳಿ ಹರಡಿದ್ದಲ್ಲದೆ, ಅಂತರರಾಷ್ಟ್ರೀಯ ಮಟ್ಟದಲ್ಲೂ ಚರ್ಚೆಗೆ ಒಳಗಾಗಿದೆ. ಸದ್ಯ ಹೈಕೋರ್ಟ್ ಹಾಗೂ ಮುಂದೆ ಸುಪ್ರೀಂ ಕೋರ್ಟ್ ಈ ವಿವಾದಕ್ಕೆ ಸಂಬಂಧಿಸಿದಂತೆ ಏನೇ ತೀರ್ಪು ನೀಡಿದರೂ ಇದು ಸುಲಭಕ್ಕೆ ತಣ್ಣಗಾಗುವಂಥದ್ದಲ್ಲ. ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯಲ್ಲಿ ವಿವಾದದ ಅಲೆಗಳು ಸುನಾಮಿಯಂತೆ ಮತ್ತೆ ಮತ್ತೆ ಮೇಲೆದ್ದು ಕೆಟ್ಟ ಪರಿಣಾಮವನ್ನು ಬೀರಲಿರುವುದು ಶತಃಸಿದ್ಧ. ಈ ವಿವಾದದಿಂದ ಹಿಂದೂ ಮತ್ತು ಮುಸ್ಲಿಂ ಧ್ರುವೀಕರಣ ಮತ್ತಷ್ಟು ತೀವ್ರಗೊಂಡಿದೆ. ಎರಡೂ ಪಾಳಯದಲ್ಲಿರುವ ಸಮಾಜಘಾತುಕ ಶಕ್ತಿಗಳಿಗೆ ಇದೊಂದು ಆಯುಧವಾಗಿ ಸಿಕ್ಕಿದೆ. ಹಿಜಾಬ್ ಘಟನೆಯಿಂದ ಹಿಂದೂಗಳನ್ನು ಅನಾಯಾಸವಾಗಿ ಎತ್ತಿಕಟ್ಟಿ ಒಗ್ಗೂಡಿಸಲು ಸಾಧ್ಯವಾಯಿತು ಎಂದು ಸಂಭ್ರಮಿಸುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ತುಂಬಾ ಹರಿದಾಡಿವೆ.

ಉಡುಪಿ ಕಾಲೇಜಿನ ಅಭಿವೃದ್ಧಿ ಸಮಿತಿಯು ಹಿಜಾಬ್ ಧರಿಸದಂತೆ ನಿರ್ಬಂಧ ವಿಧಿಸಿದ ಕಾರಣ, 'ಹಿಜಾಬ್ ಧರಿಸುವುದರಿಂದ ಸಮವಸ್ತ್ರದ ನಿಯಮವನ್ನು ಉಲ್ಲಂಘನೆ ಮಾಡಿದಂತಾಗುತ್ತದೆಯೇ' ಎನ್ನುವುದೊಂದೇ ಇಲ್ಲಿ ಪ್ರಶ್ನೆಯಾಗಿತ್ತು. ಆದರೆ, ಚರ್ಚೆ ಅಲ್ಲಿಗೇ ನಿಲ್ಲಲಿಲ್ಲ. ಹಿಜಾಬ್ ಧರಿಸಿ ಬಂದ ಮುಸ್ಲಿಂ ವಿದ್ಯಾರ್ಥಿನಿಯರ ವಿರುದ್ಧ ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಪ್ರತಿಭಟನೆಗಿಳಿದರು. ಉಡುಪಿಯಲ್ಲಿ ಶುರುವಾದ ಈ ಕಿಡಿ ಕ್ಷಿಪ್ರವಾಗಿ ಎಲ್ಲೆಡೆ ಹಬ್ಬಿತು. ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರ ಮೇಲೆ ಕಲ್ಲು ತೂರಾಟವನ್ನೂ ನಡೆಸಲಾಯಿತು. ಬಜರಂಗದಳದ ಕಾರ್ಯಕರ್ತರು ವಾಹನಗಳಲ್ಲಿ ಸುತ್ತುತ್ತಾ ಕೇಸರಿ ಶಾಲುಗಳನ್ನು ವಿದ್ಯಾರ್ಥಿಗಳ ಹೆಗಲ ಮೇಲೆ ಹಾಕುತ್ತಿದ್ದ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.



ಮಂಡ್ಯದಲ್ಲಿ ಹಿಜಾಬ್ ಧರಿಸಿದ ವಿದ್ಯಾರ್ಥಿನಿಯನ್ನು 'ಜೈ ಶ್ರೀರಾಮ್' ಎಂದು ಕೂಗುತ್ತಿದ್ದ ವಿದ್ಯಾರ್ಥಿಗಳ ಗುಂಪೊಂದು ಅಟ್ಟಾಡಿಸಿಕೊಂಡು ಹೋದದ್ದು, ಆ ವಿದ್ಯಾರ್ಥಿನಿ 'ಅಲ್ಲಾಹು ಅಕ್ಬರ್' ಎನ್ನುತ್ತಾ ನಡೆದದ್ದು – ಈ ದೃಶ್ಯದ ತುಣುಕಂತೂ ಜಗತ್ತಿನಾದ್ಯಂತ ವೈರಲ್ ಆಯಿತು. ದಲಿತ ವಿದ್ಯಾರ್ಥಿಗಳ ಗುಂಪು ನೀಲಿ ಶಾಲು ಧರಿಸಿ, 'ಜೈ ಭೀಮ್' ಎನ್ನುತ್ತಾ ಮುಸ್ಲಿಂ ವಿದ್ಯಾರ್ಥಿನಿಯರ ಬೆಂಬಲಕ್ಕೆ ನಿಂತಿತು. ಸದೃಢ ಸಮಾಜದ ಪ್ರತಿಬಿಂಬ ಆಗಿರಬೇಕಿದ್ದ, ಎಲ್ಲ ವಿಧದ ಹೂವುಗಳು ಒಂದಾಗಿ ಅರಳಬೇಕಿದ್ದ ಕಾಲೇಜುಗಳ ಅಂಗಳದಲ್ಲಿ ಅದೆಷ್ಟೊಂದು ಒಡಕಲು ಬಿಂಬಗಳನ್ನು ಸೃಷ್ಟಿಸಲಾಯಿತು!

ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರಿಗೆ ತರಗತಿ ಪ್ರವೇಶ ನಿರಾಕರಿಸಿದ್ದನ್ನು ವಿಶ್ವಸಂಸ್ಥೆ ಕೂಡ ಕಟುವಾಗಿ ಟೀಕಿಸಿತು. ಧಾರ್ಮಿಕ ಸ್ವಾತಂತ್ರ್ಯದ ಹರಣ ಇದಾಗಿದ್ದು, ಶಿಕ್ಷಣದ ವ್ಯವಸ್ಥೆಗೆ ಮುಸ್ಲಿಂ ಹೆಣ್ಣುಮಕ್ಕಳು ತೆರೆದುಕೊಳ್ಳದಂತೆ ಮೂಲೆಗೆ ತಳ್ಳುವ ಯತ್ನ ಇದಾಗಿದೆ ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿತು.

11ನೇ ಪುಟಕ್ಕೆ...

ಹಿಂದೆ ಸರಿದ ಮುಸ್ಲಿಂ ಹುಡುಗಿಯರ ಶಿಕ್ಷಣ

ಬಾನು ಮುಷ್ತಾಕ್



ವರ್ತಮಾನದ ತಲ್ಲಣಗಳಿಗೆ ಮುಖಾಮುಖಿ ಆಗಬೇಕಾದ ಈ ಸಂದರ್ಭ ಎಲ್ಲಾ ಸೂಕ್ಷ್ಮತೆ ಮತ್ತು ಸಂವೇದನೆಗಳನ್ನೂ ಕಳೆದುಕೊಂಡಿದೆ. ಮಾತು ಮತ್ತು ವಿವಾದಗಳು, ಸಂಚು ಮತ್ತು ಒಳಸಂಚುಗಳು ಜನರ ನೆಮ್ಮದಿಯನ್ನು ಅತ್ಯಂತ ವ್ಯವಸ್ಥಿತವಾಗಿ ಕಸಿದುಕೊಳ್ಳುತ್ತಿವೆ. ಶಾಂತಿ ಮತ್ತು ಪ್ರೀತಿ-ವಿಶ್ವಾಸದ ಸಂದೇಶವನ್ನು ನೀಡುತ್ತಿರುವವರು ಇಂದು ಗೋಡೆಗೆ ಒತ್ತಲ್ಪಡುತ್ತಿದ್ದಾರೆ. ಆದರೂ ಇಂದಿನ ಪರಿಸ್ಥಿತಿಯಲ್ಲಿ ಮಾತನಾಡಲೇಬೇಕಿದೆ; ಅದೂ ಸಂಯಮದ, ಮನುಷ್ಯ ಪ್ರೀತಿಯ ಹಾಗೂ ಜೀವಪರವಾದ ಮನಸುಗಳು ಗಟ್ಟಿಧ್ವನಿಯಲ್ಲಿ ಮಾತನಾಡಲೇಬೇಕಾದ ತುರ್ತು ಸಂದರ್ಭ ಇದಾಗಿದೆ.

ಹಿಜಾಬ್ ಮತ್ತು ಕೇಸರಿ ಶಾಲುಗಳ ಕ್ರಿಯೆ ಮತ್ತು ಪ್ರತಿಕ್ರಿಯೆಯ ಒಳಸುಳಿಗಳು ಮತ ಬೇಟೆಯ ರಾಜಕೀಯ ಒಳಸುಳಿಗಳು ಎಂಬುದು ಎಲ್ಲರಿಗೂ ಗೊತ್ತಿರುವ ನಿತ್ಯ ಸತ್ಯವೇ ಆಗಿದೆ. ಜೇನುಗೂಡಿಗೆ ಕಲ್ಲೆಸೆದು, ಜನತೆಯ ಜೀವವನ್ನು ಪಣಕ್ಕಿಟ್ಟು, ದುರ್ಲಾಭ ಪಡೆದುಕೊಂಡು ಅಧಿಕಾರದ ಗದ್ದುಗೆಯನ್ನು ಗಟ್ಟಿಮಾಡಿಕೊಳ್ಳುವ ಹುನ್ನಾರಗಳ ಬಗ್ಗೆ ಕೂಡ ಜನರಿಗೆ ತಿಳಿದಿದೆ. ಹೀಗಿದ್ದೂ ತಮ್ಮ ತಮ್ಮ ಆಂತರ್ಯಕ್ಕೆ ಅನುಗುಣವಾಗಿ ಜನರು ತಮಗೆ ಬೇಕಾದ ಸತ್ಯವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ; ಕಣ್ಣಿದ್ದರೂ ಕುರುಡರಂತೆ ವ್ಯವಹರಿಸುತ್ತಿದ್ದಾರೆ.

ಯುವಚೇತನಗಳು, ದ್ವೇಷ, ಅಸೂಯೆಯನ್ನು ಬಿತ್ತುತ್ತ ಮನುಷ್ಯ ಹಾಗೂ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಕೆಲವೇ ಮಂದಿ ಖಳನಾಯಕರ ಆಟಿಕೆಗಳಾಗುತ್ತಿರುವುದು ದುರಂತ. ಸಂಘರ್ಷದ ಪ್ರಕ್ರಿಯೆ ಚಾಲನೆಯಲ್ಲಿ ಇದ್ದಾಗ ಮಾತ್ರ ಬೆಂದ ಮನೆಯಲ್ಲಿ ಗಳ ಸೆಳೆಯುವಂತಹ ಜನರಿಗೆ ಅಸ್ತಿತ್ವ ದೊರಕುವುದು. ಹಿಜಾಬ್, ಬುರ್ಖಾ, ನಿಖಾಬ್ ಹಾಗೂ ಅಬಾಯ ಎಂಬ ವಸ್ತ್ರ ಸಂಹಿತೆ ಮುಸ್ಲಿಂ ಹೆಣ್ಣುಮಕ್ಕಳ ಅಸ್ಮಿತೆಯ ಕುರುಹು ಎಂದು ಹೇಳಲಾಗುತ್ತಿದೆ. ತಲೆಯ ಮೇಲೆ ಸೆರಗು ಅಥವಾ ಚಾದರ್ ಅಥವಾ ಶಾಲನ್ನು ಹಲವು ದಶಕಗಳ ಹಿಂದೆ ಧರಿಸುತ್ತಿದ್ದ ಮಹಿಳೆಯರು ತರಹೇವಾರಿ ಡಿಸೈನರ್ ಬುರ್ಖಾ ಮತ್ತು ನಿಖಾಬ್ ಹಾಗೂ ಹಿಜಾಬ್‌ಗಳನ್ನು ಧರಿಸಲು ಆರಂಭಿಸಿದ್ದು ಭಾರತದ ಮುಸ್ಲಿಂ ಪುರುಷರು ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಉದ್ಯೋಗವನ್ನು ಅರಸಿಹೋದಾಗ. ಅಲ್ಲಿಂದ ಮರಳಿ ಬರುವಾಗ ಅವರುಗಳು ತಪ್ಪದೇ ಒಂದಿಷ್ಟು ಚಿನ್ನ ಮತ್ತು ಡಿಸೈನರ್ ಬುರ್ಖಾಗಳೊಂದಿಗೆ ತಮ್ಮ ಮನೆ ಸೇರಿದರು.

ಧರ್ಮದ ಆದೇಶ ಏನಿತ್ತು, ಈಗ ಏನಾಗಿದೆ ಎಂಬುದರ ಚರ್ಚೆ ವಿಸ್ತೃತವಾಗಿದೆ. ಆದರೆ ಈ ರೀತಿಯ ಅರಬ್ ಸಂಸ್ಕೃತಿಯಿಂದ ನೇರಾನೇರ ಪ್ರಭಾವಿತವಾದ ಮತ್ತು ವ್ಯಾಪಾರೀಕರಣಕ್ಕೆ ಒಳಗಾದ ಈ ವಸ್ತ್ರ ಸಂಹಿತೆಯು ವಿಭಿನ್ನ ಕಾರಣಗಳಿಗಾಗಿ ಚರ್ಚೆಯನ್ನು ಹುಟ್ಟುಹಾಕಿದೆ. ಅರಬನೈಜೇಷನ್ ಮತ್ತು ಕಮರ್ಶಿಯಲೈಸೇಷನ್‌ಗೆ ಒಳಪಟ್ಟ ಈ ವಸ್ತ್ರಸಂಹಿತೆಯ ಹಲವು ಲಕ್ಷ ಕೋಟಿ ರೂಪಾಯಿಯ ವಾರ್ಷಿಕ ವಹಿವಾಟು ಆಶ್ಚರ್ಯಜನಕ ಅಂಕಿ-ಅಂಶಗಳನ್ನು ನಮ್ಮೆದುರಿಗೆ ತೆರೆದಿಡುತ್ತದೆ.


ಬಹು ಸಂಸ್ಕೃತಿಯ ಸಮಾಜದಲ್ಲಿ ಹಿಜಾಬ್ ಎಂಬುದು ತಲೆಯ ಸುತ್ತಲಿನ ವಸ್ತ್ರ ಮಾತ್ರ ಆಗಿಲ್ಲ; ಬದಲಿಗೆ ಇಡೀ ದೇಹವನ್ನು ಮುಚ್ಚುವಂತಹ ವಸ್ತ್ರವಾಗಿದೆ. ಅದರ ಮೇಲೆ ಇನ್ನೂ ಹೆಚ್ಚಿನ ಪಾವಿತ್ರ್ಯವನ್ನು ಕಾಪಾಡಿಕೊಳ್ಳಲು ಬಯಸುವ ಹೆಣ್ಣುಮಕ್ಕಳು ಕೈಗಳಿಗೆ ಗ್ಲೌಸ್ ಮತ್ತು ಕಾಲಿಗೆ ಸಾಕ್ಸ್ ಅನ್ನೂ ಧರಿಸುವ ಪರಿಪಾಟವನ್ನು ಇಟ್ಟುಕೊಂಡಿದ್ದಾರೆ. ಆದರೆ, ಮಾಧ್ಯಮಗಳಿಗೆ ಹೆಚ್ಚು ಪ್ರತಿಕ್ರಿಯೆಗಳನ್ನು ನೀಡುತ್ತಿರುವ ದುಬೈನ ರಾಜಕುಮಾರಿಯಾದ ಹೆಂದ್ ಅಲ್ ಖಾಸಿಮಿ ತನ್ನ ತಲೆಯ ಅರ್ಧ ಕೂದಲನ್ನು ಒಪ್ಪವಾಗಿ ತೋರುತ್ತಿದ್ದು ಇನ್ನರ್ಧ ತಲೆಗೆ ತೆಳುವಾದ ದುಪಟ್ಟವನ್ನು ಧರಿಸಿರುತ್ತಾಳೆ. ಆಕೆಯ ಇದೇ ದಿರಿಸಿನ ಫೋಟೊಗಳು ಎಲ್ಲೆಡೆ ಲಭ್ಯ.

ಪ್ರಚಲಿತ ಹಿಜಾಬ್ ವಿವಾದವು ಅಧಿಕಾರ ರಾಜಕಾರಣದ ಪ್ರಹಸನದ ಪ್ರತಿಫಲವಾಗಿದೆ. ಮುಂದಿನ ಚುನಾವಣೆಯಲ್ಲಿ ಜಾತಿವಾರು ಮತಗಳನ್ನು ವಿಭಜಿಸಿ ತಮ್ಮ ಅನುಕೂಲಕ್ಕೆ ತಕ್ಕಂತೆ ವೋಟು ಪಡೆಯುವ ತಂತ್ರಗಾರಿಕೆ ಕೂಡ ಇದರ ಹಿಂದಿದೆ.

11ನೇ ಪುಟಕ್ಕೆ...

ಶಾಂತಿಯ ತೋಟದಲ್ಲಿ ಬೆಂಕಿಗೇನು ಕೆಲಸ?

ಅಜಯ್ ಕುಮಾರ್ ಸಿಂಗ್



ಬಹುಶಃ ಅದು, 1981ರ ಮೇ ತಿಂಗಳು. ಬೆಂಗಳೂರು ಅಪರಾಧ ವಿಭಾಗದ ಡಿಸಿಪಿ ಆಗಿದ್ದ ನನ್ನನ್ನು ಶಿವಮೊಗ್ಗದ ಎಸ್‌ಪಿ ಆಗಿ ನಿಯುಕ್ತಿಗೊಳಿಸಲಾಗಿತ್ತು. ಶಿವಮೊಗ್ಗ, ನಿಸರ್ಗದ ಮಡಿಲಲ್ಲಿ ಪವಡಿಸಿರುವ ಅದೊಂದು ಬಹಳ ಸುಂದರವಾದ ಒಂದು ಜಿಲ್ಲೆ. ತೀರ್ಥಹಳ್ಳಿಯ ಕಾಡು, ಆಗುಂಬೆಯ ಬೆಟ್ಟ, ಸಾಗರ ಮತ್ತು ಅಲ್ಲಿನ ಅದ್ಭುತವಾದ ಜೋಗ ಜಲಪಾತ... ಹೀಗೆ ಆ ಜಿಲ್ಲೆಯ ಸೊಬಗು ಕಣ್ಮುಂದೆ ಇನ್ನೂ ನವಿರಾಗಿದೆ. ಮಲೆನಾಡಿಗೆ ಮುತ್ತಿನ ಸರದಂತಿರುವ ಪಶ್ಚಿಮ ಘಟ್ಟಗಳಾಚೆಗೆ ನೇಸರ ತೆರೆ ಮುಚ್ಚುವಾಗ ಈ ಜಿಲ್ಲೆಯೇ ಸ್ವರ್ಗ. ನನ್ನ ಜೀವನದಲ್ಲೇ ಅಂತಹ ಅದ್ಭುತ ಸೂರ್ಯಾಸ್ತವನ್ನು ಹಿಂದೆಂದೂ ನೋಡಿರಲಿಲ್ಲ. ಅದೂ ಆಗುಂಬೆ ಘಾಟಿಯಲ್ಲಿ, ಹೊನ್ನಾಳಿಯಿಂದ ಶಿವಮೊಗ್ಗಕ್ಕೆ ಬರುವ ದಾರಿಯಲ್ಲಿ ನಿಂತು ಸೂರ್ಯಾಸ್ತವನ್ನು ಕಣ್ತುಂಬಿಕೊಳ್ಳುವುದೇ ಆನಂದ. ಮುಂಗಾರು ಕಳೆದ ಮೇಲಂತೂ ಇಡೀ ಜಿಲ್ಲೆಗೆ ಮಂಜಿನ ತೋರಣ.

ಸೌಂದರ್ಯದ ಜೊತೆಗೆ ಸಾಂಸ್ಕೃತಿಕವಾಗಿ ಬಹಳ ಸಕ್ರಿಯವಾಗಿದ್ದ ಜಿಲ್ಲೆ ಶಿವಮೊಗ್ಗ. ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ತವರೂರು ಎಂದೇ ಕರೆಯಬಹುದು. ಸಾಹಿತ್ಯ ಕ್ಷೇತ್ರದ ಮೇಲೆ ನನಗೆ ಆಸಕ್ತಿ ಇತ್ತು. ಆದರೆ, ಈ ಕ್ಷೇತ್ರಕ್ಕೆ ನನ್ನನ್ನು ನಾನು ಮತ್ತಷ್ಟು ತೆರೆದುಕೊಂಡಿದ್ದು ಇಲ್ಲಿಂದಲೇ. ಆಂಗ್ಲ ಪತ್ರಿಕೆಯಲ್ಲಿ ಅನುವಾದಗೊಂಡ ಗೋಪಾಲಕೃಷ್ಣ ಅಡಿಗ ಅವರ ಕವನವೊಂದನ್ನು ನಾನು ಮೊದಲ ಬಾರಿ ಓದಿದ್ದು ಶಿವಮೊಗ್ಗದಲ್ಲೇ. ಇದು ನನ್ನನ್ನು ಕನ್ನಡ ಸಾಹಿತ್ಯದತ್ತ ಮತ್ತಷ್ಟು ಸೆಳೆಯಿತು. ಹೀಗೆ ಕನ್ನಡ ಸಾಹಿತ್ಯದ ಜೊತೆಗೆ ಸಂಬಂಧ ಹೆಚ್ಚಿಸಿದ ಜಾಗ ಶಿವಮೊಗ್ಗ. ಇಲ್ಲಿದ್ದ ಮೇಲೆ ಕೆ.ವಿ. ಸುಬ್ಬಣ್ಣ ಅವರ ಪರಿಚಯ ಆಗಲೇಬೇಕಲ್ಲವೇ? ಅವರ ಭೇಟಿ ನನ್ನ ಸಾಹಿತ್ಯ ಜೀವನಕ್ಕೆ ತಿರುವು ಸಿಕ್ಕ ಗಳಿಗೆ. ಸುಬ್ಬಣ್ಣ ಅವರಿಂದ, ಯು.ಆರ್. ಅನಂತಮೂರ್ತಿ, ರಾಮಚಂದ್ರ ಶರ್ಮಾ, ಚಂದ್ರಶೇಖರ ಕಂಬಾರ, ಪ್ರಸನ್ನ, ಡಿ.ಆರ್.ನಾಗರಾಜ್, ಎಚ್.ಎಸ್. ಶಿವಪ್ರಕಾಶ್, ಕಿ.ರಂ. ನಾಗರಾಜ್, ಸುಮತೀಂದ್ರ ನಾಡಿಗ, ಶೂದ್ರ ಶ್ರೀನಿವಾಸ್... ಹೀಗೆ ವೈಯಕ್ತಿಕ ಪರಿಚಯದ ಸರಣಿಯೇ ಆರಂಭವಾಯಿತು.

ಇಂಥ ಸ್ಥಳದಲ್ಲಿ ನಾನು ಸುಮಾರು ಒಂದು ವರ್ಷ 11 ತಿಂಗಳು ಎಸ್‌ಪಿಯಾಗಿ ಕಾರ್ಯನಿರ್ವಹಿಸಿದ್ದೆ. ತಂಪಾದ ಪರಿಸರದಲ್ಲಿರುವ ಈ ಜಿಲ್ಲೆಯಲ್ಲಿ ಸದಾ ಶಾಂತಿ ನೆಲೆಸಿರಬೇಕು ಎನ್ನುವ ಬಯಕೆ ನನ್ನದಾಗಿತ್ತು.

ನಾನು ಶಿವಮೊಗ್ಗ ಎಸ್‌ಪಿ ಆಗಿ ರಾತ್ರೋರಾತ್ರಿ ನಿಯುಕ್ತಿಗೊಂಡಿದ್ದೂ ಇದೇ ರೀತಿ ಗಲಭೆಯೊಂದು ನಡೆದಿದ್ದ ಸಂದರ್ಭದಲ್ಲೇ. ನನಗೆ ಆ ಘಟನೆ ಅಷ್ಟು ಜ್ಞಾಪಕಕ್ಕೆ ಬರುತ್ತಿಲ್ಲ. ಇಂಥ ಘಟನೆ ಮಧ್ಯೆಯೇ ನಾನು ಅಧಿಕಾರ ಸ್ವೀಕರಿಸಿ ಕಾರ್ಯನಿರ್ವಹಿಸುವುದು ಸವಾಲಿನಿಂದ ಕೂಡಿತ್ತು. ಈ ಅವಧಿಯಲ್ಲಿ ಸಹೋದ್ಯೋಗಿಗಳು ಕಳಕಳಿ ಮತ್ತು ಮುತುವರ್ಜಿಯಿಂದ ಕೆಲಸ ಮಾಡಿದರು. ಜನರಿಂದ ಅದ್ಭುತವಾಗಿ ಸಹಕಾರ ದೊರೆಯಿತು. ಮಾತುಕತೆಯ ದಾರಿ ಎಲ್ಲರ ಬಳಿಯೂ ಇತ್ತು. ಈಗಿನ ಶಿವಮೊಗ್ಗದ ಸ್ಥಿತಿ ನೆನೆದು ವ್ಯಥೆಯಾಗುತ್ತಿದೆ.

ಜಿಲ್ಲೆಯಲ್ಲಿ ಆಗಲೇ ಹಿಂದೂ ಮಹಾಸಭಾ, ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್, ತಬ್ಲೀಗ್ ಜಮಾತ್ ಹೀಗೆ ಎಲ್ಲ ಧರ್ಮದ ಸಂಘಟನೆಗಳು ನೆಲೆಯೂರಿದ್ದವು. ಆದರೆ ಎಲ್ಲರ ಜೊತೆಗೂ ನನ್ನ ಸಂವಾದ ನಿರಂತರವಾಗಿತ್ತು. ಪರಸ್ಪರ ನಂಬಿಕೆ ನಮ್ಮಲ್ಲಿ ಬೆಳೆದಿತ್ತು. ಇವರ ಬಳಿ ಮನಸ್ಸು ಬಿಚ್ಚಿ ಮಾತನಾಡಬಹುದು ಎನ್ನುವ ಧೈರ್ಯ ಬಂದಿತ್ತು. ಈ ಭಾವನೆ ಪರಸ್ಪರರದ್ದಾಗಿತ್ತು. ಇದರಿಂದ ನಮಗೆ ಶಕ್ತಿ ಉಪಯೋಗ ಮಾಡುವ ಪ್ರಸಂಗವೇ ಬಂದಿರಲಿಲ್ಲ. ಮಾತುಕತೆ ಮೂಲಕವೇ ಬಹಳ ಸಮಸ್ಯೆಗಳನ್ನು ಬಗೆಹರಿಸಿದ್ದೆವು. ಕೆಲವೊಮ್ಮೆ ಪ್ರಕ್ಷುಬ್ಧ ಸ್ಥಿತಿ ನಿರ್ಮಾಣವಾಗುತ್ತಿತ್ತು.

12ನೇ ಪುಟಕ್ಕೆ...

ನ್ಯಾಯ ನಿಷ್ಠುರಿ ಮಾನವತೆಯ ರಾಯಭಾರಿ!



ಎಸ್.ಜಿ. ಸಿದ್ದರಾಮಯ್ಯ

'ನನ್ನ ಅಹಂಕಾರ ಲತೆಗೆ ಎರೆಯಬೇಡ ನೀರ
ನಿನ್ನ ಜ್ಯೋತಿ ಜ್ವಾಲೆ ನುಂಗಿ ನೆಕ್ಕಿ ಬಿಡಲಿ ಪೂರ'

ಇದು ಕೋ.ಚೆ ಎಂದೇ ಖ್ಯಾತರಾಗಿದ್ದ ಕೋ. ಚೆನ್ನಬಸಪ್ಪನವರ ಕವಿತೆಯ ಸಾಲು.

ಹೊರತೋರಿಕೆಗೆ ಸಿಟ್ಟು ಸೆಡವಿನ ಅಹಂಕಾರಿಯಂತೆ ಕಾಣುತ್ತಿದ್ದ ಕೋ.ಚೆಯವರು ಬದುಕಿನುದ್ದಕ್ಕೂ ಸಾಮಾನ್ಯ ಜನರ ಬಗ್ಗೆ ಅತೀವ ಕಾಳಜಿ, ಸಂಪನ್ನ ಅನುಕಂಪ ಉಳ್ಳವರಾಗಿದ್ದರು. ವೃತ್ತಿಯಲ್ಲಿ ಎಷ್ಟು ಕಠೋರ ನಿಯಮಗಳನ್ನು ಪಾಲಿಸುತ್ತಿದ್ದರೋ ಅಷ್ಟೇ ಅಂತಃಕರಣದ ಭಾವದಲ್ಲಿ ವೃತ್ತಿಧರ್ಮವನ್ನು ನ್ಯಾಯಕ್ಕಾಗಿ, ನೊಂದವರಿಗಾಗಿ, ಬಡವರಿಗಾಗಿ, ಅಮಾಯಕರಿಗಾಗಿ ಮೀಸಲಿಟ್ಟು ಸತ್ಯ, ಶುದ್ಧ ಕಾಯಕಪ್ರಜ್ಞೆಯಲ್ಲಿ ಬಾಳಿದರು. ರಾಮಕೃಷ್ಣ ಪರಮಹಂಸ, ಶಾರದಾಮಾತೆ, ವಿವೇಕಾನಂದ, ಕುವೆಂಪು, ಅರವಿಂದರನ್ನು ಆಧ್ಯಾತ್ಮಿಕ ಗುರುಗಳಾಗಿ

> **ತಮ್ಮ ನಡೆ, ನುಡಿಯಿಂದ ಸಮಾಜಕ್ಕೆ ಮಾದರಿಯಾಗಿದ್ದ ಕೋ.ಚೆನ್ನಬಸಪ್ಪ ಅವರ ಜನ್ಮಶತಮಾನೋತ್ಸವದ ಸಂದರ್ಭ ಇದು. ಸಂದು ಹೋದ ಮಾನವೀಯ ಕಳಕಳಿಯ ಈ ನ್ಯಾಯಸಂತನ ಬದುಕಿನ ಮೇಲೊಂದು ಹಿನ್ನೋಟ...**

ಉಪಾಸಿಸಿದ್ದರು. 'ಮಾಯೆಯನ್ನು ಹರಿದೊಗೆವ ಶಕ್ತಿ ನನ್ನೊಳಗಾಗೆ ನಾನೊಬ್ಬ ದೇವನಹೆ ನಿನ್ನ ಹಂಗೇನು?' ಎಂಬ ಆತ್ಮಪ್ರತ್ಯಯದಲ್ಲಿ ನೈತಿಕ ಕೆಚ್ಚಿನಿಂದ ನಡೆದುಕೊಂಡರು. ವಕೀಲರಾಗಿ, ನ್ಯಾಯಾಧೀಶರಾಗಿ ಪತ್ರಿಕೆಯ ಸಂಪಾದಕರಾಗಿ ಅವರು ತಮ್ಮ ವೃತ್ತಿ ಧರ್ಮಕ್ಕೆ ಎಂದೂ ಎರವಾಗಿ ಬಾಳಿದವರಲ್ಲ. ನ್ಯಾಯನಿಷ್ಠುರಿಯಾಗಿ ಮಾನವೀಯ ಸಂವೇದನೆಯ ಕರ್ತವ್ಯಪ್ರಜ್ಞೆಗೆ ಬದ್ಧರಾಗಿ ಬದುಕಿದರು. ಇಂಥ ಕೋ.ಚೆಯವರು ಇಂದು ಬದುಕಿದ್ದರೆ ಅವರಿಗೆ ನೂರು ವರ್ಷ ತುಂಬಿರುತ್ತಿತ್ತು.

ಕೋ.ಚೆಯವರು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಆಲೂರು ಮಜರಾಗ್ರಾಮ ಕಾನಾಮಡುಗುವಿನಲ್ಲಿ 1922ರ ಫೆಬ್ರುವರಿ 27ರಂದು ಜನಿಸಿದರು. ತಂದೆ ಕೋ. ವೀರಣ್ಣ, ತಾಯಿ ಬಸಮ್ಮ. ವಿದ್ಯಾರ್ಥಿ ಆಗಿದ್ದಾಗಲೇ ಚಲೇಜಾವ್ ಚಳವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ ಕೋ.ಚೆಯವರು ಒಬ್ಬ ಹುಟ್ಟು ಹೋರಾಟಗಾರ. ಗಾಂಧೀಜಿ ಅವರ ಪ್ರಭಾವಕ್ಕೆ ಒಳಗಾದಂತೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಅವರು ಮುಂದೆ ಕರ್ನಾಟಕ ಏಕೀಕರಣ ಹೋರಾಟದಲ್ಲಿ ಪ್ರಧಾನ ಪಾತ್ರ ವಹಿಸಿದ್ದರು. ಬಳ್ಳಾರಿಯು ಕರ್ನಾಟಕದಲ್ಲೇ ಉಳಿಯಬೇಕು ಎಂದು 1953ರಲ್ಲೇ ನ್ಯಾಯಮೂರ್ತಿ ಎಲ್.ಎಸ್. ಮಿಶ್ರಾ ಆಯೋಗದ ಮುಂದೆ ಮೈಸೂರು ಶಾಸಕರಿಂದ ಸಹಿ ಸಂಗ್ರಹ ಮಾಡಿಸಿ ಮನವಿ ಅರ್ಪಿಸಿದ್ದರು. ಅದರ ಫಲವಾಗಿ ಬಳ್ಳಾರಿ, ಮೈಸೂರು ರಾಜ್ಯದಲ್ಲಿ ವಿಲೀನಗೊಂಡು ಕರ್ನಾಟಕ ಪ್ರಾಂತ ರಚನೆಗೆ ನಾಂದಿ ಹಾಡಿತು.

ಕೋ.ಚೆಯವರ ಈ ಬಗೆಯ ಹೋರಾಟದ ಕಿಚ್ಚು ಬದುಕಿನುದ್ದಕ್ಕೂ ಜ್ವಲಂತವಾಗಿತ್ತು. ಇಂಥ ಕ್ರಿಯಾಶೀಲತೆಯ ಉಪ ಉತ್ಪನ್ನದ ರೂಪದಲ್ಲಿ ಅವರ ಸಾಹಿತ್ಯ, ಮಾತು, ಚಿಂತನೆ, ಕಾರ್ಯಕ್ರಮ ಎಲ್ಲವೂ ರೂಪು ತಳೆದಿವೆ. ಅವರು ಬಳ್ಳಾರಿಯಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದಾಗ 'ರೈತ' ಪತ್ರಿಕೆಯನ್ನು ಆರಂಭಿಸಿದರು. ಅವರ ಸಾಮಾಜಿಕ ಬದ್ಧತೆ ಎಷ್ಟಿತ್ತೆಂದರೆ, ತಮ್ಮ ಪತ್ನಿಯ ಮೈಮೇಲಿನ ಒಡವೆಗಳನ್ನು ಒತ್ತೆ ಇಟ್ಟು ಈ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಬಾಯಿಯಿಲ್ಲದ ಬಡ ರೈತರ ಗೋಳಿಗೆ ಬಾಯಿಯಾಯಿತು 'ರೈತ' ಪತ್ರಿಕೆ. ಕನ್ನಡದ ಹೆಸರಾಂತ ಹಾಸ್ಯ ಸಾಹಿತಿ ಬೀಚಿಯವರು 'ಬೇವಿನಕಟ್ಟೆ ತಿಮ್ಮ' ಎಂಬ ಸ್ಥಿರ ಶೀರ್ಷಿಕೆಯಲ್ಲಿ ಮೊಟ್ಟಮೊದಲು ಬರೆದದ್ದು ಇದೇ ಪತ್ರಿಕೆಯಲ್ಲಿ.

1946ರಿಂದ 1965ರವರೆಗೆ ಬಳ್ಳಾರಿಯಲ್ಲಿ ವಕೀಲಿ ವೃತ್ತಿ ಮಾಡಿದ ಕೋ.ಚೆಯವರು ನ್ಯಾಯನಿಷ್ಠೆ, ಪ್ರಾಮಾಣಿಕತೆಯಿಂದ ವ್ಯವಹರಿಸಿದವರು. ಪ್ರಸಂಗ ಬಂದಾಗ ಕೋರ್ಟಿನಲ್ಲಿಯೇ ನ್ಯಾಯಾಧೀಶರನ್ನು ತರಾಟೆಗೆ ತೆಗೆದುಕೊಂಡು ಫಜೀತಿ ಉಂಟುಮಾಡಿದ ಸಂದರ್ಭಗಳೂ ಉಂಟು. 1965ರಲ್ಲಿ ಅವರು ನ್ಯಾಯಾಧೀಶರಾಗಿ ಬಡ್ತಿ ಪಡೆದರು. ನ್ಯಾಯಪೀಠದಲ್ಲಿ ಕುಳಿತಾಗ ಅವರ ಕಾಳಜಿ ಇದ್ದದ್ದು ನ್ಯಾಯನಿಷ್ಠೆಯ ಕಡೆಗೆ ಮತ್ತು ನ್ಯಾಯ ವಿಳಂಬದಿಂದ ಅನ್ಯಾಯ ಆಗಬಾರದು ಎಂಬ ಕಾಲನಿಷ್ಠೆಯ ಕಡೆಗೆ.

ಸಾಹಿತಿಯಾಗಿ ಕೋ.ಚೆ ಅವರ ಸಾಧನೆ ಅನನ್ಯವಾದದ್ದು. ಕಾವ್ಯ, ಕಥೆ, ಕಾದಂಬರಿ, ನಾಟಕ, ಜೀವನಚರಿತ್ರೆ, ವಿಮರ್ಶೆ, ಪ್ರಬಂಧ, ಲೇಖನ, ಪ್ರವಾಸಕಥನ, ಆತ್ಮಕಥನ, ಅನುವಾದ ಇತ್ಯಾದಿ ಎಲ್ಲ ಪ್ರಕಾರಗಳೂ ಸೇರಿದಂತೆ ಒಟ್ಟು 89 ಕೃತಿಗಳನ್ನು ಪ್ರಕಟಿಸಿದ್ದಾರೆ. ರಸಋಷಿ ಕುವೆಂಪು ಅವರ 'ರಾಮಾಯಣ ದರ್ಶನಂ' ಕೃತಿಗೆ ಅವರು ಬರೆದಿರುವ ಸಮಗ್ರ ಕಾವ್ಯ ಸಮೀಕ್ಷೆ ಅವರ ವಿಮರ್ಶಾ ದೃಷ್ಟಿಯ ರಸಾರ್ದ್ರ ಭಾವಕ್ಕೆ, ಒಳನೋಟದ ಅನುಭಾವಿಕ ದರ್ಶನ ದೃಷ್ಟಿಗೆ ಸಾಕ್ಷಿಯಾಗಿದೆ. ಅರವಿಂದರ ಮಹಾಕಾವ್ಯಗಳಾದ 'ಡಿವೈನ್ ಲೈಫ್' ಮತ್ತು 'ಸಾವಿತ್ರಿ' ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಕುವೆಂಪು ಅವರಿಂದ ಶ್ಲಾಘನೆಗೆ ಒಳಗಾಗಿದ್ದು ಅವರ ಅನುವಾದ ಶ್ರೇಷ್ಠತೆಗೆ ಸಂದ ಬಹುದೊಡ್ಡ ಗೌರವವೇ ಸರಿ.

1965ರಿಂದ 1972ರವರೆಗೆ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ನಂತರವೂ ಅವರು ಹಲವು ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ, ಅಧ್ಯಕ್ಷರಾಗಿ ಸಾಮಾಜಿಕ ಸೇವೆಯಲ್ಲಿ ಸಕ್ರಿಯರಾಗಿದ್ದರು. ಬಳ್ಳಾರಿ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯದರ್ಶಿಯಾಗಿ, ಪಂಪಾ ವಿದ್ಯಾಪೀಠದ ಸ್ಥಾಪನೆ ಮಾಡಿ ಆ ಭಾಗದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟರು. ಬಳ್ಳಾರಿ ಸಾಹಿತ್ಯ ಅಕಾಡೆಮಿ, ಸಜೀವ ಸಾಹಿತ್ಯ ಮಾಲೆಗಳನ್ನು ಹುಟ್ಟುಹಾಕಿ ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದರು. ಕನ್ನಡ ಆಡಳಿತ ಭಾಷೆಯ ಕ್ರಿಯಾ ಸಮಿತಿಯ ಅಧ್ಯಕ್ಷರಾಗಿ, ಪಾಂಡಿಚೇರಿ ಅರವಿಂದಾಶ್ರಮದ ಕರ್ನಾಟಕ ನಿಲಯದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಜನ್ಮಶತಾಬ್ದಿ ನೆನಪು

2013ರ ಫೆಬ್ರುವರಿ ತಿಂಗಳಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಅವರನ್ನು ಆಯ್ಕೆ ಮಾಡಲಾಯಿತು. ಆಗ ಅವರಿಗೆ 92 ವರ್ಷ. ಅವರು ದೈವ ಭಕ್ತರಾಗಿದ್ದರೂ ಆಧ್ಯಾತ್ಮಿಕ ಚಿಂತಕರಾಗಿದ್ದರೂ ಪ್ರಖರವಾದ ವೈಚಾರಿಕ ಪ್ರಜ್ಞೆಯನ್ನೂ ವೈಜ್ಞಾನಿಕ ಮನೋಧರ್ಮವನ್ನೂ ಒಳಗೊಂಡಿದ್ದ ಒಬ್ಬ ಮಾನವತಾವಾದಿಯಾಗಿದ್ದರು.

ಇಂಥ ಹಿರಿಯ ಜೀವದ ಜೊತೆಗೆ ಅವರ ಕೊನೆಗಾಲದ ಹತ್ತು ವರ್ಷ ಅವರ ಕಿರಿಯ ಆಪ್ತನಾಗಿದ್ದೆನೆಂಬುದು, ಅವರು ಮನೆಗೆ ಆಗಾಗ ಕರೆಸಿಕೊಂಡು ನಾಡು, ನುಡಿ, ಶಿಕ್ಷಣ, ರಾಜಕಾರಣಗಳ ಆಗುಹೋಗಿನ ಬಗ್ಗೆ ಚರ್ಚೆ ಮಾಡಿ, ಸಲಹೆ, ಸೂಚನೆ ಕೊಟ್ಟು ಕಾರ್ಯೋನ್ಮುಖನಾಗುವಂತೆ ನನಗೆ ಹೇಳುತ್ತಿದ್ದರೆಂಬುದು ನನ್ನ ಬಾಳಿನ ಅನನ್ಯ ಪುಟಗಳೆಂದು ಭಾವಿಸಿದ್ದೇನೆ. ಅವರು ಅನಾರೋಗ್ಯದ ಕಾರಣ ಆಸ್ಪತ್ರೆಗೆ ಸೇರಿದ್ದಾಗ ಅವರನ್ನು ಕಾಣಲು ಹೋಗಿದ್ದ ಆ ಸಂದರ್ಭ ನನ್ನ ಬಾಳಿನಲ್ಲಿ ಮರೆಯಲಾಗದ ಒಂದು ವಿಶೇಷ ಅನುಭವ. ಅವರ ತಲೆಗೆ ಬ್ಯಾಂಡೇಜ್ ಕಟ್ಟಿದ್ದರು. ಅವರು ಹೆಚ್ಚು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆದರೂ ಆ ಕ್ಷಣದಲ್ಲಿ ಅವರು ಆಗಿನ ಸರ್ಕಾರ 1,000 ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಿಕ್ಷಣ ನೀಡಲು ಮುಂದಾಗಿದ್ದರ ಬಗ್ಗೆ ಹೆಚ್ಚು ಆತಂಕಿತರಾಗಿದ್ದರು. ಅದನ್ನು ತಡೆಯಬೇಕು ಎಂದು ತುಂಬಾ ಆಗ್ರಹದಲ್ಲಿ ಮಾತನಾಡಿದರು. ಸರ್ಕಾರಿ ಶಾಲೆಗಳ ಸಬಲೀಕರಣ, ಗಡಿಭಾಗದ ಶಿಕ್ಷಣದ ಬಗ್ಗೆ ಸಲಹೆ ಹೀಗೆ ಮಾತು ಮುಂದುವರಿಸುತ್ತಲೇ ಇದ್ದರು.

ಮಾತು ಬೆಳೆಸುವುದು ಅವರ ಆರೋಗ್ಯಕ್ಕೆ ಒಳ್ಳೆಯದಲ್ಲ ಎಂದು ಭಾವಿಸಿದ ನಾನು ಮತ್ತು ನನ್ನ ಜೊತೆ ಬಂದಿದ್ದ ಡಾ.ವೀರಶೆಟ್ಟಿ ಅವರು ಅಲ್ಲಿಂದ ಸೂಕ್ಷ್ಮವಾಗಿ ಹೊರಟು ಬಾಗಿಲುದಾಟಿ ಬಂದಿದ್ದೆವು. ಮತ್ತೆ ಅವರಿಂದ ಕರೆ ಬರಲಾಗಿ ಅವರ ಹತ್ತಿರ ಹೋದೆವು. ಆಗ ಅವರು ನನ್ನನ್ನು ನೇರವಾಗಿ ದಿಟ್ಟಿಸಿ ನೋಡುತ್ತಾ 'ಕುವೆಂಪು ಅವರು ಪಕ್ಕದ ಕೊಠಡಿಯಲ್ಲಿದ್ದಾರೆ. ಅವರನ್ನು ನೋಡಿ ಬಂದೆಯಾ? ಮಾತನಾಡಿಸಿದೆಯಾ? ಹೋಗಿ ಮಾತನಾಡಿಸು' ಎಂದು ಸುಮ್ಮನಾದರು. ನನಗೆ ದಿಗ್ಭ್ರಮೆಯಾಗಿ ಅವಾಕ್ಕಾಗಿ ನಿಂತೆ. ಕ್ಷಣಹೊತ್ತು ಸುತ್ತಲಿದ್ದವರೆಲ್ಲರಿಗೂ ಏನೂ ತೋಚದ ಸ್ಥಿತಿ. ವೀರಶೆಟ್ಟಿಯವರು ನನ್ನ ಕಡೆ ನೋಡುತ್ತಾ ನಿಂತರು. ಅವರ ಹಿರಿಯ ಮಗಳು 'ಬನ್ನಿ ಹೋಗೋಣ' ಎಂದು ಹೊರ ನಡೆದರು. ನಾನು ಕೋ.ಚೆ ಅವರ ಪಾದಕ್ಕೆ ನಮಸ್ಕರಿಸಿ ಹೊರಬಂದೆ. 2019ರ ಫೆಬ್ರುವರಿ 23ರಂದು ಅವರು ನಿಧನರಾದರು.

ಕೊನೆಯ ದಿನಗಳ ಅವರ ಮನಸ್ಥಿತಿಗೆ ಕನ್ನಡಿ ಹಿಡಿದಂತೆ ಅವರ ಬಾಯಿಯಿಂದ ಬಂದ ಕುವೆಂಪು ಬಗೆಗಿನ ಮಾತುಗಳು ನನ್ನನ್ನು ಈಗಲೂ ಕಾಡಿಸುತ್ತಿವೆ. ಈಗಲೂ ಬೆರಗು ಹುಟ್ಟಿಸುವ ಅರಿವಿನ ನುಡಿಗಳವು. ಸಾವು, ಆ ಸಂದರ್ಭದ ಮನಃಸ್ಥಿತಿ, ಕಾಲಪ್ರಜ್ಞೆ, ಜೀವಿತಗತಿ, ಎಲ್ಲವನ್ನೂ ಗಂಭೀರವಾಗಿ ಚಿಂತನೆಗೆ ಹಚ್ಚುವ ಆ ನುಡಿಗಳು ಕೇವಲ ಮಾತಿಗೆ ಮಾತಾಗಿ ಮೂಡಿದ ಒಣ ನೆನಪಿನ ಶಬ್ದ ಅನ್ನಿಸಿಲ್ಲ. ಅದೊಂದು ರೂಪಕ.. ದೊಡ್ಡ ಜೀವಗಳು ತಮ್ಮ ಬಾಳ ಸಂಜೆಯಲ್ಲಿ ವರ್ತಮಾನದ ಜೊತೆಗೆ ಗತವನ್ನೂ, ಸದ್ಯದ ಕ್ಷಣಗಳನ್ನು ಒಟ್ಟೊಟ್ಟಿಗೆ ಅನುಭವಿಸುತ್ತಲೇ ಹೇಗೆ ಮುಂದಿನ ದಾರಿಯಲ್ಲಿನ ಮನೋಯಾನವನ್ನೂ ಮನಗಾಣಿಸುತ್ತವೆ ಎಂಬ ಒಂದು ಸೆಳಕಿನ ಮಿಂಚು ಇದು ಎಂದು ನನಗೆ ಭಾಸವಾಗಿದೆ. ಇನ್ನುಮುಂದೆ ಶಬ್ದವಿಲ್ಲ. ❖

ಮುನ್ನೋಟ 27-02-2022 ರಿಂದ 05-03-2022

ಎಂ.ಎಸ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಕೆಲವೊಂದು ವೈಯಕ್ತಿಕ ತೊಂದರೆಗಳಿಂದ ಮುಕ್ತಿ ಪಡೆಯುವಿರಿ. ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ನಿಮ್ಮ ಕೆಲವೊಂದು ಅನಿವಾರ್ಯವಲ್ಲದ ಕೆಲಸ ಕಾರ್ಯಗಳನ್ನು ಮುಂದೂಡುವುದು ಉತ್ತಮ. ಮಕ್ಕಳಿಗಾಗಿ ಬಂಡವಾಳ ಹೂಡಲು ಸಿದ್ಧರಾಗುವಿರಿ. ಬೇರೆಯವರ ತಳುಕಿನ ಮಾತಿಗೆ ಬೆರಗಾಗಿ ಬಂಡವಾಳ ಹೂಡಬೇಡಿರಿ. ಹಿತಶತ್ರುಗಳ ಭರವಸೆಗಳ ಬಗ್ಗೆ ಹೆಚ್ಚಿನ ಎಚ್ಚರಿಕೆ ಇರಲಿ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಹಿರಿಯರ ಮನೋಭಿಲಾಷೆಗಳು ಈಗ ಈಡೇರುವ ಕಾಲ. ಯಾವುದೋ ಒಂದು ಸತ್ಯವನ್ನು ಅನ್ವೇಷಣೆ ಮಾಡಲು ಹೋಗಿ ಜಯ ಸಾಧಿಸುವಿರಿ. ಬಂಧುಗಳಿಂದ ಸಾಕಷ್ಟು ಸಹಕಾರ ದೊರೆತು ಮನೆಯ ನಿರ್ಮಾಣ ಕಾರ್ಯದಲ್ಲಿ ಕೆಲಸ ಸುಗಮವಾಗುತ್ತದೆ. ಕೆಲವೊಮ್ಮೆ ಅನಿರೀಕ್ಷಿತ ಖರ್ಚುಗಳು ಎದುರಾಗುವ ಸಾಧ್ಯತೆ ಇದೆ. ಉಪಾಧ್ಯಾಯರುಗಳಿಗೆ ಉತ್ತಮ ಗೌರವ ದೊರೆಯುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಪರಸ್ಪರ ಭಿನ್ನಾಭಿಪ್ರಾಯಗಳು ಮಾಯವಾಗಿ ದಾಂಪತ್ಯದಲ್ಲಿ ಸುಖ ಜೀವನಕ್ಕೆ ನಾಂದಿಯಾಗುತ್ತದೆ. ನಿಮ್ಮ ವಿರುದ್ಧ ಸಹೋದ್ಯೋಗಿಗಳಿಂದ ಸಣ್ಣ ಪಿತೂರಿಯೊಂದು ರೂಪುಗೊಳ್ಳುತ್ತದೆ. ಹೇಗೋ ಅದರ ಸುಳಿವು ನಿಮಗೆ ತಿಳಿದು ಅದರಿಂದ ಪಾರಾಗುವಿರಿ. ಪ್ರಾಪ್ತ ವಯಸ್ಕರಿಗೆ ಸಂಬಂಧ ಕೂಡಿ ಬರುವ ಸಾಧ್ಯತೆ ಇದೆ. ಆರ್ಥಿಕ ಸ್ಥಿತಿಯು ಸ್ವಲ್ಪ ಉನ್ನತಿಯತ್ತ ಸಾಗುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ಓದಿನಲ್ಲಿ ವಿದ್ಯಾರ್ಥಿಗಳಿಗೆ ಪ್ರಗತಿ ಇರುತ್ತದೆ. ಸರ್ಕಾರಿ ಮಟ್ಟದ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಆಗುತ್ತವೆ. ದೃಢ ನಿರ್ಧಾರಗಳಿಂದ ವ್ಯವಹಾರದಲ್ಲಿ ಪಾಲ್ಗೊಳ್ಳದಿದ್ದರೆ ಸ್ವಲ್ಪ ನಷ್ಟವಾಗುವ ಸಂದರ್ಭವಿದೆ. ಕಳೆದುಹೋದ ವಿದ್ಯಮಾನಗಳಿಗೆ ಚಿಂತಿಸದೆ ಮುಂಬರುವ ಕೆಲಸ-ಕಾರ್ಯಗಳ ಬಗ್ಗೆ ಹೆಚ್ಚು ಚಿಂತನೆಯನ್ನು ಮಾಡಿರಿ. ನಿಮ್ಮ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಲು ನಿಮಗೆ ಅನುಮತಿ ದೊರೆಯುತ್ತದೆ.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಅನವಶ್ಯಕ ಪ್ರಯಾಣದಿಂದ ದೇಹಾಲಸ್ಯದ ಜೊತೆಗೆ ಧನನಷ್ಟವಾಗುತ್ತದೆ. ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಹೆಚ್ಚು ಗಮನಕೊಡುವಿರಿ. ನಿಮ್ಮ ಉದ್ಯೋಗದಲ್ಲಿನ ಪ್ರಮುಖರನ್ನು ಭೇಟಿ ಮಾಡಿ ಉದ್ಯೋಗದಲ್ಲಿ ಮೇಲೇರುವ ಬಗ್ಗೆ ಚರ್ಚೆ ಮಾಡುವಿರಿ. ಹಣದ ಒಳಹರಿವು ಸಾಮಾನ್ಯ ಮಟ್ಟದಲ್ಲಿರುತ್ತದೆ. ವಿದ್ಯಾರ್ಥಿಗಳಿಗೆ ಇದ್ದ ಸಮಸ್ಯೆಗಳು ಬಗೆಹರಿದು ವಿದ್ಯೆಗೆ ಬೇಕಾದಂತಹ ಅನುಕೂಲ ಒದಗಿಬರುತ್ತದೆ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ರಾಸಾಯನಿಕ ವಸ್ತುಗಳನ್ನು ಆಮದು, ರಫ್ತು ಮಾಡುವವರಿಗೆ ಉತ್ತಮ ವ್ಯವಹಾರವಿರುತ್ತದೆ. ನಿಮ್ಮ ಅನುಕೂಲವನ್ನು ಅನುಸರಿಸಿ ಸಮಯಕ್ಕೆ ತಕ್ಕಂತೆ ಜನಗಳ ಓಲೈಕೆ ಮಾಡುವಿರಿ. ಸಾಲ ಕೊಟ್ಟವರು ಎಡೆಬಿಡದೆ ಮರುಪಾವತಿಗಾಗಿ ತಗಾದೆ ಮಾಡುವರು. ನಿರ್ಮಾಣ ಕಾರ್ಯಗಳನ್ನು ಮಾಡುವವರಿಗೆ ಹೆಚ್ಚಿನ ಕೆಲಸಗಳು ದೊರೆಯುತ್ತವೆ. ಅಬಕಾರಿ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಕೆಲಸದ ಒತ್ತಡ ಹೆಚ್ಚುತ್ತದೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**
ವ್ಯವಹಾರದಲ್ಲಿ ಪಾಲುದಾರರಿಂದ ವ್ಯವಹಾರಕ್ಕೆ ಪ್ರೋತ್ಸಾಹ ಇರುವುದು. ಮಕ್ಕಳಿಂದ ಮನಸ್ಸಿಗೆ ಚಿಂತೆ ಮೂಡುತ್ತದೆ. ಸಾಮಾಜಿಕ ಕಾರ್ಯಗಳನ್ನು ಮಾಡುವವರಿಗೆ ಅಪವಾದ ಬರುವ ಸಾಧ್ಯತೆಗಳಿವೆ ಎಚ್ಚರ ವಹಿಸಿರಿ. ಹಿರಿಯ ಕಲಾವಿದರುಗಳಿಗೆ ಗೌರವಧನ ದೊರೆಯುವ ಸಾಧ್ಯತೆ ಇದೆ. ಸಂಗಾತಿಯಿಂದ ನಿಮ್ಮ ಚಿಂತೆಗೆ ಪರಿಹಾರ ದೊರೆಯುತ್ತದೆ. ಧಾರ್ಮಿಕ ಚರ್ಚೆಗಳಲ್ಲಿ ಭಾಗವಹಿಸಿ ನಿಮ್ಮ ವಾದವನ್ನು ಮಂಡಿಸುವ ಸಾಧ್ಯತೆ ಇದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**
ನಡವಳಿಕೆಯಿಂದ ನಿಮ್ಮ ವೈಯಕ್ತಿಕ ಜೀವನವನ್ನು ಉತ್ತಮಪಡಿಸಿಕೊಳ್ಳುವಿರಿ. ಸಾಮಾಜಿಕ ಚಿಂತನೆಗಳಿಂದ ಗೌರವಾದರಗಳನ್ನು ಪಡೆಯುವಿರಿ. ಮನಸ್ಸಿಗೆ ನೆಮ್ಮದಿಕೊಡುವ ಮಾರ್ಗವೊಂದು ನಿಮಗೆ ಗೋಚರವಾಗುತ್ತದೆ. ಕೈಗೊಂಡ ಕೆಲಸಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವಿರಿ. ದಿನಸಿ ವ್ಯಾಪಾರಿಗಳಿಗೆ ಹೆಚ್ಚು ವ್ಯಾಪಾರವಾಗಿ ಲಾಭವೂ ಹೆಚ್ಚುತ್ತದೆ.

ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ಹಿರಿಯರು, ಸಂಬಂಧವಿಲ್ಲದ ವಿಷಯಗಳಲ್ಲಿ ಮೂಗು ತೂರಿಸಲು ಹೋಗಿ ಮುಜುಗರಕ್ಕೆ ಒಳಗಾಗುವ ಸಂದರ್ಭಗಳಿವೆ. ನೆರೆಹೊರೆಯವರೊಡನೆ ಉತ್ತಮ ಬಾಂಧವ್ಯವನ್ನು ಉಳಿಸಿಕೊಳ್ಳುವುದು ಬಹಳ ಒಳ್ಳೆಯದು. ಮಕ್ಕಳಿಂದ ಸಾಕಷ್ಟು ಅನುಕೂಲ ಒದಗಿಬರುತ್ತದೆ. ವಿವಿಧ ಮೂಲಗಳಿಂದ ಹೆಚ್ಚಿನ ಆದಾಯ ಬರುವ ಸಾಧ್ಯತೆ ಇದೆ. ನಿವೇಶನ ಅಥವಾ ಜಮೀನು ಖರೀದಿಯ ಸಾಧ್ಯತೆಗಳಿವೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ಕೈಗೆತ್ತಿಕೊಂಡ ಕಾರ್ಯಗಳಲ್ಲಿ ಉತ್ತಮ ಫಲಿತಾಂಶ ದೊರೆಯುತ್ತದೆ. ಕೆಲವು ಸರ್ಕಾರಿ ಅಧಿಕಾರಿಗಳಿಗೆ ಯೋಜನೆಯನ್ನು ರೂಪಿಸುವ ಹೊಸ ಜವಾಬ್ದಾರಿ ದೊರೆಯುತ್ತದೆ. ಹೆಣ್ಣುಮಕ್ಕಳು ಪ್ರೀತಿ-ಪ್ರೇಮದ ಹುಚ್ಚುಹೊಳೆಯಲ್ಲಿ ಸಿಕ್ಕಿ ಬೀಳುವ ಸಾಧ್ಯತೆ ಇದೆ, ಎಚ್ಚರ ವಹಿಸಿರಿ. ಹತ್ತಿ, ನಾರು ಇವುಗಳಿಂದ ವಿವಿಧ ಬಗೆಯ ವಸ್ತ್ರಗಳನ್ನು ತಯಾರಿಸಿ ಮಾರುವವರ ವ್ಯವಹಾರದಲ್ಲಿ ಹೆಚ್ಚಳವಾಗಲಿದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ನಿಮ್ಮ ಹೆಸರನ್ನು ದುರ್ಬಳಕೆ ಮಾಡಿಕೊಳ್ಳುವವರ ವಿರುದ್ಧ ಕ್ರಮಕೈಗೊಳ್ಳಿರಿ. ಬಾಲಬಡುಕರನ್ನು ಸ್ವಲ್ಪಮಟ್ಟಿಗೆ ದೂರವಿಡಿ. ವಿದೇಶಕ್ಕೆ ರಫ್ತು ವ್ಯಾಪಾರ ಮಾಡುವವರಿಗೆ ವ್ಯವಹಾರದಲ್ಲಿ ಹೆಚ್ಚಿನ ಲಾಭವಿರುತ್ತದೆ. ಧನಾದಾಯವಿದ್ದರೂ ಅನಿರೀಕ್ಷಿತ ಖರ್ಚುಗಳು ಎದುರಾಗಬಹುದು. ಬಟ್ಟೆ ವ್ಯಾಪಾರಿಗಳಿಗೆ ಅವರ ವ್ಯವಹಾರ ವಿಸ್ತರಿಸಿ ಹೆಚ್ಚು ಲಾಭವಾಗುತ್ತದೆ. ನಿರ್ಲಕ್ಷ್ಯತನ ಉದ್ಯೋಗಕ್ಕೆ ಪೆಟ್ಟು ಕೊಡುವ ಸಾಧ್ಯತೆ ಇದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಆರ್ಥಿಕ ಚೇತರಿಕೆ ಕಂಡರೂ ಖರ್ಚಿನ ವಿಷಯದಲ್ಲಿ ಎಚ್ಚರಿಕೆ ವಹಿಸಿರಿ. ಕೆಲವರೊಂದಿಗೆ ಅತಿಯಾದ ಸ್ನೇಹ ಸಂಬಂಧಗಳು ವೃದ್ಧಿಸುವ ಸಾಧ್ಯತೆ ಇದೆ. ಗೃಹಿಣಿಯರು ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರ ಇರಲಿ. ರೇಷ್ಮೆ ನೂಲು ತೆಗೆಯುವವರಿಗೆ ಬೇಡಿಕೆ ಬರುತ್ತದೆ. ಔಷಧಿ ತಯಾರಿಕಾ ಸಂಸ್ಥೆಗಳನ್ನು ನಡೆಸುತ್ತಿರುವವರ ಆದಾಯ ಹೆಚ್ಚುತ್ತದೆ.

ಮಕ್ಕಳೇ ಪದಾತಿದಳ ಆಗಿರುವುದು ದುರಂತ

10ನೇ ಪುಟದಿಂದ...

ವಿದ್ಯಾರ್ಥಿನಿಯರು ಹಿಜಾಬ್ ಧರಿಸಲು ನಿರ್ಬಂಧ ವಿಧಿಸಿ ರಾಜ್ಯ ಸರ್ಕಾರ ಹೊರಡಿಸಿದ ಆದೇಶ ವಿವಾದಾಸ್ಪದ ಎನ್ನುವುದರಲ್ಲಿ ಎರಡು ಮಾತಿಲ್ಲ. ಸಮವಸ್ತ್ರದಲ್ಲೇ ಇರಬೇಕಾದ ಸೇವೆಗಳಾದ ಸೇನೆ, ಅರೆಸೇನೆ, ಪೊಲೀಸ್ ವ್ಯವಸ್ಥೆಯಲ್ಲಿ ಪುರುಷರ ಶಿರವಸ್ತ್ರಕ್ಕೆ ಯಾವುದೇ ನಿರ್ಬಂಧವಿಲ್ಲ. ಸಿಖ್ ಸಮುದಾಯಕ್ಕೆ ಸೇರಿದ ಸಿಬ್ಬಂದಿಯಂತೂ ಶಿರವಸ್ತ್ರವನ್ನು ಧರಿಸಿಯೇ ಕರ್ತವ್ಯಕ್ಕೆ ಬರುತ್ತಾರೆ (ದ್ವಿಚಕ್ರವಾಹನ ಚಲಿಸುವಾಗ ಸಿಖ್ ಸಮುದಾಯದವರಿಗೆ ಹೆಲ್ಮೆಟ್ ಧರಿಸುವುದರಿಂದಲೂ ವಿನಾಯಿತಿ ಇದೆ). ಸಮವಸ್ತ್ರವನ್ನು ಕಡ್ಡಾಯಗೊಳಿಸಿದ ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ ಸಿಖ್ ವಿದ್ಯಾರ್ಥಿಗಳಿಗೆ ಶಿರವಸ್ತ್ರ ಧರಿಸಲು ಯಾವುದೇ ನಿರ್ಬಂಧವಿಲ್ಲ. ಹೀಗಿರುವಾಗ ಇಲ್ಲಿ ಪ್ರಶ್ನೆ ಇರುವುದು ಹುಡುಗರಿಗೆ ಇಲ್ಲದ ನಿರ್ಬಂಧ ಹುಡುಗಿಯರಿಗೆ ಏಕೆ ಎನ್ನುವುದು ಮತ್ತು ಒಂದು ಧರ್ಮಕ್ಕೆ ಇಲ್ಲದ ನಿರ್ಬಂಧ ಮತ್ತೊಂದು ಧರ್ಮಕ್ಕೆ ಏಕೆ ಎನ್ನುವುದು. ಒಂದೇ ಸಾರ್ವಜನಿಕ ತಾಣದಲ್ಲಿ ಸಿಖ್ ಧರ್ಮದವರ ಆಚರಣೆಯನ್ನು ಗೌರವಿಸಿ, ಮುಸ್ಲಿಮರ ಆಚರಣೆಯನ್ನು ಈ ರೀತಿ ಅಗೌರವಿಸುವುದು ಸರಿಯೇ ಎಂಬ ಪ್ರಶ್ನೆಗೆ ಸೂಕ್ತವಾದ ಸಮಜಾಯಿಷಿ ಸಿಕ್ಕಿಲ್ಲ. ಸಮವಸ್ತ್ರ ಸಂಹಿತೆಯ ಭಾಗವಾಗಿ ಹಿಜಾಬ್ ಧರಿಸಲು ಮಾತ್ರ ಬೇಡ ಎನ್ನುವುದಾದರೆ ಅದಕ್ಕೆ ನ್ಯಾಯಯುತ ಸಮರ್ಥನೆಯನ್ನೂ ನೀಡಬೇಕಲ್ಲವೇ? ಶಿರವಸ್ತ್ರ ಧರಿಸುವ ಇತರರಿಗೆ ಅವಕಾಶ ಕೊಟ್ಟು ಹಿಜಾಬ್ ಅನ್ನು ಮಾತ್ರ ನಿರ್ಬಂಧಿಸಲು ಹೋಗುವುದು ಲಿಂಗ ಹಾಗೂ ಧರ್ಮದ ತಾರತಮ್ಯವಲ್ಲವೇ?

ಮುಸ್ಲಿಮರಲ್ಲಿ ಅಭದ್ರತೆ ಭಾವವನ್ನು ಉಂಟು ಮಾಡಲಾಗುತ್ತಿರುವ, ಅವರಲ್ಲಿ ಭಯವನ್ನು ಸೃಷ್ಟಿಸಲಾಗುತ್ತಿರುವ ಬೆಳವಣಿಗೆಗಳಲ್ಲಿ ಹಿಜಾಬ್ ವಿವಾದ ಹೊಸದಾಗಿ ಸೇರಿಕೊಂಡಿದೆ. ದೇಶದಲ್ಲಿ ಕೆಲವರ್ಷಗಳಿಂದ ಇಂತಹ ವಾತಾವರಣವನ್ನು ಎಗ್ಗಿಲ್ಲದೆ ಸೃಷ್ಟಿಸಲಾಗುತ್ತಿದೆ. ಅದನ್ನು ಎರಡು ಪ್ರಕಾರದಲ್ಲಿ ಮಾಡಲಾಗುತ್ತಿದೆ. ಒಂದು, ಮುಸ್ಲಿಮರ ಮೇಲೆ ನೇರ ದಾಳಿಯನ್ನು ಮಾಡುವ ಮೂಲಕ. ಮತ್ತೊಂದು, ಹಿಂದುತ್ವದ ಅಸ್ಮಿತೆಯ ಅಬ್ಬರದ ಪ್ರತಿಪಾದನೆಯ ಮೂಲಕ. ಮುಸ್ಲಿಂ ಸಮುದಾಯದ ಜನರ ಮೇಲಿನ ಗುಂಪು ಹಲ್ಲೆಗಳ ಮೂಲಕ, ಆ ಸಮುದಾಯದ ವ್ಯಾಪಾರಿಗಳಿಗೆ ಸೇರಿದ ಅಂಗಡಿಗಳ ಮೇಲೆ ದಾಳಿ ಮಾಡುವ ಮೂಲಕ ಭಯವನ್ನು ಹುಟ್ಟುಹಾಕಲಾಗುತ್ತಿದೆ.

ಮುಸ್ಲಿಮರನ್ನು ಇಲ್ಲವಾಗಿಸಲು ಧರ್ಮ ಸಂಸತ್‌ಗಳಲ್ಲೂ ಕರೆ ಕೊಡಲಾಗುತ್ತದೆ. ಮುಸ್ಲಿಂ ಜನರನ್ನೇ ಗಮನದಲ್ಲಿ ಇಟ್ಟುಕೊಂಡು ಜನಸಂಖ್ಯಾ ನಿಯಂತ್ರಣ ಕಾಯ್ದೆ ರೂಪಿಸಲಾಗುತ್ತದೆ. ಮತಾಂತರ ನಿಷೇಧ ಕಾಯ್ದೆಯ ಹಿಂದೆಯೂ ಮುಸ್ಲಿಮರನ್ನು ಹಣಿಯುವ ಉದ್ದೇಶವೇ ಇದೆ. ದೇವಾಲಯಗಳ ನಿರ್ಮಾಣಕ್ಕೆ, ಪುನರುಜ್ಜೀವನಕ್ಕೆ ಅದ್ದೂರಿ ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ. ಸಾರ್ವಜನಿಕ ಸ್ಥಳಗಳಲ್ಲಿ ಸ್ವತಃ ಪ್ರಧಾನಿ ಧರ್ಮವೊಂದರ ಸಂಕೇತಗಳನ್ನು ಧರಿಸಿ, ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಅವರನ್ನು, ಅವರು ಪ್ರತಿನಿಧಿಸುವ ಬಿಜೆಪಿಯ ಹಲವು ಮುಖಂಡರು ಅನುಸರಿಸುತ್ತಾರೆ. ಹಿಂದೂ ಸಂತರ ಬಾನೆತ್ತರದ ಪ್ರತಿಮೆಗಳನ್ನು ಅನಾವರಣ ಮಾಡಲಾಗುತ್ತದೆ. ಕೆಂಪುಕೋಟೆಯ ಮೇಲೆ ಭಗವಾಧ್ವಜ ಹಾರಿಸುವ ಮಾತು ಬಿಜೆಪಿಗೆ ಸೇರಿದ ಸಚಿವರಿಂದಲೇ ಬರುತ್ತದೆ. ಮುಸ್ಲಿಮರ ಮೇಲಿನ ದಾಳಿ, ಹಿಂದುತ್ವದ ಪ್ರತಿಪಾದನೆಯ ಅಬ್ಬರ ಇದೀಗ ಸಹಜ ಎನ್ನುವಂತಾಗಿದ್ದು, ಪ್ರಶ್ನಿಸುವವರೇ ಇಲ್ಲವಾಗಿದೆ.

ಎರಡೂ ಕಡೆಗಿನ ಸಮಾಜಘಾತುಕ ಶಕ್ತಿಗಳು ಈಗ ಎದ್ದು ಕುಳಿತಿದ್ದು, ಹದಿಹರೆಯದ ಮಕ್ಕಳು ಪದಾತಿದಳದ ರೂಪದಲ್ಲಿ ಅವರಿಗೆ ದಾಳವಾಗಿ ಸಿಕ್ಕಿರುವುದು ದುರಂತ. ಕೋರ್ಟ್‌ಗಳು ಒಂದುವೇಳೆ, ಸಂಧಾನ ಸೂತ್ರವೊಂದನ್ನು ಸಿದ್ಧಪಡಿಸಿ, 'ಕಾಲೇಜು ತರಗತಿಗಳಲ್ಲಿ ವಿದ್ಯಾರ್ಥಿಗಳು ಹಿಜಾಬ್ ಧರಿಸುವುದೂ ಬೇಡ, ಕೇಸರಿ ಶಾಲು ಧರಿಸುವುದೂ ಬೇಡ' ಎಂದು ಆದೇಶ ಹೊರಡಿಸಿದರೆ ನಿಜಕ್ಕೂ ಅದೊಂದು ಖೇದಕರ ಬೆಳವಣಿಗೆಯಾಗಲಿದೆ. ಏಕೆಂದರೆ, ಮುಸ್ಲಿಂ ವಿದ್ಯಾರ್ಥಿನಿಯರ ಶಿಕ್ಷಣದ ದಾರಿಯನ್ನು ಅದು ಇನ್ನಷ್ಟು ಕಿರಿದಾಗಿಸಲಿದೆ. ಅವರು ಹಿಜಾಬ್ ಧರಿಸುವುದು ಅವರ ಧರ್ಮದ ಆಚರಣೆಯ ಭಾಗವಾದರೆ, ಹಿಂದೂ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿದ್ದು ಅಂತಹ ಆಚರಣೆಯ ಭಾಗವಾಗಿ ಅಲ್ಲ ಎನ್ನುವುದನ್ನು ನಾವು ನೆನಪಿಡಬೇಕಿದೆ.

ಲೇಖಕ: ರಾಜಕೀಯ, ಆರ್ಥಿಕ ಚಿಂತಕ.
ಅವರ **'Midweek matters'** ವಿಡಿಯೊ ಬ್ಲಾಗ್ ದೇಶವ್ಯಾಪಿ ಖ್ಯಾತಿ ಗಳಿಸಿದೆ
ಕನ್ನಡಕ್ಕೆ: ಪಿನಾಕ

ಹಿಂದೆ ಸರಿದ...



ಹೆಣ್ಣುಮಕ್ಕಳ ಶಿಕ್ಷಣದ ಕುರಿತ ಕಾಳಜಿಯ ಸರ್ಕಾರಿ ಜಾಹೀರಾತಿನ ಫಲಕದಲ್ಲಿರುವ ಹುಡುಗಿಯೇನೋ ನಗುತ್ತಿದ್ದಾಳೆ. ಹಿಜಾಬ್ ಧರಿಸಿದ್ದರಿಂದ ತರಗತಿಗೆ ಹೋಗಲಾಗದ ಈ ವಿದ್ಯಾರ್ಥಿನಿಯರಲ್ಲಿ ಮಾತ್ರ ನೋವು ಮಡುಗಟ್ಟಿದೆ.

10ನೇ ಪುಟದಿಂದ...

ಹಿಜಾಬ್, ಮುಸ್ಲಿಂ ಮಹಿಳೆಯ ಅಸ್ಮಿತೆ ಎಂದಾಗ ಅದನ್ನು ಗೌರವಿಸುವುದು, ಸಹಿಷ್ಣುತೆಯ ಭಾವದಿಂದ ಕಾಣುವುದು ಇದುವರೆಗೆ ನಡೆದು ಬಂದಿದ್ದ ಪದ್ಧತಿಯಾಗಿತ್ತು. ಆದರೆ, ಉಡುಪಿಯ ಮಹಿಳಾ ಕಾಲೇಜಿನಲ್ಲಿ ಅಧ್ಯಾಪಕಿಯರೇ ಪಾಠಪ್ರವಚನ ನಡೆಸುತ್ತಿದ್ದು, ಕೇವಲ ಮೂವರು ಅಧ್ಯಾಪಕರು ಇರುವಂತಹ ಪರಿಸ್ಥಿತಿಯಲ್ಲಿ ತಾವು ತರಗತಿಯಲ್ಲೂ ಹಿಜಾಬ್ ಧರಿಸುವುದಾಗಿ ಕೆಲವು ಮಂದಿ ವಿದ್ಯಾರ್ಥಿನಿಯರು ತಮ್ಮ ಬೇಡಿಕೆಯನ್ನು ಮುಂದಿಟ್ಟಿರುವುದು ತಮ್ಮ ಧಾರ್ಮಿಕ ಒಲವಿನಿಂದ ಮಾತ್ರವಲ್ಲ, ಬದಲಿಗೆ ರಾಜಕೀಯ ಪಕ್ಷವೊಂದರ ದಾಳವಾಗಿ ಎಂಬುದು ಚರ್ಚೆಯಾಗುತ್ತಿದೆ. ಈ ಸಂದರ್ಭದಲ್ಲಿ ಕಾಲೇಜಿನ ಕ್ಯಾಂಪಸ್ ಒಳಗಡೆ ತೀರ್ಮಾನ ಆಗಬಹುದಾಗಿದ್ದ ವಿಷಯವು ವಿಶ್ವವ್ಯಾಪಿ ಪ್ರಚಾರವನ್ನು ಪಡೆದಿರುವುದು ದುರಂತದ ವಿಷಯವಾಗಿದೆ.


ಸದರಿ ಅವಕಾಶವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಜಾತಿವಾರು ಮತ ವಿಭಜನೆಯ ಮುಂದಿನ ಭಾಗವಾಗಿ ಕೇಸರಿ ಶಾಲುಗಳು ವಿಜೃಂಭಿಸಿದ್ದನ್ನು ಇಡೀ ಸಮಾಜವೇ ಗಮನಿಸಿದೆ. ಕ್ರಿಯೆ-ಪ್ರತಿಕ್ರಿಯೆ ಎಂಬ ಸಿದ್ಧಾಂತದ ಅಡಿಯಲ್ಲಿ ಮೂಡಿಬಂದ ಸಕ್ರಿಯ ರಾಜಕಾರಣದಲ್ಲಿ ಪಾಲುಗೊಳ್ಳದೆ ಇದ್ದ ಕರ್ನಾಟಕದ ಅನೇಕ ಜನಸಾಮಾನ್ಯರು ಕೂಡ ಭಾವುಕವಾಗಿ ಮೇಲ್ಕಂಡ ವಿವಾದದಲ್ಲಿ ಪಾಲುಗೊಂಡರು ಮತ್ತು ಸರಿ-ತಪ್ಪುಗಳ ತೀರ್ಮಾನಗಳನ್ನು ನೀಡತೊಡಗಿದರು. ಇಂತಹ ಸಾಮಾಜಿಕ ಗೋಜಲಿನಿಂದ ಪರಿಸ್ಥಿತಿ ತೀರಾ ಹದಗೆಡುವುದಕ್ಕೆ ಮುನ್ನ ಸಂಬಂಧಪಟ್ಟವರು ಕೋರ್ಟ್ ಸಮ್ಮುಖದಲ್ಲಿ ತಮ್ಮ ಅಳಲನ್ನು ತೋಡಿಕೊಂಡರು. ಹೀಗಾಗಿ ಮುಂದಿನ ಎಲ್ಲಾ ನಿರೀಕ್ಷೆಗಳು ಕೋರ್ಟ್ ಅಂಗಳದಲ್ಲಿವೆ.

ಈ ಎಲ್ಲಾ ಬೆಳವಣಿಗೆಗಳಿಂದ ತೀವ್ರವಾಗಿ ಹಿನ್ನಡೆಯನ್ನು ಅನುಭವಿಸಿದ್ದು ಮುಸ್ಲಿಂ ವಿದ್ಯಾರ್ಥಿನಿಯರು. ಮಾಧ್ಯಮದೆದುರು ಪ್ರಬುದ್ಧವಾಗಿ ಹೇಳಿಕೆಗಳನ್ನು ನೀಡುತ್ತಿರುವ ವಿದ್ಯಾರ್ಥಿನಿಯರ ಭವಿಷ್ಯ ಮಾತ್ರ ಅನಿಶ್ಚಿತತೆಯಿಂದ ಕೂಡಿದೆ. ಹಿಜಾಬ್ ಪರ ತೀರ್ಪು ಬಂದರೆ ಮುಂದಿನ ನಡೆಯೇನು ಮತ್ತು ಹಿಜಾಬ್‌ಗೆ ಪ್ರತಿಕೂಲವಾಗುವ ತೀರ್ಪು ಬಂದಲ್ಲಿ ಮುಂದಿನ ನಡವಳಿಕೆ ಏನು ಎಂದು ಯಾವ ಮುತ್ಸದ್ದಿಗಳು ಕೂಡ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿಲ್ಲ. ಅನೇಕ ವಿದ್ಯಾರ್ಥಿನಿಯರು ತರಗತಿಗಳಿಂದ ಹೊರ ನಡೆಯುತ್ತಿದ್ದಾರೆ. ಶಾಂತಿ ಮತ್ತು ನೆಮ್ಮದಿಯ ಸಹಬಾಳ್ವೆಯ ಬಗ್ಗೆ ಪ್ರತಿಪಾದಿಸುತ್ತಿರುವವರು ಹಾಗೂ ಮುಸ್ಲಿಂ ಹೆಣ್ಣುಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಬೇಕೆಂಬ ಸಲಹೆಯನ್ನು ನೀಡುತ್ತಿರುವವರು ಒಂದು ವರ್ಗದ ಕೆಲವು ಜನರಿಂದ ನಿಂದನೆಗಳನ್ನು ಅನುಭವಿಸುತ್ತಿದ್ದಾರೆ.

ಭಾರತದಲ್ಲಿ ಇಸ್ಲಾಂ ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಕಾಲಾನುಕ್ರಮವಾಗಿ ಬದಲಾವಣೆಯನ್ನು ಹೊಂದುತ್ತಾ ಬಂದಿದೆ. ಈಗ ಇರುವಂತಹ ಹಿಜಾಬ್, ಬುರ್ಖಾ, ನಿಖಾಬ್ ಮತ್ತು ಅಬಾಯ ಹಿಂದೆ ಇರಲಿಲ್ಲ ಎಂಬುದು ನಿರ್ವಿವಾದದ ವಿಷಯ. ಆದರೆ ಹಿಂದೆ ಕೂಡ ಬಹುತೇಕ ಭಾರತೀಯ ಮಹಿಳೆಯರು ತಲೆಯ ಮೇಲೆ ಸೆರಗು ಹೊದೆಯುವ ಪದ್ಧತಿಯನ್ನು ಅನುಸರಿಸುತ್ತಿದ್ದರು ಎಂಬುದು ಕೂಡ ಅಷ್ಟೇ ಸ್ಪಷ್ಟವಾದ ಸಂಗತಿ. ಇದನ್ನು ವಿವಾದವನ್ನಾಗಿಸಿದ ಕಾಣದ ಕೈಗಳ ಕೈವಾಡವು ಇಲ್ಲಿಗೇ ನಿಲ್ಲುವುದಿಲ್ಲ. ಬದಲಿಗೆ ಮುಸ್ಲಿಂ ವಿದ್ಯಾರ್ಥಿನಿಯರ ವಿದ್ಯಾಭ್ಯಾಸದ ಹಕ್ಕು ಹಿನ್ನೆಲೆಗೆ ಸರಿಯುತ್ತಿದೆ.

ಹೆಣ್ಣುಮಕ್ಕಳು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುವರೋ ಅಥವಾ ಇಲ್ಲವೋ ಎಂಬುದು ನಮ್ಮ ಸಮಾಜದ ಮುಂದೆ ಇರುವ ಬಹುದೊಡ್ಡ ಪ್ರಶ್ನೆಯಾಗಿದೆ. ಇಂದಿಗೂ ಜಾತಿ-ಧರ್ಮಗಳ ಕೃತಕ ತಡೆಗೋಡೆಗಳನ್ನು ಮೀರಿ ನಮ್ಮ ಸಮಾಜವು ಶಾಂತಿ, ಪ್ರೀತಿ ಮತ್ತು ನೆಮ್ಮದಿಯಿಂದ ಜೊತೆ ಜೊತೆಯಲಿ ನಡೆಯುತ್ತಾ ಅಭಿವೃದ್ಧಿ ರಾಜಕಾರಣದತ್ತ ಗಮನ ಕೊಡಬೇಕಾಗಿದೆ. ಮತ್ತು ಆ ಮೂಲಕ ಆರೋಗ್ಯಪೂರ್ಣ ನಾಗರಿಕ ಸಮಾಜದ ಪರಿಕಲ್ಪನೆಯನ್ನು ಸಾಕಾರಗೊಳಿಸಬೇಕಿದೆ. ❖

ಪದಬಂಧ 2728



ಮೇಲಿನಿಂದ ಕೆಳಕ್ಕೆ

1. ಬರೆದದ್ದನ್ನು ಅಳಿಸುವ ಸಾಧನ 3
2. ಶುದ್ಧ ರಗಳೆ ತಂಟೆ ಮಾಡುವ ಪುತ್ರ 5
3. ಎತ್ತುಗಳು ಪೂರ್ವಾವಸ್ಥೆಯಲ್ಲಿ ನಡೆಸುವ ಕಾದಾಟ 5
4. ವರ ನೀಡುವ ದೇವ 3
5. ನಯವಾದ ಕಣ್ಣು 3
7. ನರವನ್ನೇ ತಲ್ಲಣಿಸುವ ಪಟ್ಟಣ 3
10. ಗೆಲ್ಲು ಎನ್ನುವ ಸಂದೇಶ 3
12. ಕಾಯಿಲೆಗೆ ಹೆಸರಾದ ಸಿಹಿ 3
13. ಹಳೆಯಕಾಲದ ಪೆಟ್ಟಿಗೆ ಕೆಳಗಿನಿಂದ ಮೇಲಕ್ಕೆ 3
14. ತೇರುಗಳ ಗುಂಪು ಹೀಗಾಗುತ್ತದೆ 5
15. ನವಿರಾದ ಹೂವಿನಿಂದ ಹರಡಿದ ಸುವಾಸನೆ 5
16. ಪ್ರಾಚೀನ ವಸ್ತುಗಳನ್ನು ಅಗೆದು ಹುಡುಕುವ ಕಾರ್ಯ 3
19. ಹತ್ತಿರದ ಸಾಮೀಪ್ಯ 3
21. ಬೇರೆ ಬೇರೆಯಾದ ಗುಂಪೇ ಇದು 3

ಎಡದಿಂದ ಬಲಕ್ಕೆ

1. ಬೆಳ್ಳಿ ಹಬ್ಬದ ವಿಶೇಷ ಆಚರಣೆ 7
5. ಸೂಕ್ಷ್ಮವಾದ ನಾಜೂಕು ಕುಶಲತೆ ಗುರುತಾಗಿ ಉಳಿಯಬಹುದು 5
6. ಬಯಕೆಯ ದೇವನನ್ನು ಸುಟ್ಟು ಬೂದಿ ಮಾಡುವ ಹಬ್ಬ 5
8. ಮತ್ತೆ ಬರುವ ಮತಿಭ್ರಂಶ 3
9. ಹೊಚ್ಚ ಹೊಸ ಪೀಳಿಗೆ 5
11. ಭಾರತದಲ್ಲಿ ಭೀಮ ದುರ್ಯೋಧನರಿಗೆ ನಡೆದ ಮಹಾಯುದ್ಧ 5
13. ಸ್ವಪ್ನಾವಸ್ಥೆಯಲ್ಲಿ ಕಳೆದುಹೋದವ 5
15. ಹಯವದನನಿಗೆ ಅದಿರು ಸಿಗುವ ಮನೋಹರ ತಾಣ 5
17. ಜೋರಾಗಿ ಚಾಟಿ ಏಟು ಕೊಡು 3
18. ಪದಕ್ಕೆ ಪದ ಮತ್ತು ಪದಕ್ಕೆ ಪ್ರತ್ಯಯ ಸೇರಿಸುವ ಎರಡು ವ್ಯಾಕರಣ ವಿಶೇಷ್ಯಗಳು 5
20. ಮನಸ್ಸಿಗೆ ಸಂಬಂಧಿಸಿದ ವಿಶೇಷವಾದ ವಿಷಯವಿದು 5
22. ವಿಷ್ಣು ಮಹೇಶ್ವರರ ದೀರ್ಘ ಕತೆಯ ರೂಪ 7

ಪದಬಂಧ ಉತ್ತರ -2727

ಮೇಲಿಂದ ಕೆಳಕ್ಕೆ

1. ವಾತಾಯನ 2.ವಿಸಂಗತಿ 3.ಸರಕು 4.ಷರಾಯಿ 6.ಗರುಡಗಂಬ 8.ಮಾಲೆಯವ 10.ಜಾಗೃತ 12.ಹಾದರ 13.ಪತ್ನಿದೇವಿ 14.ನಗೆನಾಟಕ 16.ಸವಾರ 18.ಶರಣರು 19.ಗರಗರ 20.ಕಣವಿ 21.ಕೂಸಂಗಿ

ಎಡದಿಂದ ಬಲಕ್ಕೆ

1. ವಾಯುಜೀವಿ 3.ಸಶೇಷ 5.ಸಂಸಾರಸಾಗರ 7.ರುಕುಮಾಯಿ 9.ನವಜಾತಿ 11.ಮಹಾಯೋಗಂ 13.ಪತನ 15.ಬಸವ 17.ಗೆಲುರಥ 18.ಶರವೇಗ 20.ಕವಿಕೂಟ 22.ಸಂಕಟರಮಣ 23.ವಿರಾಗಿ 24.ರುಚಿಕರ


ಗಾಂಧಿಭಾರತದಲ್ಲಿ 'ಮೋನು'ವಿನ ಸತ್ಯಾನ್ವೇಷಣೆ!

ರಘುನಾಥ ಚ.ಹ.

ಮೋನು ಎನ್ನುವುದು ಮುದ್ದಿನ ಮಗನಿಗೆ ಅಮ್ಮ ಕರೆಯುತ್ತಿದ್ದ ಹೆಸರು. ಈ ಮುದ್ದಿನ ಮಗ ಬೊಳುವಾರು ಮಹಮದ್ ಕುಂಞಿ ಅವರ 'ಮೋನು ಸ್ಮೃತಿ' ಆತ್ಮಕಥನ 'ಮೋಹನ ಸ್ಮೃತಿ'ಯಂತೆಯೂ ಕೇಳಿಸುತ್ತದೆ. ಬೊಳುವಾರರಿಗೆ ಗಾಂಧಿಯ ಬಗ್ಗೆ ಇನ್ನಿಲ್ಲದ ಆಕರ್ಷಣೆ, ಪ್ರೀತಿ. ಆ ಸೆಳೆತದ ಕಾರಣದಿಂದಾಗಿ ಮೋನುವಿನ ನೆನಪುಗಳಲ್ಲಿ 'ಗಾಂಧಿಪ್ರಜ್ಞೆ' ಸೇರಿಕೊಂಡಿದ್ದರೆ ಆಶ್ಚರ್ಯವೇನೂ ಇಲ್ಲ.

ಗಾಂಧಿಪ್ರಜ್ಞೆ ಕೃತಿಯನ್ನು ಸಂಪೂರ್ಣವಾಗಿ ಆವರಿಸಿಕೊಂಡಿದೆ. ಮುಸ್ಲಿಂ ಸಮುದಾಯದ ಬಗ್ಗೆ ಗಾಂಧಿ ತೋರಿಸಿದಷ್ಟು ಪ್ರೀತಿ–ಕಾಳಜಿಯನ್ನು ಈ ದೇಶದ ಮತ್ತೊಬ್ಬ ನಾಯಕ ತನ್ನ ಮಾತು–ಕೃತಿಯಲ್ಲಿ ತೋರಿಸಿದ ಉದಾಹರಣೆಯಿಲ್ಲ. ಇಂಥ ಗಾಂಧಿಭೂಮಿಯಲ್ಲಿನ ವ್ಯಕ್ತಿಯೊಬ್ಬ ತಾನು ಮುಸಲ್ಮಾನನಾಗಿರುವ ಕಾರಣಕ್ಕೆ ದೇಶಭಕ್ತಿಯನ್ನು ಮತ್ತೆ ಮತ್ತೆ ಸಾಬೀತುಪಡಿಸಬೇಕಾದ ಸಾಮಾಜಿಕ ಸಂದರ್ಭ ಇಂದಿನದು. ಈ ಸಂಕ್ರಮಣ ಸಂದರ್ಭದಲ್ಲಿ ಸಂವೇದನಾಶೀಲ ಮುಸಲ್ಮಾನನೊಬ್ಬ ತಾನು ಬದುಕುತ್ತಿರುವ ಸಮಾಜದೊಂದಿಗೆ ನಡೆಸಿದ ಪ್ರಯೋಗದಂತೆ 'ಮೋನು ಸ್ಮೃತಿ' ಕಾಣಿಸುತ್ತದೆ. ಬದಲಾದ ಸಾಮಾಜಿಕ ಸಂದರ್ಭದಲ್ಲಿ ಇದೂ ಒಂದು ಬಗೆಯ ಸತ್ಯಾನ್ವೇಷಣೆಯೇ!

ಮುಸಲ್ಮಾನ ಮತ್ತು ಭಾರತೀಯ ಎನ್ನುವ ಚಹರೆಗಳ ಜಿಜ್ಞಾಸೆ ಕೃತಿಯ 'ಸಮರ್ಪಣೆ...'ಯಿಂದಲೇ ಆರಂಭವಾಗುತ್ತದೆ. 'ಜನ್ಮಭೂಮಿ'ಯನ್ನು ಅರ್ಜಿ ಗುಜರಾಯಿಸುವ ಮೂಲಕ ಆಯ್ದುಕೊಳ್ಳುವ ಅವಕಾಶವಿರುತ್ತಿದ್ದರೂ, ಈ 'ಮೋನು' ಹಿಂದೂಸ್ತಾನವನ್ನೇ ಆಯ್ದುಕೊಳ್ಳುತ್ತಿದ್ದ ಎಂಬುದನ್ನು ಎಪ್ಪತ್ತು ವರ್ಷಗಳ ಹಿಂದೆಯೇ ಸರಿಯಾಗಿ ಊಹಿಸಿ, ಈ ದೇಶದ ನಾಗರಿಕನಾಗುವ ಅರ್ಹತೆಗಳೆಲ್ಲವೂ 'ಅತ್ಯುತ್ತಮ ಸ್ಥಿತಿಯಲ್ಲಿವೆ' ಎಂಬುದಾಗಿ, ನನ್ನ ಹಣೆಗೆ ಶಾಶ್ವತವಾದ 'ಐ.ಎಸ್.ಐ. ಮಾರ್ಕ್' ಗುದ್ದಿದವರಿಗೆ' ಎನ್ನುವ ಬೊಳುವಾರರ ಮಾತು ಔಪಚಾರಿಕ ಅರ್ಪಣೆಯಾಗಿರದೆ, ತನ್ನನ್ನು ಅಥವಾ ಓರ್ವ ಮುಸಲ್ಮಾನನನ್ನು ಭಾರತೀಯ ಸಂದರ್ಭದಲ್ಲಿ ಹೇಗೆ ಗ್ರಹಿಸಬೇಕು ಎನ್ನುವುದರ ಸೂಚನೆ–ಅಪೇಕ್ಷೆಯೂ ಆಗಿದೆ. ಹಾಗೆಯೇ, ಭಾರತೀಯ ಮುಸಲ್ಮಾನನೊಬ್ಬ ಈ ಹೊತ್ತು ಅನುಭವಿಸುತ್ತಿರುವ ತೊಳಲಾಟದ ಅಭಿವ್ಯಕ್ತಿಯೂ ಆಗಿದೆ.



ಪು: 352 ₹350

ಮೋನು ಸ್ಮೃತಿ
ಲೇ: ಬೊಳುವಾರು ಮಹಮದ್ ಕುಂಞಿ
ಪ್ರ: ನವಕರ್ನಾಟಕ ಪ್ರಕಾಶನ
ಸಂ: 080–22161900 / 2216901

ಬೊಳುವಾರರ ಕಿರಿಯ ಸಹೋದರ ಉಮ್ಮರ್ ಕುಂಞಿ ಪ್ರಸಂಗಕ್ಕೂ ಗಾಂಧಿಯ ಹಿರಿಯ ಮಗ ಹರಿಲಾಲನ ಬದುಕಿನ ದುರಂತಕ್ಕೂ ಸಾಮ್ಯತೆಯಿರುವುದನ್ನೂ ಮೋಹನ–ಮೋನುವಿನ ನಂಟಿನ ಉದಾಹರಣೆಯಾಗಿ ನೋಡಬಹುದು. ಅಣ್ಣನ ಮಾತನ್ನು ಕೇಳದ ಸಹೋದರ ಕುಟುಂಬದಿಂದ ಅಂತರ ಕಾಯ್ದುಕೊಳ್ಳುವುದು, ಉಮೇಶ ಕುಮಾರನಾಗಿ ಧರ್ಮಾಂತರ ಹೊಂದುವುದು, ಕೊನೆಗೆ ನಿರ್ಗತಿಕನಂತೆ ಸಾವಿಗೀಡಾಗುವುದು – ಇವೆಲ್ಲ ಗಾಂಧಿ ಕುಟುಂಬದ ಕಥನದ ಹೊಸ ಅವತರಣಿಕೆಯೂ ಹೌದು.

ಮೋನು ಸ್ಮೃತಿಯಲ್ಲಿ ಬೊಳುವಾರರ ಬಾಲ್ಯದ ನೆನಪುಗಳು ಹೆಚ್ಚಿಲ್ಲ. ಪಿ.ಯು.ಸಿ. ಬಳಿಕ ಓದು ನಿಲ್ಲಿಸಿ ಜವಳಿ ಅಂಗಡಿಯೊಂದರಲ್ಲಿ ಸೇಲ್ಸ್‌ಮನ್, ಜೀನಸಿನ ಅಂಗಡಿಯಲ್ಲಿ ಸಹಾಯಕನಾಗಿ ದುಡಿಯುವ ಹುಡುಗನ ಚಿತ್ರಣದಾಚೆಗೆ ಅವರ ಬಾಲ್ಯದ ನೆನಪುಗಳಿಗೆ ಹೆಚ್ಚಿನ ಅವಕಾಶ ದೊರೆತಿಲ್ಲ. ಅಬ್ದುಲ್ ಖಾದರ್ ಹಾಜಿಯೆನ್ನುವ ಮಹನೀಯರ 'ಇತರ ಹುಡುಗರಂತೆ ನಮ್ಮ ಸಮುದಾಯದ ಹುಡುಗರೂ ಮುಂದಕ್ಕೆ ಬರಬೇಕಾದರೆ ಚೆನ್ನಾಗಿ ಓದಿ ಗವರ್ನಮೆಂಟ್ ಆಫೀಸರ್ ಆಗಬೇಕು' ಎನ್ನುವ ಆಶಯದ ಫಲವಾಗಿ ಬೊಳುವಾರರು ಡಿಗ್ರಿ ಕಾಲೇಜು ಮೆಟ್ಟಿಲು ಹತ್ತುವಂತಾಯಿತು. ಉಗ್ಗುವ ಹುಡುಗ ಸಿಂಡಿಕೇಟ್ ಬ್ಯಾಂಕ್ ಸೇರಿದ್ದು, ಕಥೆಗಾರನಾಗಿ ರೂಪುಗೊಂಡಿದ್ದು, ಬ್ಯಾಂಕಿನ ಆಡಳಿತ ಮಂಡಳಿಯ ಗಮನಸೆಳೆದು ಉನ್ನತ ಹುದ್ದೆಗಳನ್ನು ಅಲಂಕರಿಸಿ ಸೈ ಅನ್ನಿಸಿಕೊಂಡಿದ್ದು, 'ಬಂಡಾಯ' ಸಂಘಟನೆಯ ಭಾಗವಾದದ್ದು, ನಾಟಕ ಮತ್ತು ಸಿನಿಮಾಗಳಲ್ಲಿ ತೊಡಗಿಕೊಂಡಿದ್ದು – ಹೀಗೆ ಬೊಳುವಾರರ ಬದುಕಿನ ಹಲವು ಸ್ಮೃತಿಗಳನ್ನು ಈ ಕೃತಿ ಓದುಗರಿಗೆ ಪರಿಚಯಿಸುತ್ತದೆ.

ಕಾವ್ಯಶಕ್ತಿಯ, ಮನಸ್ಸನ್ನು ಆರ್ದ್ರಗೊಳಿಸುವ ಹಾಗೂ ಖಿನ್ನಗೊಳಿಸುವ ಕೆಲವು ಪ್ರಸಂಗಗಳು 'ಮೋನು ಸ್ಮೃತಿ'ಯಲ್ಲಿವೆ, ಅವು ಕೃತಿಯ ಘನತೆಯನ್ನು ಹೆಚ್ಚಿಸಿವೆ. ಅಂಥದೊಂದು ಪ್ರಸಂಗ, 1992ರ ಡಿ.6ರಂದು ದೆಹಲಿಯಲ್ಲಿ ನಡೆದ ರಾಜೀವ ತಾರಾನಾಥರ ಕಛೇರಿಯದ್ದು. ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಕೆಡವಿ ಬಿದ್ದದ್ದಕ್ಕೆ ಪ್ರತಿಕ್ರಿಯೆ ಎನ್ನುವಂತೆ ರಾಜೀವರ ಸಿತಾರಿನ ತಂತಿಗಳು ಕಡಿದುಹೋಗಿ ಹೊಮ್ಮಿದ ಅಪಶ್ರುತಿ, ಆ ಕ್ಷಣವನ್ನು ಮೀರಿ ಶಾಶ್ವತವಾಗಿ ಉಳಿದಿದ್ದನ್ನು ಬೊಳುವಾರರು ಕಾವ್ಯದ ಧ್ವನಿಯಲ್ಲಿ, ಕಥನದ ತೀವ್ರತೆಯಲ್ಲಿ ಚಿತ್ರಿಸಿದ್ದಾರೆ. ಸಿತಾರಿನ ತಂತಿ ಹರಿದಷ್ಟೇ ತೀವ್ರವಾದ, ಮತ್ತೂ ದಾರುಣವಾದ ಪ್ರಸಂಗ – ದೆಹಲಿಯಲ್ಲಿ ಬಾಡಿಗೆ ಮನೆ ನಿರಾಕರಣೆಯದು. ಬೊಳುವಾರರ ಪುಟ್ಟ ಮಗಳನ್ನು ನೋಡಿದ ಮನೆಯ ಯಜಮಾನನ ವೃದ್ಧ ತಾಯಿ ವಿಚಿತ್ರವಾಗಿ ವರ್ತಿಸುತ್ತಾಳೆ. ಎದುರಿಗೆ ನಿಂತ ಪುಟಾಣಿಯ ವಯಸ್ಸಿನವಳೇ ಆದ ತನ್ನ ಮಗಳ ಮೇಲೆ, ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಅತ್ಯಾಚಾರದ ಕ್ರೌರ್ಯ ಆ ತಾಯಿಗೆ ಮತ್ತೆ ನೆನಪಾಗಿ ತಲ್ಲಣಿಸುತ್ತಾಳೆ. ಬೊಳುವಾರರ ಮಗಳು ಎದುರಿಗಿದ್ದರೆ ತನ್ನಮ್ಮ ಪ್ರತಿದಿನವೂ ಕರುಳಕುಡಿಯನ್ನು ಕಳೆದುಕೊಂಡ ಸಂಕಟವನ್ನು ಅನುಭವಿಸಬೇಕಾಗಬಹುದು ಎನ್ನುವ ಕಾರಣಕ್ಕಾಗಿ ಮನೆಯ ಯಜಮಾನ ಬೊಳುವಾರರ ಕುಟುಂಬವನ್ನು ದೂರವಿರಿಸಲಿಕ್ಕೆ ಬಯಸುತ್ತಾನೆ. ಚರಿತ್ರೆಯ ಕ್ರೌರ್ಯ ವರ್ತಮಾನದಲ್ಲಿ ಮೈದೋರುವುದಕ್ಕೆ ಏನೆಲ್ಲ ಅರ್ಥಗಳಿವೆ?

ತಮ್ಮ ಬದುಕಿನಲ್ಲಿ ಎದುರಾದ ಅನೇಕ ಸುಂದರ ಮನಸ್ಸುಗಳನ್ನು ಬೊಳುವಾರರು ನೆನಪಿಸಿಕೊಂಡಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಗಾಗಿ ಬೊಳುವಾರರು ಸಂಪಾದಿಸಿಕೊಟ್ಟ 'ಶತಮಾನದ ಕನ್ನಡ ಕತೆಗಳು' ಸಂಕಲನದ ಯೋಜನಾ ಸಂಪಾದಕರಾದ ಜಿ.ಎಸ್. ಶಿವರುದ್ರಪ್ಪ, 'ಕಾಮಧೇನು ಪ್ರಕಾಶನ'ದ ಡಿ.ಕೆ. ಶ್ಯಾಮಸುಂದರ ರಾವ್, ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷರಾದ ಕೆ.ಕೆ. ಪೈ, ಪತ್ರಕರ್ತರಾಗಿದ್ದ ಬನ್ನಂಜೆ ಗೋವಿಂದಾಚಾರ್ಯ, ರಾಜೀವ ತಾರಾನಾಥ – ಇವರುಗಳ ನಡವಳಿಕೆ ಮನುಷ್ಯತ್ವದ ಘನತೆಯ ಮಾದರಿಗಳಾಗಿ ಗಮನಸೆಳೆಯುತ್ತವೆ.

ವಿಮರ್ಶೆ

ಬೊಳುವಾರರ ಕೃತಿಯ ಮತ್ತೊಂದು ವಿಶೇಷ, ಪತ್ರಿಕೆ ಮತ್ತು ಪತ್ರಕರ್ತರ ಕುರಿತ ಸ್ಮೃತಿಗಳು. ಮಾಧ್ಯಮಗಳು ಹಾಗೂ ಪತ್ರಕರ್ತರನ್ನು ಸಾಮಾಜಿಕ ಕಟಕಟೆಯಲ್ಲಿ ನಿಲ್ಲಿಸುವ ಪ್ರಸಂಗಗಳೇ ಹೆಚ್ಚು ಕಾಣಿಸುತ್ತಿರುವ ಸಮಕಾಲೀನ ಸಂದರ್ಭದಲ್ಲಿ, ಬೊಳುವಾರರು ತಮ್ಮ ಜೀವನದ ಹಲವು ಪ್ರಮುಖ ಘಟನೆಗಳಿಗೆ ಪತ್ರಿಕೆಗಳಿಗೆ–ಪತ್ರಕರ್ತರಿಗೆ ಸಲ್ಲಿಸಿರುವ ಕೃತಜ್ಞತೆ ವಿಶೇಷವಾಗಿದೆ. ಕೆಲವು ಘಟನೆಗಳ ನಿರೂಪಣೆಗೆ ಪತ್ರಿಕೆಗಳ ವರದಿಗಳನ್ನೇ ಯಥಾವತ್ತು ಬಳಸಿಕೊಂಡಿರುವ ತಂತ್ರವೂ ಚೆನ್ನಾಗಿದೆ.


ಬೊಳುವಾರರದು ವ್ಯಂಗ್ಯದೊಂದಿಗೆ ಕಸಿಗೊಂಡ ಚುರುಕು ಭಾಷೆ. ಈ ವ್ಯಂಗ್ಯ ಬರವಣಿಗೆಯ ರುಚಿ ಹೆಚ್ಚಿಸಿದೆಯಾದರೂ, ಕೆಲವೊಮ್ಮೆ 'ವಿಕಟ ವಿನೋದ'ದ ರೂಪವನ್ನೂ ಪಡೆದುಕೊಂಡಿದೆ. 'ಹೆಣ್ಣುಮಕ್ಕಳ 'ಸಿ.ಡಿ.' ಮಾಡುವ ಬೆದರಿಕೆ!' ಎನ್ನುವ ಶೀರ್ಷಿಕೆ ಧ್ವನಿಸುವ ಅರ್ಥಕ್ಕೂ ನಂತರದ ವಿವರಣೆಗೂ ಸಂಬಂಧ ಇಲ್ಲದಿರುವುದು, ಮೊಬೈಲ್ ಇಲ್ಲದ ಕಾಲವನ್ನು ಅನಾಗರಿಕ ಎನ್ನುವುದು – ಬರವಣಿಗೆಯನ್ನು ರೋಚಕಗೊಳಿಸುವ ಲೇಖಕರ ಪ್ರಯತ್ನಕ್ಕೆ ಎರಡು ಉದಾಹರಣೆಗಳಷ್ಟೆ. 'ಸರಹದ್ದುಗಳು ಅನ್ವಯಿಸುವುದಿಲ್ಲ' ಎಂದು ಲೇಖಕರು ಘೋಷಿಸಿಕೊಂಡಿದ್ದರೂ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಚೌಕಟ್ಟುಗಳಲ್ಲೇ ಉಳಿದ ಪ್ರಸಂಗಗಳೂ ಕೃತಿಯಲ್ಲಿವೆ. ಮದುವೆಯ ಸಂದರ್ಭದಲ್ಲಿ ಅನೇಕ ಷರತ್ತುಗಳನ್ನು ಏಕಮುಖವಾಗಿ ಹೇರುವ ವರ ಮಹಾಶಯ, ವಧುವಿನ ಭಾವನೆಗಳನ್ನು ಮುಖ್ಯವೆಂದು ಭಾವಿಸಿದಂತೆ ಕಾಣುವುದಿಲ್ಲ. ಕಥಾನಾಯಕ ತನ್ನ ನವವಧುವನ್ನು ಪ್ರತಿದಿನ ಸಂಜೆ ಉಡುಪಿಯ ಅದಮಾರು ಮತ್ತು ಪೇಜಾವರ ಮಠಗಳ ನಡುವಿರುವ ಓಣಿಯ 'ತಡಮೆ' ಬಳಿ ಎರಡು ತಾಸು ಒಂಟಿಯಾಗಿ ಬಿಟ್ಟು ಕಣ್ಮರೆಯಾಗುವುದು ಕೂಡ ಪುರುಷ ಯಜಮಾನಿಕೆಯ ದ್ಯೋತಕವಾಗಿಯೇ ಕಾಣಿಸುತ್ತದೆ. ಕಿರಿಯ ತಮ್ಮ ಹಾಗೂ ತಾಯಿಯ ಕುರಿತು ಮಾತನಾಡುವಾಗ ಬೊಳುವಾರರ ವ್ಯಂಗ್ಯ ಕುಂಟತೊಡಗಿ, ವಿಷಾದದ ನೆರಳು ಕಾಣಿಸುವುದನ್ನೂ ಗಮನಿಸಬೇಕು.

ಕನ್ನಡದ ಉತ್ತಮ ಆತ್ಮಕಥೆಗಳ ಸಾಲಿನಲ್ಲಿ 'ಮೋನು ಸ್ಮೃತಿ'ಗೆ ವಿಶೇಷ ಸ್ಥಾನವಿದೆ. ಸ್ವಾತಂತ್ರ್ಯೋತ್ತರ ಭಾರತದ 'ಆತ್ಮ'ಕಥನದ ಒಂದು ಭಾಗವಾದಂತೆಯೂ ಬೊಳುವಾರರ ಕಥನವನ್ನು ಓದಿಕೊಳ್ಳಬಹುದು. ಕನ್ನಡದ ಪ್ರಮುಖ ಕಥೆಗಾರರಲ್ಲೊಬ್ಬರ ಬದುಕಿನ ಕಥನವಾಗಿ, ಮುಸ್ಲಿಂ ಲೇಖಕನ ತವಕತಲ್ಲಣವಾಗಿ, ಅಷ್ಟು ಮಾತ್ರವಲ್ಲ, – ಸಾಮಾಜಿಕ ಸಾಂಸ್ಕೃತಿಕ ಪಠ್ಯದ ರೂಪದಲ್ಲೂ 'ಮೋನು ಸ್ಮೃತಿ'ಗೆ ಮಹತ್ವವಿದೆ.

ದೂರದಿಂದ ಬಂದ ಸುಂದರಾಂಗನೆ!







ಎಂ.ಆರ್.ಮಂಜುನಾಥ್

ಇದೋ ದೂರದ ಅಮೆರಿಕದಿಂದ ಭಾರತಕ್ಕೆ ಬಂದ ಮರ. ಆದರೆ, ಅದು ಅರಳಿಸುವ ಪುಷ್ಪ ಮಾತ್ರ ಶಿವನಿಗೆ ತುಂಬಾ ಇಷ್ಟವಂತೆ. ಹೀಗಾಗಿ ಭಾರತೀಯರ ಪಾಲಿಗೆ ಈ ಹೂವು ಪರಮಪವಿತ್ರ. ದೇಶದ ಎಷ್ಟೋ ಪ್ರಮುಖ ಶಿವಾಲಯಗಳ ಅಂಗಳದಲ್ಲಿ ಈ ಹೂವಿನ ಮರ ಇದ್ದೇ ಇರುತ್ತದೆ. ಅಮೆರಿಕನ್ನರು ಇದಕ್ಕೆ ಕೆನೋನ್‌ಬಾಲ್ ಟ್ರೀ ಎಂದು ಕರೆದರೆ, ಭಾರತೀಯರ ಪಾಲಿಗೆ ಇದು ನಾಗಲಿಂಗ ಪುಷ್ಪದ ಮರ.

ಹಿಂದೂಗಳಿಗೆ ಅಷ್ಟೇ ಏಕೆ, ಬೌದ್ಧರ ಪಾಲಿಗೂ ಇದು ಪವಿತ್ರ ಮರವಂತೆ. ಅವರೂ ಈ ಮರಗಳನ್ನು ಬೆಳೆಸಲು ಉತ್ಸಾಹ ತೋರುವುದು ಥಾಯ್ಲೆಂಡ್, ಶ್ರೀಲಂಕಾ ಮತ್ತಿತರ ಕಡೆ ಎದ್ದು ಕಾಣುತ್ತದೆ.

ಭಾರತದಲ್ಲಂತೂ ಹುಟ್ಟಿನ ಸಂಭ್ರಮಕ್ಕೂ ಹೂವು ಬೇಕು, ಸಾವಿನ ಸಂದರ್ಭದಲ್ಲಿ ವಿದಾಯ ಹೇಳಲಿಕ್ಕೂ ಹೂವು ಬೇಕು. ಮಧ್ಯದ ಬದುಕಿನಲ್ಲಿ ಹೂವುಗಳ ಸೌಂದರ್ಯಕ್ಕೆ ಮನಸೋತ ಮನುಷ್ಯ ಅವುಗಳ ಪ್ರಯೋಜನವನ್ನು ನಾನಾ ರೀತಿಯಲ್ಲಿ ಪಡೆಯುತ್ತಿದ್ದಾನೆ.

ಅಂತಹ ವಿಶಿಷ್ಟವಾದ ಹೂವುಗಳಲ್ಲೊಂದು ನಾಗಲಿಂಗ ಅಥವಾ ನಾಗಲಿಂಗ ಸಂಪಿಗೆ. ಮಹಾಶಿವರಾತ್ರಿಯಂದು ಶಿವನಿಗೆ ಬಿಲ್ವಪತ್ರೆಯಿಂದ ಅರ್ಚನೆ ಮಾಡಿದಷ್ಟೇ ಭಕ್ತಿಯಿಂದ ನಾಗಲಿಂಗ ಪುಷ್ಪವನ್ನೂ ಅರ್ಪಿಸುತ್ತಾರೆ. ಈ ಹೂವು ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಅರಳುತ್ತದೆ. ಹೆಚ್ಚಾಗಿ ಶಿವರಾತ್ರಿಯ ಸಮಯದಲ್ಲಿ ಗೊಂಚಲ ಗೊಂಚಲಾಗಿ ಅರಳುತ್ತದೆ.

ಪುಷ್ಪದ ರಚನೆ ಸಹ ನೋಡುವುದಕ್ಕೆ ಸೊಗಸಾಗಿದೆ. ಕಡುಗೆಂಪು ಎಸಳಿನ ಆರು ದಳಗಳಿಂದ ಆವೃತಗೊಂಡ ಹೂವಿನ ಮಧ್ಯ ಭಾಗದಲ್ಲಿ ಹಳದಿ ಬಣ್ಣದ ಪುಟ್ಟದಾದ ಲಿಂಗಾಕಾರ ಗೋಚರಿಸುತ್ತದೆ. ಹೂವಿನ ಶಲಾಕಾಗ್ರವೂ ಹಾವಿನ ಹೆಡೆಯಂತೆ ರಚನೆಗೊಂಡಿದ್ದು ಲಿಂಗಕ್ಕೆ ಹೆಡೆಯ ಆಕಾರದಲ್ಲಿರುವುದರಿಂದ ಇದಕ್ಕೆ ನಾಗಲಿಂಗ ಪುಷ್ಪವೆಂದು ಹೆಸರು ಬಂದಿರಬೇಕು.

ಮರದ ವ್ಯಾಸ ಸುಮಾರು ಒಂದು ಮೀಟರ್ ಇರುತ್ತದೆ. ಇದು ಹೆಮ್ಮರವಾಗಿ 50 ಅಡಿಗಳಷ್ಟು ಎತ್ತರ ಬೆಳೆಯುತ್ತದೆ. ಇದರ ಆಯಸ್ಸು ಸುಮಾರು 80 ವರ್ಷ. ಈ ಗಿಡ ಬೆಳೆದು 15 ವರ್ಷಗಳ ನಂತರ ಹೂವು, ಕಾಯಿ ಬಿಡುತ್ತದೆ. ಈ ಹೂವಿಗೆ ಮಕರಂದ ಇರುವುದಿಲ್ಲ. ಕಾಯಿಗಳು ನೆಲದಲ್ಲಿ ಒಡೆದಾಗ ಕೆಟ್ಟವಾಸನೆ ಹರಡುವುದು. ಆದರೆ ಔಷಧೀಯ ಗುಣವಿದೆ. ಈ ಮರದ ಹಣ್ಣುಗಳನ್ನು ಪಶು ಆಹಾರವಾಗಿ ಬಳಸುತ್ತಾರೆ. ಎಲೆಗಳ ಕಷಾಯ ಸೇವಿಸಿದರೆ ಚರ್ಮ ಸಂಬಂಧಿ ರೋಗಗಳು ಗುಣವಾಗುತ್ತವೆ. ಹಲ್ಲು ನೋವಿಗೆ ಇದರ ಚಿಗುರು ಎಲೆ ರಾಮಬಾಣ.

ಶಿವಲಿಂಗ ಪುಷ್ಪ, ಮಲ್ಲಿಕಾರ್ಜುನ ಹೂವು, ನಾಗಮಲ್ಲಿ, ನಾಗಸಂಪಿಗೆ ಮೊದಲಾದ ಹೆಸರುಗಳೂ ಈ ಹೂವಿಗಿವೆ. ನೀವೊಬ್ಬ ಪುಷ್ಪಪ್ರೇಮಿಯಾದರೆ ಶಿವರಾತ್ರಿಯ ಸಮಯದಲ್ಲಿ ಶಿವಾಲಯಗಳ ಬಳಿ ಹೋಗಿ. ಅವುಗಳ ಆವರಣದಲ್ಲಿ ನಿಮಗೂ ನಾಗಲಿಂಗ ಮರ ಹೂವರಳಿಸಿ ನಿಂತಿರುವುದು ಕಂಡೀತು.

ಕಥೆ

ನಂದಿನಿ ಹೆದ್ದುರ್ಗ ಅವರ **ಉದ್ದಲಂಗವ್ರೂ... ದಿಬ್ಬದ ಸೀಬೆಹಣ್ಣೂ**

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವನ

ವೆಂಕಟೇಶ ಪಾಟೀಲ ಅವರ **ನನ್ನ ಮೌನದ ಹಿಂದೆ**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry


ಮೊದಲ ಓದು

ಸಿನಿಮೀಯ ಚೌಕಟ್ಟಿನಲ್ಲಿ ಶೋಷಣೆಯ ಕಥೆ

'ನಾನು ಸ್ವಾಭಿಮಾನಿ ಕ್ಷೌರಿಕ' – ಯಾವುದೋ ಸಮಾವೇಶದ ಫ್ಲೆಕ್ಸ್ ಘೋಷವಾಕ್ಯದಂತೆ ಭಾಸವಾಗುವ ಈ ಹೆಸರೇ ಕಾದಂಬರಿಯ ಹೂರಣವನ್ನೂ ಹೇಳುವಂತಿದೆ. ಕಾದಂಬರಿಯ ಶಕ್ತಿ ಮತ್ತು ಮಿತಿಗಳೆರಡರ ಕಡೆಗೂ ಬೊಟ್ಟು ಮಾಡುವಂತಿದೆ.

ಎಂ.ಎಸ್. ಮುತ್ತುರಾಜ್ ಅವರ ಈ ಕಾದಂಬರಿ ಕ್ಷೌರಿಕ ಕುಟುಂಬವೊಂದರ ಕಥನವನ್ನು ಬಿಚ್ಚಿಡುತ್ತದೆ. ಹಳ್ಳಿಗಳಲ್ಲಿನ ಶೋಷಣೆಯ ಕ್ರೂರ ಮುಖ, ನಗರದ ಅನಾಮಿಕತೆ, ಆ ಅನಾಮಿಕತೆಯೇ ಕೊಡುವ ಸ್ಥೈರ್ಯ, ಅದರಿಂದಲೇ ಬೆಳೆಯುವ ಹುಡುಗನೊಬ್ಬನ ಬದುಕಿನ ಪಥವನ್ನು ಕಾಣಿಸುತ್ತದೆ.

ರಾಮಾಪುರದ ರಾಮಯ್ಯ ಎಂಬ ಬಡ ಕ್ಷೌರಿಕನ ಬದುಕಿನ ಚಿತ್ರಣದೊಂದಿಗೆ ಈ ಕಥೆ ತೆರೆದುಕೊಳ್ಳುತ್ತದೆ. ತಾನು ಪರಿಶ್ರಮದಿಂದ, ಕೌಶಲದಿಂದ ಸ್ವಾಭಿಮಾನದಿಂದ ಮಾಡಬೇಕಾದ ಕೆಲಸವನ್ನು ಪ್ರಬಲ ಜಾತಿಯವರ ಮನೆ ಮುಂದೆ ಹಿಡಿ ಜೀವ ಹಿಡಿದುಕೊಂಡು, ಅವರಿಂದ ಹೀನಾಯವಾಗಿ ಬೈಸಿಕೊಂಡು ಮಾಡಬೇಕಾದ ದುಃಸ್ಥಿತಿ ಅವನದ್ದು. ಕ್ಷೌರಿಕ ವೃತ್ತಿಯವನಾದ ಅವನು ಊರ ಗೌಡನ ಸಾವಿನಲ್ಲಿ ಮಂಗಳವಾದ್ಯ ನುಡಿಸಲು ನಿರಾಕರಿಸಿದ್ದಕ್ಕಾಗಿ ರುದ್ರಯ್ಯನ ಸೇಡಿಗೆ ಗುರಿಯಾಗುತ್ತಾನೆ. ಅವನ ಕುಟುಂಬ ಬಹಿಷ್ಕಾರಕ್ಕೆ ಒಳಗಾಗುತ್ತದೆ.



ಪು: 208 ₹200

ನಾನು ಸ್ವಾಭಿಮಾನಿ ಕ್ಷೌರಿಕ
ಲೇ: ಎಂ.ಎಸ್. ಮುತ್ತುರಾಜ್
ಪ್ರ: ಎಂ.ಎಸ್. ಮುತ್ತುರಾಜ್ ಪಿಕ್ಚರ್ಸ್
ಸಂ: 9845094846

ಶೋಷಣೆಯ ನಾನಾ ಮುಖಗಳನ್ನು ಪರಿಚಯಿಸುತ್ತ ಹೋಗುವ ಈ ಕಾದಂಬರಿ ಕೊನೆಗೆ ಅದರಿಂದ ಹೊರಬರಬೇಕಾದ ಅನಿವಾರ್ಯವನ್ನೂ ಒತ್ತಿ ಹೇಳುತ್ತದೆ. ರಾಮಯ್ಯನ ಅಸಹಾಯಕತೆ ಅವನ ಮಗ ವೆಂಕಟನಿಗೆ ಇಲ್ಲ. ಆರಂಭದಲ್ಲಿ ಅಪ್ಪ ಗಳಿಸಿದ್ದನ್ನು ತಿಂದುಂಡು ಸೋಮಾರಿಯಾಗಿಯೇ ಕಾಲ ಕಳೆದರೂ ಕೊನೆಗೆ ಮನೆಬಿಟ್ಟು ಮಹಾನಗರ ಸೇರುತ್ತಾನೆ. ಅಲ್ಲಿ ಕಾಮ್ರೇಡ್ ಮುತ್ತುರಾಜ್‌ನ ಪ್ರೇರಣೆ ಮತ್ತು ಬೆಂಬಲದಿಂದ ಸ್ವಾಭಿಮಾನಿ ಕ್ಷೌರಿಕನಾಗಿ ರೂಪುಗೊಳ್ಳುತ್ತಾನೆ. ಅದೇ ಸ್ವಾಭಿಮಾನದಿಂದ ಊರಿಗೆ ಮರಳಿ, ಕ್ಷೌರದಂಗಡಿ ಪ್ರಾರಂಭಿಸಿ, ದುರುಳ ರುದ್ರಯ್ಯನಿಗೆ ಎದುರಾಗುತ್ತಾನೆ.

ಇಂಥ ಶೋಷಣೆಯ ಪ್ರಪಂಚವನ್ನು ತೋರಿಸುವ ಕೃತಿಗಳು ಕನ್ನಡಕ್ಕೆ ಹೊಸತೇನಲ್ಲ. ಹಳೆಯ ವಸ್ತುವನ್ನೇ ಹೊಸ ಬೆಳಕಲ್ಲಿ ತೋರಿಸುವ, ಹೊಸ ಬಗೆಯ ಅನುಭವವನ್ನು ದಾಟಿಸುವ ಶಕ್ತಿ ಇಲ್ಲಿನ ನಿರೂಪಣೆಗೆ ಇಲ್ಲ. ಒಂದಾದ ಮೇಲೆ ಇನ್ನೊಂದು ದೃಶ್ಯವನ್ನು ಪೇರಿಸುತ್ತ ಹೋಗುವ ರೀತಿ, ಸಿನಿಮಾವೊಂದರ ಸ್ಕ್ರಿಪ್ಟ್‌ನಂತೆಯೂ ಭಾಸವಾಗುತ್ತದೆ. ನಿರೂಪಣೆಯ ಕ್ರಮದಲ್ಲಿಯಷ್ಟೇ ಅಲ್ಲ, ಸಂಭವಿಸುವ ಘಟನಾವಳಿಗಳಲ್ಲಿಯೂ, ಕಥೆಯ ಕೃತಕ ತಿರುವುಗಳಲ್ಲಿಯೂ ಈ 'ಸಿನಿಮೀಯ'ತೆ ಇದೆ. ಹಾಗಾಗಿಯೇ ಈ ಕಾದಂಬರಿಯ ಹಲವು ಸನ್ನಿವೇಶಗಳನ್ನು ಓದುವಾಗ 'ಈಗಾಗಲೇ ಗೊತ್ತಿದೆ' ಎನ್ನುವ ಭಾವ ಹುಟ್ಟುತ್ತದೆ.
ತಮ್ಮ ವೃತ್ತಿಯಲ್ಲಿ, ಬದುಕಿನಲ್ಲಿ ಕಂಡಿದ್ದನ್ನು ಹೇಳುವ ಉದ್ದೇಶವೇ ಇಲ್ಲಿ ಮುಖ್ಯವಾಗಿದೆ. ಅದೇ ಈ ಕೃತಿಯ ಮಹತ್ವ ಮತ್ತು ಮಿತಿ ಎರಡೂ ಆಗಿದೆ.

ಶಾಂತಿಯ ತೋಟದಲ್ಲಿ...

10ನೇ ಪುಟದಿಂದ...

ಆದರೆ, ಅತಿರೇಕಕ್ಕೆ ಹೋಗುತ್ತಿರಲಿಲ್ಲ (ಈಗಿನಂತಹ ವಾತಾವರಣ ಎಂದಿಗೂ ನಿರ್ಮಾಣವಾಗಿರಲಿಲ್ಲ ಬಿಡಿ). ಪ್ರಕ್ಷುಬ್ಧ ಸ್ಥಿತಿ ನಡುವೆಯೂ ಮಾತುಕತೆಯ ದಾರಿ ನಮಗಿತ್ತು. ಒಂದು ರೀತಿ ಸೇಫ್ಟಿ ವಾಲ್ವ್ ನಮ್ಮ ನಡುವೆ ಇತ್ತು. ಈಗ ಅದು 'ಇಲ್ಲ'ವಾಯಿತೇ ಎಂಬ ನೋವು ಕಾಡುತ್ತಿದೆ.

ಕೆಲವೊಮ್ಮೆ ಯಾವ ಧರ್ಮದವರಾದರೂ ನನ್ನನ್ನು ಅವರ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿದ್ದರೆ ಒಂದು ಷರತ್ತು ಹಾಕುತ್ತಿದ್ದೆ. ನನಗೆ ಆಹ್ವಾನ ನೀಡಿದರೆ, ಮತ್ತೊಂದು ಧರ್ಮದ ನಾಯಕರೊಬ್ಬರಿಗೆ ಆಹ್ವಾನ ನೀಡಬೇಕು ಎಂಬ ಷರತ್ತು ಅದು. ಇದನ್ನು ಅವರು ಒಪ್ಪುತ್ತಿದ್ದರು. ಎಲ್ಲರೂ ಜೊತೆಯಾಗಿರಬೇಕು, ಪರಸ್ಪರ ಸಂವಾದಕ್ಕೆ ಅವಕಾಶವಿರಬೇಕು ಎನ್ನುವುದೇ ಇದರ ಹಿಂದಿನ ಉದ್ದೇಶವಾಗಿತ್ತು. ಬಾವಿಯೊಳಗಿನ ಕಪ್ಪೆಯಾಗದೆ ವಿಶಾಲವಾಗಿ ಆಲೋಚನೆ ಮಾಡಬೇಕು ಎನ್ನುವುದು ನನ್ನ ಸಲಹೆಯಾಗಿತ್ತು. ಇನ್ನೊಬ್ಬರ ಮಾತನ್ನು ಅರ್ಥ ಮಾಡಿಕೊಂಡರೆ, ಕೋಪವೂ ಕಡಿಮೆಯಾಗಿ ವೈಮನಸ್ಸಿಗೆ, ತಪ್ಪು ತಿಳಿವಳಿಕೆಗೆ ಜಾಗವಿರುವುದಿಲ್ಲ ಎನ್ನುವುದು ನನ್ನ ತುಡಿತವಾಗಿತ್ತು. ಅಲ್ಲಿನ ನೆಲದಲ್ಲಿಯೇ ಕೋಮು ಸಾಮರಸ್ಯದ ಈ ಎಲ್ಲ ಪಾಠಗಳಿವೆ. ಹೇಳಿಕೇಳಿ, ಅದು ಸಮಾಜವಾದಿಗಳ ತಾಣ. ನಿಜಕ್ಕೂ ಅದು ಕುವೆಂಪು ಅವರು ಹೇಳಿದಂತೆ 'ಸರ್ವಜನಾಂಗದ ಶಾಂತಿಯ ತೋಟ'ವೇ. ಆ ತೋಟದಲ್ಲಿ ಹೀಗೆ ಶಾಂತಿಯನ್ನು ಕದಡುವ ಕೆಲಸವನ್ನು ಯಾರೂ ಮಾಡಬಾರದು.

ಹೀಗೇ ಬರೆಯುತ್ತಾ ಘಟನೆಯೊಂದು ನೆನಪಿಗೆ ಬರುತ್ತಿದೆ. ನಾನು ಡಿ.ಜಿ. ಆಗಿದ್ದಾಗ, ಭಟ್ಕಳ ಸಮೀಪ ಮುಸ್ಲಿಂ ಮನೆಯೊಂದರಲ್ಲಿ ಹಿಂದೂ ಯುವತಿಯ ಶವ ಸಿಕ್ಕಿತ್ತು. ಆದರೆ, ಆ ಮನೆಯಲ್ಲಿ ಮೂರ್ನಾಲ್ಕು ದಿನಗಳಿಂದ ಯಾರೂ ಇರಲಿಲ್ಲ. ಈ ಘಟನೆಯಿಂದ ಕೋಮುಗಲಭೆ ಆಗುವುದು ಖಚಿತವಾಗಿತ್ತು. ಆ ಸಂದರ್ಭದಲ್ಲಿ ರಮಣ್ ಗುಪ್ತಾ ಅವರು ಉತ್ತರ ಕನ್ನಡ ಜಿಲ್ಲೆಯ ಎಸ್‌ಪಿ ಆಗಿದ್ದರು. 'ಹೇಗೆ ಇದನ್ನು ನಿಭಾಯಿಸುತ್ತೀರಿ' ಎಂದು ನಾನು ಕೇಳಿದ್ದೆ. 'ನಮ್ಮ ಮಾತನ್ನು ಜನರು ಕೇಳುತ್ತಾರೆ. ಗಲಾಟೆ ಮಾಡುತ್ತಾರೆ, ಆದರೆ ಯಾವುದೇ ಗಲಭೆ ಆಗುವುದಿಲ್ಲ ಎನ್ನುವ ಧೈರ್ಯ ನಮಗಿದೆ' ಎಂದು ಅವರು ಉತ್ತರಿಸಿದ್ದರು. ಅವರ ಮಾತಿನಂತೆಯೇ ಯಾವುದೇ ಗಲಭೆ ಅಲ್ಲಿ ಆಗಲಿಲ್ಲ. ಕಾರಣವಿಷ್ಟೆ: ಪ್ರತಿ ಕಾನ್‌ಸ್ಟೆಬಲ್, ಇನ್‌ಸ್ಪೆಕ್ಟರ್ ಸ್ಥಳೀಯರ ಜೊತೆ ನಿರಂತರ, ನಿಕಟವಾದ ಸಂಪರ್ಕದಲ್ಲಿರುವ ಬೀಟ್ ವ್ಯವಸ್ಥೆಯನ್ನು ನಾವು ತಂದಿದ್ದೆವು. ಎಸ್‌ಪಿ ಅಂದು ಮಾತುಕತೆಯ ಮೂಲಕವೇ ಇದನ್ನು ಬಗೆಹರಿಸಿ, ತನಿಖೆ ನಡೆಸಲು ಸಮಯ ಕೇಳಿ ಶಾಂತಿ ಕಾಪಾಡುವಂತೆ ಕೋರಿದ್ದರು. ಎಲ್ಲ ಮುಖಂಡರೂ ಇದಕ್ಕೆ ಒಪ್ಪಿದ್ದರು. ವಾರದೊಳಗೆ ಪ್ರಕರಣವನ್ನು ಪೊಲೀಸರು ಭೇದಿಸಿದ್ದರು. ಇದು ಎಲ್ಲರಿಗೂ ಮಾದರಿ. ಇಲ್ಲಿ ಜನರ ನಡೆಯೂ ಅನುಕರಣೀಯ. ಕರಾವಳಿ, ಮಲೆನಾಡು ಎನ್ನದೆ ಇಡೀ ಕರುನಾಡು ಅನುಸರಿಸಬೇಕಾದ ಮಾರ್ಗ ಇದಾಗಿದೆ.



ಶಾಂತಿಯ ತೋಟಕೆ ಹೊಂಗಿರಣ ಕಮಾನು ಕಟ್ಟಿದೆ... ಸೆಕ್ಷನ್ 144 ತೆರವುಗೊಂಡ ಬಳಿಕ ಶಿವಮೊಗ್ಗದಲ್ಲಿ ಮುಂಜಾನೆಯ ನೋಟ ಪಿಟಿಐ ಚಿತ್ರ: ಶೈಲೇಂದ್ರ ಭೋಜಕ್

ಶಿವಮೊಗ್ಗ, 'ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರುದ್ಯಾನ' ಎಂದು ಹಾಡಿದ, 'ಮೊದಲು ಮಾನವನಾಗು' ಎಂದು ಕರೆಕೊಟ್ಟ ಕುವೆಂಪು ಅವರ ಜನ್ಮಸ್ಥಳ. ಕುವೆಂಪು ಅವರು ಹೇಳಿದ ಮಾತು ಕನ್ನಡಿಗರಿಗಷ್ಟೇ ಅಲ್ಲ; ಇಡೀ ಭಾರತಕ್ಕೆ ಅನ್ವಯವಾಗುವಂಥದು. ಅವರ ಮಾತುಗಳನ್ನು ಮರೆಯಬಾರದು. ಪ್ರಸ್ತುತ ಸಂದರ್ಭದಲ್ಲಿ ಇದನ್ನು ನೆನಪಿನಲ್ಲಿ, ಮನಸ್ಸಿನಲ್ಲಿ ಇಟ್ಟುಕೊಂಡರೆ ಸಾಲದು, ಅದರಂತೆ ನಡತೆ ಇರಬೇಕು. ಇದು ಬಹಳ ಕಷ್ಟದ ಕೆಲಸವೇನಲ್ಲ. ಮನಸ್ಸಿನಲ್ಲಿ ಸ್ವಲ್ಪ ಕರುಣೆ, ಪ್ರೀತಿ ಭಾವ ಬಂದರೆ ಬೇರೆಯೇ ಮನೋಭಾವ ಹುಟ್ಟಿಕೊಳ್ಳುತ್ತದೆ. ಯಾರೂ ಪ್ರಚೋದನೆಗೆ ಬಲಿಯಾಗಬಾರದು. 'ನಮ್ಮಿಂದ ತಪ್ಪಾಗಿದೆ ಕ್ಷಮಿಸಿ' ಎಂದು ಮಾತಿನಲ್ಲಿ ಕೇಳಿದರೆ ಸಾಲದು. ಮುಂದೆ ನಡತೆಯಲ್ಲೂ ತೋರಿಸಿಕೊಡಬೇಕು.

ಕೆಲವೊಂದು ಬಾರಿ ಕ್ರೈಮೀರಿ ಅನಾಹುತ ನಡೆದುಹೋಗುತ್ತದೆ. ಪ್ರತಿಯೊಂದನ್ನೂ ತಡೆಯಲು ಸಾಧ್ಯವಿಲ್ಲ. ಮಾತುಕತೆಯ ದಾರಿಯಲ್ಲಿ ಹೆಚ್ಚಿನ ಸಮಸ್ಯೆಯನ್ನು ಬಗೆಹರಿಸಲು ನೋಡಬೇಕು. ಶಿವಮೊಗ್ಗದಲ್ಲಿ ಯುವಕನ ಕೊಲೆಗೆ ಕಾರಣರಾದವರ ವಿರುದ್ಧ ತ್ವರಿತಗತಿಯಲ್ಲಿ ನಿಷ್ಪಕ್ಷಪಾತ ತನಿಖೆ ನಡೆಸಬೇಕು. ಹಾಗೆಯೇ ಅಂತ್ಯಸಂಸ್ಕಾರದ ಸಮಯದಲ್ಲಿ 144 ಸೆಕ್ಷನ್ ಹಾಕಿದ್ದಾಗ ಅದಕ್ಕೆ ಎಲ್ಲರೂ ಗೌರವ ಕೊಡಬೇಕಿತ್ತು. ಸಾವಿರಾರು ಜನರು ಸೇರಿದರೆ ಪ್ರಚೋದನೆ ಆಗುತ್ತದೆ, ಸಣ್ಣ ಘಟನೆಯೂ ವಿಕೋಪಕ್ಕೆ ಹೋಗುತ್ತದೆ. ಇದರಿಂದ ಎಲ್ಲರಿಗೂ ನೋವು ಖಚಿತ. ನಿಷೇಧಾಜ್ಞೆ ಉಲ್ಲಂಘಿಸಿ ಅಂತಹ ಹಿಂಸಾಚಾರಕ್ಕೆ ಕಾರಣರಾದವರ ವಿರುದ್ಧ ಕ್ರಮ ಜರುಗಿಸಬೇಕು. ಹಿಂಸಾಚಾರದಲ್ಲಿ ಹಲವು ವಾಹನಗಳನ್ನು ಸುಟ್ಟರು. ಇಲ್ಲಿ ಆ ವಾಹನ, ಅಂಗಡಿ ಮುಂಗಟ್ಟುಗಳ ಮಾಲೀಕರ ತಪ್ಪೇನಿದೆ? ಈ ರೀತಿ ಆಗಬಾರದಿತ್ತು. ಇಂತಹ ಸಂದರ್ಭಗಳಲ್ಲಿ ಜನರ ಮನವೊಲಿಸಿ, ಅಹಿತಕರ ಘಟನೆ ತಡೆಯುವ ಹೆಚ್ಚಿನ ಜವಾಬ್ದಾರಿ ರಾಜಕೀಯ ನಾಯಕರು, ಧರ್ಮಗುರುಗಳ ಮೇಲಿದೆ. ತಮ್ಮ ಮೇಲಿನ ಹೊಣೆಯನ್ನು ಅವರು ಮರೆಯುವಂತಿಲ್ಲ.

ನಾನು ಕರುನಾಡಿಗೆ ಕಾಲಿಟ್ಟಿದ್ದು 1976ರಲ್ಲಿ. ಅಲ್ಲಿಂದ ಇಲ್ಲಿಯವರೆಗೂ ಎಲ್ಲೂ ಹೋಗದೆ 'ಸರ್ವಜನಾಂಗದ ಶಾಂತಿಯ ತೋಟ'ವಾಗಿಯೇ ಇರುವ ಈ ನೆಲವನ್ನು ನೋಡಿದ್ದೇನೆ. ಈ ದಾರಿಯಲ್ಲೇ ನಾವು ಮತ್ತಷ್ಟು ನಡೆಯೋಣ, ಮತ್ತಷ್ಟು ಬೆಳೆಯೋಣ ಎನ್ನುವುದೇ ನನ್ನ ಆಶಯ. ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಕರ್ನಾಟಕ ಇನ್ನಷ್ಟು ಬೆಳೆಯಲಿ ಎನ್ನುವುದೇ ನನ್ನ ಆಸೆ.

ಶಿವಮೊಗ್ಗಕ್ಕೆ ಹೋದ ಬಳಿಕ ಮೊದಲ ಬಾರಿ ಜೋಗ ಜಲಪಾತಕ್ಕೆ ಹೋದಾಗ ಇಳಿ ಸಂಜೆಯಾಗಿತ್ತು. ಜಲಪಾತ ಅಸ್ಪಷ್ಟವಾಗಿ ಕಾಣುತ್ತಿತ್ತು. ಆದರೆ ಅದರ ಭೋರ್ಗರೆತ ಕಿವಿಗಪ್ಪಳಿಸುತ್ತಿತ್ತು. ಆಗ ನನಗರಿವಿರದೇ ಕವಿತೆಯೊಂದು ಮನಸ್ಸಿನಲ್ಲಿ ಹುಟ್ಟಿಕೊಂಡಿತ್ತು. ಈಗ ಇದು ಪ್ರಸ್ತುತ ಎನಿಸುತ್ತಿದೆ.

Falling, falling, falling
Reaching the rock bottom
The river regained its old glory.
ಬದುಕೂ ಅಷ್ಟೆ.

ಲೇಖಕ: ನಿವೃತ್ತ ಪೊಲೀಸ್ ಮಹಾನಿರ್ದೇಶಕ
ನಿರೂಪಣೆ: ಅಭಿಲಾಷ್ ಪಿ.ಎಸ್.

ತಂತ್ರಜ್ಞಾನ ಕಥನಗಳ ಸಂಕಲನ

ವಿಜ್ಞಾನ ವಿಷಯಗಳ ಕುರಿತು ಬರವಣಿಗೆ ಅಷ್ಟು ಸುಲಭವಲ್ಲ. ಕಬ್ಬಿಣದ ಕಡಲೆಯಂಥ ವಿಷಯವನ್ನು ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ಸರಳವಾಗಿ ಹೇಳಿ ರುಚಿ ಹತ್ತಿಸುವುದು ಅಲ್ಲಿನ ಕಷ್ಟ. ಆದರೆ, ವೃತ್ತಿಯಲ್ಲಿ ಗಣಿತ ಅಧ್ಯಾಪಕರಾಗಿರುವ ಗುರುರಾಜ್ ಎಸ್. ದಾವಣಗೆರೆ ಅವರು ವಿಜ್ಞಾನದ ಬರವಣಿಗೆಯನ್ನೂ ರುಚಿಸುವಂತೆ ರಸಪಾಕ ಮಾಡಿಕೊಡುವುದರಲ್ಲಿ ಸಿದ್ಧಹಸ್ತರು. 'ಸುಧಾ' ವಾರಪತ್ರಿಕೆಯಲ್ಲಿ ವಿಜ್ಞಾನ ವಿಷಯಗಳ ಕುರಿತು ಅವರು ಬರೆದ ಲೇಖನಗಳ ಸಂಗ್ರಹವೇ 'ಡೇಟಾ ದೇವರು ಬಂದಾಯ್ತು'.

ಈ ಶತಮಾನದಲ್ಲಿ ಇಡೀ ವಿಶ್ವವನ್ನೇ ಆಳುತ್ತಿರುವ ನವನವೀನ ತಂತ್ರಜ್ಞಾನ ಇಲ್ಲಿನ ಲೇಖನಗಳ ಮೂಲ ವಿಷಯ. ಹೊಸ ತಂತ್ರಜ್ಞಾನಗಳು, ವಿಜ್ಞಾನ ಕ್ಷೇತ್ರದಲ್ಲಿನ ಬೆಳವಣಿಗೆಗಳು ಸಾಮಾನ್ಯರಿಗೂ ಕುತೂಹಲ ಹೆಚ್ಚಿಸುವ ಸಂಗತಿಗಳು. ಕೃತಕ ಬುದ್ಧಿಮತ್ತೆ ಮತ್ತು ಅದರ ಪ್ರಯೋಜನದ ಬಗ್ಗೆ ಕಿಂಚಿತ್ತು ಮಾಹಿತಿಯನ್ನಾದರೂ ತಿಳಿಯಲು ಜನ ಬಯಸುತ್ತಾರೆ. ಇಂತಹ ವಿಷಯಗಳನ್ನು 'ಡೇಟಾ ದೇವರು ಮತ್ತು ಅಲ್ಗೊರಿಥರ್ಮ್', 'ಮುಂದಿದೆ ಅತಿಮಾನವರ ಕಾಲ', 'ನಾನವನಲ್ಲ ಮಾನವನಲ್ಲ' ಮುಂತಾದ ಲೇಖನಗಳಲ್ಲಿ ಲೇಖಕರು ಪ್ರಸ್ತುತಪಡಿಸಿದ್ದಾರೆ. ವಿಷಯಕ್ಕೆ ತಕ್ಕ ಚಿತ್ರಗಳೂ ಓದಿಗೆ ಪೂರಕವಾಗಿವೆ.

ಮದುವೆ ಮನೆಗಳಿಂದ ಹಿಡಿದು ರಕ್ಷಣೆ, ಕೃಷಿ ಕ್ಷೇತ್ರದಲ್ಲೂ ಬಳಕೆಯಾಗುತ್ತಿರುವ ಡ್ರೋನ್‌ಗಳ ಬಗ್ಗೆಯೂ ಇಲ್ಲಿ ಭರಪೂರ ಮಾಹಿತಿ ಇದೆ. ಪ್ಲಾಸ್ಟಿಕ್ ಫ್ಯಾಕ್ಟ್‌ಶೀಟ್‌ನಲ್ಲಿನ ಆಘಾತಕಾರಿ ಅಂಶಗಳು ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮವನ್ನು ವಿವರಿಸುತ್ತವೆ. ಮೃತದೇಹವನ್ನು ಮಣ್ಣು ಮಾಡುವ ವಿಧಾನಕ್ಕೂ ಕಾಲಿಟ್ಟ ತಂತ್ರಜ್ಞಾನದ ಕುರಿತ 'ಬರಲಿದೆ ಸಾವಯವ ಶವಸಂಸ್ಕಾರ' ಲೇಖನ, 'ನೀನಾರಿಗಾದೆಯೋ ಎಲೆ ಮಾನವ' ಎಂಬ ಪ್ರಶ್ನೆಗೆ ಉತ್ತರದಂತಿದೆ. ಈ ಕೃತಿ ವಿಜ್ಞಾನ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತ ಮಾಹಿತಿಯ ಕೋಶವಾಗಿದೆ.



ಪು: 160 ₹150

ಡೇಟಾ ದೇವರು ಬಂದಾಯ್ತು!
ಲೇ: ಗುರುರಾಜ್ ಎಸ್. ದಾವಣಗೆರೆ
ಪ್ರ: ಭೂಮಿ ಬುಕ್ಸ್, ಬೆಂಗಳೂರು
ಸಂ: 9449177628


‘ಗುಣಮಟ್ಟವೇ ನಾಟಕದ ಯಶಸ್ಸಿನ ಒಳಗುಟ್ಟು’

ಮಂಜುಶ್ರೀ ಎಂ. ಕಡಕೋಳ

ಟೈಲರಿಂಗ್ ಮಾಡುತ್ತಿದ್ದ ಜೇವರ್ಗಿ ರಾಜಣ್ಣ ಅವರು ನಾಟಕದ ಮೇಲಿನ ಆಸಕ್ತಿಯಿಂದ ವೃತ್ತಿರಂಗಭೂಮಿಗೆ ಬಂದವರು. ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘದ ಮೂಲಕ ಕನ್ನಡ ವೃತ್ತಿರಂಗಭೂಮಿಯಲ್ಲಿ ಪಾರಮ್ಯ ಮೆರೆದಿರುವ ಅವರ ಕಾಯಕಕ್ಕೀಗ ಮೂರು ದಶಕಗಳ ಸಂಭ್ರಮ.

ನಟ, ನಾಟಕಕಾರ, ಕಂಪನಿ ಮಾಲೀಕ ಹೀಗೆ ಹಲವು ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿರುವ ರಾಜಣ್ಣ ಅವರು ಕೊರೊನಾ ಕಾಲದಲ್ಲೂ ತಮ್ಮ ರಂಗನಂಟನ್ನು ಬಿಟ್ಟುಕೊಟ್ಟವರಲ್ಲ. ಸಾಂಕ್ರಾಮಿಕ ರೋಗದ ಹೊಡೆತಕ್ಕೆ ರಂಗಭೂಮಿಯೂ ಹೊರತಾಗಲಿಲ್ಲ. ಅದರ ನಡುವೆಯೇ ಈಚೆಗಷ್ಟೇ ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಬನಶಂಕರಿ ಜಾತ್ರೆಯಲ್ಲಿ ಜೇವರ್ಗಿ ರಾಜಣ್ಣ ಅವರ ರಚನೆಯ ‘ಕುಡುಕ ಕಲ್ಯಾ ಸಿಡುಕ ಮಲ್ಲಿ’ ನೂರಕ್ಕೂ ಹೆಚ್ಚು ಪ್ರಯೋಗಗಳನ್ನು ಕಂಡು ಪ್ರೇಕ್ಷಕರ ಮನಗೆದ್ದಿದೆ. ಅಂತೆಯೇ ರಾಜಣ್ಣ ಅವರ ರಚನೆಯ ‘ಕುಂಟ ಕೋಣ ಮೂಕ ಜಾಣ’ ನಾಟಕ 16 ಸಾವಿರ ಪ್ರಯೋಗ ಮತ್ತು ‘ಶೆರೆ ಅಂಗಡಿ ಸಂಗವ್ವ’ ನಾಟಕ ಸಾವಿರಕ್ಕೂ ಅಧಿಕ ಪ್ರಯೋಗಗಳನ್ನು ಪ್ರದರ್ಶಿಸಿ ದಾಖಲೆ ಬರೆದಿವೆ. ವೃತ್ತಿರಂಗದ ಮೂರು ದಶಕಗಳ ನೋವು–ನಲಿವನ್ನು ಆಸ್ವಾದಿಸುತ್ತಲೇ ಬೆಳೆದ ಅವರ ಮನದಲ್ಲಿ ವೃತ್ತಿರಂಗಕ್ಕೆ ಕಾಯಕಲ್ಪ ಕಲ್ಪಿಸುವ ಅದಮ್ಯ ಉತ್ಸಾಹವಿದೆ.

ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘದ ಮೂಲಕ ಕನ್ನಡ ವೃತ್ತಿರಂಗಭೂಮಿಯಲ್ಲಿ ಪಾರಮ್ಯ ಮೆರೆದಿರುವ ಜೇವರ್ಗಿ ರಾಜಣ್ಣ ಅವರ ಕಾಯಕಕ್ಕೀಗ ಮೂರು ದಶಕಗಳ ಸಂಭ್ರಮ. ಈ ನೆಪದಲ್ಲಿ ಅವರೊಂದಿಗೆ ನಡೆಸಿದ ಮಾತುಕತೆಯ ಸಾರ ಇಲ್ಲಿದೆ.



ಜೇವರ್ಗಿ ರಾಜಣ್ಣ ಅವರ ರಚನೆ ಮತ್ತು ನಿರ್ದೇಶನದ ‘ಮಾತಾಡಿದ ಮೂಕ ದನ’ ನಾಟಕದ ದೃಶ್ಯ

80ರ ದಶಕಗಳ ದಿನಗಳನ್ನು ಮೆಲುಕು ಹಾಕುತ್ತಲೇ ವೃತ್ತಿರಂಗದ ವರ್ತಮಾನದ ಸವಾಲುಗಳನ್ನು ಎದುರಿಸುತ್ತಿರುವ ಅವರು ಹೊಸ ನಾಟಕಗಳನ್ನು ಪ್ರದರ್ಶಿಸುವಲ್ಲಿ ಹಿಂದೆ ಬಿದ್ದವರಲ್ಲ. ಇತ್ತೀಚೆಗಷ್ಟೇ ಅವರು ರಚಿಸಿದ ‘ಮಾತಾಡಿದ ಮೂಕ ದನ’ ನಾಟಕ ಪ್ರೇಕ್ಷಕರ ಮನಸೂರೆಗೊಳ್ಳುವಲ್ಲಿ ಯಶಸ್ಸು ಕಂಡಿದೆ. ‘ಕುಟುಂಬದ ಸದಸ್ಯರೇ ನಮ್ಮ ಕಂಪನಿಯಲ್ಲಿರುವ ಕಾರಣ ನನಗೆ ಹೊಸ ನಾಟಕ ಕೂಡಿಸುವಲ್ಲಿ ಅಷ್ಟಾಗಿ ತೊಂದರೆ ಕಾಣಿಸಲಿಲ್ಲ’ ಎನ್ನುವ ಅವರು ವೃತ್ತಿರಂಗದಲ್ಲಿ ದಿನೇದಿನೇ ಕಲಾವಿದರ ಕೊರತೆ ಆಗುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸುತ್ತಾರೆ. ‘ಕಲಾವಿದರ ತೀವ್ರ ಕೊರತೆಯಿಂದಾಗಿ ಹೊಸ ನಾಟಕಗಳ ಪ್ರದರ್ಶನ ಸಾಧ್ಯವಾಗುತ್ತಿಲ್ಲ. ಒಂದು ಕಾಲದಲ್ಲಿ ನಾನೇ ಬರೆದ ನಾಟಕಗಳಿಗೆ ಹಾಡುಗಳನ್ನೂ ಬರೆದೂ, ಸಂಗೀತ ನಿರ್ದೇಶಕರಿಂದ ರಾಗಸಂಯೋಜಿಸುತ್ತಿದ್ದೆವು. ಆದರೆ, ಆರ್ಥಿಕ ದುಃಸ್ಥಿತಿ, ಬದಲಾದ ಕಾಲಮಾನದಲ್ಲಿ ಕೆಲವು ನಾಟಕ ಕಂಪನಿಗಳು ಸಿನಿಮಾ ಹಾಡನ್ನು ಬಳಸಿಕೊಳ್ಳುತ್ತಿವೆ. ಕಲಾವಿದರ ಕೊರತೆಯೇ ಇದಕ್ಕೆ ಮುಖ್ಯ ಕಾರಣ’ ಎಂಬ ವಿಶ್ಲೇಷಣೆ ರಾಜಣ್ಣ ಅವರದ್ದು.

‘ಕಲಾವಿದರ ಕೊರತೆ ಇದ್ದಾಗ ಇರುವವರಿಂದಲೇ ನಾವು ಗುಣಮಟ್ಟದ ಅಭಿನಯವನ್ನು ನಿರೀಕ್ಷಿಸಲಾಗದು. ಎಷ್ಟೋ ಬಾರಿ ಹೊಸ ನಾಟಕ ಮಾಡ್ತೀವಿ, ರಿಹರ್ಸಲ್‌ಗೆ ಬನ್ನಿ ಅಂತ ಒತ್ತಾಯವನ್ನೂ ಮಾಡಲಾಗದು. ಹೊಸ ಕಲಾವಿದರಲ್ಲಿ ಬಹುತೇಕರು ಹಾಡು ಕಲಿಯಲು ಹಿಂಜರಿಯುತ್ತಾರೆ. ಅವರಿಗೆ ಸಿನಿಮಾ ಹಾಡುಗಳೇ ಬೇಕು. ಇಂಥ ಸವಾಲುಗಳನ್ನು ಮೀರಿ ಹೊಸ ನಾಟಕ ಕೊಟ್ಟರೂ ಅದು ಒಳ್ಳೆಯ ಗುಣಮಟ್ಟ ಹೊಂದಿರದಿದ್ದರೆ ಪ್ರೇಕ್ಷಕ ತಿರಸ್ಕರಿಸುವುದು ಖಚಿತ. ಹಾಗಾಗಿ, ಆತ ಕೊಟ್ಟ ಹಣಕ್ಕೆ ಮೋಸವಾಗದಂತೆ ಗುಣಮಟ್ಟದ ನಾಟಕ ಕೊಡುವುದು ಅಗತ್ಯ’ ಎನ್ನುವ ಪ್ರತಿಪಾದನೆ ಅವರದ್ದು.

ವಿಜ್ಞಾನ– ತಂತ್ರಜ್ಞಾನ ಮುಂಚೂಣಿಯಲ್ಲಿರುವ ಈ ದಿನಗಳಲ್ಲಿ ಟಿ.ವಿ, ಮೊಬೈಲ್ ಸಿನಿಮಾದಿಂದಾಗಿ ರಂಗಪ್ರಿಯರ ಸಂಖ್ಯೆ ಕಮ್ಮಿಯಾಗಿದೆಯೇ ಎನ್ನುವ ಪ್ರಶ್ನೆಗೆ, ರಾಜಣ್ಣ ಅವರು ನ್ಯೂಯಾರ್ಕ್ ರಂಗಮಂದಿರ ಮಾದರಿಯ ಉತ್ತರ ಮುಂದಿಡುತ್ತಾರೆ. ‘ನ್ಯೂಯಾರ್ಕ್‌ನ ರಂಗಮಂದಿರಗಳಲ್ಲಿ ಈಗಲೂ ಜನ ನಾಟಕ ನೋಡಲು ತಿಂಗಳುಗಟ್ಟಲೇ ಮುಂಚಿತವಾಗಿ ಟಿಕೆಟ್ ಕಾಯ್ದಿರಿಸುತ್ತಾರೆ. ಅಂದರೆ ಅಲ್ಲಿ ಗುಣಮಟ್ಟದ ನಾಟಕ ಇದೆ ಅಂತ ಅರ್ಥವಲ್ಲವೇ? ಟಿ.ವಿ, ಮೊಬೈಲ್, ಸಿನಿಮಾ ಕುರಿತ ಇರುವ ದೂರಿನಲ್ಲಿ ಶೇ 10ರಷ್ಟು ಹುರುಳಿರಬಹುದು. ಆದರೆ, ಸತ್ವಯುತವಾದ ನಾಟಕ ಕೊಟ್ಟರೆ ಪ್ರೇಕ್ಷಕರು ನೋಡುತ್ತಾರೆ ಎಂಬ ನಂಬಿಕೆ ನನ್ನದು. ಅದುವೇ ನಾಟಕವೊಂದರ ಯಶಸ್ಸಿನ ಗುಟ್ಟು’ ಎಂದು ದೃಢವಾಗಿ ನುಡಿಯುತ್ತಾರೆ.

‘ವೃತ್ತಿರಂಗಭೂಮಿಯಲ್ಲಿ ಜನರು ಹಾಸ್ಯವನ್ನು ನಿರೀಕ್ಷಿಸುತ್ತಾರೆ. ಅದರಲ್ಲೂ ಹೊಲಸು ಪದ, ಡಬ್ಬಲ್ ಮೀನಿಂಗ್ ಕೊಟ್ಟರೆ ಜನ ನಾಟಕ ನೋಡುವುದಿಲ್ಲ. ರಾಜಹಾಸ್ಯದ ಜೊತೆಗೆ ಸಂದೇಶವೂ ಇರಬೇಕು. ರಾಜಹಾಸ್ಯ ಕೊಟ್ಟಲ್ಲಿ ಜನರ ಮನಸು ಗಲಿಬಿಲಿಯಾಗದು. ಅದು ಮಾನಸಿಕ ಆರೋಗ್ಯಕ್ಕೂ ಉತ್ತಮ. ಜನರಿಗೆ ನಾವೇನು ಕೊಡುತ್ತೇವೆ ಅನ್ನುವ ಬಗ್ಗೆ ಚಿಂತನೆ ಅಗತ್ಯ. ಪ್ರಚಲಿತ ವಿಷಯ, ಸಮಸ್ಯೆ ಆರಿಸಿಕೊಂಡರೆ ಜನರನ್ನು ಮುಟ್ಟಲು ಸಾಧ್ಯ. ಈಚೆಗಷ್ಟೇ ನಾನು ‘ಮಾತಾಡಿದ ಮೂಕ ದನ’ ಎನ್ನುವ ನಾಟಕ ಬರೆದೆ. ದುಶ್ಚಟಗಳ ದಾಸನಾದ ಗಂಡನಿದ್ದರೂ ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳುವ ಹೆಂಡತಿಯ ಕಥೆ ಈ ನಾಟಕದ್ದು. ಅಂತೆಯೇ ಮತ್ತೊಂದು ನಾಟಕದಲ್ಲಿ ಪರಿಸರದ ಮಹತ್ವವನ್ನು ಹಾಸ್ಯದ ಮೂಲಕ ಜನರಿಗೆ ಮನವರಿಕೆ ಮಾಡಲು ಯತ್ನಿಸಿರುವೆ’ ಎಂದು ವರ್ತಮಾನಕ್ಕೆ ವೃತ್ತಿನಾಟಕವೊಂದು ಸ್ಪಂದಿಸುವ ಗುಣವನ್ನು ಬಿಚ್ಚಿಡುತ್ತಾರೆ ಅವರು.

‘ಸರ್ಕಾರದ ಲೆಕ್ಕದಲ್ಲಿ ಸುಮಾರು 25 ವೃತ್ತಿನಾಟಕ ಕಂಪನಿಗಳಿರಬಹುದು. ಅದರಲ್ಲಿ ಪೂರ್ಣಕಾಲಿಕವಾಗಿರುವ ಕಂಪನಿಗಳು ಅರ್ಧದಷ್ಟಿವೆ. ಉಳಿದವು ಅರೆಕಾಲಿಕ. ಈ ಕಂಪನಿಗಳಿಗೆ ಸರ್ಕಾರ ನೀಡುವ ಅನುದಾನವು ‘ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ’ಯಂತಾಗಿದೆ. ಪೂರ್ಣಕಾಲಿಕ ನಾಟಕ ಕಂಪನಿಯೊಂದು ಸುಸಜ್ಜಿತವಾಗಿ ಒಂದು ಕ್ಯಾಂಪ್ ಮಾಡಬೇಕೆಂದರೆ ಕನಿಷ್ಠ ₹ 4 ಲಕ್ಷ ಬೇಕು. ದಿನವೊಂದಕ್ಕೆ ಕನಿಷ್ಠ ₹ 20 ಸಾವಿರ ಖರ್ಚಿರುತ್ತದೆ. ನಾಟಕ ಕಲೆಕ್ಷನ್ ಆಗಲಿ, ಬಿಡಲಿ, ಕಂಪನಿಯ ಕಲಾವಿದರಿಗೆ ತಿಂಗಳಿಗೆ ಇಷ್ಟು ಅಂತ ಸಂಬಳ ಕೊಡಲೇಬೇಕು. ಸರ್ಕಾರ ನೀಡುವ ಅನುದಾನವು ಕಂಪನಿಗಳಿಗೆ ಲಾಭ ತರುವಂತಿದ್ದರೆ ಇಷ್ಟೊತ್ತಿಗೆ ಹತ್ತಾರು ಪೂರ್ಣ ಕಂಪನಿಗಳು ಹುಟ್ಟಿಕೊಳ್ಳಬೇಕಿತ್ತು’ ಎಂಬ ಅರ್ಥವಿಶ್ಲೇಷಣೆ ಅವರದ್ದು.

ಅಗ್ನಿಶಾಮಕ ಇಲಾಖೆಯವರು ಯಕ್ಷಗಾನ ಪ್ರದರ್ಶನಕ್ಕೆ ನಿರಾಕ್ಷೇಪಣಾ ಪತ್ರ ನೀಡಲು ವಿಧಿಸುವ ಕಮ್ಮಿ ಮೊತ್ತ, ಕಂಪನಿ ನಾಟಕಗಳಿಗೇಕಿಲ್ಲ ಎಂದು ಪ್ರಶ್ನಿಸುವ ರಾಜಣ್ಣ, ಇಂಥ ತಾರತಮ್ಯಗಳು ನೀಗಬೇಕೆನ್ನುತ್ತಾರೆ. ಆಧುನಿಕತೆ ಒಡ್ಡುತ್ತಿರುವ ಸವಾಲು, ಕಲಾವಿದರ ಕೊರತೆಯಂಥ ಜಡ್ಡುಜಾಪತ್ರಿಯಿಂದ ವೃತ್ತಿರಂಗಭೂಮಿ ಚೇತರಿಸಿಕೊಳ್ಳಬೇಕಿದೆ ಎನ್ನುವ ಆಶಯ ಅವರದ್ದು.



ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಪ್ರದರ್ಶನಗೊಂಡ ರಾಜಣ್ಣ ಜೇವರ್ಗಿ ವಿರಚಿತ ‘ಕುಂಟ ಕೋಣ ಮೂಕ ಜಾಣ’ ಹಾಸ್ಯಭರಿತ ನಾಟಕದ ನೋಟ

ರಂಗಭೂಮಿಯ ‘ರಾಜಣ್ಣ’



ಜೇವರ್ಗಿ ರಾಜಣ್ಣ

ರಂಗಭೂಮಿಯಲ್ಲಿ ಗಟ್ಟಿಯಾದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಜೇವರ್ಗಿ ರಾಜಣ್ಣನವರು ಕಲ್ಯಾಣ ಕರ್ನಾಟಕ ಭಾಗದವರು. ದೊಡ್ಡಾಟದ ಕಡೆಗಿನ ತೀವ್ರ ಆಸಕ್ತಿಯೇ ಮುಂದೆ ಅವರನ್ನು ರಂಗಭೂಮಿಯಲ್ಲಿ ದಾಪುಗಾಲು ಹಾಕುವಂತೆ ಮಾಡಿತು. 1989ರಲ್ಲಿ ಅವರು ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘ ಸ್ಥಾಪಿಸಿದರು. ಸಾಮಾಜಿಕ ನಾಟಕಗಳನ್ನು ಕಾಲದ ಅಗತ್ಯಕ್ಕೆ ತಕ್ಕಂತೆ ಅಪ್‌ಡೇಟ್ ಮಾಡುವಲ್ಲಿ ಸಿದ್ಧಹಸ್ತರಾದ ರಾಜಣ್ಣ, ಈಗಲೂ ತಂಡ ಕಟ್ಟಿಕೊಂಡು, ಅಲ್ಲಲ್ಲಿ ಕ್ಯಾಂಪ್ ಮಾಡುತ್ತಾ, ರಂಗ ಚಟುವಟಿಕೆಗಳನ್ನು ಜೀವಂತವಾಗಿ ಇಟ್ಟವರು. ವಿಶ್ವಜ್ಯೋತಿ ಶ್ರೀ ಪಂಚಾಕ್ಷರ ನಾಟ್ಯ ಸಂಘದ ನಾಟಕಗಳೆಂದರೆ ಈಗಲೂ ಜನ ಮುಗಿಬೀಳುವುದು ಅವರ ಜನಪ್ರಿಯತೆಗೆ ಸಾಕ್ಷಿ. ಈ ಸಂಘದ ನಾಟಕಗಳಲ್ಲಿ ಅಭಿನಯಕ್ಕೆ ಇರುವಷ್ಟೇ ಪ್ರಾಮುಖ್ಯತೆ ಕಥೆ ಮತ್ತು ಸಂಗೀತಕ್ಕೂ ಇರುವುದು ಎದ್ದುಕಾಣುವ ಅಂಶ. ಸದ್ಯ ಅವರ ತಂಡ ಶಿವಮೊಗ್ಗ ಜಿಲ್ಲೆಯ ಆನವಟ್ಟಿ ಬಳಿಯ ಕೋಟಿಪುರದಲ್ಲಿ ಕ್ಯಾಂಪ್ ಮಾಡಿದ್ದು, ‘ಕುಂಟ ಕೋಣ ಮೂಕ ಜಾಣ’ ನಾಟಕದ ಪ್ರದರ್ಶನ ನೀಡುತ್ತಿದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಸಂಖ್ಯೆಗಳಲ್ಲೂ ಸ್ನೇಹಗುಣವೇ? ನೀನೆನಗಿದ್ದರೆ ನಾ ನಿನಗೆ

220 ಹಾಗೂ 284 ಇವೆರಡೂ ಸ್ನೇಹ ಸಂಖ್ಯೆಗಳು. ಏಕೆಂದರೆ 220ರ ಅಪವರ್ತನಗಳೆಲ್ಲವನ್ನೂ ಕೂಡಿಸಿದಾಗ ಅದರ ಮೊತ್ತ 284 ಆಗುವುದು. ಹಾಗೆಯೇ 284ರ ಎಲ್ಲ ಅಪವರ್ತನಗಳನ್ನು ಕೂಡಿಸಿದಾಗ ಅವುಗಳ ಮೊತ್ತ 220 ಆಗುವುದು. ನೀನೆನಗಿದ್ದರೆ ನಾ ನಿನಗೆ ಎಂಬ ನೀತಿ ಇಲ್ಲಿ ಕಾಣುವುದು

220ರ ಅಪವರ್ತನಗಳು / 284ರ ಅಪವರ್ತನಗಳು

220ರ ಅಪವರ್ತನಗಳು	284ರ ಅಪವರ್ತನಗಳು
1	1
2	2
4	+ 4
5	71
10	142
+ 11	= 220
20	
22	
44	
55	
110	
= 284	

(ಇಲ್ಲಿ ಎರಡೂ ಮೂಲ ಸಂಖ್ಯೆ ಬಿಡಬೇಕು)

ಇದುವರೆಗೆ ಇಂಥ 400 ಜೋಡಿ ಸ್ನೇಹ ಸಂಖ್ಯೆಗಳನ್ನು ಕಂಡುಹಿಡಿದಿದ್ದಾರೆ.



ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಮರಿಕಣ್ಣು = ________
2. ತಿಂದಕಡಿರಿ = ________
3. ಮುದಿನಯನಾ = ________
4. ಸವಲತ್ತು = ________

ಡಶ್ಗ ಚಕ್ಕು ಕೀಶ್ರಪ್ಪು ಕಥೆಯ

ಶಬ್ದಗಳೊಡನೆ ಸರಸ

ಒತ್ತಕ್ಷರ ಆಟ

ಇಲ್ಲಿ ಕೊಟ್ಟಿರುವ ಪದಗಳನ್ನು ಮುಂದೆ ಕೊಟ್ಟ ಸುಳಿವಿನಂತೆ ಒತ್ತಕ್ಷರ ಸೇರಿಸಿ ಬೇರೆ ಪದ ಮಾಡಿ

1. ಪಾವತಿ = ಉಮೆ
2. ಒಗಟು = ಒಂದುಗೂಡುವಿಕೆ
3. ಸಂಸಾರ = ನಾಗರಿಕತೆ
4. ಉದಾರ = ಏಳ್ಗೆ
5. ಸಮಾನ = ಗೌರವ
6. ತನಯ = ಏಕಾಗ್ರತೆ
7. ವಕಾರ = ಚೆನ್ನಾಗಿ ಮಾತನಾಡುವವನು
8. ಆಶಯ = ರಕ್ಷಣೆ
9. ಸಕಾರ = ಆಡಳಿತದ ಒಂದು ವ್ಯವಸ್ಥೆ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಟ್ವೆಂಟಿ – 20 ಮ್ಯಾಚ್

A. ಎಡಭಾಗದ ಎರಡು ಅಕ್ಷರಗಳಿಗೆ ಬಲಭಾಗದ ಎರಡು ಅಕ್ಷರ ಜೋಡಿಸಿ ಪದ ಮಾಡಿ


1	ಸ__ಸ__	A	ರು-ಟ್ಟು
2	ಕ__ಕ__	B	ರಿ-ರ
3	ಹ__ಹ__	C	ಪ್ಪಿ-ಸ್ಥ
4	ಮ__ಮ__	D	ಳ-ಳಿ
5	ಹ__ಹ__	E	ಸ-ಸಿ
6	ಜ__ಜ__	F	ನಿ-ರ
7	ಕ__ಕ__	G	ರಾ-ರಿ
8	ಮಾ__ಮಾ__	H	ಗ-ಟ್ಟ
9	ತ__ತ__	I	ಹಾ-ನ
10	ಗು__ಗು__	J	ರಾ-ರಿ

B. ಎಡಭಾಗದ ಪದಕ್ಕೆ ಬಲಭಾಗದ ಅಕ್ಷರ ಜೋಡಿಸಿ


1	ಅಪ್ಪ	A	ಕೆ
2	ಕೊಡ	B	ಗ
3	ಹರ	C	ಲೆ
4	ಕಡ	D	ಣೆ
5	ಕರ	E	ಣ
6	ಮರ	F	ಗು
7	ಜನ	G	ಣಿ
8	ಹರಿ	H	ನಿ
9	ಕನ್ನ	I	ರು
10	ಹಸಿ	J	ಡಿ

ಸಾಮ್ರಾಟ ಅಶೋಕ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಅಶೋಕ, ಮೌರ್ಯ ಸಾಮ್ರಾಜ್ಯದ ಪ್ರಸಿದ್ಧ ಚಕ್ರವರ್ತಿ (ಕ್ರಿ.ಪೂ 273 ರಿಂದ ಕ್ರಿ.ಪೂ 232). ಅವನಿಗೆ ದೇವನಾಂಪ್ರಿಯ ಮತ್ತು ಪ್ರಿಯದರ್ಶಿ ಎಂಬ ಬಿರುದುಗಳಿದ್ದವು. ಅಶೋಕ ಎಂದರೆ ಶೋಕವಿಲ್ಲದವನು ಎಂದು ಅರ್ಥ



ಮೌರ್ಯ ರಾಜ ಬಿಂದುಸಾರನಿಗೆ ಅವನ ರಾಣಿಯರಲ್ಲೊಬ್ಬಳಾದ ಸುಭದ್ರಾಂಗಿಯ ಉದರದಲ್ಲಿ ಜನಿಸಿದವನೇ ಅಶೋಕ. ಆತ ಶಿಕ್ಷಣ, ಸಮರಕಲೆಗಳಲ್ಲಿ ಮುಂದಿದ್ದ



ಅಶೋಕ ಮತ್ತು ಕಳಿಂಗದ ರಾಜ ಶುದ್ಧಧರ್ಮನ ಮಧ್ಯೆ ನಡೆದದ್ದು ಕಳಿಂಗ ಯುದ್ಧ (ಕ್ರಿ.ಪೂ.261). ಈ ಯುದ್ಧದ ಸಾವು ನೋವುಗಳಿಂದ ಅಶೋಕನ ಮನ ಪರಿವರ್ತನೆಯಾಯಿತು. ಬೌದ್ಧಧರ್ಮವನ್ನು ಸ್ವೀಕರಿಸಿದ



ಮುಂದೆ ತನ್ನ ಜೀವಿತಾವಧಿಯನ್ನೆಲ್ಲಾ ಬೌದ್ಧ ಧರ್ಮದ ಪ್ರಚಾರ, ಶಾಸನ ರಚನೆಗಾಗಿ ಮೀಸಲಿಟ್ಟ. ತನ್ನ ಮಕ್ಕಳನ್ನೂ ಇದೇ ಕಾರ್ಯದಲ್ಲಿ ತೊಡಗಿಸಿದ. ಅವನ ಕಾಲದಲ್ಲಿ ಬೌದ್ಧ ಧರ್ಮವು ಜಗತ್ತಿಗೆ ಪಸರಿಸಿತು



ಬುದ್ಧನ ಅಥವಾ ಬೌದ್ಧ ಭಿಕ್ಷುವಿನ ಅವಶೇಷಗಳ ಮೇಲೆ ಕಟ್ಟಿದ ಸ್ಮಾರಕಗಳೇ ಸ್ತೂಪ. ಅಶೋಕನು ತನ್ನ ಆಡಳಿತದ ಕಾಲದಲ್ಲಿ ಬುದ್ಧ ಧರ್ಮಚಕ್ರ ಪ್ರವರ್ತನ ಮಾಡಿದ ಸಾರಾನಾಥದಲ್ಲಿ ಧರ್ಮಚಕ್ರಸ್ತೂಪ ಕಟ್ಟಿಸಿದ




ಸಾರನಾಥದ ಅಶೋಕ ಸ್ತಂಭದಲ್ಲಿರುವ ಸಿಂಹ ಮತ್ತು ಅಶೋಕ ಚಕ್ರ ನಮ್ಮ ರಾಷ್ಟ್ರ ಲಾಂಛನವಾಗಿದೆ. ಅಶೋಕನ ಅಹಿಂಸಾ ಸಂದೇಶ, ಪ್ರಖ್ಯಾತಿಗೆ ಸಂದ ಗೌರವ ಇದು. ನಮ್ಮ ರಾಷ್ಟ್ರಧ್ವಜದಲ್ಲೂ ಅಶೋಕ ಚಕ್ರ ಇದೆ

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಕಣ 2. ಕಡಿ 3. ಹೆಣ 4. ಭಾವಿ
5. ಗರಿ 6. ಸಂತ 7. ಕೂಸು 8. ಸುತ



1.		ರಿಂ	
2.		ರ್ಗ	
3.		ಕೇ	
4.		ಪ್ರೀ	
5.		ಡಿ	
6.		ಜ್ಞ	
7.		ಗ್ಗ	
8.		ಬ್ಬಿ	

ಕಳೆದ ಸಂಚಿಕೆಯ ಸರಿ ಉತ್ತರಗಳು

ಅದಲು ಬದಲು ಕಂಚಿ ಕದಲು:
1. ಸಹಕರಿಸು 2. ನೀರಿಗೆ ಹೋರಾಟ
3. ಪ್ರಗತಿ ತೋರಿಸು 4. ಸುಧಾರಕ

ಶಬ್ದಗಳೊಡನೆ ಸರಸ:
A. ಒಂದು ಪದ ಹಲವು ವಿಧ:
1. ಸಂಗಮ 2. ಸುಗಮ 3. ನಿಗಮ 4. ಉಗಮ 5. ಆಗಮ
B. ಮರ ಗುರುತಿಸಿ: 1. ಬನ್ನಿ 2. ಬಿಲ್ವ 3. ಹೊನ್ನೆ 4. ನುಗ್ಗೆ 5. ಅತ್ತಿ

ಪದಹಿಗ್ಗು: 1. ಲೋಲಕ 2. ವಾಗ್ವಾದ 3. ಪ್ರಗತಿ 4. ಪ್ರಕೃತಿ 5. ಜಾಗೃತಿ 6. ಜೋಗುಳ 7. ಹಾಸಲು 8. ಉಂಡಾಡಿ

ಟ್ವೆಂಟಿ–20 ಮ್ಯಾಚ್:
ಎ ವಿಭಾಗ: 1-F 2-J 3-H 4-E 5-I 6-D 7-C 8-B 9-A 10-G
ಬಿ ವಿಭಾಗ: 1-F 2-C 3-E 4-H 5-B 6-J 7-A 8-G 9-D 10-I

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಮೌನಿಕಾ ಚಂದ್ರಶೇಖರ್
ಮೈಸೂರು



ಪ್ರತೀಕ್ಷಾ ಜೋಯ್ಸ್
ಆನಂದಪುರಂ (ಶಿವಮೊಗ್ಗ)



ಅಯಾನ್.ಎಂ.ಎನ್
ಭಾಗ್ಯನಗರ (ಕೊಪ್ಪಳ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ 72 ಸಂಸ್ಥೆಗಳ ಚಟುವಟಿಕೆಗಳ ಅನಾವರಣ

ಸಾಮಾಜಿಕ ಕಳಕಳಿಯ ಬೆಳಕಿಂಡಿ 'ಬಿಐಸಿ ಹಬ್ಬ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರವು ವಿಭಿನ್ನ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ. ಸಾಮಾಜಿಕ, ಶೈಕ್ಷಣಿಕ, ಪರಿಸರ ರಕ್ಷಣೆ, ಆದಿವಾಸಿಗಳು, ಅಂಗವಿಕಲರು ಮತ್ತು ಮಹಿಳೆಯರ ಸಬಲೀಕರಣ ಮುಂತಾದ ಕ್ಷೇತ್ರಗಳಲ್ಲಿ ತೊಡಗಿರುವ ಸರ್ಕಾರೇತರ ಸಂಸ್ಥೆಗಳು ತಮ್ಮ ವೈಶಿಷ್ಟ್ಯಪೂರ್ಣ ಚಟುವಟಿಕೆಗಳನ್ನು ಇಲ್ಲಿ ಅನಾವರಣಗೊಳಿಸಿದವು.

ಶನಿವಾರ ಆರಂಭಗೊಂಡ ಈ ಹಬ್ಬದಲ್ಲಿ ರಾಜ್ಯ ಮತ್ತು ಹೊರರಾಜ್ಯಗಳ 72 ಸಂಸ್ಥೆಗಳು ಪಾಲ್ಗೊಂಡಿವೆ. ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ ಆಯೋಜಿಸಿರುವ ಎರಡು ದಿನಗಳ 'ಬಿಐಸಿ ಹಬ್ಬ' ಈ ಸಂಸ್ಥೆಗಳ ವಿಶೇಷತೆಗಳನ್ನು ನಗರದ ಜನತೆಗೆ ಪರಿಚಯಿಸುತ್ತಿದೆ.

ಆದಿವಾಸಿಗಳೇ ತಯಾರಿಸಿರುವ ನೋವು ನಿವಾರಕ ತೈಲ, ಜೇನುತುಪ್ಪ ಸೇರಿ ಹಲವು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೂ ಉತ್ಸವದಲ್ಲಿ ಅವಕಾಶ ಕಲ್ಪಿಸಲಾಗಿದೆ. ತಮಿಳುನಾಡಿನ ಗುಡಲೂರಿನ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಆದಿವಾಸಿಗಳು ಅರಣ್ಯ ಉತ್ಪನ್ನಗಳಿಗೆ ಹೊಸ ರೂಪ ನೀಡಿ ಮಾರಾಟ ಮಾಡುವ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸುತ್ತಿದ್ದಾರೆ. ಈ ಆದಿವಾಸಿಗಳಿಗೆ 'ಅಕಾರ್ಡ್' ಸಂಸ್ಥೆ ಬೆನ್ನೆಲುಬಾಗಿ ನಿಂತಿದೆ. ಆದಿವಾಸಿಗಳ ಪುನರ್ವಸತಿ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದೆ.

ಆದಿವಾಸಿ ಮುನ್ನೇತ್ರ ಸಂಗಂ (ಎಎಂಎಸ್) ಸ್ಥಾಪಿಸಲು ನೆರವಾಗಿದೆ. ಬೆಟ್ಟ ಕುರುಬ, ಮುಳ್ಳುಕುರುಬ, ಪನಿಯಾ, ಕಟ್ಟುನಾಯಕ ಪಂಗಡಗಳನ್ನು ಸೇರಿಸಿಕೊಂಡು ಸುಮಾರು 20 ಸಾವಿರ ಆದಿವಾಸಿಗಳು ಈ ಸಂಘಟನೆಯಲ್ಲಿ ಸೇರಿದ್ದಾರೆ. 320 ಹಳ್ಳಿಗಳಲ್ಲಿ ಅಕಾರ್ಡ್ ಚಟುವಟಿಕೆಗಳನ್ನು ಕೈಗೊಂಡಿದೆ.

'ಬದುಕುವ ಹಕ್ಕುಗಳಿಗಾಗಿ 1980ರಿಂದ ಸುಮಾರು 30 ವರ್ಷಗಳ ಕಾಲ ನಡೆಸಿದ ಹೋರಾಟದಿಂದ ಆದಿವಾಸಿಗಳು ನೆಲೆ ಕಂಡುಕೊಂಡಿದ್ದಾರೆ. ಆದರೆ, ಇತ್ತೀಚೆಗೆ ಯುವಕರು ನಗರಗಳತ್ತ ಆಕರ್ಷಿತರಾಗುತ್ತಿದ್ದಾರೆ. ಇದರಿಂದ, ಅರಣ್ಯ ಉತ್ಪನ್ನಗಳನ್ನು ಸಿದ್ಧಪಡಿಸುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ' ಎಂದು ಸಂಸ್ಥೆಯ ಉನ್ನಿಕೃಷ್ಣನ್ ವಿವರಿಸಿದರು.

ಸಂಕಷ್ಟಕ್ಕೆ ಸಿಲುಕಿರುವ ಮಕ್ಕಳಿಗೆ ಆಶ್ರಯ ನೀಡುವ ಕಾರ್ಯದಲ್ಲಿ ತೊಡಗಿರುವ 'ಸಾಥಿ', ಒಂಬತ್ತು ರಾಜ್ಯಗಳಲ್ಲಿ ಕೈಗೊಂಡಿರುವ ಚಟುವಟಿಕೆಗಳನ್ನು ಉತ್ಸವದಲ್ಲಿ ಬಿಂಬಿಸಿತ್ತು. 25 ವರ್ಷಗಳಲ್ಲಿ 'ಸಾಥಿ' ಒಂದು ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ನೆರವಾಗಿದೆ. 50ಸಾವಿರಕ್ಕೂ ಹೆಚ್ಚು ಮಕ್ಕಳನ್ನು ಪೋಷಕರ ಜತೆ ಮರು ಒಗ್ಗೂಡಿಸಿದೆ ಎಂದು ಸಂಸ್ಥೆಯ ಉಪ ಕಾರ್ಯದರ್ಶಿ ಎಂ. ರಾಜಶೇಖರ್ ವಿವರಿಸಿದರು.

ಮಕ್ಕಳನ್ನು ವಿಜ್ಞಾನದ ಪ್ರಾಯೋಗಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸುವ ಕಾರ್ಯದಲ್ಲಿ ತೊಡಗಿರುವ 'ಅಗಸ್ತ್ಯ' ಅಂತರರಾಷ್ಟ್ರೀಯ ಫೌಂಡೇಷನ್, 6 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಜ್ಞಾನಕ್ಕೆ ಸಂಬಂಧಿಸಿದ ಪಠ್ಯ ಮತ್ತು ಪಠ್ಯೇತರ ವಿಷಯಗಳನ್ನು ಸುಲಭವಾಗಿ ಅರ್ಥೈಸುವ ಕಾರ್ಯದಲ್ಲಿ ತೊಡಗಿದೆ. ಇದುವರೆಗೆ ಸಂಸ್ಥೆಯ ಚಟುವಟಿಕೆಗಳಲ್ಲಿ 18 ರಾಜ್ಯಗಳಲ್ಲಿನ 80 ಲಕ್ಷ ಮಕ್ಕಳು ಮತ್ತು ಶಿಕ್ಷಕರು ಪಾಲ್ಗೊಂಡಿದ್ದಾರೆ.

ವಿಶೇಷ ಸಾಮರ್ಥ್ಯದ ಮಕ್ಕಳ ಯೋಗಕ್ಷೇಮ ಮತ್ತು ವಿವಿಧ ಉತ್ಪನ್ನಗಳನ್ನು ತಯಾರಿಸಲು ತರಬೇತಿ ನೀಡುತ್ತಿರುವ ಬೆಂಗಳೂರಿನ ಅಸೋಸಿಯೇಷನ್ ಫಾರ್ ಮೆಂಟಲಿ ಚಾಲೆಂಜ್ಡ್ ಸಂಸ್ಥೆಯು ಇದುವರೆಗೆ ಕೈಗೊಂಡಿರುವ ಚಟುವಟಿಕೆಗಳನ್ನು ಬಿಂಬಿಸಿತ್ತು. ಸೋಲಿಗ ಸಮುದಾಯದವರು ಲಂಟನಾದಿಂದ ತಯಾರಿಸಿರುವ ಉತ್ಪನ್ನಗಳನ್ನು 'ಲಂಟನಾ ಕರಕುಶಲ ಕೇಂದ್ರ' ಪ್ರದರ್ಶಿಸಿತ್ತು. ಕುರ್ಚಿ, ಸೋಫಾ ಸೇರಿ ವಿವಿಧ ಉತ್ಪನ್ನಗಳನ್ನು ಲಂಟನಾದಿಂದ ತಯಾರಿಸಿ ಕರ್ನಾಟಕ, ತಮಿಳುನಾಡು ಸೇರಿ ಹಲವಾರು ರಾಜ್ಯಗಳಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಕೇಂದ್ರದ ಕುಮಾರ್ ವಿವರಿಸಿದರು.





ನಗರದಲ್ಲಿ ಶನಿವಾರ ನಡೆದ 'ಬಿಐಸಿ ಹಬ್ಬ'ದಲ್ಲಿ 'ಶ್ರೇಣಿ ಸಮುದಾಯ' ಸಂಸ್ಥೆಯ ಮಳಿಗೆಯಲ್ಲಿ ಸೀರೆ ವೀಕ್ಷಿಸಿದ ಮಹಿಳೆಯರು (ಎಡಚಿತ್ರ) 'ಡೆಸ್ಡೆಮೋನಾ ರೂಪಕಂ' ನಾಟಕದ ದೃಶ್ಯ —ಪ್ರಜಾವಾಣಿ ಚಿತ್ರಗಳು

ಇಂದು ಸಂಗೀತ ಕಾರ್ಯಕ್ರಮ

ಕರ್ನಾಟಕ ಸಂಗೀತದ 'ಪ್ರಕೃತಿ ಸ್ವರಾಸ್' ಹೆಸರಿನಲ್ಲಿ ಭಾನುವಾರ ಬೆಳಿಗ್ಗೆ 11.30ರಿಂದ ಮಧ್ಯಾಹ್ನ 12.45ರವರೆಗೆ ಸಂಗೀತ ಕಾರ್ಯಕ್ರಮ ನಡೆಯಲಿದೆ.

ನೃತ್ಯ ಕಾರ್ಯಕ್ರಮ 'ರಸಾಭಿಜ್ಞಾನ'ವು ಸಂಜೆ 6.30ರಿಂದ 8 ಗಂಟೆಯವರೆಗೆ ನಡೆಯಲಿದೆ. ಜತೆಗೆ, ಮಕ್ಕಳಿಗೂ ವಿವಿಧ ವಿಷಯಗಳ ಕುರಿತು ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

ಮಕ್ಕಳಿಗೆ ಕಾರ್ಯಾಗಾರ

'ಬಾಲ ಜನಾಗ್ರಹ' ಸಂಸ್ಥೆ ವತಿಯಿಂದ 'ನನ್ನ ನಗರ, ನನ್ನ ಸವಾಲುಗಳು' ಕುರಿತು ಮಕ್ಕಳಿಗೆ ಕಾರ್ಯಾಗಾರ ನಡೆಯಿತು. 8,9 ಮತ್ತು 10ನೇ ತರಗತಿಯ ಸುಮಾರು 30 ಮಕ್ಕಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಸ್ವಚ್ಛತೆ, ರಸ್ತೆ, ಸುರಕ್ಷತೆ, ತಾಜ್ಯ ನಿರ್ವಹಣೆ, ಸ್ಥಳೀಯ ಆಡಳಿತ, ನೀರು ಮತ್ತು ವಿದ್ಯುತ್ ಬಳಕೆ ಮುಂತಾದ ವಿಷಯಗಳ ಬಗ್ಗೆ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು.

ಹೆಣ್ಣಿನ ಒಳದನಿ 'ಡೆಸ್ಡೆಮೋನಾ ರೂಪಕಂ'

'ಬಿಐಸಿ ಹಬ್ಬ'ದಲ್ಲಿ ನಳಂದ ಆರ್ಟ್ಸ್ ಸ್ಟುಡಿಯೊ ಪ್ರಸ್ತುತ ಪಡಿಸಿದ 'ಡೆಸ್ಡೆಮೋನಾ ರೂಪಕಂ' ನಾಟಕವು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಖ್ಯಾತ ಗಾಯಕಿಯರಾದ ಎಂ.ಡಿ. ಪಲ್ಲವಿ ಮತ್ತು ಬಿಂದುಮಾಲಿನಿ 'ಡೆಸ್ಡೆಮೋನಾ ರೂಪಕಂ' ಮೂಲಕ, ಪುರಾಣ, ಇತಿಹಾಸ, ವರ್ತಮಾನ ಕಾಲ ಯಾವುದೇ ಇರಲಿ ಹೆಣ್ಣು ವಿವಿಧ ಸಂದರ್ಭಗಳಲ್ಲಿ ಎದುರಿಸುವ ಸನ್ನಿವೇಶಗಳನ್ನು ಅನಾವರಣಗೊಳಿಸಿದರು.

ವಿಲಿಯಮ್ ಷೇಕ್ಸ್‌ಪಿಯರ್ ಅವರ ಒಥೆಲೊದ 'ಡೆಸ್ಡೆಮೋನಾ'ದ ಜತೆ, ಜತೆಯಲ್ಲಿ ಜಮದಗ್ನಿಯ ರೇಣುಕೆಯನ್ನು ಪ್ರಸ್ತುತಪಡಿಸುವ ಮೂಲಕ ಪುರಾಣ, ಇತಿಹಾಸ, ವರ್ತಮಾನದಲ್ಲಿ ಮೌನವಾಗಿರುವ ಹೆಣ್ಣಿನ ದನಿಯನ್ನು ರಂಗದ ಮೇಲೆ ತೆರೆದಿಡುವ ಪ್ರಯತ್ನ ಮಾಡಲಾಗಿದೆ. ಅಭಿಷೇಕ್ ಮಜುಂದಾರ್ ಈ ನಾಟಕ ಪ್ರದರ್ಶಿಸಿದ್ದಾರೆ. ಹಿಂದೂಸ್ತಾನಿ, ಕರ್ನಾಟಕ ಮತ್ತು ಜಾನಪದ ಸಂಗೀತವನ್ನು ನಾಟಕದಲ್ಲಿ ಅಳವಡಿಸಿಕೊಳ್ಳಲಾಗಿದೆ.



ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಎಸ್‌.ಪಿ. ವರದರಾಜು ಆತ್ಮೀಯರ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ದೇಶಕ ಚಿಕ್ಕಣ್ಣ ಮತ್ತು ರಂಗಭೂಮಿ ಕಲಾವಿದೆ ಪ್ರೇಮಾ ಹೊಸಮನಿ ಅವರಿಗೆ ಎಸ್‌.ಪಿ. ವರದರಾಜು ಪ್ರಶಸ್ತಿಯನ್ನು ನಟ ರಾಘವೇಂದ್ರ ರಾಜಕುಮಾರ್ ಅವರು ಪ್ರದಾನ ಮಾಡಿದರು. ಸಾಹಿತಿ ಬರಗೂರು ರಾಮಚಂದ್ರಪ್ಪ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನದಾಸ್, ಚಲನಚಿತ್ರ ನಿರ್ದೇಶಕ ಚಿಂದೋಡಿ ಬಂಗಾರೇಶ್ ಮತ್ತು ಗ್ರೀನ್ ಹೌಸ್ ವಾಸು ಇದ್ದರು ಪ್ರಜಾವಾಣಿ ಚಿತ್ರ

ಸೀಳು ಮುಖ: 3 ತಿಂಗಳ ಮಗುವಿಗೆ ಶಸ್ತ್ರಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೀಳು ಮುಖ ಹೊಂದಿದ್ದ ಮೂರು ತಿಂಗಳ ಮಗುವಿಗೆ ಕುಪ್ಪಂನಲ್ಲಿರುವ ಪಿಇಎಸ್ ವೈದ್ಯಕೀಯ ಕಾಲೇಜಿನಲ್ಲಿ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ.



ಶನಿವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ವೈದ್ಯಕೀಯ ಅಧೀಕ್ಷಕ ಡಾ. ಚನ್ನಬಸವ ಪಾಟೀಲ, 'ಈ ಪ್ರಕರಣವು ಸಾಮಾನ್ಯ ಸೀಳು ತುಟಿಗಿಂತ ತುಂಬಾ ಭಿನ್ನ. ಲಕ್ಷ ಜನರಲ್ಲಿ ಎರಡರಿಂದ ಐದು ಮಂದಿಯಲ್ಲಿ ಈ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಮಗುವಿನ ತುಟಿಯ ಬಲಭಾಗದಲ್ಲಿ ಸಂಪೂರ್ಣ ಹಾಗೂ ಎಡಭಾಗದಲ್ಲಿ ಭಾಗಶಃ ಸೀಳಿಕೊಂಡಿತ್ತು. ಬಲ ಕಣ್ಣಿನಲ್ಲಿಯೂ ಸಮಸ್ಯೆ ಕಾಣಿಸಿಕೊಂಡಿತ್ತು. ಮಗುವಿಗೆ ಸರಾಗವಾಗಿ ಉಸಿರಾಟ ನಡೆಸಲು ಸಾಧ್ಯವಾಗುತ್ತಿರಲಿಲ್ಲ' ಎಂದು ವಿವರಿಸಿದರು.

'ಪ್ರಕರಣವು ಅರಿವಳಿಕೆ ತಜ್ಞರಿಗೆ ಹಾಗೂ ಶಸ್ತ್ರಚಿಕಿತ್ಸಕರಿಬ್ಬರಿಗೂ ಸವಾಲಾಗಿತ್ತು. ಆರೋಗ್ಯಶ್ರೀ ಯೋಜನೆಯಡಿ ಮಗುವಿಗೆ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ನಡೆಸಲಾಗಿದೆ. ಈ ಸಮಸ್ಯೆಗೆ ಶಸ್ತ್ರಚಿಕಿತ್ಸೆಯ ಮೂಲಕ ಪರಿಹಾರ ಒದಗಿಸಬಹುದು. ಈ ಬಗ್ಗೆ ಪೋಷಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ' ಎಂದು ವಿವರಿಸಿದರು.

'ವಿದೇಶಾಂಗ ನೀತಿ ಸಂಪೂರ್ಣ ವಿಫಲ'

ಬೆಂಗಳೂರು: 'ನರೇಂದ್ರ ಮೋದಿ ಸರ್ಕಾರ ವಿದೇಶಾಂಗ ನೀತಿಯಲ್ಲಿ ಸಂಪೂರ್ಣ ವಿಫಲವಾಗಿದೆ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಟೀಕಿಸಿದರು.

ಅವರು ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದರು.

ಸ್ಪಷ್ಟ ನಿಲುವು ಹೇಳಬೇಕಾಗಿತ್ತು: 'ಇಡೀ ಪ್ರಪಂಚ ಉಕ್ರೇನ್ ಕಡೆ ತಿರುಗಿ ನೋಡುವಂಥ ಪರಿಸ್ಥಿತಿ ನಿರ್ಮಾಣವಾಗಿರುವಾಗ, ಪ್ರಧಾನಿ ಮೋದಿ ಯಾವುದೇ ಸ್ಪಷ್ಟ ನಿಲುವು ತೆಗೆದುಕೊಳ್ಳದಿರುವುದು ಶೋಚನೀಯ ಸಂಗತಿ' ಎಂದು ಲೋಕಸಭೆ ಕಾಂಗ್ರೆಸ್ ಸದಸ್ಯ ಡಿ.ಕೆ. ಸುರೇಶ್ ಹೇಳಿದರು.

'ಈ ವಿಚಾರ ಮಾತನಾಡುವ ಸಮಯ ಇದಲ್ಲ. ವಿಶ್ವಸಂಸ್ಥೆಯಲ್ಲಿ ನಾವು ಸ್ಪಷ್ಟ ನಿಲುವು ಹೇಳಬೇಕಾಗಿತ್ತು' ಎಂದರು.

'ಬಿಜೆಪಿಗರ ವಿರುದ್ಧ ಅಹಿಂದ ಸಮಾವೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಗರ ಕೋಮುದ್ವೇಷದ ವಿರುದ್ಧ ಜನಾಂದೋಲನ ರೂಪಿಸಲು ಪರಿಶಿಷ್ಟರು (ಎಸ್‌ಸಿ, ಎಸ್‌ಟಿ), ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಗಳನ್ನು ಒಗ್ಗೂಡಿಸಿ, ಭಾವೈಕ್ಯ ಸಮಾವೇಶ ಆಯೋಜಿಸಲು ಉದ್ದೇಶಿಸಲಾಗಿದೆ' ಎಂದು ಕಾಂಗ್ರೆಸ್ ಮುಖಂಡ ಎಸ್‌.ಸಿ. ಮಹದೇವಪ್ಪ ಹೇಳಿದ್ದಾರೆ.

'ನೆಲ, ಜಲ, ಭಾಷೆಗಾಗಿ ಹೋರಾಡುವ ಜೊತೆಗೆ ಸಂವಿಧಾನದ ಆಶಯವನ್ನು ಉಳಿಸಲು ಈ ಸಮುದಾಯಗಳು ಒಗ್ಗೂಡುವ ಅಗತ್ಯವಿದೆ. ಸಂವಿಧಾನ, ಜನ, ಸಮಾಜ ವಿರೋಧಿಗಳಾದ ಬಿಜೆಪಿಗರಿಗೆ ಕೆಳವರ್ಗಗಳ ರಾಜಕೀಯ ಶಕ್ತಿ ಎಷ್ಟು ಬಲಿಷ್ಠವಾಗಿದೆ ಎಂದು ತೋರಿಸಿಕೊಡಬೇಕಿದೆ' ಎಂದಿದ್ದಾರೆ.

'ಹಿಂದೂ ಮುಸ್ಲಿಂ ಗಲಭೆಯ ನಂತರ ಪರಿಶಿಷ್ಟರನ್ನು ಮತ್ತೆ ಅಸ್ಪೃಶ್ಯರನ್ನಾಗಿಸುವ ಹಿಂದುತ್ವಕ್ಕೆ ಬಿಜೆಪಿ ಮುಂದಾಗಿದೆ. ಧರ್ಮಸ್ಥಳ ಬಳಿ ಬೆಳ್ತಂಗಡಿಯಲ್ಲಿ ಪರಿಶಿಷ್ಟ ವ್ಯಕ್ತಿಯನ್ನು ಬಜರಂಗದಳ ಕಾರ್ಯಕರ್ತನೊಬ್ಬ ಕೊಲೆ ಮಾಡಿದ ಸಂಗತಿಯನ್ನು ಗಂಭೀರವಾಗಿ ಪರಿಗಣಿಸಬೇಕಿದ್ದ ಹಿಂದೂ ಸಂಘಟನೆಗಳು, ಅದನ್ನು ಸಹಜ ಸಂಗತಿಯಂತೆ ಭಾವಿಸಿದೆ. ಮತ್ತೊಂದೆಡೆ, ಶಿವಮೊಗ್ಗದಲ್ಲಿ ಹರ್ಷನಂಥ ದಾರಿ ತಪ್ಪಿದ ಮಕ್ಕಳನ್ನೇ ದೇಶ ಪ್ರೇಮಿಗಳನ್ನಾಗಿಸುವ ಕೆಟ್ಟ ಕೆಲಸದಲ್ಲಿ ಬಿಜೆಪಿ ನಿರತವಾಗಿದ್ದು, ಮುಗ್ಧರ ತಲೆ ಕೆಡಿಸಿ ಅವರನ್ನು ಬಲಿ ಪಡೆದಿದೆ' ಎಂದೂ ಆರೋಪಿಸಿದ್ದಾರೆ.



ಮಹಾದೇವಪ್ಪ

'ರಾಷ್ಟ್ರೀಯ ಅಪರಾಧ ದಾಖಲಾತಿ ಘಟಕದ (ಎನ್‌ಸಿಆರ್‌ಬಿ) ಅಂಕಿ– ಅಂಶಗಳ ಪ್ರಕಾರ ಎಸ್‌ಸಿ, ಎಸ್‌ಟಿ ಸಮುದಾಯದ ಮೇಲಿನ ದೌರ್ಜನ್ಯ ಪ್ರಕರಣಗಳು ಕ್ರಮವಾಗಿ ಶೇ 9.4 ಮತ್ತು ಶೇ 9.3ರಷ್ಟಿದೆ. ಹಿಂದುತ್ವದ ಪ್ರತಿಪಾದಕರಾದ ಬಿಜೆಪಿಗರಾಗಲಿ, ಬಿಜೆಪಿಯ ರಾಜಕೀಯ ಲಾಭಕ್ಕಾಗಿ ಹಿಂದುತ್ವದ ಹೆಸರಲ್ಲಿ ಕೆಲಸ ಮಾಡುವ ಸಂಘಟನೆಗಳಾಗಲಿ ಈ ಬಗ್ಗೆ ಚಕಾರ ಎತ್ತಿಲ್ಲ. ಪರಿಶಿಷ್ಟರು, ಹಿಂದುಳಿದವರು ಮತ್ತು ಆದಿವಾಸಿಗಳ ಮೇಲಿನ ಬಿಜೆಪಿಗರ ಧೋರಣೆ ಗಮನಿಸಿದವರಿಗೆ ಇದಕ್ಕೆ ಕಾರಣ ಅರ್ಥವಾಗುತ್ತದೆ' ಎಂದಿದ್ದಾರೆ.



ಬೆಂಗಳೂರಿನ ಪ್ರಧಾನ ಅಂಚೆ ಕಚೇರಿ ಪ್ರಜಾವಾಣಿ ಚಿತ್ರ/ ರಂಜು ಪಿ



ಪ್ರಧಾನ ಅಂಚೆ ಕಚೇರಿ ಇರುವ ಜಾಗದಲ್ಲಿ ಮೊದಲು ಇದ್ದ ಬ್ರಿಟಿಷರ ಕಾಲದ ಅಂಚೆಕಚೇರಿ ಕಟ್ಟಡ (ಸಂಗ್ರಹ ಚಿತ್ರ)

ನಗರದ ಅಂಚೆ ಸೇವೆಗೆ 200 ವರ್ಷಗಳಿಗೂ ಅಧಿಕ ಇತಿಹಾಸ

ಐತಿಹಾಸಿಕ ವೈಭವದ ಪ್ರತಿಬಿಂಬ ಜಿಪಿಒ ಕಟ್ಟಡ

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬೆಂಗಳೂರಿನಲ್ಲಿ ಅಂಚೆ ಸೇವೆಗೆ 200 ವರ್ಷಗಳಿಗೂ ಅಧಿಕ ಇತಿಹಾಸವಿದೆ. ಈ ಐತಿಹಾಸಿಕ ವೈಭವವನ್ನು ಪ್ರತಿಬಿಂಬಿಸುವಂತಿದೆ ಬೆಂಗಳೂರಿನ ಪ್ರಧಾನ ಅಂಚೆ ಕಚೇರಿ (ಜಿಪಿಒ) ಕಟ್ಟಡ. 1980ರ ದಶಕದಲ್ಲಿ ಶಿಲೆಯಿಂದ ನಿರ್ಮಿಸಿರುವ ಈ ಭವ್ಯವಾದ ಕಟ್ಟಡ ನಗರದ ಪಾರಂಪರಿಕ ಕಟ್ಟಡಗಳ ಸಾಲಿಗೆ ಇತ್ತೀಚಿನ ಸೇರ್ಪಡೆ.

'ಮದ್ರಾಸ್‌ನಲ್ಲಿ 1776ರಲ್ಲೇ ಅಂಚೆ ಕಚೇರಿ ಅಸ್ತಿತ್ವಕ್ಕೆ ಬಂದಿತ್ತು. 1799ರಲ್ಲಿ ಟಿಪ್ಪು ಮರಣದ ನಂತರ ಬೆಂಗಳೂರು ನಗರ ಬ್ರಿಟಿಷರ ವಶವಾಯಿತು. ನಗರದ ಮೊದಲ ಇಂಪೀರಿಯಲ್ ಅಂಚೆ ಕಚೇರಿಯನ್ನು 1800ರ ವೇಳೆಗೆ ಸ್ಥಾಪಿಸಲಾಗಿತ್ತು. ಬ್ರಿಟಿಷರ ಸೇನೆ ಮತ್ತು ಕಂಟೋನ್ಮೆಂಟ್ ನಡುವಿನ ಪತ್ರ ವ್ಯವಹಾರಕ್ಕೆ ಇದು ಬಳಕೆಯಾಗುತ್ತಿತ್ತು. 1862ರಲ್ಲಿ ಅಂಚೆ ಕಚೇರಿ ಈಗಿನ ಜಿಪಿಒ ಜಾಗದಲ್ಲಿ ಮೊದಲಿದ್ದ ಕೆಂಬಣ್ಣದ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ಐರೋಪ್ಯ ಶಾಸ್ತ್ರೀಯ ಶೈಲಿಯಲ್ಲಿದ್ದ ಆ ಕಟ್ಟಡಕ್ಕೂ 1868ರಲ್ಲಿ ನಿರ್ಮಾಣವಾಗಿದ್ದ ಅಠಾರ ಕಚೇರಿಗೂ (ಈಗಿನ ಹೈಕೋರ್ಟ್ ಕಚೇರಿ) ವಿನ್ಯಾಸದಲ್ಲಿ ಸಾಮ್ಯತೆಗಳಿದ್ದವು. ಜಿಪಿಒ ಕಚೇರಿಯ ಹಳೆ ಕಟ್ಟಡವನ್ನು 1979ರಲ್ಲಿ ನೆಲಸಮ ಮಾಡಿ ಹೊಸ ಕಟ್ಟಡವನ್ನು ನಿರ್ಮಿಸಲಾಗಿದೆ' ಎನ್ನುತ್ತಾರೆ ಇದೇ ಕಚೇರಿಯಲ್ಲಿ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಆಗಿ ಕಾರ್ಯನಿರ್ವಹಿಸಿರುವ, ಅಂಚೆ ಇಲಾಖೆಯ ನಿವೃತ್ತ ಅಧಿಕಾರಿ ಚಾರ್ಲ್ಸ್ ಲೋಬೊ.



'ಅತ್ಯಂತ ಹೆಚ್ಚು ಅಂಚೆ ಬಟವಾಡೆ'

'ರಾಜ್ಯದಲ್ಲೇ ಅತ್ಯಂತ ಹೆಚ್ಚು ಅಂಚೆ ಬಟವಾಡೆ ಮಾಡುವ ಅಂಚೆ ಕಚೇರಿ ಇದು. ನಿತ್ಯವೂ 600ಕ್ಕೂ ಅಧಿಕ ಪಾರ್ಸೆಲ್‌ಗಳು, 5 ಸಾವಿರಕ್ಕೂ ಅಧಿಕ ಸ್ಪೀಡ್‌ಪೋಸ್ಟ್‌ಗಳು ಹಾಗೂ 30 ಸಾವಿರಕ್ಕೂ ಅಧಿಕ ಸಾಮಾನ್ಯ ಅಂಚೆ ಪತ್ರಗಳನ್ನು ಈ ಕಚೇರಿ ಮೂಲಕ ಬಟವಾಡೆ ಮಾಡಲಾಗುತ್ತದೆ. ಇತ್ತೀಚೆಗೆ ಅಂಚೆಯ ಬಡವಾಡೆ ಸೇವೆಗೆ ಬೇಡಿಕೆ ಕ್ಷೀಣಿಸುತ್ತಿದೆ. ದಶಕಗಳ ಹಿಂದೆ ಈ ಕಚೇರಿ ಮೂಲಕ ನಿತ್ಯ 50 ಸಾವಿರಕ್ಕೂ ಅಧಿಕ ಬಟವಾಡೆಗಳನ್ನು ನಿರ್ವಹಿಸಿದ ಉದಾಹರಣೆಗಳೂ ಇವೆ' ಎಂದು ಕೆ.ರಾಧಾಕೃಷ್ಣ ತಿಳಿಸಿದರು.

'ಈ ಐದು ಅಂತಸ್ತುಗಳ ಕಟ್ಟಡ 1.20 ಲಕ್ಷ ಚದರ ಅಡಿ ವಿಸ್ತೀರ್ಣವನ್ನು ಹೊಂದಿದೆ. ಈ ಕಟ್ಟಡವನ್ನು ₹ 3.5 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆಎಂದು ಒಂದು ಮೂಲವು ತಿಳಿಸುತ್ತದೆ. ಇನ್ನೊಂದು ಮೂಲದ ಪ್ರಕಾರ ಇದಕ್ಕೆ ವೆಚ್ಚವಾಗಿದ್ದು ₹ 1.5 ಕೋಟಿ. ಇದರ ಪ್ರವೇಶ ದ್ವಾರದ ವಿನ್ಯಾಸ ಆಕರ್ಷಕವಾಗಿದ್ದು, ಇದು ಚಾಲುಕ್ಯರ ರಾಜಧಾನಿಯ ವಾಸ್ತುಶಿಲ್ಪ ಶೈಲಿಯನ್ನು ಹೋಲುತ್ತದೆ. ಇಲ್ಲಿರುವ 30 ಅಡಿ ಎತ್ತರದ ಬೃಹದಾಕಾರದ ಕಲ್ಲಿನ ಕಂಬಗಳು ಇಂಡೊ– ಸಾರ್ಸೆನಿಕ್ ಶೈಲಿಯಲ್ಲಿ ನಿರ್ಮಿಸಿರುವ ವಿಧಾನ ಸೌಧದ ಕಲ್ಲಿನ ಕಂಬಗಳನ್ನು ಹೋಲುತ್ತವೆ. ಜಿಪಿಒ ಕಟ್ಟಡವು ಮೂರು ಗುಮ್ಮಟಗಳನ್ನು ಹೊಂದಿದೆ. ಮಧ್ಯದ ಗುಮ್ಮಟವು 50 ಅಡಿ ಎತ್ತರವಿದೆ. ಇದರಡಿ ಮೇಘದೂತ ಸಭಾಂಗಣವನ್ನು ನಿರ್ಮಿಸಲಾಗಿದೆ. ಈ ಗುಮ್ಮಟದ ವ್ಯಾಸ 50 ಅಡಿಗಳಷ್ಟಿದೆ' ಎಂದು ಅವರು ವಿವರಿಸಿದರು.

'ವಿಧಾನಸೌಧ ಇರುವ ಅಂಬೇಡ್ಕರ್ ಬೀದಿಯಲ್ಲೇ ಈ ಕಟ್ಟಡ ಇರುವುದರಿಂದ ಇದರ ವಿನ್ಯಾಸವು ವಿಧಾನಸೌಧದ ವಿನ್ಯಾಸಕ್ಕೆ ಪೂರಕವಾಗಿರುವಂತೆ ನೋಡಿಕೊಳ್ಳಲಾಗಿತ್ತು. ಜಿಪಿಒ ಎದುರಿನ ರಸ್ತೆಗೆ ಅಂಬೇಡ್ಕರ್ ಬೀದಿ ಎಂದು ನಾಮಕರಣ ಮಾಡುವವರೆಗೂ ಅದನ್ನು ಪೋಸ್ಟ್ ಆಫೀಸ್ ರಸ್ತೆ ಎಂದೇ ಕರೆಯಲಾಗುತ್ತಿತ್ತು' ಎಂದು ಅವರು ತಿಳಿಸಿದರು.

'ಈಗಿನ ಜಿಪಿಒ ಕಟ್ಟಡವು ಈ ಹಿಂದೆ ಪೋಸ್ಟ್ ಮಾಸ್ಟರ್ ಜನರಲ್ ಆಗಿದ್ದ ಕೆ.ಕೆ.ಮೂರ್ತಿ ಅವರ ಕನಸಿನ ಕೂಸು. ಈ ಕಟ್ಟಡವನ್ನು 1985ರ ನ.15ರಂದು ಆಗಿನ ಪ್ರಧಾನಿ ರಾಜೀವ ಗಾಂಧಿ ಅವರು ಉದ್ಘಾಟಿಸಿದ್ದರು. ಆಗಿನ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆ ಹಾಗೂ ಸಂಪರ್ಕ ಖಾತೆ ರಾಜ್ಯ ಸಚಿವರಾಗಿದ್ದ ರಾಮನಿವಾಸ್ ಮಿರ್ಧಾ ಅವರೂ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು' ಎನ್ನುತ್ತಾರೆ ಮುಖ್ಯ ಅಂಚೆ ಪಾಲಕರಾಗಿರುವ ಕೆ.ರಾಧಾಕೃಷ್ಣ.

'ದೇಶದ ಬೇರೆ ಬೇರೆ ರಾಜ್ಯಗಳಲ್ಲಿರುವ ಜಿಪಿಒ ಕಟ್ಟಡಗಳಲ್ಲೇ ಬೆಂಗಳೂರಿನ ಜಿಪಿಒ ಕಟ್ಟಡ ಅತ್ಯಂತ ದೊಡ್ಡದು. ಇದರ ವಿನ್ಯಾಸವೂ ಅತ್ಯಂತ ಆಕರ್ಷಕವಾಗಿದೆ. ಸಂಪೂರ್ಣ ಕಲ್ಲಿನಿಂದ ನಿರ್ಮಿತವಾಗಿರುವ ಈ ಕಟ್ಟಡ ಕಬ್ಬನ್ ಉದ್ಯಾನದ ಪಕ್ಕದಲ್ಲೇ ಇರುವುದರಿಂದ ಬೇಸಿಗೆಯಲ್ಲೂ ತಂಪಗಿನ ವಾತಾವರಣವನ್ನು ಹೊಂದಿದೆ. ಇಲ್ಲಿ ಹವಾನಿಯಂತ್ರಣ ವ್ಯವಸ್ಥೆಯ ಅಗತ್ಯವೇ ಬೀಳುವುದಿಲ್ಲ. ಅಂಚೆ ಇಲಾಖೆಯ ಏಳಕ್ಕೂ ಅಧಿಕ ವಿಭಾಗಗಳ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. 2000ಕ್ಕೂ ಅಧಿಕ ಸಿಬ್ಬಂದಿ ಈ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಾರೆ' ಎಂದು ಅವರು ತಿಳಿಸಿದರು.

'ಪ್ರವೇಶ ದ್ವಾರದ ಬಳಿ ಇರುವ ಗುಲಾಬಿ ತೋಟ, ಕಟ್ಟಡದ ಎದುರಿನಲ್ಲಿ ಮುಗಿಲೆತ್ತರಕ್ಕೆ ಬೆಳೆದಿರುವ ತಾಳೆ ಮರಗಳು ಈ ಭವ್ಯ ಕಟ್ಟಡದ ಮೆರುಗನ್ನು ಹೆಚ್ಚುವಂತೆ ಮಾಡಿದೆ. ಪ್ರಾಂಗಣದಲ್ಲಿರುವ ಹಚ್ಚಹಸುರಿನ ವಾತಾವರಣ, ಸುತ್ತ ಹಳದಿ ಬಣ್ಣದ ಹೂಗೊಂಚಲುಗಳಿಂದ ಕಂಗೊಳಿಸುವ ಮರಗಳು,ಇಲ್ಲಿನ ಹಸಿರುವ ವಾತಾವರಣ ಆಹ್ಲಾದಕರವಾಗಿದೆ.

'ನಗರದ ಜನರ ನೀರಿಗಾಗಿ ನಡಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಜನರಿಗೆ ಕುಡಿಯುವ ನೀರು ಪೂರೈಸಲು ಮತ್ತು ಕಾವೇರಿ ಪ್ರದೇಶದ ರೈತರನ್ನು ಬದುಕಿಸಲು ನೀರಿಗಾಗಿ ನಡಿಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮೇಕೆದಾಟು ಪಾದಯಾತ್ರೆಯ ಸಮಾರೋಪ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮಾರ್ಚ್ 3ರಂದು ನಡೆಯಲಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ಮುಖಂಡರಾದ ಬಿ.ಕೆ. ಹರಿಪ್ರಸಾದ್, ರಾಮಲಿಂಗಾ ರೆಡ್ಡಿ, ಡಿ.ಕೆ. ಸುರೇಶ್ ಜೊತೆ ಸಮಾರೋಪ ಸಮಾವೇಶ ನಡೆಯಲಿರುವ ಸ್ಥಳ ಪರಿಶೀಲಿಸಿದ ಬಳಿಕ ಅವರು ಮಾತನಾಡಿದರು.

'ಇದು ಪಕ್ಷಾತೀತ ಹೋರಾಟ. ಈ ಹೋರಾಟದ ಮುಂದಾಳತ್ವವನ್ನು ಕಾಂಗ್ರೆಸ್ ಪಕ್ಷ ವಹಿಸಿಕೊಂಡಿದೆ. ಎಲ್ಲ ಅಪಾರ್ಟ್‌ಮೆಂಟ್ ಸಂಘಗಳು, ಕಾರ್ಮಿಕ, ಕೈಗಾರಿಕಾ ಸಂಘಟನೆ, ಸರ್ಕಾರೇತರ ಸಂಸ್ಥೆಗಳು, ಚಿತ್ರರಂಗದ ಎಲ್ಲ ವಿಭಾಗದವರು, ಧರ್ಮಗುರುಗಳು, ಜನಸಾಮಾನ್ಯರು ಈ ಪಾದಯಾತ್ರೆಯಲ್ಲಿ ಭಾಗವಹಿಸುತ್ತಿದ್ದಾರೆ' ಎಂದರು.

'ಬೆಂಗಳೂರು ನಗರದಲ್ಲಿ ಐದು ದಿನ ಪಾದಯಾತ್ರೆ ಮಾಡಬೇಕಾಗಿತ್ತು. ಬಜೆಟ್ ಅಧಿವೇಶನ ಇರುವ ಕಾರಣ ಕೇವಲ ಮೂರು ದಿನ ಮಾಡುತ್ತೇವೆ. ಪಾದಯಾತ್ರೆಗೆ ಬರುವವರು ಮೆಟ್ರೊ ರೈಲು ಬಳಸಲು ಅನುಕೂಲವಾಗುವಂತೆ ಸಮಾರೋಪದ ಸ್ಥಳ ಆಯ್ಕೆ ಮಾಡಿದ್ದೇವೆ' ಎಂದು ವಿವರಿಸಿದರು.

ಅಪಾರ್ಟ್‌ಮೆಂಟ್‌ಗಳಿಗೆ ನೀರಿಲ್ಲ: 'ದಕ್ಷಿಣ ಏಷ್ಯಾದಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ನಗರ ಬೆಂಗಳೂರು. ಈ ನಗರಕ್ಕೆ 2050ರ ವೇಳೆಗೆ ಕುಡಿಯುವ ನೀರು ಅಭಾವ ತಲೆದೋರಲಿದೆ. ಕಾವೇರಿ ಏಳನೇ ಹಂತ ಬಂದರೂ ನಗರದ ಏಳು ಸಾವಿರ ಅಪಾರ್ಟ್‌ಮೆಂಟ್‌ಗಳಿಗೆ ನೀರು ಸಿಗುತ್ತಿಲ್ಲ' ಎಂದು ಬಿ.ಕೆ. ಹರಿಪ್ರಸಾದ್ ಮನವಿ ಮಾಡಿದರು.

ಮೆಟ್ರೊದಲ್ಲಿ ಸಂಚಾರ: 'ನ್ಯಾಷನಲ್ ಕಾಲೇಜು ಮೈದಾನಕ್ಕೆ ಹೊಂದಿಕೊಂಡಿರುವ ಮೆಟ್ರೊ ರೈಲು ನಿಲ್ದಾಣದಿಂದ ಮೆಜೆಸ್ಟಿಕ್ ನಿಲ್ದಾಣದವರೆಗೆ ಕಾಂಗ್ರೆಸ್ ನಾಯಕರುಗಳು ಮೆಟ್ರೊ ರೈಲಿನಲ್ಲಿ ಸಂಚರಿಸಿದರು.ವಾಹನ ದಟ್ಟಣೆ ನಿಯಂತ್ರಿಸಲು ಸಮಾವೇಶದಲ್ಲಿ ಭಾಗವಹಿಸುವವರು ಮೆಟ್ರೊದಲ್ಲಿ ಪ್ರಯಾಣಿಸಬೇಕು ಎಂದೂ ಕಾಂಗ್ರೆಸ್ ನಾಯಕರು ಮನವಿ ಮಾಡಿದರು.

'ಕಾಂಗ್ರೆಸ್ ಮನೆಯಲ್ಲಿ 3 ಬಾಗಿಲು'

ಬೆಂಗಳೂರು: 'ರಾಜ್ಯ ಕಾಂಗ್ರೆಸ್‌ನಲ್ಲಿ ಮನೆಯೊಂದು ಮೂರು ಬಾಗಿಲಿನ ಪರಿಸ್ಥಿತಿ ಇದೆ. ಅದಕ್ಕೆ ತೇಪೆಹಚ್ಚಲು ಕಾಂಗ್ರೆಸ್ ನಾಯಕರು ದೆಹಲಿ ಪ್ರವಾಸ ಮಾಡಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕ ಟೀಕಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಿಂದ ಶನಿವಾರ ಸರಣಿ ಟ್ವೀಟ್ ಮಾಡಿದ್ದು, 'ಮೇಕೆದಾಟು ಪಾದಯಾತ್ರೆಯಿಂದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಕ್ಷದ ದೆಹಲಿ ನಾಯಕರಿಗೆ ಹತ್ತಿರವಾಗಬಹುದು ಎಂಬ ಭಯ ಸಿದ್ದರಾಮಯ್ಯ ಅವರನ್ನು ಕಾಡುತ್ತಿದೆ. ಭಯದ ನಡುವೆಯೂ ಮೇಕೆದಾಟು ಪಾದಯಾತ್ರೆ ಎಂಬ ಸುಳ್ಳಿನ ಜಾತ್ರೆಯಲ್ಲಿ ಪಾಲ್ಗೊಳ್ಳಬೇಕಾದ ಸ್ಥಿತಿ ಅವರದ್ದು' ಎಂದು ಹೇಳಿದೆ.

ಮೇಕೆದಾಟು ಪಾದಯಾತ್ರೆಯಿಂದ ಶಿವಕುಮಾರ್‌ಗೆ ಲಾಭವಾಗಬಹುದು. ಇದು ಸಿದ್ದರಾಮಯ್ಯಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ ಎಂದು ಬಿಜೆಪಿ ವ್ಯಾಖ್ಯಾನಿಸಿದೆ.

ಕಾಂಗ್ರೆಸ್ ವಿರುದ್ಧ ನಾಳೆ ಪ್ರತಿಭಟನೆ

ನೆಲಮಂಗಲ: 'ಮಹದಾಯಿ, ಮೇಕೆದಾಟು ಹಾಗೂ ವಿವಿಧ ಅಭಿವೃದ್ಧಿ ಯೋಜನೆಗಳ ಚರ್ಚೆ ನಡೆಸುವ ಬದಲು ಸದನದಲ್ಲಿ ಕಾಂಗ್ರೆಸ್ ಗದ್ದಲ, ಪ್ರತಿಭಟನೆ ಮಾಡುವ ಮೂಲಕ ವಿಧಾನ ಮಂಡಲ ಅಧಿವೇಶನದಲ್ಲಿ ಕಲಾಪ ನಡೆಸಲು ಅವಕಾಶ ನೀಡಲಿಲ್ಲ' ಎಂದು ಬಿಜೆಪಿ ತಾಲ್ಲೂಕು ಅಧ್ಯಕ್ಷ ಹೇಮಂತ್ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಮಾತನಾಡಿದ ಅವರು 'ಇದೇ ವಿಚಾರವಾಗಿ ಭಾನುವಾರ, ಸೋಮವಾರ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ನಾವು ಮನೆಗಳಲ್ಲಿ ಭಾರತ ಮಾತೆ ಹಾಗೂ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸುತ್ತೇವೆ ಅಂತಹದ್ದರಲ್ಲಿ ತಪ್ಪು ಮಾಡದ ಈಶ್ವರಪ್ಪ ಅವರ ವಿರುದ್ಧ ಪ್ರತಿಭಟನೆ ಮಾಡುವುದರ ಮೂಲಕ ಕಲಾಪದ ಸಮಯವನ್ನು ಹಾಳುಗೆಡವಿದ್ದಾರೆ ಎಂದರು.

ಮುಂಬೈ ಧಾರಣೆ

ಶೇಂಗಾ

26-2-2022

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9850-9900
ದಪ್ಪ ಮಧ್ಯಪ್ರದೇಶ(ಹೊಸ)	9550-9650
ದಪ್ಪ ಗುಜರಾತ್(ಹೊಸ)	8500-8600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (1480)
ಒಂದು ವಾರದ ಡೆಲಿವರಿ	1445 (1475)
ಸೋಯಾ ಕಚ್ಚಾ	1460 (1470)
ಪಾಮ್ ವಾರದ ಡೆಲಿವರಿ	1378 (1393)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

50,100 (50,475)

ಬೆಳ್ಳಿ ಕೆ.ಜಿ 64,700 (65,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹390
12 ಮೊಟ್ಟೆಗೆ	₹58

ಮೈಸೂರು

100 ಮೊಟ್ಟೆಗೆ	₹395

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1440 (1470)
ಸೋಯಾ (ರಿಫೈನ್ಡ್)	₹1470 (1475)
ಸೂರ್ಯಕಾಂತಿ (ರಿಫೈನ್ಡ್)	₹1510 (1520)
ಪಾಮೋಲಿನ್	₹1380 (1395)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	525

ರಾಮನಗರ ರೇಷ್ಮೆ

ಮಿಶ್ರ ತಳಿ	400-774
ದ್ವಿತಳಿ	500-978

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15800	15800	15900	238.65 ಸೆಂಟ್ಸ್
ಎಸಿ	7560	7500	8200	
ಆರ್‌ಪಿ	8150	8000	8400	ಲಂಡನ್
ಆರ್‌ಸಿ	4000	3900	4025	2178 ಡಾಲರ್ಸ್

2020ರಿಂದಲೂ ಕಾನೂನು ಸಮರದಲ್ಲಿ ಸಿಲುಕಿರುವ ಫ್ಯೂಚರ್–ರಿಲಯನ್ಸ್ ಒಪ್ಪಂದ

ರಿಲಯನ್ಸ್ ಹಿಡಿತಕ್ಕೆ ಫ್ಯೂಚರ್ ಮಳಿಗೆ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಕಂಪನಿಯು ಫ್ಯೂಚರ್ ರಿಟೇಲ್‌ನ ಮಳಿಗೆಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಆರಂಭಿಸಿದೆ. ಕಿಶೋರ್ ಬಿಯಾನಿ ನೇತೃತ್ವದ ಫ್ಯೂಚರ್ ಸಮೂಹವು ಅಮೆಜಾನ್ ಜೊತೆ ಕಾನೂನು ಸಮರದಲ್ಲಿ ತೊಡಗಿರುವ ನಡುವೆಯೇ ಈ ಬೆಳವಣಿಗೆ ನಡೆದಿದೆ.

ಫ್ಯೂಚರ್ ರಿಟೇಲ್‌ನ ಬಿಗ್ ಬಜಾರ್ ಮಳಿಗೆಗಳು ಇರುವ ಕಟ್ಟಡವನ್ನು ರಿಲಯನ್ಸ್ ರಿಟೇಲ್ ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಆರಂಭಿಸಿದೆ, ಅಲ್ಲಿ ತನ್ನ ಬ್ರ್ಯಾಂಡ್ ಅಳವಡಿಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಫ್ಯೂಚರ್ ರಿಟೇಲ್‌ನ ನೌಕರರಿಗೆ ತನ್ನ ಕಡೆಯಿಂದ ಉದ್ಯೋಗ ಕಲ್ಪಿಸಿ, ಅವರಿಗೆ ರಿಲಯನ್ಸ್ ರಿಟೇಲ್ ಕಡೆಯಿಂದ ವೇತನ ಪಾವತಿಸಲು ಆರಂಭಿಸಿದೆ. ಈ ವಿಚಾರವಾಗಿ ಪ್ರತಿಕ್ರಿಯೆ ನೀಡಲು ಅಮೆಜಾನ್ ನಿರಾಕರಿಸಿದೆ.

ಫ್ಯೂಚರ್ ರಿಟೇಲ್‌ಗೆ ಬಾಡಿಗೆ ಕಟ್ಟಡ ನೀಡಿದವರು, ರಿಲಯನ್ಸ್ ಮತ್ತು ಫ್ಯೂಚರ್ ನಡುವೆ 2020ರ ಆಗಸ್ಟ್‌ನಲ್ಲಿ ಒಪ್ಪಂದ ಆದ ನಂತರ ರಿಲಯನ್ಸ್ ಬಳಿ ಬಾಡಿಗೆ ನೀಡುವಂತೆ ಕೇಳಿದರು. ಫ್ಯೂಚರ್ ರಿಟೇಲ್‌ಗೆ ಬಾಡಿಗೆ ಪಾವತಿಸಲು ಆಗುತ್ತಿಲ್ಲ ಎಂಬ ಕಾರಣಕ್ಕೆ ಅವರು ರಿಲಯನ್ಸ್ ಬಳಿ ಹೋಗಿದ್ದರು.

ಇದಾದ ನಂತರ ರಿಲಯನ್ಸ್ ಕಂಪನಿಯು ಜಮೀನು, ಕಟ್ಟಡ ಮಾಲೀಕರ ಜೊತೆ ಒಪ್ಪಂದ ಮಾಡಿಕೊಂಡಿತು. ಸಾಧ್ಯವಿದ್ದ ಕಡೆಗಳಲ್ಲಿ ಆ ಕಟ್ಟಡಗಳನ್ನು ಫ್ಯೂಚರ್ ಲಿಮಿಟೆಡ್‌ಗೆ ಉಪಗುತ್ತಿಗೆ ನೀಡಿತು ಎಂದು ಮೂಲಗಳು ವಿವರಿಸಿವೆ.

ರಿಲಯನ್ಸ್ ಕಂಪನಿಯು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿರುವ ಮಳಿಗೆಗಳೆಲ್ಲವೂ ನಷ್ಟದಲ್ಲಿವೆ. ಇನ್ನುಳಿದ ಮಳಿಗೆಗಳನ್ನು ಫ್ಯೂಚರ್ ರಿಟೇಲ್ ಮುನ್ನಡೆಸಲಿದೆ. ಈ ಹೊಂದಾಣಿಕೆಯಿಂದಾಗಿ ಫ್ಯೂಚರ್ ರಿಟೇಲ್‌ನ ಕಾರ್ಯಾಚರಣೆ ನಷ್ಟವು ಕಡಿಮೆ ಆಗುತ್ತದೆ, ಕಂಪನಿಯ ಚಟುವಟಿಕೆಗಳು ಮುಂದೆ ಸಾಗುವುದಕ್ಕೆ ಅನುಕೂಲ ಆಗುತ್ತದೆ ಎಂಬ ಲೆಕ್ಕಾಚಾರ ಈ ನಡೆಯ ಹಿಂದೆ ಇದೆ.

ಆದರೆ, ನಿರ್ದಿಷ್ಟವಾಗಿ ಎಷ್ಟು ಮಳಿಗೆಗಳು ರಿಲಯನ್ಸ್ ರಿಟೇಲ್ ಹಿಡಿತಕ್ಕೆ ಬರಲಿವೆ ಎಂಬುದು ಖಚಿತವಾಗಿಲ್ಲ. ರಿಲಯನ್ಸ್ ಕಂಪನಿಯು ಸರಿಸುಮಾರು 30 ಸಾವಿರ ನೌಕರರನ್ನು ಮರುನೇಮಕ ಮಾಡಿಕೊಳ್ಳಲಿದೆ.

ಫ್ಯೂಚರ್ ಸಮೂಹವು ತನ್ನ ರಿಟೇಲ್ ಮತ್ತು ಸಗಟು ಮಳಿಗೆಗಳನ್ನು ರಿಲಯನ್ಸ್ ರಿಟೇಲ್‌ಗೆ ₹ 24,713 ಕೋಟಿಗೆ ಮಾರಾಟ ಮಾಡುವುದಾಗಿ 2020ರ ಆಗಸ್ಟ್‌ನಲ್ಲಿ ಪ್ರಕಟಿಸಿತು. ಇದನ್ನು ಅಮೆಜಾನ್, ಸಿಂಗಪುರ ಮಧ್ಯಸ್ಥಿಕೆ ಕೇಂದ್ರದಲ್ಲಿ ಪ್ರಶ್ನಿಸಿತು. ಈ ಪ್ರಕರಣವು ಈಗ ಸುಪ್ರೀಂ ಕೋರ್ಟ್, ದೆಹಲಿ ಹೈಕೋರ್ಟ್ ಹಾಗೂ ರಾಷ್ಟ್ರೀಯ ಕಂಪನಿ ಕಾನೂನು ಮಂಡಳಿ ಎದುರು ಕೂಡ ವಿಚಾರಣೆಯ ಹಂತದಲ್ಲಿ ಇದೆ.

ಫ್ಯೂಚರ್ ರಿಟೇಲ್ ಜನವರಿಯಲ್ಲಿ ₹ 3,494 ಕೋಟಿ ಸಾಲದ ಕಂತು ಪಾವತಿಸಲು ವಿಫಲವಾದ ನಂತರ, ಬ್ಯಾಂಕ್‌ಗಳು ಸಾಲದ ಖಾತೆಗಳನ್ನು ಎನ್‌ಪಿಎ ಎಂದು ವರ್ಗೀಕರಿಸಿವೆ. ರಿಲಯನ್ಸ್ ಈಗ ಇರಿಸಿರುವ ಹೆಜ್ಜೆಯು ಬ್ಯಾಂಕ್‌ಗಳು, ಫ್ಯೂಚರ್ ರಿಟೇಲ್‌ನ ನೌಕರರ ಹಿತಾಸಕ್ತಿಯನ್ನು ಕಾಯುವಂತೆ ಇದೆ ಎಂದು ಮೂಲವೊಂದು ಹೇಳಿದೆ.

ಮುಖ್ಯಾಂಶಗಳು

- ಫ್ಯೂಚರ್ ರಿಟೇಲ್ ನೌಕರರಿಗೆ ರಿಲಯನ್ಸ್‌ನಿಂದ ವೇತನ
- ನಷ್ಟದಲ್ಲಿರುವ ಮಳಿಗೆಗಳು ರಿಲಯನ್ಸ್ ತೆಕ್ಕೆಗೆ
- ಫ್ಯೂಚರ್ ರಿಟೇಲ್‌ನ ಸಾಲ ಎನ್‌ಪಿಎ ಪಟ್ಟಿಗೆ

ಎಲ್‌ಐಸಿಯಲ್ಲಿ ಶೇ 20ರವರೆಗೆ ಎಫ್‌ಡಿಐ ಅನುಮತಿ

ಒಂದನೇ ಪುಟದಿಂದ

ಈ ತಿದ್ದುಪಡಿಯಿಂದಾಗಿ ವಿದೇಶಿ ನೇರ ಹೂಡಿಕೆದಾರರು ಸರ್ಕಾರದ ಪೂರ್ವಾನುಮತಿ ಇಲ್ಲದೆಯೇ (ಆಟೊಮೆಟಿಕ್ ರೂಟ್ ಮೂಲಕ) ಶೇ 20ರವರೆಗೆ ಎಲ್‌ಐಸಿ ಷೇರುಗಳನ್ನು ಖರೀದಿಸಲು ಅವಕಾಶ ಸಿಗಲಿದೆ ಎಂದು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸದ್ಯ ಇರುವ ನಿಯಮಗಳ ಪ್ರಕಾರ, ಎಲ್‌ಐಸಿಯಲ್ಲಿ ವಿದೇಶಿ ಹೂಡಿಕೆಗೆ ಅವಕಾಶ ಇಲ್ಲ. ಇತರೆ ಖಾಸಗಿ ವಿಮಾ ಕಂಪನಿಗಳಲ್ಲಿ ಶೇ 74ರಷ್ಟು ವಿದೇಶಿ ಹೂಡಿಕೆಗೆ ಅವಕಾಶ ಇದೆ.

ಉಕ್ರೇನ್ ಮೇಲೆ ರಷ್ಯಾ ದಾಳಿ ಮಾಡಿದ ಬಳಿಕ ಷೇರುಪೇಟೆಯಲ್ಲಿ ಅಸ್ಥಿರ ವಹಿವಾಟು ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಎಲ್‌ಐಸಿಯ ಐಪಿಒ ಪ್ರಕ್ರಿಯೆಯನ್ನು ಮುಂದೂಡಬಹುದು ಎಂದು ಕೆಲವು ಹೂಡಿಕೆದಾರರು ಆತಂಕ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಸಚಿವ ಸಂಪುಟವು ಎಫ್‌ಡಿಐ ನಿಯಮದಲ್ಲಿ ತಿದ್ದುಪಡಿ ತಂದಿದೆ ಎಂದು ಹೇಳಿದ್ದಾರೆ.

ಎಲ್‌ಐಸಿ ಐಪಿಒ ಮುಂದೂಡುವ ಯಾವುದೇ ಆಲೋಚನೆ ಸರ್ಕಾರಕ್ಕೆ ಇಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಸೆಬಿಗೆ ಸಲ್ಲಿಸಿರುವ ಕರಡು ದಾಖಲೆ ಪತ್ರದ ಪ್ರಕಾರ, 2021ರ ಸೆಪ್ಟೆಂಬರ್ 30ರಂತೆ ಕಂಪನಿಯ ಆಸ್ತಿ ಮೌಲ್ಯ ₹ 5.4 ಲಕ್ಷ ಕೋಟಿ ಇದೆ.

₹ 20 ಕೋಟಿ ಮೀರಿದ ವಹಿವಾಟಿಗೆ ಏಪ್ರಿಲ್ 1ರಿಂದ ಇ–ಇನ್‌ವಾಯ್ಸ್ ಕಡ್ಡಾಯ

ನವದೆಹಲಿ (ಪಿಟಿಐ): ವಾರ್ಷಿಕವಾಗಿ ₹ 20 ಕೋಟಿಗೂ ಅಧಿಕ ಮೊತ್ತದ ವಹಿವಾಟು ನಡೆಸುವ ಉದ್ದಿಮೆಗಳು ಏಪ್ರಿಲ್ 1ರಿಂದ ಇ-ಇನ್‌ವಾಯ್ಸ್ ಪಡೆಯುವುದು ಕಡ್ಡಾಯ ಎಂದು ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಶನಿವಾರ ತಿಳಿಸಿದೆ.

ಒಂದೊಮ್ಮೆ ಇ-ಇನ್‌ವಾಯ್ಸ್ ಕಾನೂನು ಬದ್ಧವಾಗಿ ಇರದೇ ಇದ್ದರೆ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ಪಡೆಯಲು ಆಗುವುದಿಲ್ಲ.



ನಕಲಿ ಇನ್‌ವಾಯ್ಸ್ ಸೃಷ್ಟಿಸಿ ಜಿಎಸ್‌ಟಿ ವಂಚಿಸುವುದನ್ನು ತಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರವು ಇ-ಇನ್‌ವಾಯ್ಸ್ ಯೋಜನೆ ರೂಪಿಸಿದೆ. ವಾರ್ಷಿಕ ₹ 500 ಕೋಟಿಗೂ ಅಧಿಕ ಮೊತ್ತದ ವಹಿವಾಟು ನಡೆಸುವವರಿಗೆ ಇ-ಇನ್‌ವಾಯ್ಸ್ ಪಡೆಯುವುದನ್ನು 2020ರ ಅಕ್ಟೋಬರ್ 1ರಿಂದ ಕಡ್ಡಾಯಗೊಳಿಸಲಾಗಿದೆ.

ಅದೇ ರೀತಿ, ವಾರ್ಷಿಕ ₹ 100 ಕೋಟಿಗೂ ಅಧಿಕ ಮೊತ್ತದ ವಹಿವಾಟು ನಡೆಸುವವರು ಮತ್ತು ₹ 50 ಕೋಟಿ ಮೊತ್ತದ ವಹಿವಾಟು ನಡೆಸುವವರನ್ನು ಸಹ ಈ ಯೋಜನೆ ಅಡಿ ಈಗಾಗಲೇ ತರಲಾಗಿದೆ.

ಸೂರ್ಯಕಾಂತಿ ಎಣ್ಣೆ ಆಮದಿಗೆ ಅಡ್ಡಿ

ನವದೆಹಲಿ (ಪಿಟಿಐ): ರಷ್ಯಾ–ಉಕ್ರೇನ್ ಯುದ್ಧದ ಪರಿಣಾಮವಾಗಿ ಸೂರ್ಯಕಾಂತಿ ಎಣ್ಣೆಯ ಆಮದಿಗೆ ಅಡ್ಡಿ ಉಂಟಾಗಿದ್ದು, ಅಡುಗೆ ಎಣ್ಣೆಗಳನ್ನು ಬೇರೆ ದೇಶಗಳಿಂದ ಆಮದು ಮಾಡಿಕೊಳ್ಳಲು ಆಲೋಚಿಸಲಾಗುತ್ತಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಹೇಳಿದೆ. ಮುಂದಿನ ತಿಂಗಳಿನಿಂದ ದೇಶಿ ಸಾಸಿವೆ ಎಣ್ಣೆ ಪೂರೈಕೆಯು ಹೆಚ್ಚಾಗಲಿರುವುದರಿಂದ ಮಾರುಕಟ್ಟೆಯಲ್ಲಿ ಅಡುಗೆ ಎಣ್ಣೆಗಳ ಬೆಲೆ ಸ್ಥಿರವಾಗಿ ಇರಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಬೆಲೆ ಇಳಿಕೆಗೆ ಸಂಗ್ರಹಾಗಾರದ ಕಚ್ಚಾ ತೈಲ ಬಿಡುಗಡೆ?

ನವದೆಹಲಿ (ಪಿಟಿಐ): 'ರಷ್ಯಾ–ಉಕ್ರೇನ್ ಸಂಘರ್ಷದಿಂದ ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಪೂರೈಕೆ ಸಮಸ್ಯೆ ಉಂಟಾಗಬಹುದೇ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ. ಬೆಲೆ ತಗ್ಗಿಸಲು ಸಂಗ್ರಹಾಗಾರದಲ್ಲಿ ಇರುವ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವುದಕ್ಕೆ ಬೆಂಬಲ ಇದೆ' ಎಂದು ಕೇಂದ್ರ ಪೆಟ್ರೋಲಿಯಂ ಸಚಿವಾಲಯ ಶನಿವಾರ ತಿಳಿಸಿದೆ.

ರಷ್ಯಾವು ಉಕ್ರೇನ್ ಮೇಲೆ ದಾಳಿ ಆರಂಭಿಸಿದ್ದರಿಂದ ಕಚ್ಚಾ ತೈಲ ಪೂರೈಕೆಗೆ ಅಡ್ಡಿ ಆಗಬಹುದು ಎನ್ನುವ ಆತಂಕದಿಂದ ಫೆಬ್ರುವರಿ 24ರಂದು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಬ್ಯಾರಲ್‌ಗೆ 105.58 ಡಾಲರ್‌ಗಳಿಗೆ ಏರಿಕೆ ಆಗಿತ್ತು. ಆ ಬಳಿಕ ಐರೋಪ್ಯ ಒಕ್ಕೂಟವು ರಷ್ಯಾದ ಮೇಲೆ ಹೇರಿದ ಆರ್ಥಿಕ ನಿರ್ಬಂಧವು ತೈಲ ಪೂರೈಕೆಗೆ ವಿನಾಯಿತಿ ನೀಡಿದ್ದರಿಂದ ಕಚ್ಚಾ ತೈಲ ದರವು ಬ್ಯಾರಲ್‌ಗೆ 100 ಡಾಲರ್‌ಗಳಿಗೆ ಇಳಿಕೆ ಕಂಡಿದೆ.

ಕೇಂದ್ರ ಸರ್ಕಾರವು ಜಾಗತಿಕ ಇಂಧನ ಮಾರುಕಟ್ಟೆ ಮತ್ತು ಪೂರೈಕೆಯಲ್ಲಿ ಆಗಬಹುದಾದ ಅಡಚಣೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಮಾರುಕಟ್ಟೆಯಲ್ಲಿನ ಏರುಪೇರುಗಳ ಪ್ರಭಾವ ತಗ್ಗಿಸಲು ಮತ್ತು ಕಚ್ಚಾ ತೈಲ ಬೆಲೆ ಏರಿಕೆಯನ್ನು ಕಡಿಮೆ ಮಾಡಲು ಸಂಗ್ರಹಾಗಾರದ ತೈಲವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಕ್ರಮಕ್ಕೆ ಬೆಂಬಲ ನೀಡಲು ಭಾರತವು ಬದ್ಧವಾಗಿದೆ ಎಂದು ತಿಳಿಸಿದೆ.

ನಂದಿ ಗಿರಿಧಾಮದಲ್ಲಿ ಜಾಗತಿಕ ಪರಂಪರೆಯ ಸೃಷ್ಟಿಗೆ ನಾಂದಿ

ಭೋಗನಂದೀಶ್ವರನ ಶಿವೋತ್ಸವ

ಭೂಲೋಕದ ದುಷ್ಟ ಶಕ್ತಿಗಳನ್ನು ನಾಶಪಡಿಸಿ ಶಾಂತಿ, ನೆಮ್ಮದಿ ಕರುಣಿಸುವ ಲಯಕರ್ತನಾದ ಮಹಾಶಿವನು, ಹಿಂದೂ ಧರ್ಮೀಯರಲ್ಲಿ ವಿಶಿಷ್ಟವಾದ ಸ್ಥಾನ ಹೊಂದಿದ ಪರಮಾತ್ಮ. ತನ್ನ ಭಕ್ತರೊಂದಿಗೇ ಇದ್ದು ಆರಾಧಿಸಲ್ಪಡುವುದಕ್ಕಾಗಿ ಮಹೇಶ್ವರನು ಭೂಮಿಗೆ ಇಳಿದು ನೆಲೆಸಿದ ಕೆಲವೇ ಪುಣ್ಯಕ್ಷೇತ್ರಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಗಿರಿಧಾಮ ಸಮೀಪದ ಶ್ರೀ ಭೋಗನಂದೀಶ್ವರ ದೇವಾಲಯವೂ ಒಂದು.

ಮೈಸೂರು ದಸರಾ ಆಚರಣೆಗೆ, ಹಂಪಿಯು 'ಹಂಪಿ ಉತ್ಸವ'ಕ್ಕೆ ಜನಪ್ರಿಯತೆ ಪಡೆದಿದೆ. ಇದೇ ಮಾದರಿಯಲ್ಲಿ ಮಹಾಶಿವರಾತ್ರಿಯ ಸಮಯದಲ್ಲಿ, ಸಹಸ್ರ ವರ್ಷಗಳ ಇತಿಹಾಸ ಹೊಂದಿರುವ ಭೋಗನಂದೀಶ್ವರ ದೇವಾಲಯದ ಶಿವೋತ್ಸವವೂ ವಿಖ್ಯಾತಿ ಗಳಿಸುತ್ತಿದೆ. ಚಿಕ್ಕಬಳ್ಳಾಪುರದ ಶಾಸಕರು, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಕೆ.ಸುಧಾಕರ್ ಅವರ ನೇತೃತ್ವದಲ್ಲಿ ಶಿವೋತ್ಸವ ನಡೆಯಲಿದ್ದು, ಪರಂಪರೆಯ ವೈಭವ ಮರುಸೃಜಿಸುವ ನವಪರ್ವಕ್ಕೆ ನಾಂದಿಯಾಗಲಿದೆ.

ಬೆಂಗಳೂರಿನಿಂದ 65 ಕಿ.ಮೀ. ದೂರದಲ್ಲಿರುವ ನಂದಿ ಬೆಟ್ಟ, ರಾಜ್ಯದ ಪ್ರಸಿದ್ಧ ಗಿರಿಧಾಮಗಳಲ್ಲೊಂದು. ಇದರ ಬಳಿಯಿರುವ ಭೋಗನಂದೀಶ್ವರ ದೇವಾಲಯವನ್ನು ಬಾಣವಂಶದ ದೊರೆ, ಬಾಣ ವಿದ್ಯಾಧರನ ಪತ್ನಿ ರತ್ನಾವಳಿಯು ಕ್ರಿ.ಶ.608 ರಲ್ಲಿ ಕಟ್ಟಿಸಿದ್ದಳು. ದ್ರಾವಿಡ ಶೈಲಿಯ ಈ ದೇವಾಲಯವನ್ನು ನಂತರ ಚೋಳ, ಹೊಯ್ಸಳ ಹಾಗೂ ವಿಜಯನಗರ ಸಾಮ್ರಾಜ್ಯದ ಅರಸರು ಅಭಿವೃದ್ಧಿಪಡಿಸಿದ್ದರು. ಇಲ್ಲಿನ ಸಂಕೀರ್ಣದಲ್ಲಿ ಒಂದೇ ಸಾಲಿನಲ್ಲಿ ಎರಡು ಪ್ರತ್ಯೇಕ ಗರ್ಭಗುಡಿಗಳಿದ್ದು, ಮುಂಭಾಗದಲ್ಲಿ ಎರಡು ನಂದಿಮಂಟಪಗಳಿವೆ. ಉತ್ತರ ಭಾಗದ ದೇವಾಲಯ ಭೋಗನಂದೀಶ್ವರನಿಗೆ ಹಾಗೂ ದಕ್ಷಿಣ ಭಾಗದ ದೇವಾಲಯ ಅರುಣಾಚಲೇಶ್ವರನಿಗೆ ಸಮರ್ಪಣೆಯಾಗಿದೆ. ಇಲ್ಲಿನ ಶೃಂಗಿತೀರ್ಥ ಪುಷ್ಕರಣಿ, ವಿಶಾಲವಾದ ವಸಂತ ಮಂಟಪ, ಬಾಣಲಿಂಗ, ನವರಂಗ ಹಾಗೂ ಅದರ ನಾಲ್ಕು ಕಂಬಗಳು, ನಂದಿಯ ಏಕಶಿಲಾಮೂರ್ತಿ ಪ್ರಮುಖ ಆಕರ್ಷಣೆಗಳಾಗಿದ್ದು, ಪುರಾತನ ವಾಸ್ತುಶಿಲ್ಪದ ಸಿರಿವಂತಿಕೆಯನ್ನು ಪ್ರತಿಬಿಂಬಿಸುವ ಸಾಕ್ಷ್ಯಗಳಾಗಿವೆ.

ಈ ದೇವಾಲಯದಲ್ಲಿ 12 ಸ್ತಂಭಗಳಿಂದ ಕೂಡಿದ ಮುಖಮಂಟಪ ಮತ್ತೊಂದು ಪ್ರಮುಖ ಆಕರ್ಷಣೆ. ಇದರ ಹಿಂಭಾಗ ಚಿಕ್ಕ ಗುಡಿಗಳಿದ್ದು, ಅಪೀತಾ, ಕುಚಾಂಬ ಹಾಗೂ ಗಿರಿಜಾಂಬ ದೇವಿಯರು ಪ್ರತಿಷ್ಠಾಪನೆಯಾಗಿದ್ದಾರೆ. ದೇವಾಲಯದ ಕಮಾನುಗಳು, ಸಂಗೀತ ನುಡಿಸುವ ಯಕ್ಷರ ಕಲಾಕೃತಿ, ಚತುಷ್ಕೋನಾಕಾರದ ಶಿಖರ ಗಂಗ ರಾಜವಂಶದವರ ಕಾಲದಲ್ಲಿ ನಿರ್ಮಾಣವಾಗಿವೆ. ಇದರ ಬಳಿಯೇ ಇರುವ ಮತ್ತೊಂದು ಅರುಣಾಚಲೇಶ್ವರ ದೇವಾಲಯವು, ಭೋಗನಂದೀಶ್ವರ ದೇವಾಲಯದ ಶೈಲಿಯಲ್ಲೇ ಇದೆ. ಇದರ ನಂದಿಮಂಟಪ ಹಾಗೂ ಶಿಖರಗಳು ನೊಳಂಬ ರಾಜನು ಆಡಳಿತ ನಡೆಸುತ್ತಿರುವಾಗ ನಿರ್ಮಾಣವಾದುದು ಎಂದು ಶಾಸನದಲ್ಲಿ ಉಲ್ಲೇಖವಿದೆ. ದೇವಾಲಯದ ಮಧ್ಯಭಾಗ ವಿಜಯನಗರ ಅರಸರ ಕಾಲದಲ್ಲಿ ದುರಸ್ತಿಯಾಗಿತ್ತು.

ಜಾಗತಿಕ ಪರಂಪರೆಯ ತಾಣ: ಭೋಗನಂದೀಶ್ವರ ಸೇರಿದಂತೆ ಈ ಇಡೀ ಗುಂಪು ದೇವಾಲಯಗಳು ಭಾರತೀಯ ಪರಂಪರೆ, ವಾಸ್ತುಶಿಲ್ಪ, ಹಲವು ಅರಸು ಮನೆತನಗಳ ಕೊಡುಗೆಗಳನ್ನು ಸ್ಮರಿಸುವ ಪ್ರೇಕ್ಷಣೀಯ ಧಾರ್ಮಿಕ ಕೇಂದ್ರವಾಗಿದೆ. ಇದನ್ನು ಸಂರಕ್ಷಿಸುವ ಜೊತೆಗೆ ಹೊರಜಗತ್ತಿಗೆ ಇದರ ಕಲಾಶ್ರೀಮಂತಿಕೆ ಹಾಗೂ ಚಾರಿತ್ರಿಕ ಮಹತ್ವವನ್ನು ತಿಳಿಸಿಕೊಡುವ ಅಗತ್ಯವಿದೆ.

ನಂದಿ ಗಿರಿಧಾಮವನ್ನು ಅಂತಾರಾಷ್ಟ್ರೀಯ ಮಟ್ಟದ ಪ್ರವಾಸಿ ಕೇಂದ್ರವಾಗಿ ಬೆಳೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸರ್ಕಾರ, ರೋಪ್-ವೇ ಯೋಜನೆಗೆ ಅನುಮೋದನೆ ನೀಡಿದೆ. ನಂದಿ ಬೆಟ್ಟದ ತಪ್ಪಲಿನಲ್ಲಿ 2.93 ಕಿ.ಮೀ. ಎತ್ತರದ ಬೆಟ್ಟ ಪ್ರದೇಶಕ್ಕೆ ₹93.40 ಕೋಟಿ ವೆಚ್ಚದಲ್ಲಿ ರೋಪ್-ವೇ ನಿರ್ಮಿಸುವ ಹಲವು ವರ್ಷಗಳ ಕನಸು ಈಗ ನನಸಾಗುವ ಹಂತಕ್ಕೆ ಬಂದಿದೆ. ಇದೇ ಜಿಲ್ಲೆಯವರಾದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಅವರ ಒತ್ತಾಸೆಯಿಂದಾಗಿ ಈ ಯೋಜನೆಗೆ ಚುರುಕು ದೊರೆತಿದ್ದು, ಶೀಘ್ರದಲ್ಲೇ ರೋಪ್-ವೇ ಸಿದ್ಧಗೊಂಡು ಪ್ರವಾಸಿಗರನ್ನು ಸೆಳೆಯಲಿದೆ. ಇದರಿಂದಾಗಿ ನಂದಿ ಬೆಟ್ಟ ಮಾತ್ರವಲ್ಲದೆ, ಇಲ್ಲಿನ ಭೋಗನಂದೀಶ್ವರ ದೇವಾಲಯದ ಮಹತ್ವ ಹೊರಜಗತ್ತಿಗೆ ಗೊತ್ತಾಗಲಿದೆ. ಜೊತೆಗೆ, ಪ್ರತಿ ವರ್ಷ ನಡೆಯುವ ಶಿವೋತ್ಸವವು ವಿಶ್ವ ಉತ್ಸವವಾಗಿ ಜನಪ್ರಿಯತೆ ಪಡೆಯಲಿದೆ.



ಭೋಗನಂದೀಶ್ವರ ದೇವಾಲಯ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಮಾರ್ಚ್ 1 ರಂದು ಶಿವೋತ್ಸವ ಆಚರಣೆ

ಮಾರ್ಚ್ 1 ರಂದು ಸಂಜೆ 6 ಗಂಟೆಯಿಂದ ಮರುದಿನ ಮುಂಜಾನೆ 6 ವರೆಗೆ ಭೋಗನಂದೀಶ್ವರ ದೇವಾಲಯದಲ್ಲಿ ಶಿವೋತ್ಸವ ಆಚರಣೆ, ರಥೋತ್ಸವ ನಡೆಯಲಿದೆ. ಭಕ್ತರು ತಮ್ಮ ಇಷ್ಟಾರ್ಥಗಳಿಗಾಗಿ ಪ್ರಾರ್ಥಿಸಿ ರಥಕ್ಕೆ ಬಾಳೆಹಣ್ಣು ಎಸೆಯುವ ಆಚರಣೆಯೂ ಇರಲಿದೆ.

ದೇಗುಲಕ್ಕೆ ಆಕರ್ಷಕವಾದ ವಿದ್ಯುತ್ ದೀಪಾಲಂಕಾರ, ಹೂಗಳ ಅಲಂಕಾರ ಮಾಡಲಿದ್ದು ವಿಶೇಷ ಪೂಜೆ ನಡೆಯಲಿದೆ. ಶಿವನ ಭಕ್ತಿ ಭಾವ ಬೆರೆತ ಸಂಗೀತ–ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಗಾಯಕರಾದ ರಘು ದೀಕ್ಷಿತ್, ಶಂಕರ್ ಮಹಾದೇವನ್, ಸಿದ್ ಶ್ರೀರಾಮನ್, ಅನನ್ಯ ಭಟ್, ನೃತ್ಯಗಾತಿ ಲಕ್ಷ್ಮಿ ಗೋಪಾಲಸ್ವಾಮಿ, ಹಾಸ್ಯೋತ್ಸವ ಖ್ಯಾತಿಯ ಪ್ರೊ. ಕೃಷ್ಣೇಗೌಡರ ತಂಡ ಸೇರಿದಂತೆ ಮೂವತ್ತಕ್ಕೂ ಹೆಚ್ಚು ತಂಡಗಳು ಕಾರ್ಯಕ್ರಮ ನಡೆಸಿಕೊಡಲಿವೆ. ಅನ್ನ ಸಂತರ್ಪಣೆ ಇದ್ದು, ದೇವಸ್ಥಾನಕ್ಕೆ ಬರಲು ವಿಶೇಷ ಬಸ್ ವ್ಯವಸ್ಥೆಯೂ ಇರುತ್ತದೆ.

ದಸರಾ ಮಾದರಿಯಲ್ಲಿ ನಂದಿ ಉತ್ಸವ



ಸಾವಿರ ವರ್ಷಗಳ ಇತಿಹಾಸವಿರುವ ಶ್ರೀ ಭೋಗನಂದೀಶ್ವರ ದೇಗುಲವು ನಮ್ಮ ನಾಡಿನ ಪರಂಪರೆಯನ್ನು ಮುಂದುವರಿಸುವ ಕೇಂದ್ರವಾಗಿ ಬೆಳೆಯುತ್ತಿದೆ. ನಂದಿ ಬೆಟ್ಟದಲ್ಲಿ ರೋಪ್-ವೇ ನಿರ್ಮಾಣದಿಂದಾಗಿ ಈ ಕ್ಷೇತ್ರ ಜಗತ್ ಪ್ರಸಿದ್ಧಿ ಪಡೆಯಲಿದೆ. ಮಹಾಶಿವರಾತ್ರಿಯಂದು ನಡೆಯುವ ಶಿವೋತ್ಸವ ಕೂಡ ಜಾಗತಿಕ ಮಟ್ಟದಲ್ಲಿ ಪ್ರವಾಸಿಗರನ್ನು ಸೆಳೆಯಲಿದೆ. ಧರ್ಮ, ಸಂಸ್ಕೃತಿಯ ರಕ್ಷಣೆಯೊಂದಿಗೆ ಮುಂದಿನ ಪೀಳಿಗೆಯು ನಮ್ಮ ಪರಂಪರೆಯನ್ನು ಮುಂದುವರಿಸುವ ಕಾಯಕಕ್ಕೂ ಶಿವೋತ್ಸವ ವೇದಿಕೆಯಾಗಲಿದೆ. ಮುಂದಿನ ವರ್ಷದಿಂದ ಹಂಪಿ ಉತ್ಸವ ಹಾಗೂ ಮೈಸೂರು ದಸರಾ ಮಾದರಿಯಲ್ಲಿ ನಂದಿ ಉತ್ಸವ ಆಚರಿಸಲು ಮುಖ್ಯಮಂತ್ರಿಗಳ ಜತೆ ಚರ್ಚಿಸಲಾಗುವುದು.

-ಡಾ.ಕೆ.ಸುಧಾಕರ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

ಟ್ವೆಂಟಿ20 ಕ್ರಿಕೆಟ್: ಅಯ್ಯರ್–ಜಡೇಜ ಸ್ಫೋಟಕ ಬ್ಯಾಟಿಂಗ್; ಮಿಂಚಿದ ಪಾಥುಮ್ ನಿಸಾಂಕ

ಭಾರತಕ್ಕೆ ಸರಣಿ ಜಯದ 'ಶ್ರೇಯಸ್ಸು'

ಧರ್ಮಶಾಲ (ಪಿಟಿಐ): ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಇಳಿದ ಶ್ರೇಯಸ್ ಅಯ್ಯರ್ ಅವರು ಹಿಮಾಚಲಪ್ರದೇಶ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಶನಿವಾರ ರಾತ್ರಿ ಮಿಂಚು ಹರಿಸಿದರು. ಸಂಜು ಸ್ಯಾಮ್ಸನ್ ಮತ್ತು ರವೀಂದ್ರ ಜಡೇಜ ಅವರ ಬ್ಯಾಟಿಂಗ್ ಸೊಬಗು ಕೂಡ ಮೇಳೈಸಿತು.

ಈ ಮೂವರ ಅಮೋಘ ಬ್ಯಾಟಿಂಗ್ ನೆರವಿನಿಂದ ಭಾರತ ತಂಡ ಶ್ರೀಲಂಕಾ ಎದುರಿನ ಟ್ವೆಂಟಿ20 ಕ್ರಿಕೆಟ್ ಪಂದ್ಯದಲ್ಲಿ ಏಳು ವಿಕೆಟ್‌ಗಳ ಗೆಲುವು ಸಾಧಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆಯನ್ನೂ ಗಳಿಸಿತು.

184 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ ನಾಯಕ ರೋಹಿತ್ ಶರ್ಮಾ ಮತ್ತು ವಿಕೆಟ್ ಕೀಪರ್ ಇಶಾನ್ ಕಿಶನ್ ಅವರ ವಿಕೆಟ್‌ಗಳನ್ನು ಬೇಗ ಕಳೆದುಕೊಂಡಿತು. ಈ ಸಂದರ್ಭದಲ್ಲಿ ಜೊತೆಗೂಡಿದ ಶ್ರೇಯಸ್ ಅಯ್ಯರ್ ಮತ್ತು ಸಂಜು ಸ್ಯಾಮ್ಸನ್ 84 ರನ್‌ಗಳನ್ನು ಸೇರಿಸಿದರು. ಶಾರ್ಟ್ ಥರ್ಡ್‌ಮ್ಯಾನ್‌ನಲ್ಲಿ ಮೇಲೆ ಜಿಗಿದು ಎಡಗೈಯಲ್ಲಿ ಮೋಹಕ ಕ್ಯಾಚ್ ಪಡೆದ ಬಿನುರ ಫರ್ನಾಂಡೊ ಅವರು ಸಂಜು ಸ್ಯಾಮ್ಸನ್ ಅವರನ್ನು ನಿರಾಸೆಗೊಳಿಸಿದರು.

ನಂತರ ಶ್ರೇಯಸ್ ಮತ್ತು ಜಡೇಜ ಬೌಂಡರಿಗಳ ಮೂಲಕ ಮಿಂಚಿದರು. ಜಡೇಜ ಕೇವಲ 18 ಎಸೆತಗಳಲ್ಲಿ 45 ರನ್ ಗಳಿಸಿದರೆ ಅಯ್ಯರ್ ನಾಲ್ಕು ಸಿಕ್ಸರ್‌ಗಳೊಂದಿಗೆ 44 ಎಸೆತಗಳಲ್ಲಿ 74 ರನ್ ಕಲೆ ಹಾಕಿದರು.

ದಿಟ್ಟ ಆಟವಾಡಿದ ನಿಸಾಂಕ–ಶನಕ: ಟಾಸ್ ಗೆದ್ದ ರೋಹಿತ್ ಶರ್ಮಾ ಫೀಲ್ಡಿಂಗ್ ಆಯ್ದುಕೊಂಡರು. ಆರಂಭಿಕ ಬ್ಯಾಟರ್ ಪಾಥುಮ್ ನಿಸಾಂಕ ಮತ್ತು ನಾಯಕ ದಸುನ್ ಶನಕ ಅವರ ದಿಟ್ಟ ಆಟದ ಬಲದಿಂದ ಶ್ರೀಲಂಕಾ ಸವಾಲಿನ ಮೊತ್ತ ಪೇರಿಸಿತು. ನಿಸಾಂಕ ಮತ್ತು ಧನುಷ್ಕ ಗುಣತಿಲಕ ಮೊದಲ ವಿಕೆಟ್‌ಗೆ 52 ಎಸೆತಗಳಲ್ಲಿ 67 ರನ್ ಸೇರಿಸಿದ್ದರು. ಈ ಜೊತೆಯಾಟ ಮುರಿದ ನಂತರ ಸತತವಾಗಿ ವಿಕೆಟ್‌ಗಳು ಉರುಳಿದವು. ಒಂಬತ್ತು ರನ್ ಗಳಿಸಿದ್ದ ವಿಕೆಟ್ ಕೀಪರ್ ದಿನೇಶ್ ಚಾಂದಿಮಲ್ ಅವರನ್ನು ತಮ್ಮ ಕೈಗಳಲ್ಲಿ ಬಂದಿಯಾಗಿಸಿದ ರೋಹಿತ್ ಶರ್ಮಾ ಟ್ವೆಂಟಿ20ಯಲ್ಲಿ ಐವತ್ತನೇ ಕ್ಯಾಚ್ ಪಡೆದ ಸಾಧನೆ ಮಾಡಿದರು.

ನಾಲ್ಕು ವಿಕೆಟ್ ಕಳೆದುಕೊಂಡ ತಂಡದ ಇನಿಂಗ್ಸ್‌ಗೆ ಪಾಥುಮ್ ನಿಸಾಂಕ ಮತ್ತು ದಾಸುನ್ ಶನಕ ಜೀವ ತುಂಬಿದರು. ಇಬ್ಬರೂ 58 ರನ್‌ಗಳ ಜೊತೆಯಾಟ ಆಡಿದರು. 11 ಮೋಹಕ ಬೌಂಡರಿಗಳೊಂದಿಗೆ 53 ಎಸೆತಗಳಲ್ಲಿ 75 ರನ್ ಗಳಿಸಿದ ಪಾಥುಮ್ 19ನೇ ಓವರ್‌ನ ಕೊನೆಯ ಎಸೆತದಲ್ಲಿ ಔಟಾದರು.

ಕೊನೆಯ ಓವರ್‌ನಲ್ಲಿ ಶನಕ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಹರ್ಷಲ್ ಪಟೇಲ್ ಹಾಕಿದ ಈ ಓವರ್‌ನ ಕೊನೆಯ ಎರಡು ಎಸೆತಗಳನ್ನು ಅವರು ಸಿಕ್ಸರ್‌ಗೆ ಎತ್ತಿದರು. ಒಂದು ಬೌಂಡರಿಯೂ ಒಳಗೊಂಡಿದ್ದ ಓವರ್‌ನಲ್ಲಿ ಒಟ್ಟು 23 ರನ್‌ಗಳು ಹರಿದುಬಂದವು.

ಕೊನೆಯ ಐದು ಓವರ್‌ಗಳಲ್ಲಿ ತಂಡ 80 ರನ್‌ಗಳನ್ನು ಗಳಿಸಿತು. ಶನಕ ಕೇವಲ 19 ಎಸೆತಗಳಲ್ಲಿ 47 ರನ್ ಕಲೆ ಹಾಕಿದರು. ಅವರ ಇನಿಂಗ್ಸ್‌ನಲ್ಲಿ ಐದು ಸಿಕ್ಸರ್ ಮತ್ತು ಎರಡು ಬೌಂಡರಿಗಳು ಇದ್ದವು.



ಶ್ರೇಯಸ್ ಅಯ್ಯರ್ ಅವರ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರ



ಪಾಥುಮ್ ನಿಸಾಂಕ ಅವರ ಬ್ಯಾಟಿಂಗ್ ಶೈಲಿ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಶ್ರೀಲಂಕಾ 5ಕ್ಕೆ 183 (20 ಓವರ್)
ನಿಸಾಂಕ ಎಲ್‌ಬಿಡಬ್ಲ್ಯು ಬಿ ಭುವನೇಶ್ವರ್ 75 (53 ಎ, 4x11), ಗುಣತಿಲಕ ಸಿ ವೆಂಕಟೇಶ್ ಬಿ ಜಡೇಜ 38 (29 ಎ, 4x4, 6x2), ಅಸಲಂಕ ಎಲ್‌ಬಿಡಬ್ಲ್ಯು ಬಿ ಚಾಹಲ್ 2 (5 ಎ), ಮಿಶಾರ ಸಿ ಶ್ರೇಯಸ್ ಬಿ ಹರ್ಷಲ್ 1 (4 ಎ), ಚಾಂದಿಮಲ್ ಸಿ ರೋಹಿತ್ ಬಿ ಬೂಮ್ರಾ 9 (10 ಎ, 4x1), ದಸುನ್ ಶನಕ ಔಟಾಗದೆ 47 (19 ಎ, 4x2, 6x5), ಚಾಮಿಕ ಕರುಣಾರತ್ನೆ ಔಟಾಗದೆ 0 (0 ಎ)
ಇತರೆ (ಲೆಗ್ ಬೈ 7, ವೈಡ್ 4) 11
ವಿಕೆಟ್ ಪತನ: 1-67 (ದನುಷ್ಕಾ ಗುಣತಿಲಕ, 8.4), 2-71 (ಚರಿತ್ ಅಸಲಂಕ, 9.5), 3-76 (ಕಮಿಲ್ ಮಿಶಾರ, 10.6), 4-102 (ದಿನೇಶ್ ಚಾಂದಿಮಲ್, 14.4), 5-160 (ಪಾಥುಮ್ ನಿಸಾಂಕ, 18.6)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–36–1, ಜಸ್‌ಪ್ರೀತ್ ಬೂಮ್ರಾ 4–0–24–1, ಹರ್ಷಲ್ ಪಟೇಲ್ 4–0–52–1, ಯಜುವೇಂದ್ರ ಚಾಹಲ್ 4–0–27–1, ರವೀಂದ್ರ ಜಡೇಜ 4–0–37–1

ಭಾರತ 3ಕ್ಕೆ 186 (17.1 ಓವರ್)
ರೋಹಿತ್ ಬಿ ಚಮೀರ 1 (2 ಎ), ಇಶಾನ್ ಸಿ ಶನಕ ಬಿ ಲಾಹಿರು 16 (15 ಎ, 4x2), ಶ್ರೇಯಸ್ ಔಟಾಗದೆ 74 (44 ಎ, 4x6, 6x4), ಸಂಜು ಸಿ ಫರ್ನಾಂಡೊ ಬಿ ಲಾಹಿರು 39 (25 ಎ, 4x2, 6x3), ಜಡೇಜ ಔಟಾಗದೆ 45 (18 ಎ, 4x7, 6x1)
ಇತರೆ (ಲೆಗ್ ಬೈ 2, ನೋಬಾಲ್ 1, ವೈಡ್ 8) 11
ವಿಕೆಟ್ ಪತನ: 1-9 (ರೋಹಿತ್ ಶರ್ಮಾ, 0.6), 2-44 (ಇಶಾನ್ ಕಿಶನ್, 5.1), 3-128 (ಸಂಜು ಸ್ಯಾಮ್ಸನ್, 12.6)
ಬೌಲಿಂಗ್: ದುಷ್ಮಂತ ಚಮೀರ 3.1–0–39–1, ಬಿನುರ ಫರ್ನಾಂಡೊ 4–0–47–0, ಲಾಹಿರು ಕುಮಾರ 3–0–31–2, ಪ್ರವೀಣ್ ಜಯವಿಕ್ರಮ 2–0–19–0, ಚಮಿಕ ಕರುಣಾರತ್ನೆ 3–0–24–0, ದಾನುನ್ ಶನಕ 2–0–24–0

ಫಲಿತಾಂಶ: ಭಾರತಕ್ಕೆ 7 ವಿಕೆಟ್ ಜಯ; ಸರಣಿಯಲ್ಲಿ 2–0 ಮುನ್ನಡೆ

ಗೆಲುವಿನತ್ತ ಕರ್ನಾಟಕ ಹೆಜ್ಜೆ

ರಣಜಿ ಕ್ರಿಕೆಟ್: ಮಿಂಚಿದ ಕರುಣ್, ಶ್ರೇಯಸ್ ಗೋಪಾಲ್

ಪ್ರಜಾವಾಣಿ ವಾರ್ತೆ

ಚೆನ್ನೈ: ದ್ವಿತೀಯ ಇನಿಂಗ್ಸ್‌ನಲ್ಲೂ ಬ್ಯಾಟಿಂಗ್ ವೈಭವ ಮುಂದುವರಿಸಿದ ಕರ್ನಾಟಕಕ್ಕೆ ಬೌಲಿಂಗ್‌ನಲ್ಲಿ ಲೆಗ್ ಸ್ಪಿನ್ನರ್ ಶ್ರೇಯಸ್ ಗೋಪಾಲ್ ಭರವಸೆ ತುಂಬಿದರು. ಇದರ ಪರಿಣಾಮ ರಣಜಿ ಕ್ರಿಕೆಟ್ ಟೂರ್ನಿಯ ಎಲೀಟ್ 'ಸಿ' ಗುಂಪಿನ ಪಂದ್ಯದಲ್ಲಿ ತಂಡ ಗೆಲುವಿನತ್ತ ಹೆಜ್ಜೆ ಇರಿಸಿದೆ.

ಇಲ್ಲಿನ ಐಐಟಿ ಕೆಮ್‌ಪ್ಲಾಸ್ಟ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಜಮ್ಮು ಮತ್ತು ಕಾಶ್ಮೀರ ತಂಡದ ಗೆಲುವಿಗೆ ಕರ್ನಾಟಕ 508 ರನ್‌ಗಳ ಗುರಿ ನೀಡಿದೆ. ಮೂರನೇ ದಿನದಾಟದ ಮುಕ್ತಾಯಕ್ಕೆ ಜಮ್ಮು ಮತ್ತು ಕಾಶ್ಮೀರ ನಾಲ್ಕು ವಿಕೆಟ್ ಕಳೆದುಕೊಂಡು 189 ರನ್ ಗಳಿಸಿದೆ. ಗೆಲುವಿಗೆ ಇನ್ನೂ 319 ರನ್ ಗಳಿಸಬೇಕಾಗಿದೆ.

ಬೃಹತ್ ಗುರಿ ಬೆನ್ನತ್ತಿದ ಜಮ್ಮು ಮತ್ತು ಕಾಶ್ಮೀರ ಆರಂಭದಲ್ಲೇ ಆಘಾತಕ್ಕೆ ಒಳಗಾಯಿತು. ತಂಡದ ಮೊತ್ತ ನಾಲ್ಕು ರನ್ ಅಗಿದ್ದಾಗ ಕಮ್ರಾನ್ ಇಕ್ಬಾಲ್ ಅವರನ್ನು ವಾಪಸ್ ಕಳುಹಿಸುವ ಮೂಲಕ ಪ್ರಸಿದ್ಧ ಕೃಷ್ಣ ಕರ್ನಾಟಕ ತಂಡದಲ್ಲಿ ಸಂಭ್ರಮ ಮೂಡಿಸಿದರು. ಇಕ್ಬಾಲ್ ಅವರ ಜೋಡಿ ಜತಿನ್ ವಾಧ್ವಾನ್ ಕೂಡ ಬೇಗನೇ ವಾಪಸಾದರು. ಜತಿನ್ ವಿಕೆಟ್ ಉರುಳಿಸಿದ ಶ್ರೇಯಸ್ ಗೋಪಾಲ್ ನಾಲ್ಕನೇ ಕ್ರಮಾಂಕದ ಶುಭಂ ಪುಂದೀರ್ ಅವರ ವಿಕೆಟ್ ಕೂಡ ಪಡೆದರು.

ಚಹಾ ವಿರಾಮದ ವೇಳೆ 73 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡ ಫಜಿಲ್ ರಶೀದ್ ಮತ್ತು ಚೌಹಾಣ್ ಜೊತೆಯಾಟ ರಂಗೇರಿತು. ಇವರಿಬ್ಬರೂ 79 ರನ್ ಸೇರಿಸಿ ಮೊತ್ತವನ್ನು ಮೂರಂಕಿ ಗಡಿ ದಾಟಿಸಿದರು. ಫಜಿಲ್ ಔಟಾದ ನಂತರ ಚೌಹಾಣ್ ಜೊತೆಗೂಡಿದ ಅಬ್ದುಲ್ ಸಮದ್ ಅರ್ಧಶತಕದ ಜೊತೆಯಾಟದ ಮೂಲಕ ಪತನವನ್ನು ತಪ್ಪಿಸಿದರು.

ಕರುಣ್ – ಸಿದ್ಧಾರ್ಥ್ ಶತಕದ ಜೊತೆಯಾಟ: ಮೊದಲ ಇನಿಂಗ್ಸ್‌ನಲ್ಲಿ 302 ರನ್ ಗಳಿಸಿರುವ ಕರ್ನಾಟಕ ಎರಡನೇ ದಿನವಾದ ಶುಕ್ರವಾರ ಜಮ್ಮು ಕಾಶ್ಮೀರವನ್ನು ಮೊದಲ ಇನಿಂಗ್ಸ್‌ನಲ್ಲಿ 93 ರನ್‌ಗಳಿಗೆ ಆಲೌಟ್ ಮಾಡಿ ಭಾರಿ ಮುನ್ನಡೆ ಸಾಧಿಸಿತ್ತು. ದಿನದಾಟದ ಅಂತ್ಯಕ್ಕೆ ಎರಡು ವಿಕೆಟ್ ಕಳೆದುಕೊಂಡು 128 ರನ್ ಕಲೆ ಹಾಕಿತ್ತು.

ಶನಿವಾರ ಕರ್ನಾಟಕದ ಒಂದು ವಿಕೆಟ್ ಉರುಳಿಸಲಷ್ಟೇ ಜಮ್ಮು ಮತ್ತು ಕಾಶ್ಮೀರಕ್ಕೆ ಸಾಧ್ಯವಾಯಿತು. ಶುಕ್ರವಾರ ಕ್ರೀಸ್‌ನಲ್ಲಿದ್ದ ಕರುಣ್ ನಾಯರ್ ಮತ್ತು ಕೆ.ವಿ.ಸಿದ್ಧಾರ್ಥ್ ಅವರು ಅಮೋಘ ಆಟವಾಡಿ ತಂಡದ ಮುನ್ನಡೆಯನ್ನು ಹೆಚ್ಚಿಸಿದರು. ಮೂರನೇ ವಿಕೆಟ್‌ಗೆ ಇವರಿಬ್ಬರು 113 ರನ್‌ಗಳನ್ನು ಸೇರಿಸಿದರು.

72 ಎಸೆತಗಳಲ್ಲಿ 72 ರನ್ ಗಳಿಸಿದ ಸಿದ್ಧಾರ್ಥ್ ಔಟಾದ ನಂತರವೂ ಕರುಣ್ ನಾಯರ್ ಆಟ ಮುಂದುವರಿಯಿತು. ನಾಯಕ ಮನೀಷ್ ಪಾಂಡೆ ಕ್ರೀಸ್‌ಗೆ ಬಂದ ನಂತರ ರನ್ ಗಳಿಕೆಯ ವೇಗ ಇನ್ನಷ್ಟು ಹೆಚ್ಚಿತ್ತು. ಇಬ್ಬರೂ ಚುರುಕಾಗಿ ಬ್ಯಾಟಿಂಗ್ ಮಾಡಿ 60 ರನ್ ಸೇರಿಸಿದರು.



ಶ್ರೇಯಸ್ ಗೋಪಾಲ್ –ಪ್ರಜಾವಾಣಿ ಚಿತ್ರ

ಸ್ಕೋರ್ ಕಾರ್ಡ್

ಕರ್ನಾಟಕ ಮೊದಲ ಇನಿಂಗ್ಸ್ 302 (103.1 ಓವರ್)
ಜಮ್ಮು ಮತ್ತು ಕಾಶ್ಮೀರ ಮೊದಲ ಇನಿಂಗ್ಸ್ 93 (29.5 ಓವರ್)
ಕರ್ನಾಟಕ ಎರಡನೇ ಇನಿಂಗ್ಸ್ 3ಕ್ಕೆ 298 ಡಿಕ್ಲೇರ್ (71 ಓವರ್)
(ಶುಕ್ರವಾರ 42 ಓವರ್‌ಗಳಲ್ಲಿ 2ಕ್ಕೆ 128)
ಕರುಣ್ ಔಟಾಗದೆ 71 (114ಎ, 4x6, 6x1), ಸಿದ್ಧಾರ್ಥ್ ಸಿ ಫಾಸಿಲ್ ಬಿ ಅಬೀದ್ 72 (72 ಎ, 4x8, 6x1), ಮನೀಷ್ ಪಾಂಡೆ ಔಟಾಗದೆ 37 (34ಎ, 4x4, 6x1)
ಇತರೆ (ಬೈ 1, ಲೆಗ್‌ಬೈ 6) 7
ವಿಕೆಟ್ ಪತನ: 3-238 (ಕೆ.ವಿ.ಸಿದ್ಧಾರ್ಥ್, 62.3)
ಬೌಲಿಂಗ್: ಮುಜ್ತಾಬಾ ಯೂಸುಫ್ 9–0–44–0, ಪರ್ವೇಜ್ ರಸೂಲ್ 28–5–90–0, ಅಕೀಬ್ ನಬಿ 5–0–21–0, ಅಬಿದ್ ಮುಷ್ತಾಕ್ 18–1–65–3, ಅಬ್ದುಲ್ ಸಮದ್ 5–0–28–0, ಉಮ್ರಾನ್ ಮಲಿಕ್ 6–0–43–0

ಜಮ್ಮು ಮತ್ತು ಕಾಶ್ಮೀರ ಎರಡನೇ ಇನಿಂಗ್ಸ್ 4ಕ್ಕೆ 189 (57.5 ಓವರ್)
ಇಕ್ಬಾಲ್ ಎಲ್‌ಬಿಡಬ್ಲ್ಯು ಬಿ ಪ್ರಸಿದ್ಧ ಕೃಷ್ಣ 4 (5 ಎ, 4x1), ಜತಿನ್ ಸಿ ದೇವದತ್ತ ಬಿ ಶ್ರೇಯಸ್ 15 (46 ಎ, 4x1), ಫಾಸಿಲ್ ಸಿ ಮನೀಷ್ ಬಿ ಶ್ರೇಯಸ್ 65 (140 ಎ, 4x8, 6x2), ಶುಭಂ ಸಿ ಸಮರ್ಥ್ ಬಿ ಶ್ರೇಯಸ್ 9 (14 ಎ, 4x2), ಇಯಾನ್ ಬ್ಯಾಟಿಂಗ್ 65 (113 ಎ, 4x8, 6x2), ಸಮದ್ ಬ್ಯಾಟಿಂಗ್ 21 (29 ಎ, 4x1, 6x2)
ಇತರೆ (ಬೈ 5, ಲೆಗ್‌ಬೈ 4, ವೈಡ್ 1) 10
ವಿಕೆಟ್ ಪತನ: 1-4 (ಕಮ್ರಾನ್ ಇಕ್ಬಾಲ್, 0.5), 2-39 (ಜತಿನ್ ವಾಧ್ವಾನ್, 16.6), 3-57 (ಶುಭಂ ಪುಂದೀರ್, 22.1), 4-136 (ಫಾಸಿಲ್ ರಶೀದ್, 47.4)
ಬೌಲಿಂಗ್: ಪ್ರಸಿದ್ಧ ಕೃಷ್ಣ 12–7–20–1, ಕೃಷ್ಣಪ್ಪ ಗೌತಮ್ 17.5–3–59–0, ವಿದ್ಯಾಧರ ಪಾಟೀಲ 9–4–11–0, ಶ್ರೇಯಸ್ ಗೋಪಾಲ್ 19–3–90–3



ನಂದಿನಿ (ಎಡ)– ಪಿಟಿಐ ಚಿತ್ರ

ಸ್ಟ್ರಾಂಡ್‌ಜಾ ಮೆಮೊರಿಯಲ್ ಬಾಕ್ಸಿಂಗ್

ಕಂಚು ಜಯಿಸಿದ ನಂದಿನಿ

ನವದೆಹಲಿ (ಪಿಟಿಐ): ಭಾರತದ ಬಾಕ್ಸರ್ ನಂದಿನಿ ಅವರ ಚಿನ್ನದ ಪದಕದ ಕನಸು ಈಡೇರಲಿಲ್ಲ. ಸ್ಟ್ರಾಂಡ್‌ಜಾ ಮೆಮೊರಿಯಲ್ ಬಾಕ್ಸಿಂಗ್ ಟೂರ್ನಿಯ ನಾಲ್ಕರ ಘಟ್ಟದಲ್ಲಿ ನಿರಾಸೆ ಅನುಭವಿಸಿದ ಅವರು ಕಂಚಿನ ಪದಕ ಗಳಿಸಿದರು.

ಬಲ್ಗೇರಿಯಾದ ಸೋಫಿಯಾದಲ್ಲಿ ನಡೆಯುತ್ತಿರುವ ಟೂರ್ನಿಯ 81 ಕೆಜಿ ವಿಭಾಗದ ಸೆಮಿಫೈನಲ್ ಹಣಾಹಣಿಯಲ್ಲಿ ನಂದಿನಿ ಶುಕ್ರವಾರ 0–5ರಿಂದ ಕಜಕಸ್ತಾನದ ಲಾಜತ್ ಕುಂಗಿಬಯೆವಾ ಎದುರು ಸೋತರು.

ಮಾಜಿ ಯೂತ್ ವಿಶ್ವ ಚಾಂಪಿಯನ್ ನಿಖತ್ ಜರೀನ್ (52 ಕೆಜಿ) ಮತ್ತು ನೀತು (48 ಕೆಜಿ) ಈಗಾಗಲೇ ಫೈನಲ್ ತಲುಪಿದ್ದು, ಚಿನ್ನದ ಪದಕದ ಭರವಸೆ ಮೂಡಿಸಿದ್ದಾರೆ.

ಭಾನುವಾರ ನಡೆಯುವ ಫೈನಲ್ ಬೌಟ್‌ಗಳಲ್ಲಿ ಜರೀನ್ ಅವರು ತೇತಿಯಾನ ಕಾಬ್ ಅವರನ್ನು ಎದುರಿಸಲಿದ್ದರೆ, ನೀತು ಅವರು ಇಟಲಿಯ ಎರಿಕಾ ಪ್ರಿಸಿಯಾಂಡ್ರೊ ಅವರಿಗೆ ಮುಖಾಮುಖಿಯಾಗುವರು.

ಟೆನಿಸ್: ನಡಾಲ್‌ಗೆ ಮಣಿದ ಮೆಡ್ವೆಡೆವ್

ಅಕಾಪಲ್ಕೊ, ಮೆಕ್ಸಿಕೊ (ಎಪಿ): ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿರುವ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್‌ಗೆ ಮೆಕ್ಸಿಕನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶನಿವಾರ ಆಘಾತವಾಗಿದೆ. ಸೆಮಿಫೈನಲ್‌ನಲ್ಲಿ ಅವರನ್ನು ಸ್ಪೇನ್‌ನ ರಫೆಲ್ ನಡಾಲ್ ಸೋಲಿಸಿದರು.

ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿರುವ ವಿಷಯ ಸೋಮವಾರ ಅಧಿಕೃತವಾಗಿ ಘೋಷಣೆಯಾಗಲಿದೆ. ಒಂದನೇ ಶ್ರೇಯಾಂಕದ ಮೆಡ್ವೆಡೆವ್ ಶನಿವಾರ ನಡೆದ ಪಂದ್ಯದಲ್ಲಿ ನಾಲ್ಕನೇ ಶ್ರೇಯಾಂಕಿತ ನಡಾಲ್‌ಗೆ 3–6, 3–6ರಲ್ಲಿ ಮಣಿದರು.

ಫೈನಲ್‌ನಲ್ಲಿ ನಡಾಲ್ ಬ್ರಿಟನ್‌ನ ಕ್ಯಾಮರಾನ್ ನೋರಿ ವಿರುದ್ಧ ಸೆಣಸುವರು. ಮೂರನೇ ಶ್ರೇಯಾಂಕಿತ ಆಟಗಾರ ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಅವರನ್ನು ಆರನೇ ಶ್ರೇಯಾಂಕಿತ ನೋರಿ ನಾಲ್ಕರ ಘಟ್ಟದ ಪಂದ್ಯದಲ್ಲಿ 6–4, 6–4ರಲ್ಲಿ ಸೋಲಿಸಿದರು.

ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಫೈನಲ್‌ನಲ್ಲಿ ಮೆಡ್ವೆಡೆವ್ ಅವರನ್ನು ನಡಾಲ್ ಮಣಿಸಿದ್ದರು. ಈ ಮೂಲಕ ದಾಖಲೆಯ 21ನೇ ಗ್ರ್ಯಾನ್‌ಸ್ಲಾಂ ಕಿರೀಟ ಮುಡಿಗೇರಿಸಿಕೊಂಡಿದ್ದರು.

ನೊವಾಕ್ ಜೊಕೊವಿಚ್ ಕೆಲವು ತಿಂಗಳಿಂದ ವಿಶ್ವ ರ್‍ಯಾಂಕಿಂಗ್‌ನ ಅಗ್ರಸ್ಥಾನದಲ್ಲಿದ್ದರು. ಆದರೆ ಲಸಿಕೆ ವಿವಾದದ ನಂತರ ಆಸ್ಟ್ರೇಲಿಯಾ ಓಪನ್‌ನಲ್ಲಿ ಆಡದೆ ವಾಪಸಾಗಿದ್ದರು. ಗುರುವಾರ ನಡೆದ ದುಬೈ ಓಪನ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಸೋಲುವುದರೊಂದಿಗೆ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಳೆದುಕೊಳ್ಳುವುದು ಖಚಿತವಾಗಿತ್ತು.



ರಫೆಲ್ ನಡಾಲ್ –ರಾಯಿಟರ್ಸ್ ಚಿತ್ರ

ಎಫ್‌ಎಮ್‌ಎಸ್‌ಸಿಐ ಇಂಡಿಯನ್ ನ್ಯಾಷನಲ್ ರ್‍ಯಾಲಿ

ರೇಸ್: ಕರ್ಣ ಮುನ್ನಡೆ

ಕೊಯಮತ್ತೂರು (ಪಿಟಿಐ): ಬೆಂಗಳೂರು ಜೋಡಿ ಕರ್ಣ ಕಡೂರು ಮತ್ತು ಸಹ ಚಾಲಕ ನಿಖಿಲ್ ಪೈ (ಅರ್ಕಾ ಮೋಟರ್‌ಸ್ಪೋರ್ಟ್ಸ್) ಕೊಯಮತ್ತೂರಿನಲ್ಲಿ ನಡೆಯುತ್ತಿರುವ ಎಫ್‌ಎಮ್‌ಎಸ್‌ಸಿಐ ಇಂಡಿಯನ್ ನ್ಯಾಷನಲ್ ರ್‍ಯಾಲಿ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ಶನಿವಾರ ಮುನ್ನಡೆ ಗಳಿಸಿದರು.

ವೋಕ್ಸ್‌ವ್ಯಾಗನ್ ಪೋಲೊ ಚಲಾಯಿಸುತ್ತಿದ್ದ, ಎಂಆರ್‌ಎಫ್ ಟೈರ್ಸ್ ತಂಡದ ಕರ್ಣ (1 ತಾಸು 6.2 ಸೆಕೆಂಡು), ಭಾರಿ ದೂಳಿನಿಂದ ಕೂಡಿದ್ದ ನಾಲ್ಕು ಸುತ್ತುಗಳ ಒಟ್ಟಾರೆ ರೇಸ್‌ನಲ್ಲಿ ಒಂದು ನಿಮಿಷಕ್ಕಿಂತಲೂ ಹೆಚ್ಚು ವೇಗದಲ್ಲಿ ಗುರಿ ತಲುಪಿ ಮೊದಲಿಗರಾದರು. ಹಿಮಾಚಲ ಪ್ರದೇಶದ ಆದಿತ್ಯ ಠಾಕೂರ್ (ಸಹ ಚಾಲಕ; ವೀರೇಂದ್ರ ಕಶ್ಯಪ್ 1 ತಾಸು 1 ನಿ. 42.2 ಸೆ.) ಎರಡನೇ ಸ್ಥಾನ ಗಳಿಸಿದರೆ, ಮಂಗಳೂರಿನ ಡೀನ್ ಮಸ್ಕರೆನ್ಹಾಸ್ (ಸಹ ಚಾಲಕ, ವಿರಾಜಪೇಟೆಯ ಗಗನ್ ಕರುಂಬಯ್ಯ, 1 ತಾಸು 2 ನಿ.3.3 ಸೆ.) ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಬೆಳಗಿನ ಜಾವ ನಡೆದ ಎಸ್‌ಎಸ್–2 ವಿಭಾಗದ ರೇಸ್‌ನಲ್ಲಿ ಕಣಕ್ಕಿಳಿದಿದ್ದ ಏಳು ಬಾರಿಯ ರಾಷ್ಟ್ರೀಯ ಚಾಂಪಿಯನ್ ಗೌರವ್ ಗಿಲ್ (ಸಹ ಚಾಲಕ: ಮೂಸಾ ಶರೀಫ್) ಅವರು ತಾಂತ್ರಿಕ ಸಮಸ್ಯೆಯ ಕಾರಣದಿಂದಾಗಿ ಹಿಂದೆ ಸರಿದರು.

ಎಸ್‌ಎಸ್1ನಲ್ಲಿ ಸ್ಪರ್ಧಿಸಿದ್ದ 2019ರ ಚಾಂಪಿಯನ್ ಬೆಂಗಳೂರಿನ ಚೇತನ್ ಶಿವರಾಮ್ (ಸಹ ಚಾಲಕ ದಿಲೀಪ್ ಶರಣ್) ಅವರು ಚಲಾಯಿಸುತ್ತಿದ್ದ ಕಾರಿನ ಭಾಗವೊಂದು ಮುರಿದಿದ್ದರಿಂದ ಅವರೂ ಹಿಂದೆ ಸರಿಯಬೇಕಾಯಿತು. ಈ ಎರಡೂ ತಂಡದವರು ಭಾನುವಾರ ಮತ್ತೆ ರೇಸ್‌ಗೆ ಸೇರಿಕೊಳ್ಳಲಿದ್ದಾರೆ.

ಎರಡನೇ ರೇಸ್‌ನಲ್ಲಿ (ಐಎನ್‌ಆರ್‌ಸಿ 2) ಮಸ್ಕರೆನ್ಹಾಸ್ ಮತ್ತು ಕರುಂಬಯ್ಯ ಜೋಡಿ ಮೊದಲ ಸ್ಥಾನ ಗಳಿಸಿತು. ಜೂನಿಯರ್ ಐಎನ್‌ಆರ್‌ಸಿ 1ನಲ್ಲಿ ಬೆಂಗಳೂರಿನ ಪ್ರಗತಿ ಬಿ. ಹಾಗೂ ತ್ರೀಶಾ ಜಗನ್ನಾಥ್ ಕೂಡ ಮೊದಲ ಸ್ಥಾನ ಗಳಿಸಿದರು.



ಕರ್ಣ ಕಡೂರು– ಟ್ವಿಟರ್ ಚಿತ್ರ

ಮುಂಬೈ ರೇಸ್

ಇಂಪೀರಿಯಲ್ ಪವರ್ ಗೆಲ್ಲುವ ನಿರೀಕ್ಷೆ

ಪೂನಾವಾಲ ಬ್ರೀಡರ್ಸ್ ಮಲ್ಟಿ-ಮಿಲಿಯನ್ ಭಾನುವಾರದ ಪ್ರಧಾನ ಆಕರ್ಷಣೆಯಾಗಿದ್ದು, ಇಂಪೀರಿಯಲ್ ಪವರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸುಫಿಯಾ 1, ಎಮಿ 2, ಹಾನರಬಲ್ ಐಸ್ 5
2ನೇ ರೇಸ್: ಲಾರ್ಡ್ ಆ್ಯಂಡ್ ಮಾಸ್ಟರ್ 8, ಪರ್ಸಿವೇಲ್ 4, ಡಾರ್ಲಿ ಸ್ವಿರ್ಲ್ 1
3ನೇ ರೇಸ್: ಚಾಮೋನಿಕ್ಸ್ 3, ಟ್ರೆಷರ್ ಗೋಲ್ಡ್ 1, ಜರಾಕ್ 2
4ನೇ ರೇಸ್: ಮ್ಯಾಂಡೆವಿಲ್ 3, ದಿ ಬಾವಾಜಿ 1, ಅಹ್ ಬೆಲ್ಲಾ 4,
5ನೇ ರೇಸ್: ಎಕ್ಸ್‌ಕ್ಲೂಸಿವ್ 3, ಟಾರ್ಜಾನ್ 12, ಬ್ಲೇಜಿಂಗ್ ಬೇ 5
6ನೇ ರೇಸ್: ಕಿಂಗ್ಸ್ ರ್‍ಯಾನ್ಸಮ್ 9, ವಡ್‌ಸ್ಮಿತ್ 6, ಹೌಸ್ ಆಫ್ ಲಾರ್ಡ್ಸ್ 2
7ನೇ ರೇಸ್: ಇಂಪೀರಿಯಲ್ ಪವರ್ 6, ಸೂಪರ್‌ನ್ಯಾಚುರಲ್ 7, ಅಹೆಡ್ ಆಫ್ ಮೈ ಟೈಮ್ 1
8ನೇ ರೇಸ್: ಸಿನ್ನರ್ 1, ಲೆಕ್ಸ್ ಲುಥೋರ್ 4, ಶೇ 3
9ನೇ ರೇಸ್: ಲಾ ಪೆರೆಗ್ರಿನಾ 9, ಆನ್ ವಾ ಡ್ಯಾನ್ಸರ್ 6, ಪವರ್ ಆಫ್ ನೀತ್ 4

ಉತ್ತಮ ಬೆಟ್: ಎಕ್ಸ್‌ಕ್ಲೂಸಿವ್

1ನೇ ಜಾಕ್‌ಪಾಟ್	2ನೇ ಜಾಕ್‌ಪಾಟ್	1ನೇ ಟ್ರಿಬಲ್
2,3,4,5,6	5,6,7,8,9	3,4,5

2ನೇ ಟ್ರಿಬಲ್	3ನೇ ಟ್ರಿಬಲ್
6,7,8	7,8,9

ನಿಧನ ವಾರ್ತೆ

ಕ್ರೀಡಾ ಪತ್ರಕರ್ತ ಚಂದ್ರಮೌಳಿ

ಚೆನ್ನೈ (ಪಿಟಿಐ): ಕೋವಿಡ್ ಸಂಬಂಧಿತ ಸಮಸ್ಯೆಗಳಿಂದ ಬಳಲುತ್ತಿದ್ದ ಕ್ರೀಡಾ ಪತ್ರಕರ್ತ ವಿ.ಕೆ. ಚಂದ್ರಮೌಳಿ (92) ಅವರು ಶನಿವಾರ ಇಲ್ಲಿ ನಿಧನರಾದರು. ಅವರ ಕುಟುಂಬದ ಮೂಲಗಳು ಈ ವಿಷಯ ತಿಳಿಸಿವೆ.

ಪಿಟಿಐ ಸುದ್ದಿಸಂಸ್ಥೆಯಲ್ಲಿ 40 ವರ್ಷಗಳ ಕಾಲ ಅವರು ಕಾರ್ಯನಿರ್ವಹಿಸಿದ್ದರು. ಚಂದ್ರಮೌಳಿ ಅವರಿಗೆ ಮಗ, ಇಬ್ಬರು ಹೆಣ್ಣುಮಕ್ಕಳು ಮತ್ತು ಮೊಮ್ಮಕ್ಕಳು ಇದ್ದಾರೆ.

ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಗೇಮ್ಸ್, ರಣಜಿ ಟ್ರೋಫಿ, ಚೆಸ್ ಸೇರಿದಂತೆ ಹಲವು ಪ್ರಮುಖ ಟೂರ್ನಿಗಳನ್ನು ಅವರು ವರದಿ ಮಾಡಿದ್ದರು ಎಂದು ಅವರ ಮಗ ವಿ.ಸಿ. ಶ್ರೀಧರನ್ ತಿಳಿಸಿದ್ದಾರೆ.

ಪಿಟಿಐಗೂ ಮೊದಲು ಚಿತ್ತೂರಿನಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಾಗಿ ಚಂದ್ರಮೌಳಿ ಕಾರ್ಯನಿರ್ವಹಿಸಿದ್ದರು.

ಸೆಮಿಗಾಗಿ ಬಿಎಫ್‌ಸಿ ಹೋರಾಟ

ಐಎಸ್‌ಎಲ್ ಫುಟ್‌ಬಾಲ್: ಎಟಿಕೆಎಂಬಿ ತಂಡ ಎದುರಾಳಿ

ಫತೋರ್ಡ (ಪಿಟಿಐ): ಸೆಮಿಫೈನಲ್ ಆಸೆ ಜೀವಂತವಾಗಿರಿಸಿಕೊಳ್ಳುವ ಕೊನೆಯ ಅವಕಾಶದಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಭಾನುವಾರ ಎಟಿಕೆ ಮೋಹನ್ ಬಾಗನ್ ತಂಡವನ್ನು ಎದುರಿಸಲಿದೆ.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿರುವ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಈ ಪಂದ್ಯ ಬಿಎಫ್‌ಸಿಗೆ ನಿರ್ಣಾಯಕವಾಗಿದೆ. ಸೆಮಿಫೈನಲ್ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಎಟಿಕೆಎಂಬಿಗೂ ಗೆಲುವು ಅನಿವಾರ್ಯ.

ಏಳು ಬೀಳುಗಳನ್ನು ಕಂಡಿರುವ ಎಟಿಕೆಎಂಬಿ ಹ್ಯಾಟ್ರಿಕ್ ಜಯದ ನಂತರ ಹಿಂದಿನ ಎರಡು ಪಂದ್ಯಗಳನ್ನು ಡ್ರಾ ಮಾಡಿಕೊಂಡು ಸ್ವಲ್ಪ ಹಿನ್ನಡೆಗೆ ಒಳಗಾಗಿದೆ. 17 ಪಂದ್ಯಗಳಿಂದ 31 ಪಾಯಿಂಟ್ ಗಳಿಸಿರುವ ತಂಡ ಲೀಗ್ ಹಂತ್ ಚಾಂಪಿಯನ್ ಪಟ್ಟಕ್ಕಾಗಿ ಹೈದರಾಬಾದ್ ಮತ್ತು ಜೆಮ್ಷೆಡ್‌ಪುರ ಎಫ್‌ಸಿ ಜೊತೆ ಪೈಪೋಟಿ ನಡೆಸುತ್ತಿದೆ.

18 ಪಂದ್ಯಗಳನ್ನು ಆಡಿರುವ ಬಿಎಫ್‌ಸಿ 26 ಪಾಯಿಂಟ್ಸ್ ಕಲೆ ಹಾಕಿದೆ. ಅಂತಿಮ ನಾಲ್ಕರಲ್ಲಿ ಸ್ಥಾನ ಗಳಿಸಬೇಕಾದರೆ ತಂಡ ಉಳಿದಿರುವ ಎರಡೂ ಪಂದ್ಯಗಳನ್ನು ಗೆಲ್ಲಬೇಕು ಮತ್ತು ಇತರ ಪಂದ್ಯಗಳ ಫಲಿತಾಂಶಕ್ಕಾಗಿ ಕಾಯಬೇಕು. ಜಯೇಶ್ ಮತ್ತು ರೋಹಿತ್ ಅವರು ತರಬೇತಿಗೆ ಮರಳಿದ್ದು ಇಮಾನ್ ಮತ್ತು ದಮೈತ್ ಅವರು ಕೂಡ ಭಾನುವಾರದ ಪಂದ್ಯಕ್ಕೆ ಲಭ್ಯ ಇದ್ದಾರೆ ಎಂದು ಬಿಎಫ್‌ಸಿ ಕೋಚ್ ಮಾರ್ಕೊ ಪೆಜವೊಲಿ ತಿಳಿಸಿದ್ದಾರೆ.

ರೋಷನ್ ಸಿಂಗ್ ಈಗ ಅಮೋಘ ಫಾರ್ಮ್‌ನಲ್ಲಿದ್ದು ರಕ್ಷಣಾ ವಿಭಾಗದ ಈ ಆಟಗಾರ ಈ ವರೆಗೆ ಏಳು ಅಸಿಸ್ಟ್‌ಗಳನ್ನು ಮಾಡಿದ್ದು ಒಂದು ಗೋಲು ಕೂಡ ಗಳಿಸಿದ್ದಾರೆ. ಭಾನುವಾರವೂ ಅವರು ಉತ್ತಮ ಸಾಮರ್ಥ್ಯ ಮುಂದುವರಿಸುವ ನಿರೀಕ್ಷೆ ಇದೆ ಎಂದು ಪೆಜವೊಲಿ ಅಭಿಪ್ರಾಯಪಟ್ಟರು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಬಿಎಫ್‌ಸಿ ನಾಯಕ ಸುನಿಲ್ ಚೆಟ್ರಿ –ಟ್ವಿಟರ್ ಚಿತ್ರ

ಕೇರಳ ಬ್ಲಾಸ್ಟರ್ಸ್ ಆಸೆ ಜೀವಂತ

ವಾಸ್ಕೊ (ಪಿಟಿಐ): ಚೆನ್ನೈಯಿನ್ ಎಫ್‌ಸಿ ಎದುರು ಶನಿವಾರ 3–0ಯಿಂದ ಜಯಿಸಿದ ಕೇರಳ ಎಫ್‌ಸಿ ತಂಡವು ಟೂರ್ನಿಯಲ್ಲಿ ಸೆಮಿಫೈನಲ್ ಆಸೆಯನ್ನು ಜೀವಂತವಾಗಿರಿಸಿಕೊಂಡಿತು.

ತಿಲಕ್ ಮೈದಾನ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿಜೇತ ತಂಡದ ಪರ ಜೋರ್ಗ್ ಪೆರೇರ ಡಿಯಾಜ್ (52 ಮತ್ತು 55ನೇ ನಿಮಿಷ) ಮತ್ತು ಆ್ಯಡ್ರಿಯನ್ ಲೂನಾ (90ನೇ ನಿ.) ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ತಂಡವು 2–0ಯಿಂದ ಎಫ್‌ಸಿ ಗೋವಾ ತಂಡವನ್ನು ಸೋಲಿಸಿತು.

ಹಾಕಿ: ಭಾರತ ತಂಡಗಳಿಗೆ ಜಯ

ಭುವನೇಶ್ವರ (ಪಿಟಿಐ): ಮೂರು ಗೋಲುಗಳ ಹಿನ್ನಡೆಯಿಂದ ಪುಟಿದೆದ್ದ ಭಾರತ ಪುರುಷರ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಶನಿವಾರ ಸ್ಪೇನ್ ತಂಡವನ್ನು ಮಣಿಸಿತು.

ಇಲ್ಲಿ ನಡೆದ ಹಣಾಹಣಿಯಲ್ಲಿ ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ 5–4ರಿಂದ ಜಯಭೇರಿ ಮೊಳಗಿಸಿತು.

ನಾಯಕ ಮಾರ್ಕ್ ಮಿರಾಲ್ಲಸ್ (20, 23 ಮತ್ತು 40ನೇ ನಿಮಿಷ) ಹ್ಯಾಟ್ರಿಕ್ ಹಾಗೂ ಪಾವ್ ಕುನಿಲ್ (14ನೇ ನಿ.) ನೆರವಿನಿಂದ ಪ್ರವಾಸಿ ಸ್ಪೇನ್ ತಂಡವು 4–1ರ ಮುನ್ನಡೆ ಗಳಿಸಿತ್ತು. ಆದರೆ ಹರ್ಮನ್‌ಪ್ರೀತ್ ಸಿಂಗ್ (15, 60ನೇ ನಿ.), ಶಿಲಾನಂದ ಲಾಕ್ರಾ (41ನೇ ನಿ.), ಶಂಷೇರ್ ಸಿಂಗ್ (43ನೇ ನಿ.) ಮತ್ತು ವರುಣ್ ಕುಮಾರ್ (55ನೇ ನಿ.) ಕೈಚಳಕ ತೋರಿ ಭಾರತ ತಂಡವು ಸ್ಮರಣೀಯ ಗೆಲುವು ದಾಖಲಿಸಲು ಕಾರಣರಾದರು.

ಭಾನುವಾರ ಉಭಯ ತಂಡಗಳು ಮತ್ತೆ ಮುಖಾಮುಖಿಯಾಗಲಿವೆ.

ಮಹಿಳಾ ತಂಡದ ಅಜೇಯ ಓಟ: ಲೀಗ್‌ನಲ್ಲಿ ಭಾರತ ಮಹಿಳಾ ತಂಡವು ಅಜೇಯ ಓಟವನ್ನು ಮುಂದುವರಿಸಿತು. ಶನಿವಾರ ನಡೆದ ಪಂದ್ಯದಲ್ಲಿ ಸ್ಪೇನ್ ತಂಡವನ್ನು 2–1ರಿಂದ ಸೋಲಿಸಿತ್ತು.

ಭಾರತದ ಪರ ಜ್ಯೋತಿ (20ನೇ ನಿಮಿಷ) ನೇಹಾ ಗೋಯಲ್ (52ನೇ ನಿ.) ಗೋಲು ಹೊಡೆದರೆ, ಸ್ಪೇನ್ ತಂಡಕ್ಕೆ 9ನೇ ನಿಮಿಷದಲ್ಲಿ ಮಾರ್ತಾ ಸೆಗು ಗೋಲು ದಾಖಲಿಸಿದರು.



ಹರ್ಮನ್‌ಪ್ರೀತ್– ರಾಯಿಟರ್ಸ್ ಚಿತ್ರ

ಫುಟ್‌ಬಾಲ್: ಡ್ರಾ ಪಂದ್ಯದಲ್ಲಿ ರೂಟ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೂಟ್ಸ್ ಎಫ್‌ಸಿ ಮತ್ತು ಪಿಂಕ್ ಪ್ಯಾಂಥರ್ಸ್ ತಂಡಗಳ ನಡುವಿನ ಕೆಎಸ್‌ಎಫ್‌ಎ ಮಹಿಳಾ ಫುಟ್‌ಬಾಲ್ ಎ ಡಿವಿಷನ್ ಲೀಗ್ ಪಂದ್ಯವು 1–1ರ ಡ್ರಾನಲ್ಲಿ ಕೊನೆಗೊಂಡಿತು.

ಶನಿವಾರ ನಡೆದ ಹಣಾಹಣಿಯಲ್ಲಿ ರೂಟ್ಸ್ ಎಫ್‌ಸಿ ಪರ ಮೈಥಿಲಿ ಪಾರ್ವತಿ ವೈದ್ಯ 46ನೇ ನಿಮಿಷದಲ್ಲಿ ಗೋಲು ದಾಖಲಿಸಿ ತಂಡದ ಮುನ್ನಡೆಗೆ ಕಾರಣರಾದರು. ಪಿಂಕ್ ಪ್ಯಾಂಥರ್ಸ್ ತಂಡದ ಅಲೀನಾ ಟೋನಿ 48ನೇ ನಿಮಿಷದಲ್ಲಿ ಸಮಬಲದ ಗೋಲು ಹೊಡೆದರು.

ಶೋಕದ ನಡುವೆ ಶತಕ ಸಿಡಿಸಿದ ಸೋಳಂಕಿ



ವಿಷ್ಣು ಸೋಳಂಕಿ

ನವಜಾತ ಪುತ್ರಿಯನ್ನು ಕಳೆದುಕೊಂಡ ದುಃಖವನ್ನು ನುಂಗಿ ಅಂಗಣಕ್ಕೆ ಇಳಿದ ವಿಷ್ಣು ಸೋಳಂಕಿ ದಿಟ್ಟ ಹೋರಾಟದ ಮೂಲಕ ಶತಕ ಸಿಡಿಸಿ ಸಂಭ್ರಮಿಸಿದರು. ಕಟಕ್‌ನ ವಿಕಾಸ್ ಕ್ರಿಕೆಟ್ ಅಂಗಣದಲ್ಲಿ ನಡೆಯುತ್ತಿರುವ ಎಲೀಟ್ 'ಬಿ' ಗುಂಪಿನ ಪಂದ್ಯದಲ್ಲಿ ಚಂಡೀಗಢ ಎದುರು ಬರೋಡ ಪರವಾಗಿ ಅವರು ಮೂರಂಕಿ ಮೊತ್ತ ದಾಟಿದರು.

165 ಎಸೆತಗಳಲ್ಲಿ 104 ರನ್ ಗಳಿಸಿದ ಸೋಳಂಕಿ ಅವರ ಅಮೋಘ ಆಟದ ನೆರವಿನಿಂದ ಬರೋಡ ಮೊದಲ ಇನಿಂಗ್ಸ್‌ನಲ್ಲಿ 517 ರನ್ ಗಳಿಸಿತು. ಚಂಡೀಗಢ ಮೊದಲ ಇನಿಂಗ್ಸ್‌ನಲ್ಲಿ 168 ರನ್ ಗಳಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಚಂಡೀಗಢ ಎರಡು ವಿಕೆಟ್‌ಗಳಿಗೆ 231 ರನ್ ಗಳಿಸಿದ್ದು 118 ರನ್‌ಗಳ ಹಿನ್ನಡೆಯಲ್ಲಿದೆ.

ಕೆಲವು ದಿನಗಳ ಹಿಂದೆ ಸೋಳಂಕಿ ಪುತ್ರಿಯನ್ನು ಕಳೆದುಕೊಂಡಿದ್ದರು. ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡ ನಂತರ ತಂಡದಲ್ಲಿ ಆಡಲು ಮರಳಿದ್ದರು.

ಫುಟ್‌ಬಾಲ್: ರಷ್ಯಾ ಎದುರು ಆಡಲು ಪೋಲೆಂಡ್ ನಕಾರ

ವಾರ್ಸಾ, (ಪಿಟಿಐ): ಉಕ್ರೇನ್ ಮೇಲಿನ ರಷ್ಯಾದ ದಾಳಿಗೆ ಪ್ರತಿಕ್ರಿಯೆಯಾಗಿ ಪೋಲೆಂಡ್, ಮುಂದಿನ ತಿಂಗಳು ರಷ್ಯಾ ವಿರುದ್ಧ ವಿಶ್ವಕಪ್ ಅರ್ಹತಾ ಪಂದ್ಯವನ್ನು ಆಡಲು ನಿರಾಕರಿಸುತ್ತಿದೆ ಎಂದು ಪೋಲೆಂಡ್ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಶನಿವಾರ ತಿಳಿಸಿದ್ದಾರೆ.

ಈ ಕುರಿತು ಟ್ವಿಟರ್‌ನಲ್ಲಿ ಪ್ರಕಟಿಸಿರುವ ಅಧ್ಯಕ್ಷ ಸೆಜಾರಿ ಕುಲೆಸ್ಜಾ ಅವರು' ಮಾತನಾಡಲು ಪದಗಳಿಲ್ಲ. ರಷ್ಯಾದ ತೀವ್ರ ದಾಳಿಗೆ ಪ್ರತಿಕ್ರಿಯಿಸುವ ಸಮಯವಿದು. ಈ ಕುರಿತು ಇತರ ಫೆಡರೇಷನ್‌ಗಳೊಂದಿಗೂ ಪೋಲೆಂಡ್ ಚರ್ಚೆ ನಡೆಸಿದೆ' ಎಂದಿದ್ದಾರೆ.

ಈ ಕುರಿತು ತಕ್ಷಣ ಪ್ರತಿಕ್ರಿಯಿಸಿರುವ ಪೋಲೆಂಡ್ ಪರ ಅತಿ ಹೆಚ್ಚು ಗೋಲು ದಾಖಲಿಸಿರುವ ಆಟಗಾರ ರಾಬರ್ಟ್ ಲೆವಾಂಡೊಸ್ಕಿ 'ಉಕ್ರೇನ್‌ನಲ್ಲಿ ಸಶಸ್ತ್ರ ಆಕ್ರಮಣವು ಮುಂದುವರಿದಾಗ ರಷ್ಯಾದ ರಾಷ್ಟ್ರೀಯ ತಂಡದೊಂದಿಗೆ ಪಂದ್ಯವನ್ನು ಆಡುವುದನ್ನು ನಾನು ಊಹಿಸಲು ಸಾಧ್ಯವಿಲ್ಲ. ರಷ್ಯಾದ ಫುಟ್‌ಬಾಲ್ ಆಟಗಾರರು ಮತ್ತು ಅಭಿಮಾನಿಗಳು ಇದಕ್ಕೆ ಜವಾಬ್ದಾರರಲ್ಲ. ಏನೂ ನಡೆದೇ ಇಲ್ಲ ಎಂದು ನಟಿಸಲು ನಮಗೆ ಆಗುವುದಿಲ್ಲ' ಎಂದು ಟ್ವೀಟ್ ಮಾಡಿದ್ದಾರೆ.

ಮಾರ್ಚ್ 24ರಂದು ಮಾಸ್ಕೋದಲ್ಲಿ ಅರ್ಹತಾ ಪ್ಲೇಆಫ್ ಸೆಮಿಫೈನಲ್ ಆಡಲು ಬಯಸುವುದಿಲ್ಲ ಎಂದು ಮಾತ್ರ ಪೋಲೆಂಡ್ ಹೇಳಿತ್ತು.